ಬುಧವಾರ, ಸೆಪ್ಟೆಂಬರ್ 27, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಂದ್

ಬೆಂಗಳೂರು ಬಂದ್ ಅಂಗವಾಗಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಎಎಪಿ ಕಾರ್ಯಕರ್ತೆಯೊಬ್ಬರು ಕೊಡ ಹಿಡಿದು ಆಕ್ರೋಶ ವ್ಯಕ್ತಪಡಿಸಿದರು



Having Excelled in JEE Advanced 2023, Students of FIITJEE Bangalore Centres are set to Shine in IITs

All India Rank **85**



Tanish Singh Khurana

Student of FIITJEE Four Year Classroom Program

(Class IX & X at FIITJEE Bangalore Centre and Class XI & XII from South Delhi Centre)

I, Tanish Singh Khurana, joined FIITJEE in 9th class for 4 year classroom programme. I came to know about FIITJEE from my friends in school because of its marvellous results.

The teachers at FIITJEE are very supportive. They teach each concept with great depth and relevance. Regular tests helped me to check my learning and strengthen my weaknesses. Monthly tests, Phase tests, AITS helped me to elevate my prepration to next level. GMP, RTPF, CPP, Archive helped me in my efficient revision of syllabus and gave me plenty of practice in problem solving.

With the help of FIITJEE, I was able to clear NTSE, KVPY, IOQM, IOQP, IOQA.

Thanks to my FIITJEE teachers and my parents for their constant support.

Tanish
[TANISH SINGH KHURANA]

All India Rank **123**



Advik Kabra

Student of FIITJEE Two Year Classroom Program at FIITJEE Bangalore Centre

I am Advik Kabra, a classroom student of FIITJEE Bangalore in the 2 year program to prepare for NTSE, KVPY and JEE.

The teachers at FIITJEE, created a very comfortable and productive environment, which was vital for clear understanding of topics. Their support and helpfulness was heavily appreciated whenever we had any doubts or difficulties.

The test series created by FIITJEE including the NTSE, KVPY, AITS, AI²TS, monthly and phase tests were extremely helpful in my preparation. Moreover, the daily mock tests in the months preceding JEE Advanced were immensely useful. The study material, especially the Grandmaster's Package and Review Package are truly excellent.

Without the help of the wonderful people around me, my friends, family, teachers and FIITJEE, I would certainly not have been able to qualify NTSE, KVPY, JEE and the like.

I would certainly recommend FIITJEE to any JEE aspirant.

ADVIK KABRA
Two-Year Classroom Program
FIITJEE Bangalore



AIR - 332
Charan Gvs
Four Year Classroom Program



AIR - 345
Rishit Ojha
Four Year Classroom Program



AIR - 353
Hari Shankar
Four Year Classroom Program



AIR - 1110
Aarush Ghate
Four Year Classroom Program



AIR - 1805
Rohita Datta Nalluri
Four Year Classroom Program, Upgraded to PINNACLE - Two Year Integrated School Program



AIR - 2029
Jeshwanth Sreeram
Four Year Classroom Program



AIR - 2046
Susmit Roy
Four Year Classroom Program



AIR - 2203
Aditya Gupta
Pinnacle - Two Year Integrated School Program



AIR - 2883
Kathir Mathalai
Four Year Classroom Program



AIR - 3158
Khushi Sharma
Two Year Classroom Program

All these Results are from Common Merit List only

and many more...

We wish all the students enormous success for their IIT journey and life ahead...

For detailed results and learning from Toppers, please visit **www.iitjeetoppers.com**

FIITJEE's

Unparalleled Expertise powered by its Value System, Sincerity & Hardwork produces winning results consistently for the

27th Year in JEE Advanced

3 in Top 10 | **32** in Top 100 All India Ranks

in JEE Advanced 2023 captured by FIITJEE Classroom Program Students

All India Rank **3**



Rishi Kalra
Four Year Classroom Program (IX - XII)

All India Rank **6**



Prabhav Khandelwal
One Year Live Online Classroom Program (XII)

All India Rank **8**



Malay Kedia
Four Year Classroom Program (IX - XII), upgraded to PINNACLE Two Year Integrated School Program (XI - XII)

S.No.	Name	AIR	Program
4	Harshit Kansal	16	TYCP
5	Moulik Jindal	19	AITS
6	Sameer Arvind Patil	20	FYCP
7	Prakhar Jain	21	FYCP+PINNACLE+UTY
8	Deshank Pratap Singh	22	OYCP
9	Mayank Soni	26	OYCP
10	Aakash Gupta	28	RSM
11	Tanishq M. Mandhane	29	ICP
12	Mohana S. Reddy E	30	PINNACLE+FWS+UOY
13	Kritin Gupta	32	TYCP
14	Naman Goyal	33	FYCP+UOY
15	Nipun Goel	40	PANINI
16	Shivanshu Kumar	42	RSM
17	Niral Charan	48	AITS
18	Abhineet Majety	50	PINNACLE+FWS
19	Gaurav Kumar	51	PANINI
20	Ramachandran Sampath	52	SUPREME
21	Bhavya Bansal	54	FYCP
22	Karedla Balaji	55	SUPREME
23	Abhi Jain	58	OYCP
24	Abhaas Aggarwal	59	FYCP
25	Vivek Kumar Upadhyay	60	FYCP
26	Ridam Jain	61	OYCP
27	Harsh Suthar	62	TYCP
28	Sandeep R Nallamilli	64	RSM
29	Kr Keyaan	66	SUPREME
30	Samarth B. Patel	77	TYCP
31	Vivswan Savyasach	80	FYCP
32	Rishabh Narayanan	82	SUPREME+UOY
33	Tanish Singh Khurana	85	FYCP
34	Apurva Samota	92	ICP
35	Ayush Kumar Singh	94	TYCP
36	Arinjay Singhal	95	ThYCP
37	Md. Sahil Akhtar	99	FYCP+UTY

Legends (FIITJEE Program) : OYCP (One Year Classroom Program for XII Pass); **TYCP** (Two Year Classroom Program); **PINNACLE** (PINNACLE - Two Year Integrated School Program; **PANINI** (PANINI - Two Year Integrated Program); **THYCP** (Three Year Classroom Program); **FYCP** (Four Year Classroom Program); **SUPREME** (SUPREME - Four Year Integrated School Program); **UTY** (UDAYA - Two Year Classroom Program); **UOY** (UDAYA - One Year Classroom Program); **ICP** (Intensive Classroom Program); **RSM** (Rankers Study Material); **AITS** (All India Test Series); **FWS** (FIITJEE World School)

FIITJEE is the only institute that clearly mentions the exact & complete details of the Classroom Program(s) of enrolled students while publishing the result of any competitive or scholastic exams.

JEE 2024 aspirants

Join FIITJEE's

INTENSIVE CONTACT PROGRAM

An iconic Classroom Program designed to catapult your All India Rank in JEE Main, JEE Advanced & other Engineering Entrance Exams from 500 to Top 10, from 2000 to Top 50, from 5000 to Top 100 or from 10000 to Top 200 !

Admission Test & Batch Commencement Dates

Program	Admission Test Dates	Result Declaration Dates	Batch Commencement Date
Intensive Contact Program for JEE Main & Advanced 2024	29th Oct. 2023	3rd Nov. 2023	9th Nov. 2023
	17th Dec. 2023	21st Dec. 2023	29th Dec. 2023
	11th Feb. 2024	14th Feb. 2024	20th Feb. 2024 (for XII Pass only)
Intensive Contact Program for JEE Advanced 2024	28th April 2024	1st May 2024	7th May 2024
Super Condensed Classroom Program for JEE Advanced 2024	12th May 2024	15th May 2024	21st May 2024

Please visit, www.admissiontest.fiitjee.com Or Scan QR Code

Unable to join Classroom Program ? Join FIITJEE Non-Classroom Programs to have FIITJEE Edge

For Class XII / XII Pass - Computer Based All India Test Series for JEE Main & JEE Advanced 2024

Program		No. of Main Tests	No. of Advanced Tests	No. of Live Online CSCP$^{\Omega}$ Sessions (@6 hours)	Last Date to Enrol & Fee*
Computer Based All India Test Series — Multidimensional Analysis of Performance followed by Live Online Concept Strengthening Sessions by FIITJEE Delhi Centres + myPAT Online Concept-wise Tests and Test Series (each Test will give you detailed Analysis Chart & Rank Potential Index)	From Part Test - I	18	18	20	15th Nov. 2023 | Rs. 19,200/-
	From Part Test - II	17	17	18	1st Dec. 2023 | Rs. 17,000/-
	From Part Test - III	16	16	16	15th Dec. 2023 | Rs. 16,000/-
	From Full Test - I	15	15	14	26th Dec. 2023 | Rs. 15,000/-
	From Open Test - Main	12	14	12	12th Jan. 2024 | Rs. 13,500/-
	From Open Test - Advanced	7	14	11	2nd Feb. 2024 | Rs. 12,500/-
	From Full Test VII	7	11	10	20th March 2024 | Rs. 10,900/-

12 Main &10 Advanced Tests will be conducted at fixed timings as per the actual JEE Main & JEE Advanced timings. Test can be taken from CBT Centers as well as from home on personal computer.6 Main & 8 Advanced Tests can be taken online from home at any time and these tests will be live for seven days.

Study Material Program

Program	Last Date to Enrol	Fee*
Rankers Study Material — One Year Program for JEE Main & JEE Advanced 2024 plus Sr. Olympiads (Physics, Chemistry & Mathematics).	20th October 2023	Rs. 21600/-

There are more entry points to join Rankers Study Material, visit https://fiitjeenonclassroomprograms.com/RSM-OneYear2024.aspx

Crash Correspondence Program

Program	Fee*
Grand Masters Package for JEE Advanced 2024	Rs. 4,500/-

*(including GST)

Ω Concept Strengthening Classroom Program | For complete AITS schedule & to enrol online, please visit **www.fiitjeenonclassroomprograms.com/aits.htm**

Visit **www.fiitjeenonclassroomprograms.com** | Call: **011 - 41828706** | e-mail : **query.ncrp@fiitjee.com**

Come, Study with the Best !

FIITJEE

31 YEARS OF INNOVATION, SINCERITY, ETHICS, CONSISTENCY & HARD WORK

Bangalore Centres - HSR Layout : 119, S. S. Plaza, 13th Cross, 6th Sector, Outer Ring Road, HSR Layout, Bangalore - 560 102 Ph: 9205953328, 9742288873 **Jayanagar :** 162, 36th Cross Road, 7th Main Road, 5th Block, Jayanagar, Bengaluru - 560041 Ph : 9742255583 **Sheshadripuram :** 113/114, 3rd Floor, HTR Chambers, Opp Hoysala Hotel, SC Road, Sheshadripuram Ph: 9742288873, 9742255583 **Web: www.fiitjeebangalore.com | Hostel Facility Available**

National Admissions Office: FIITJEE House, 29-A, Kalu Sarai, Sarvapriya Vihar, New Delhi Web: www.fiitjee.com Buy books at www.megacosmcognitions.com www.facebook.com/fiitjeeindia123 www.twitter.com/fiitjee www.youtube.com/fiitjeeltd

Prepare Stress Free & Tension Free for all Your Goals Only at FIITJEE

FIITJEE eSchool — bringing offline expertise to online

Live Online Classroom Programs for Class VI to XII Pass Students

The next best learning medium after FIITJEE Offline Classroom Programs right at your doorstep. Join from anywhere & experience FIITJEE's legendary pedagogy.

For more information on Live Online Programs visit **www.fiitjee-eschool.com** | **e-Mail : query@fiitjee-eschool.com**
To receive a call back (for eSchool), give a missed call on **9289550392** | For Program Enquiry, call on **8400928400**
Book your video counselling session : **www.fiitjee-eschool.com/VCO**

ಬುಧವಾರ, ಸೆಪ್ಟೆಂಬರ್ 27, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 268 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ತಂತ್ರಜ್ಞಾನ
'ಅರ್ದಂಬರ್ಧ ಪ್ರೇಮಕಥೆ' ಯ ದಿವ್ಯಾನುಭವ
ನಟ ದಿವ್ಯಾ ಉರುಡುಗ ಸಂದರ್ಶನ

ಆಳ-ಅಗಲ
ಪಶ್ಚಿಮ ಬಂಗಾಳದ ಹೊಂಡಗಳ ಯಶೋಗಾಥೆ

ಸೇನಾ ಬಾಂಧವ್ಯಕ್ಕೆ ಧಕ್ಕೆ ಇಲ್ಲ: ಕೆನಡಾ ಸೇನಾಪಡೆ ಉಪ ಮುಖ್ಯಸ್ಥ 10

ಪ್ರಮುಖರಿಗೆ ಮಣೆ, ಚೌಹಾಣ್‌ಗೆ ಸಂಕಷ್ಟ? 9

ಸೆನ್ಸೆಕ್ಸ್	ನಿಫ್ಟಿ	₹/$
65,945 ▼	19,664 ▼	83.28 ▼

ಮನೆಯಲ್ಲೇ ಉಳಿದ ಜನ • ಮೆರವಣಿಗೆಗೆ ಪೊಲೀಸರಿಂದ ತಡೆ • 771 ಮಂದಿ ಬಂಧನ, ಬಿಡುಗಡೆ

ಬಂದ್: ಬೆಂಗಳೂರು ಭಾಗಶಃ ಸ್ತಬ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸಬಾರದು' ಎಂದು ಆಗ್ರಹಿಸಿ ಕರೆ ನೀಡಿದ್ದ ಬೆಂಗಳೂರು ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ಬಹುತೇಕ ಜನರು ಸ್ವಯಂಪ್ರೇರಿತವಾಗಿ ಬಂದ್ ಬೆಂಬಲಿಸಿದ್ದರಿಂದ, ಬೆಂಗಳೂರಿನಲ್ಲಿ ವ್ಯಾಪಾರ–ವಹಿವಾಟು ಭಾಗಶಃ ಸ್ತಬ್ಧಗೊಂಡಿತ್ತು.

50ಕ್ಕೂ ಹೆಚ್ಚು ಸಂಘಟನೆಗಳು ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದ್ದವು. ಮಂಗಳವಾರ ಬೆಳಿಗ್ಗೆಯಿಂದಲೇ ರಸ್ತೆಗೆ ಇಳಿದಿದ್ದ ಸಂಘಟನೆಗಳ ಕಾರ್ಯಕರ್ತರು, 'ಅಂಗಡಿ ಬಂದ್ ಮಾಡಿ, ಕಾವೇರಿ ನದಿ ಹೋರಾಟ ಬೆಂಬಲಿಸಿ' ಎಂದು ಘೋಷಣೆ ಕೂಗಿದರು. ಅದಕ್ಕೆ ಸ್ಪಂದಿಸಿದ ಬಹುತೇಕ ವ್ಯಾಪಾರಿಗಳು, ಸ್ವಯಂಪ್ರೇರಣೆಯಿಂದ ವಹಿವಾಟು ಸ್ಥಗಿತಗೊಳಿಸಿದರು.

ಪುರಭವನದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಪ್ರತಿಭಟನಾಕಾರರು ನಡೆಸಲು ಉದ್ದೇಶಿಸಿದ್ದ ಬೃಹತ್ ಮೆರವಣಿಗೆಗೆ ಪೊಲೀಸರು ತಡೆಯೊಡ್ಡಿದರು. 'ನಗರದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ. ಬಂದ್ ಹಾಗೂ ಮೆರವಣಿಗೆಗೆ ಅವಕಾಶವಿಲ್ಲ. ಬೇಕಾದರೆ, ಸ್ವಾತಂತ್ರ್ಯ ಉದ್ಯಾನದಲ್ಲಿ ಶಾಂತಿಯುತ ಪ್ರತಿಭಟನೆ ನಡೆಸಿ' ಎಂದು ಪೊಲೀಸರು ಕೋರಿದರು. ಅದಕ್ಕೆ ಒಪ್ಪದ ಹೋರಾಟಗಾರರು, ಮೆರವಣಿಗೆ ಹೊರಡಲು ಮುಂದಾದರು. ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ವಾಗ್ವಾದ ನಡೆಯಿತು. ಹೋರಾಟನಿರತರನ್ನು ವಶಕ್ಕೆ ಪಡೆದ ಪೊಲೀಸರು, ಬಿಎಂಟಿಸಿ ಬಸ್‌ಗಳಲ್ಲಿ ಸ್ವಾತಂತ್ರ್ಯ ಉದ್ಯಾನಕ್ಕೆ ಕರೆದೊಯ್ದರು. ಉದ್ಯಾನದಲ್ಲಿ ಪ್ರತಿಭಟನೆ ಮುಂದುವರಿಯಿತು.

ಪ್ರತ್ಯೇಕ ಪ್ರತಿಭಟನೆ ನಡೆಸಿದ್ದ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ. ನಾರಾಯಣಗೌಡ ಬಣ) ಕಾರ್ಯಕರ್ತರು, ಗಾಂಧಿನಗರದಿಂದ ಮೆರವಣಿಗೆ ಹಮ್ಮಿಕೊಂಡಿದ್ದರು. ಅದಕ್ಕೆ ಅವಕಾಶ ನೀಡದ ಪೊಲೀಸರು, ನಾರಾಯಣಗೌಡ ಸೇರಿದಂತೆ ಹಲವರನ್ನು ವಶಕ್ಕೆ ಪಡೆದರು.

8ನೇ ಪುಟ ನೋಡಿ



ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಮಂಗಳವಾರ ಬಂದ ಪ್ರಯಾಣಿಕರು ಬಂದ್‌ನಿಂದಾಗಿ ತೊಂದರೆಗೆ ಒಳಗಾದರು
ಪ್ರಜಾವಾಣಿ ಚಿತ್ರ/ ಬಿ.ಕೆ.ಜನಾರ್ದನ್

ಕೆ.ಆರ್.ಪೇಟೆ, ಮಳವಳ್ಳಿ ಬಂದ್ ಯಶಸ್ವಿ

ಮೈಸೂರು: ವಿವಿಧ ಸಂಘಟನೆಗಳು ಮಂಗಳವಾರ ಕರೆ ನೀಡಿದ್ದ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ, ಮಳವಳ್ಳಿ ಹಾಗೂ ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕು ಕೇಂದ್ರಗಳ ಬಂದ್ ಯಶಸ್ವಿಯಾಯಿತು. 8

ರಾಮನಗರ ನೀರಸ ಪ್ರತಿಕ್ರಿಯೆ

ರಾಮನಗರ: ಕರ್ನಾಟಕ ಜಲ ಸಂರಕ್ಷಣಾ ಸಮಿತಿ ಮಂಗಳವಾರ ಕರೆ ಕೊಟ್ಟಿದ್ದ ರಾಮನಗರ ಜಿಲ್ಲೆ ಬಂದ್ ಪ್ರತಿಭಟನೆಗಷ್ಟೇ ಸೀಮಿತವಾಯಿತು. ರಾಜಕೀಯ ಪಕ್ಷಗಳು ಸೇರಿದಂತೆ 33ಕ್ಕೂ ಹೆಚ್ಚು ಸಂಘಟನೆಗಳು ಬೆಂಬಲ ನೀಡಿದ್ದರೂ ಬಂದ್‌ಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು. 8

3 ಸಾವಿರ ಕ್ಯೂಸೆಕ್ ನೀರು ಬಿಡಲು ಸಮಿತಿ ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ತಮಿಳುನಾಡಿಗೆ ಕರ್ನಾಟಕವು ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 15 ರ ವರೆಗೆ ಪ್ರತಿದಿನ 3 ಸಾವಿರ ಕ್ಯೂಸೆಕ್ ಕಾವೇರಿ ನೀರು ಬಿಡಬೇಕು ಎಂದು ಕಾವೇರಿ ನೀರು ನಿಯಂತ್ರಣ ಸಮಿತಿ ಮಂಗಳವಾರ ಶಿಫಾರಸು ಮಾಡಿದೆ. ಶಿಫಾರಸಿನ ಪ್ರಕಾರ, ತಮಿಳುನಾಡಿಗೆ ರಾಜ್ಯವು 18 ದಿನಗಳಲ್ಲಿ 4.61 ಟಿಎಂಸಿ ಅಡಿಯಷ್ಟು ನೀರು ಹರಿಸಬೇಕು.

ಇಲ್ಲಿ ನಡೆದ ಸಮಿತಿಯ 87ನೇ ಸಭೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡು ಜಲ ಸಂಪನ್ಮೂಲ ಇಲಾಖೆಗಳ ಹಿರಿಯ ಅಧಿಕಾರಿಗಳು ಭಾಗಿಯಾಗಿ ತಮ್ಮ ರಾಜ್ಯ ಎದುರಿಸುತ್ತಿರುವ ಸಂಕಷ್ಟ ಪರಿಸ್ಥಿತಿ ಬಗ್ಗೆ ಮಾಹಿತಿ ನೀಡಿದರು. ಸಮಿತಿಯು ತನ್ನ ಶಿಫಾರಸನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಕಳುಹಿಸುತ್ತದೆ.

8ನೇ ಪುಟ ನೋಡಿ

ಈಕ್ವೆಸ್ಟ್ರಿಯನ್‌ನಲ್ಲಿ ಚಿನ್ನದ ಸವಾರಿ

ಚೀನಾದ ಹಾಂಗ್‌ಝೌನಲ್ಲಿ ನಡೆಯುತ್ತಿರುವ ಏಷ್ಯನ್ ಕ್ರೀಡಾಕೂಟದ ಈಕ್ವೆಸ್ಟ್ರಿಯನ್ (ಕುದುರೆ ಸವಾರಿ) ಸ್ಪರ್ಧೆಯ ಡ್ರೆಸಾಜ್ ವಿಭಾಗದಲ್ಲಿ ಭಾರತ ತಂಡ ಮಂಗಳವಾರ ಚಿನ್ನ ಗೆದ್ದು ಐತಿಹಾಸಿಕ ಸಾಧನೆ ಮಾಡಿತು.



19th Asian Games Hangzhou 2022

- ಸುದೀಪ್ತಿ ಹಜೇಲಾ, ದಿವ್ಯಕೃತಿ ಸಿಂಗ್, ಅನುಷ್ ಅಗರವಾಲ್ ಮತ್ತು ವಿಪುಲ್ ಹೃದಯ್ ಅವರನ್ನೊಳಗೊಂಡ ತಂಡ **209.205** ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ
- ಈಕ್ವೆಸ್ಟ್ರಿಯನ್‌ನಲ್ಲಿ 41 ವರ್ಷಗಳ ಬಳಿಕ ಸ್ವರ್ಣ ಸಾಧನೆ
- 1982ರ ನವದೆಹಲಿ ಕೂಟದಲ್ಲಿ ಭಾರತ ಕೊನೆಯದಾಗಿ ಚಿನ್ನ ಗೆದ್ದಿತ್ತು

- **ಟೆನಿಸ್:** ಕ್ವಾರ್ಟರ್ ಫೈನಲ್‌ಗೆ ಸುಮಿತ್ ನಗಾಲ್, ಅಂಕಿತಾ ರೈನಾ
- **ಹಾಕಿ:** ಪುರುಷರ ತಂಡಕ್ಕೆ ಸಿಂಗಪುರ ವಿರುದ್ಧ **16-1** ಗೋಲುಗಳ ಗೆಲುವು

ಸೇಲಿಂಗ್
ನೇಹಾ ಠಾಕೂರ್ ಬೆಳ್ಳಿ
ಐಎಲ್‌ಸಿಎ-4 ಬಾಲಕಿಯರ ವಿಭಾಗ
27 ಪಾಯಿಂಟ್ಸ್
ಇಬಾದ್ ಅಲಿ ಕಂಚು
ಪುರುಷರ ವಿಂಡ್‌ಸರ್ಫರ್ ಆರ್‌ಎಸ್:ಎಕ್ಸ್ ವಿಭಾಗ
52 ಪಾಯಿಂಟ್ಸ್



ಪುಟ 11

ಪಠ್ಯಪುಸ್ತಕ ಪರಿಷ್ಕರಣೆಗೆ ಐದು ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರನೇ ತರಗತಿಯಿಂದ 10ನೇ ತರಗತಿವರೆಗಿನ ರಾಜ್ಯ ಪಠ್ಯಕ್ರಮದ ಪಠ್ಯಪುಸ್ತಕಗಳ ಪರಿಷ್ಕರಣೆಗೆ ಐದು ಸಮಿತಿಗಳನ್ನು ರಚಿಸಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ಕನ್ನಡ ಪ್ರಥಮ ಭಾಷೆ, ಕನ್ನಡ ದ್ವಿತೀಯ ಭಾಷೆ, ಕನ್ನಡ ತೃತೀಯ ಭಾಷೆ, 6, 7ನೇ ತರಗತಿಯ ಸಮಾಜ ವಿಜ್ಞಾನ ಹಾಗೂ 8,9, 10ನೇ ತರಗತಿಯ ಸಮಾಜ ವಿಜ್ಞಾನಕ್ಕೆ ಪ್ರತ್ಯೇಕವಾಗಿ ಸಮಿತಿಗಳನ್ನು ರಚಿಸಲಾಗಿದೆ. ನಿವೃತ್ತ ಪ್ರಾಧ್ಯಾಪಕರಾದ ಮಂಜುನಾಥ ಜಿ. ಹೆಗಡೆ ಅವರನ್ನು ಐದೂ ಸಮಿತಿಗಳ ಸಂಯೋಜಕರನ್ನಾಗಿ, ಕರ್ನಾಟಕ ಪಠ್ಯಪುಸ್ತಕ ಸಂಘದ ನಿರ್ದೇಶಕರನ್ನು ಸದಸ್ಯ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.



ಮಂಜುನಾಥ ಹೆಗಡೆ

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ, ಬಿಜೆಪಿ ಆಡಳಿತ ಅವಧಿಯಲ್ಲಿ ರೋಹಿತ್ ಚಕ್ರತೀರ್ಥ ಸಮಿತಿ ಮಾಡಿದ್ದ ಪಠ್ಯಪುಸ್ತಕಗಳ ಎಲ್ಲ ತಿದ್ದುಪಡಿಗಳನ್ನೂ ರದ್ದು ಮಾಡಿತ್ತು. ತಿದ್ದುಪಡಿಗೂ ಮೊದಲು ಇದ್ದ ಪಾಠಗಳನ್ನೇ ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಅನುಸರಿಸಲು ಸೂಚಿಸಲಾಗಿತ್ತು. ರದ್ದಾದ ವಿಷಯಗಳ ಬದಲಿಗೆ ಅನುಸರಿಸಲು ಸೂಚಿಸಿದ್ದ ಪಾಠಗಳನ್ನು ಪ್ರತ್ಯೇಕವಾಗಿ ಮುದ್ರಿಸಿ ಶಾಲೆಗಳಿಗೆ ಕಳುಹಿಸಲಾಗಿತ್ತು. ಪಠ್ಯಪರಿಷ್ಕರಣೆಗೆ ರಚಿಸಲಾಗಿರುವ ಸಮಿತಿಗಳಿಗೆ, ಮೂರು ತಿಂಗಳ ಅವಕಾಶ ನೀಡಲಾಗಿದೆ. ಸಮಿತಿಗಳು ಕೊಡುವ ಪರಿಷ್ಕರಣಾ ವರದಿಯ ಶಿಫಾರಸುಗಳನ್ನು 2024–25ನೇ ಸಾಲಿನಿಂದ ಜಾರಿಗೆ ತರಲಾಗುವುದು ಎಂದೂ ಶಿಕ್ಷಣ ಇಲಾಖೆ ಹೇಳಿದೆ.

8ನೇ ಪುಟ ನೋಡಿ

ಗರಗ ಕ್ಷೇತ್ರೀಯ ಸೇವಾ ಸಂಘಕ್ಕೆ ಪ್ರಶಸ್ತಿ ಗರಿ

ಬೆಂಗಳೂರು: ರಾಷ್ಟ್ರಧ್ವಜ ತಯಾರಿಕೆಯ ಬಟ್ಟೆ ಸಿದ್ಧಪಡಿಸುವ ಧಾರವಾಡ ಜಿಲ್ಲೆಯ ಗರಗ ಕ್ಷೇತ್ರೀಯ ಸೇವಾ ಸಂಘವು 2023ರ 'ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ'ಗೆ ಭಾಜನವಾಗಿದೆ.

ಕರ್ನಾಟಕ ಹೈಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಬಿ.ವೀರಪ್ಪ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಆಯ್ಕೆ ಸಮಿತಿಯು ದೇಶದ ಮೊದಲ ಖಾದಿ ಗ್ರಾಮೋದ್ಯೋಗ ಸಂಸ್ಥೆ ಎಂಬ ಹಿರಿಮೆ ಪಾತ್ರವಾಗಿರುವ ಈ ಸೇವಾ ಸಂಘವನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ. ಪ್ರಶಸ್ತಿಯು ₹ 5 ಲಕ್ಷ ನಗದು ಒಳಗೊಂಡಿದೆ.

ಅ.2ರಂದು ಸಂಜೆ 4.30ಕ್ಕೆ ಇನ್‌ಫೆಂಟ್ರಿ ರಸ್ತೆಯ ವಾರ್ತಾಸೌಧದ ಸಭಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡುವರು.

ವಹೀದಾಗೆ 'ಫಾಲ್ಕೆ' ಗೌರವ

ನವದೆಹಲಿ (ಪಿಟಿಐ): ಭಾರತೀಯ ಚಿತ್ರರಂಗದ ಅತ್ಯುನ್ನತ ಗೌರವ 'ದಾದಾ ಸಾಹೇಬ್ ಫಾಲ್ಕೆ' ಪ್ರಶಸ್ತಿಗೆ ಬಾಲಿವುಡ್ ನಟಿ, 85 ವರ್ಷದ ವಹೀದಾ ರೆಹಮಾನ್ ಅವರು ಭಾಜನರಾಗಿದ್ದಾರೆ.

ಅತ್ಯುತ್ತಮ ಚಿತ್ರಗಳಾಗಿ ಹೆಸರಿಸಬಹುದಾದ 'ಪ್ಯಾಸಾ', 'ಸಿಐಡಿ', 'ಗೈಡ್', 'ಕಾಗಜ್ ಕೆ ಫೂಲ್', 'ಖಾಮೋಷಿ', 'ತ್ರಿಶೂಲ್' ಸೇರಿದಂತೆ ಹಲವು ಚಿತ್ರಗಳಲ್ಲಿ ವಹೀದಾ ರೆಹಮಾನ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಸಹಜ ಸೌಂದರ್ಯ, ಭಿನ್ನ ಪಾತ್ರಗಳ ನಟನೆಯಿಂದ ಸಿನಿಪ್ರಿಯರ ಮನಗೆದ್ದಿದ್ದಾರೆ.

ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರು ಮಂಗಳವಾರ 'ಎಕ್ಸ್' ಜಾಲತಾಣದಲ್ಲಿ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಗೆ ವಹೀದಾ ರೆಹಮಾನ್ ಅವರು ಆಯ್ಕೆ ಆಗಿರುವುದನ್ನು ಪ್ರಕಟಿಸಿದರು.



ವಹೀದಾ ರೆಹಮಾನ್

'ಭಾರತೀಯ ಚಿತ್ರರಂಗಕ್ಕೆ ವಹೀದಾ ರೆಹಮಾನ್ ಅವರು ಸಲ್ಲಿಸಿರುವ ಅಪಾರ ಸೇವೆ ಹಾಗೂ ಕೊಡುಗೆಯನ್ನು ಪರಿಗಣಿಸಿ, ಜೀವಿತಾವಧಿ ಸಾಧನೆಗಾಗಿ ನೀಡುವ ಚಿತ್ರರಂಗದ ಅತ್ಯುನ್ನತ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ' ಎಂದು ಸಚಿವರು ಸಂದೇಶವನ್ನು ಪೋಸ್ಟ್ ಮಾಡಿದ್ದಾರೆ.

'ಸಂಸತ್ತಿನಲ್ಲಿ 'ನಾರಿಶಕ್ತಿ ವಂದನ ಅಧಿನಿಯಮ' ಮಹಿಳಾ ಮೀಸಲು ಮಸೂದೆ ಅಂಗೀಕಾರವಾದ ವರ್ಷದಲ್ಲಿಯೇ, ಬಾಲಿವುಡ್‌ನ ಈ ಹಿರಿಯ ನಟಿ ಅತ್ಯುನ್ನತ ಪ್ರಶಸ್ತಿಗೆ ಆಯ್ಕೆಯಾಗಿರುವುದು ಅವರ ಜೀವಿತಾವಧಿ ಸಾಧನೆಗಾಗಿ ಸಲ್ಲುತ್ತಿರುವ ಗೌರವವೂ ಆಗಿದೆ' ಎಂದು ಹೇಳಿದ್ದಾರೆ.

ವಹೀದಾ ಅವರು 1955ರಲ್ಲಿ ತೆಲುಗು ಚಿತ್ರ 'ರೋಜುಲು ಮಾರಾಯಿ' ಚಿತ್ರದ ಮೂಲಕ ತಮ್ಮ ಸಿನಿ ಪಯಣ ಆರಂಭಿಸಿದರು. ನಟ ದೇವ್ ಆನಂದ್ ಅವರು ನಾಯಕರಾಗಿದ್ದ, 1956ರಲ್ಲಿ ಬಿಡುಗಡೆಯಾದ 'ಸಿಐಡಿ' ಇವರ ಮೊದಲ ಹಿಂದಿ ಚಿತ್ರ.

9ನೇ ಪುಟ ನೋಡಿ

ಒಳ ಪುಟ



'ಟುಪಲೇವ್' ಬಿಡಿಭಾಗ ಕಾರವಾರಕ್ಕೆ 5

ಚಿನಕುರಳಿ

ಪ್ರಕಾಶ್ ಶೆಟ್ಟಿ



ವಿದ್ಯಾರ್ಥಿಗಳ ಹತ್ಯೆ: ಇಂಫಾಲ್ ಉದ್ವಿಗ್ನ

ಪ್ರಜಾವಾಣಿ ವಾರ್ತೆ

ಗುವಾಹಟಿ: ಜುಲೈ 6ರಿಂದ ನಾಪತ್ತೆಯಾಗಿದ್ದ, ಮೈತೇಯಿ ಸಮುದಾಯಕ್ಕೆ ಸೇರಿದ ಇಬ್ಬರು ವಿದ್ಯಾರ್ಥಿಗಳ ಮೃತದೇಹದ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾದ ನಂತರದಲ್ಲಿ ಮಣಿಪುರದ ಇಂಫಾಲ್‌ನಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿದೆ.

ಹತ್ಯೆಯ ಸುದ್ದಿ ಕೇಳಿದ ಶಾಲಾ ವಿದ್ಯಾರ್ಥಿಗಳು ಇಂಫಾಲ್‌ನಲ್ಲಿ ರಸ್ತೆಗೆ ಇಳಿದು ಆಕ್ರೋಶ ವ್ಯಕ್ತಪಡಿಸಿದರು. ಅವರನ್ನು ನಿಯಂತ್ರಿಸಲು ಪೊಲೀಸರು ಅಶ್ರುವಾಯು ಶೆಲ್ ಸಿಡಿಸಬೇಕಾಯಿತು. ಕಾನೂನು ಮತ್ತು ಸುವ್ಯವಸ್ಥೆಯು ಇನ್ನಷ್ಟು ಹದಗೆಡಬಹುದು ಎಂಬ ಭೀತಿಯಿಂದ ರಾಜ್ಯದ ಶಿಕ್ಷಣ ಇಲಾಖೆಯು ಸರ್ಕಾರಿ ಶಾಲೆಗಳನ್ನು ಮುಚ್ಚಿದೆ. ದುಷ್ಕರ್ಮಿಗಳ ವಿರುದ್ಧ ತ್ವರಿತವಾಗಿ ಕಠಿಣ ಕ್ರಮ ಜರುಗಿಸಲಾಗುತ್ತದೆ ಎಂದು ರಾಜ್ಯ ಸರ್ಕಾರ ಭರವಸೆ ನೀಡಿದೆ.

ಹತ್ಯೆಯಾಗಿರುವ ವಿದ್ಯಾರ್ಥಿಗಳ ಎರಡು ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಳ್ಳಲಾಗಿದೆ.

ಇಂದು ಸಿಬಿಐ ತಂಡ ಭೇಟಿ

ಗುವಾಹಟಿ (ಪಿಟಿಐ): ವಿದ್ಯಾರ್ಥಿಗಳ ಹತ್ಯೆ ಪ್ರಕರಣದ ತನಿಖೆ ನಡೆಸಲು ಸಿಬಿಐ ಅಧಿಕಾರಿಗಳ ತಂಡ ಮಣಿಪುರಕ್ಕೆ ಬುಧವಾರ ಭೇಟಿ ನೀಡಲಿದೆ ಎಂದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ತಿಳಿಸಿದ್ದಾರೆ.

'ಕೇಂದ್ರ ಹಾಗೂ ರಾಜ್ಯ ಸರ್ಕಾರವು ಕಣಿವೆ ರಾಜ್ಯದ ಜನರ ಹಿತಕಾಯಲು ಬದ್ಧವಾಗಿವೆ. ಹೇಯಕೃತ್ಯ ಎಸಗಿರುವ ಆರೋಪಿಗಳನ್ನು ಶೀಘ್ರವೇ ಬಂಧಿಸಲಾಗುವುದು' ಎಂದು ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಸಿಬಿಐನ ವಿಶೇಷ ನಿರ್ದೇಶಕ ಅಜಯ್ ಭಟ್ನಾಗರ್ ನೇತೃತ್ವದ ತಂಡವು ಈ ಪ್ರಕರಣದ ತನಿಖೆ ನಡೆಸಲಿದೆ ಎಂದು ಮೂಲಗಳು ತಿಳಿಸಿವೆ.

9ನೇ ಪುಟ ನೋಡಿ

ಜಿಲ್ಲಾವಾರು ಅರ್ಜಿ ಆಹ್ವಾನಿಸಿದ್ದ ಕಾರ್ಮಿಕರ ಕಲ್ಯಾಣ ಮಂಡಳಿ

7 ಸಾವಿರ ಲ್ಯಾಪ್‌ಟಾಪ್‌ಗಳಿಗೆ 1 ಲಕ್ಷ ಅರ್ಜಿ!

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿಯಾದ ಕಾರ್ಮಿಕರ ಮಕ್ಕಳಿಗೆ ನೀಡಲಾಗುವ ಒಟ್ಟು 7 ಸಾವಿರ ಲ್ಯಾಪ್‌ಟಾಪ್‌ಗಳಿಗೆ ರಾಜ್ಯದಾದ್ಯಂತ ಒಂದು ಲಕ್ಷಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ. ಸೌಲಭ್ಯಕ್ಕಾಗಿ ಜನಪ್ರತಿನಿಧಿಗಳ ಶಿಫಾರಸು ಪತ್ರಗಳೊಂದಿಗೆ ಕಟ್ಟಡ ಕಾರ್ಮಿಕರು ಅಧಿಕಾರಿಗಳಿಗೆ ದುಂಬಾಲು ಬಿದ್ದಿದ್ದಾರೆ.

2023–24ನೇ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ಶಿಕ್ಷಣ ಪಡೆಯುತ್ತಿರುವ ಮಕ್ಕಳಿಗೆ ಅನಿಮೇಷನ್ ವಿಷಯದೊಂದಿಗೆ ಶಿಕ್ಷಣ ಕಿಟ್ ಒಳಗೊಂಡ ಲ್ಯಾಪ್‌ಟಾಪ್ ನೀಡಲು ಕಾರ್ಮಿಕರ ಕಲ್ಯಾಣ ಮಂಡಳಿಯು ಜಿಲ್ಲಾವಾರು ಅರ್ಜಿಗಳನ್ನು ಆಹ್ವಾನಿಸಿತ್ತು.

'ರಾಜ್ಯದಲ್ಲಿ ಐದು ಪ್ರಾದೇಶಿಕ ವಿಭಾಗಗಳಿದ್ದು, ಪ್ರತಿ ಪ್ರಾದೇಶಿಕ ವ್ಯಾಪ್ತಿಗೆ 1,400 ಲ್ಯಾಪ್‌ಟಾಪ್ ಪೂರೈಸಲಾಗುತ್ತದೆ. ಅದರಲ್ಲಿ ಕಲಾ ವಿಭಾಗಕ್ಕೆ 500, ವಾಣಿಜ್ಯ ವಿಭಾಗಕ್ಕೆ 500 ಮತ್ತು ವಿಜ್ಞಾನ ವಿಭಾಗಕ್ಕೆ 400ರಂತೆ ಕೊಡಬೇಕು. ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ 'ಜಿಲ್ಲಾಮಟ್ಟದ ಮೇಲ್ವಿಚಾರಣಾ ಸಮಿತಿ' ರಚಿಸಿ, ನಿಯಮಾನುಸಾರ ಹಂಚಿಕೆ ಮಾಡಬೇಕು' ಎಂದು ಕಾರ್ಮಿಕರ ಕಲ್ಯಾಣ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭಾರತಿ ಡಿ. ಸೂಚಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದಿರುವ (ಮೆರಿಟ್ ಆಧಾರದ ಮೇಲೆ) ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕು. ಸಮಾನ ಅಂಕಗಳನ್ನು ಪಡೆದಾಗ, ಫಲಾನುಭವಿಯ ನೋಂದಣಿ ಸದಸ್ಯತ್ವದ ಹಿರಿತನವನ್ನು ಆಯ್ಕೆಗೆ ಪರಿಗಣಿಸಬೇಕು ಎಂದು ಮಂಡಳಿ ನಿಯಮಗಳನ್ನು ರೂಪಿಸಿದೆ. ಮಕ್ಕಳಿಗೆ ಲ್ಯಾಪ್‌ಟಾಪ್ ಅಕ್ಟೋಬರ್ ಅಂತ್ಯದಲ್ಲಿ ಸಿಗುವ ಸಾಧ್ಯತೆಯಿದೆ.



ಲ್ಯಾಪ್‌ಟಾಪ್‌ಗಾಗಿ ಅರ್ಜಿ ಹಾಕಲು ಹಾವೇರಿ ಕಾರ್ಮಿಕ ಅಧಿಕಾರಿಗಳ ಕಚೇರಿ ಮುಂಭಾಗ ನೆರೆದಿದ್ದ ಕಟ್ಟಡ ಕಾರ್ಮಿಕರು ಮತ್ತು ಮಕ್ಕಳು – ಪ್ರಜಾವಾಣಿ ಚಿತ್ರ

> **ಕಲಬುರಗಿ ಪ್ರಾದೇಶಿಕ ವಿಭಾಗಕ್ಕೆ 1,400 ಲ್ಯಾಪ್‌ಟಾಪ್‌ಗಳು ಹಂಚಿಕೆಯಾಗಿದ್ದು, ಒಟ್ಟು 41,977 ಅರ್ಜಿ ಸಲ್ಲಿಕೆಯಾಗಿವೆ. ಮೆರಿಟ್ ಆಧಾರದ ಮೇಲೆ ಮಕ್ಕಳಿಗೆ ವಿತರಿಸಲಾಗುವುದು**
> **ವೆಂಕಟೇಶ ಸಿಂಧಿಹಟ್ಟಿ,** ಉಪ ಕಾರ್ಮಿಕ ಆಯುಕ್ತ, ಕಲಬುರಗಿ ಪ್ರಾದೇಶಿಕ ವಿಭಾಗ

> **ಕಡು ಬಡತನದಲ್ಲಿರುವ ಎಲ್ಲ ಕಟ್ಟಡ ಕಾರ್ಮಿಕರ ಮಕ್ಕಳಿಗೂ ಸರ್ಕಾರ ಲ್ಯಾಪ್‌ಟಾಪ್ ವಿತರಿಸಬೇಕು**
> **ಅಜ್ಜಪ್ಪ ಹಡಪದ,** ರಾಜ್ಯ ಘಟಕದ ಅಧ್ಯಕ್ಷ, ಅಖಿಲ ಕರ್ನಾಟಕ ಕಟ್ಟಡ ಕಾರ್ಮಿಕರ ಸಂಘ

8ನೇ ಪುಟ ನೋಡಿ

ಮೈಸೂರು ರೇಸ್

ಅಮೆಲಿ ಗೆಲ್ಲುವ ನಿರೀಕ್ಷೆ

ಸಿವಿಲ್ ಸರ್ವೀಸಸ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಮೆಲಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಲ್ಲಿ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಉದುಕಾಯ್ 2, ಎಲೈಟ್ ಏಂಜೆಲ್ 6, ಗೇಮ್ ಬಾಯ್ 5
2ನೇ ರೇಸ್: ಎ ಕ್ಲಾಸ್ 3, ಹಿರೋ 8, ಕಂಟ್ರೀಸ್ ಮ್ಯಾಜಿಕ್ 1
3ನೇ ರೇಸ್: ತೆನಾಲಿ 6, ರಿಡೀಲರ್ 2, ಎಡ್ಡಿ ದಿ ಈಗಲ್ 1
4ನೇ ರೇಸ್: ಅಮೆಲಿ 4, ಎಟರ್ನಲ್ ಪ್ರಿನ್ಸೆಸ್ 6, ಮಿಡ್‌ನೈಟ್ ಮೆಲೋಡಿ 2
5ನೇ ರೇಸ್: ಮಲ್ಲಿನೈಟೆಡ್ 8, ಏಂಜೆಲಿನ್ 5, ಟ್ರೈಟ್ ಫ್ಲೇಮ್ 1
6ನೇ ರೇಸ್: ರೆಂಬ್ರಾಂಡ್ 12, ಸೆವೆನ್ ಸಮುರಾಯ್ 7, ಮ್ಯಾಜಿಕ್ ಸರ್ಕಲ್ 1

ಉತ್ತಮ ಬೆಟ್: ತೆನಾಲಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಬ್ಯಾಂಕ್ ಜನಾರ್ದನ್ ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೀವ್ರ ಎದೆನೋವು ಕಾಣಿಸಿಕೊಂಡ ಕಾರಣ ಕನ್ನಡ ಚಿತ್ರರಂಗದ ಹಿರಿಯ ನಟ ಬ್ಯಾಂಕ್ ಜನಾರ್ದನ್ ಅವರನ್ನು ಮಂಗಳವಾರ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಎದೆನೋವು ಕಾಣಿಸಿಕೊಂಡಿದ್ದರಿಂದ ನಗರದ ವಿಕ್ರಂ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಂಜಿಯೋಗ್ರಾಮ್ ಮಾಡಲಾಗಿದ್ದು, ಯಾವುದೇ ತೊಂದರೆ ಕಂಡು ಬಂದಿಲ್ಲ. ಐಸಿಯುನಲ್ಲಿ ಇರಿಸಲಾಗಿದೆ. ಪ್ರಸ್ತುತ ಚೇತರಿಸಿಕೊಂಡು ಆರೋಗ್ಯವಾಗಿದ್ದಾರೆ. ಆತಂಕಪಡುವ ಅಗತ್ಯವಿಲ್ಲ' ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

₹ 1.5 ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರ ಬಲೆಗೆ

ಲಂಚ: ಬೆಸ್ಕಾಂ ಎಇಇ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದಿದ್ದ ಆರೋಪದಡಿ ದಾಖಲಿಸಿದ್ದ ಪ್ರಕರಣವೊಂದನ್ನು ಮುಕ್ತಾಯಗೊಳಿಸಲು ₹ 1.5 ಲಕ್ಷ ಲಂಚ ಪಡೆದ ಬೆಸ್ಕಾಂ ಇಂದಿರಾನಗರ ಉಪ ವಿಭಾಗದ ವಿಚಕ್ಷಣ ದಳದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಯೋಗೇಶ್ ಅವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಅನಧಿಕೃತ ವಿದ್ಯುತ್ ಸಂಪರ್ಕ ಪಡೆದಿದ್ದ ವೆಂಕಟೇಶ್ ವಿರುದ್ಧ ಬೆಸ್ಕಾಂ ವಿಚಕ್ಷಣ ದಳ ಪ್ರಕರಣ ದಾಖಲಿಸಿತ್ತು. ಅದನ್ನು ಮುಕ್ತಾಯಗೊಳಿಸಲು ₹ 1.70 ಲಕ್ಷ ಲಂಚ ನೀಡುವಂತೆ ವಿಚಕ್ಷಣ ದಳದ ಎಇಇ ಬೇಡಿಕೆ ಇಟ್ಟಿದ್ದರು. ಆಪಾದಿತರ ಕಡೆಯವರು ಭೇಟಿ ಮಾಡಿ ಚೌಕಾಸಿ ನಡೆಸಿದ್ದಾಗ ₹ 1.50 ಲಕ್ಷ ಲಂಚ ಕೊಟ್ಟರೆ ಪ್ರಕರಣ ಮುಕ್ತಾಯಗೊಳಿಸುವುದಾಗಿ ತಿಳಿಸಿದ್ದರು.

ಯೋಗೇಶ್ ಲಂಚಕ್ಕೆ ಬೇಡಿಕೆ ಇಟ್ಟಿರುವ ಕುರಿತು ಮಾರತ್‌ಹಳ್ಳಿಯ ಬಸವನಗರ ನಿವಾಸಿ ಶ್ರೀಧರ ಆಚಾರ್ ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು ನೀಡಿದ್ದರು. ದೂರುದಾರರಿಂದ ಮಂಗಳವಾರ ₹ 1.5 ಲಕ್ಷ ಲಂಚ ಪಡೆಯುತ್ತಿದ್ದಾಗ ದಾಳಿ ಮಾಡಿದ ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಮಹದೇವಯ್ಯ ಮತ್ತು ತಂಡ ಆರೋಪಿಯನ್ನು ಬಂಧಿಸಿದೆ ಎಂದು ಲೋಕಾಯುಕ್ತ ಪ್ರಕಟಣೆ ತಿಳಿಸಿದೆ.

ಭೂಮಾಪಕ, ಮಧ್ಯವರ್ತಿ ಸೆರೆ

ಪ್ರಮಾಣಿತ ಭೂ ದಾಖಲೆಗಳನ್ನು ಒದಗಿಸಲು ₹ 7,000 ಲಂಚ ಪಡೆದ ಕೆ.ಆರ್.ಪುರ ತಾಲ್ಲೂಕಿನ ಭೂ ದಾಖಲೆಗಳ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯ ಭೂಮಾಪಕ ಮೂರ್ತಿ ನಾಯ್ಕ್ ಮತ್ತು ಅವರ ಪರವಾಗಿ ಹಣ ಪಡೆದ ದಿವಾಕರ್ ಎಂಬ ಮಧ್ಯವರ್ತಿಯನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಕಾಡುಗೋಡಿ ಸಮೀಪದ ದೊಮ್ಮಸಂದ್ರ ನಿವಾಸಿ ಸಂದೇಶ್ ಹೊಸಮಠ ಎಂಬುವವರು ಜಮೀನಿನ ಪ್ರಮಾಣಿತ ದಾಖಲೆಗಳನ್ನು ಕೋರಿ ಅರ್ಜಿ ಸಲ್ಲಿಸಿದ್ದರು. ದಾಖಲೆಗಳನ್ನು ಒದಗಿಸಲು ₹ 7,000 ಲಂಚ ನೀಡುವಂತೆ ಭೂಮಾಪಕ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು ನೀಡಿದ್ದರು.

ದೂರುದಾರರು ಮಂಗಳವಾರ ಲಂಚದ ಹಣ ತಲುಪಿಸಲು ಮೂರ್ತಿ ನಾಯ್ಕ್ ಅವರನ್ನು ಭೇಟಿಮಾಡಿದ್ದರು. ಸ್ಥಳದಲ್ಲಿದ್ದ ಮಧ್ಯವರ್ತಿ ದಿವಾಕರ್ ಎಂಬುವವರಿಗೆ ಹಣ ನೀಡುವಂತೆ ಭೂಮಾಪಕ ಸೂಚಿಸಿದರು. ಸಂದೇಶ್ ಅದೇ ಪ್ರಕಾರ ಹಣ ನೀಡಿದರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್‌ಗಳಾದ ಗಂಗರುದ್ರಯ್ಯ, ಆನಂದ್, ಶಂಕರಪ್ಪ ಮತ್ತು ತಂಡ ಆರೋಪಿಗಳನ್ನು ಬಂಧಿಸಿದೆ ಎಂದು ಲೋಕಾಯುಕ್ತದ ಅಧಿಕಾರಿಗಳು ತಿಳಿಸಿದ್ದಾರೆ.


ಎರಡೂ ಕಾರ್ಯಾಚರಣೆಗಳು ಲೋಕಾಯುಕ್ತದ ಬೆಂಗಳೂರು ನಗರ ವಿಭಾಗದ ಪ್ರಭಾರ ಎಸ್‌ಪಿ ಶ್ರೀನಾಥ್ ಜೋಶಿ ಅವರ ಮಾರ್ಗದರ್ಶನದಲ್ಲಿ ನಡೆದಿವೆ.

ಸುದ್ದಿ 2 ನಿಮಿಷ

ಹೊಸ ಮದ್ಯದಂಗಡಿ: ಸಾಣೆಹಳ್ಳಿ ಶ್ರೀ ವಿರೋಧ

ಅರಸೀಕೆರೆ (ವಿಜಯನಗರ ಜಿಲ್ಲೆ): 'ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ಹೊಸ ಮದ್ಯದ ಅಂಗಡಿ ತೆರೆಯಲು ಪರವಾನಗಿ ನೀಡಬಾರದು' ಎಂದು ಸಾಣೆಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಒತ್ತಾಯಿಸಿದರು.

ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿಯ ಕಮ್ಮತ್ತ ಹಳ್ಳಿ ಗ್ರಾಮದಲ್ಲಿ ಮಂಗಳವಾರ ಬಸವತತ್ವ ಸಮ್ಮೇಳನದಲ್ಲಿ ಮಾತನಾಡಿದ ಅವರು, 'ಗ್ರಾಮೀಣ ಪ್ರದೇಶಗಳಲ್ಲಿ ಈಗಾಗಲೇ ಮದ್ಯದಿಂದ ಸಾವಿರಾರು ಕುಟುಂಬಗಳ ನೆಮ್ಮದಿ ಹಾಳಾಗಿದೆ. ಯುವಕರು ದಾರಿ ತಪ್ಪುತ್ತಿದ್ದಾರೆ. ಸರ್ಕಾರ ಕೂಡಲೇ ಪ್ರಸ್ತಾವ ಕೈಬಿಡಬೇಕು' ಎಂದರು.



'ಮದ್ಯದ ಅಂಗಡಿ ವಿರುದ್ಧ ಮಹಿಳೆಯರು ದಂಗೆ ಏಳಬೇಕು. ಸಾತ್ವಿಕ ಪ್ರತಿರೋಧ ಭಾಗ್ಯವಾಗಬೇಕು. ಸಮಾಜದಲ್ಲಿ ಪ್ರತಿಯೊಬ್ಬರೂ ಅನ್ಯಾಯ ವಿರೋಧಿಸುವ ಗುಣ ಬೆಳೆಸಿಕೊಳ್ಳಬೇಕು. ಇದರಲ್ಲಿ ಮಠಾಧೀಶರೂ ಹೊರತಾಗಿಲ್ಲ. ಆದರೆ, ಮಠದ ಭಕ್ತರನ್ನು ಕಡೆಗಣಿಸುತ್ತಿರುವ ಆತಂಕ ಮಠಾಧೀಶರಿಗೆ ಸಲ್ಲದು' ಎಂದು ಹೇಳಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತರಾಗಿ ರಂಗಪ್ಪ

ಬೆಂಗಳೂರು: ಕಂದಾಯ ಇಲಾಖೆಯ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ವಿಭಾಗದ ನಿರ್ದೇಶಕರಾಗಿದ್ದ ಐಎಎಸ್ ಅಧಿಕಾರಿ ಎಸ್.ರಂಗಪ್ಪ ಅವರನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತರನ್ನಾಗಿ ಮಂಗಳವಾರ ವರ್ಗಾವಣೆ ಮಾಡಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹೆಚ್ಚುವರಿ ಪ್ರಭಾರದಿಂದ ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ.ದಯಾನಂದ್ ಅವರನ್ನು ಬಿಡುಗಡೆ ಮಾಡಲಾಗಿದೆ. ಕೆಎಸ್‌ಆರ್‌ಟಿಸಿ ನಿರ್ದೇಶಕ (ಸಿಬ್ಬಂದಿ) ಸುಂದರೇಶ್ ಬಾಬು ಅವರನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.



ನಗರದಲ್ಲಿ ಮಂಗಳವಾರ ಅಂಚೆ ಇಲಾಖೆ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಹುದ್ದೆಗೆ ಆಯ್ಕೆಯಾದ 366 ಅಭ್ಯರ್ಥಿಗಳಿಗೆ ಕೇಂದ್ರ ಬೃಹತ್ ಉದ್ದಿಮೆಗಳ ಸಚಿವ ಮಹೇಂದ್ರನಾಥ್ ಪಾಂಡೆ ನೇಮಕಾತಿ ಆದೇಶ ನೀಡಿದರು. ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್, ಅಂಚೆ ಸೇವೆ ವಿಭಾಗದ ನಿರ್ದೇಶಕಿ ಕೈಯ ಆರೋರಾ ಇದ್ದರು

ವಿಶ್ವ ಸಾಂಸ್ಕೃತಿಕ ಉತ್ಸವ 29ಕ್ಕೆ

ಬೆಂಗಳೂರು: ಆರ್ಟ್ ಆಫ್ ಲಿವಿಂಗ್ ವತಿಯಿಂದ ಇದೇ 29ರಿಂದ ಅ.1ರವರೆಗೆ 'ವಿಶ್ವ ಸಾಂಸ್ಕೃತಿಕ ಉತ್ಸವ'ವನ್ನು ಅಮೆರಿಕದ ವಾಷಿಂಗ್ಟನ್ ಡಿಸಿಯ ನ್ಯಾಷನಲ್ ಮಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಶ್ರೀ ಶ್ರೀ ರವಿ ಶಂಕರ್ ಗುರೂಜಿ ನೇತೃತ್ವದಲ್ಲಿ ಉತ್ಸವ ಆಯೋಜಿಸಲಾಗಿದೆ. ಇದರಲ್ಲಿ 17 ಸಾವಿರ ಕಲಾವಿದರು, 100ಕ್ಕೂ ಹೆಚ್ಚು ದೇಶಗಳ ಚಿಂತಕರು ಭಾಗವಹಿಸಲಿದ್ದಾರೆ.

ಆಹಾರದಲ್ಲಿ ಇಲಿ: ಹೋಟೆಲ್‌ಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಬಂದ್' ಕರ್ತವ್ಯದಲ್ಲಿದ್ದ ಸಂಚಾರ ಪೊಲೀಸರಿಗೆ ಸತ್ತ ಇಲಿ ಬಿದ್ದಿದ್ದ ಆಹಾರ ಪೂರೈಕೆ ಮಾಡಿದ್ದ ಆರೋಪದಡಿ 'ಅಶೋಕ ಟಿಫಿನ್ ರೂಮ್' ಹೋಟೆಲ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಪರಿಶೀಲನೆ ನಡೆಸಿದ್ದ ಬಿಬಿಎಂಪಿ ಅಧಿಕಾರಿಗಳು, ಹೋಟೆಲ್‌ಗೆ ಬೀಗ ಹಾಕಿದ್ದಾರೆ.

ಆರ್‌ಎಂಸಿ ಯಾರ್ಡ್ ಠಾಣೆ ವ್ಯಾಪ್ತಿಯಲ್ಲಿ ಕರ್ತವ್ಯದಲ್ಲಿದ್ದ ಸಿಬ್ಬಂದಿಗೆ ಪೂರೈಸಲಾದ ರೈಸ್ ಬಾತ್ ಪೊಟ್ಟಣವೊಂದರಲ್ಲಿ ಸತ್ತ ಇಲಿ ಪತ್ತೆಯಾಗಿತ್ತು. ಇದನ್ನು ನೋಡಿ ಸಿಬ್ಬಂದಿ ಆತಂಕಕ್ಕೆ ಒಳಗಾಗಿದ್ದರು. ಫೋಟೊ ತೆಗೆದು ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹಂಚಿಕೊಂಡಿದ್ದರು.

ಆಹಾರ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ್ದ ಸಂಚಾರ ವಿಭಾಗದ ಜಂಟಿ ಕಮಿಷನರ್, ಆಹಾರ ಸಿದ್ಧಪಡಿಸಿ ವಿತರಿಸಿದ್ದ ಅಶೋಕ ಟಿಫಿನ್ ರೂಮ್ ಹೋಟೆಲ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಸೂಚಿಸಿದ್ದರು. ಅದರಂತೆ, ಹೋಟೆಲ್ ಮಾಲೀಕರು ಹಾಗೂ ಇತರರ ವಿರುದ್ಧ ಆರ್‌ಎಂಸಿ ಯಾರ್ಡ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಆಹಾರ ಸುರಕ್ಷತಾ ಅಧಿಕಾರಿಗಳು ಹಾಗೂ ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಗಳು ಹೋಟೆಲ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಆದರೆ, ಹೋಟೆಲ್ ಅಡುಗೆ ತಯಾರಿ ಸ್ಥಳದಲ್ಲಿ ಸ್ವಚ್ಛತೆ ಇರಲಿಲ್ಲ. ಮಾಲೀಕರನ್ನು ತರಾಟೆಗೆ ತೆಗೆದುಕೊಂಡ ಅಧಿಕಾರಿಗಳು, ಹೋಟೆಲ್‌ಗೆ ತಾತ್ಕಾಲಿಕವಾಗಿ ಬೀಗ ಹಾಕಿದ್ದಾರೆ. ಮಾಲೀಕರಿಗೆ ನೋಟಿಸ್ ನೀಡಿದ್ದಾರೆ.

ಇನ್‌ಸ್ಪೆಕ್ಟರ್ ವಿರುದ್ಧ ಶಿಸ್ತುಕ್ರಮ: 'ಬಂದ್ ಕರ್ತವ್ಯದಲ್ಲಿರುವ ಪೊಲೀಸರಿಗೆ ಊಟ ಹಾಗೂ ಅಗತ್ಯ ವಸ್ತುಗಳನ್ನು ಪೂರೈಸುವ ಜವಾಬ್ದಾರಿಯನ್ನು ಆಯಾ ಠಾಣೆ ಇನ್‌ಸ್ಪೆಕ್ಟರ್‌ಗಳಿಗೆ ವಹಿಸಲಾಗಿದೆ. ಒಬ್ಬರಿಗೆ ಒಂದು ದಿನಕ್ಕೆ ತಲಾ ₹ 200 ಖರ್ಚು ಮಾಡಲು ಇಲಾಖೆಯಿಂದ ಹಣ ನೀಡಲಾಗುತ್ತದೆ. ಊಟದ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿದ್ದ ಇನ್‌ಸ್ಪೆಕ್ಟರ್ ವಿರುದ್ಧ ಶಿಸ್ತುಕ್ರಮ ಜರುಗಿ ಸಲಾಗಿದೆ' ಎಂದು ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ತಿಳಿಸಿದರು.

180 ಪೊಟ್ಟಣ ಸಿದ್ಧಪಡಿಸಿದ್ದ ಹೋಟೆಲ್: 'ಪೊಲೀಸರಿಗೆ 180 ಆಹಾರ ಪೊಟ್ಟಣ ಪೂರೈಕೆ ಮಾಡಲಾಗಿತ್ತು. ಈ ಪೈಕಿ ಒಂದು ಪೊಟ್ಟಣದಲ್ಲಿ ಇಲಿ ಪತ್ತೆಯಾಗಿದೆ. ಉಳಿದ ಆಹಾರದಲ್ಲೂ ಸತ್ತ ಇಲಿಯ ಅಂಶ ಇರುವ ಅನುಮಾನವಿತ್ತು. ಹೀಗಾಗಿ, ಎಲ್ಲ ಪೊಟ್ಟಣಗಳನ್ನು ವಾಪಸು ಕಳುಹಿಸಲಾಯಿತು' ಎಂದು ಪೊಲೀಸ್ ಕಾನ್‌ಸ್ಟೆಬಲ್‌ವೊಬ್ಬರು ತಿಳಿಸಿದರು.

ನೀಟ್–ಪಿಜಿ ಕಟ್‌ಆಫ್ ಶೂನ್ಯಕ್ಕೆ: ಐಎಂಎ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಆರೋಗ್ಯ ಸಚಿವಾಲಯವು 2023ನೇ ಸಾಲಿನ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆಯ (ನೀಟ್–ಪಿ.ಜಿ) ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಕಟ್ ಆಫ್ ಅಂಕವನ್ನು ಶೂನ್ಯಕ್ಕೆ ಇಳಿಸಿರುವುದಕ್ಕೆ ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಶಾಖೆ ವಿರೋಧ ವ್ಯಕ್ತಪಡಿಸಿದೆ.

ಈ ಬಗ್ಗೆ ಐಎಂಎ ಕರ್ನಾಟಕ ಶಾಖೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹಾಗೂ ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ ಪತ್ರ ಬರೆದಿದ್ದು, ಕೇಂದ್ರ ಸರ್ಕಾರವು ತನ್ನ ನಿರ್ಧಾರವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದೆ.

'ಕಟ್ ಆಫ್ ಅಂಕ ಹೆಚ್ಚಿಸಿದ್ದ ಕಾರಣ ದೇಶದಾದ್ಯಂತ ವೈದ್ಯಕೀಯ ಕಾಲೇಜುಗಳಲ್ಲಿ ಪೂರ್ಣ ಪ್ರಮಾಣದಲ್ಲಿ ದಾಖಲಾತಿಯಾಗುತ್ತಿಲ್ಲ. ಹೀಗಾಗಿ, ವೈದ್ಯಕೀಯ ಸೀಟುಗಳು ಖಾಲಿ ಉಳಿದಿವೆ. ಆದ್ದರಿಂದ ಕಟ್ ಆಫ್ ಅಂಕವನ್ನು ಇಳಿಸಬೇಕು' ಎಂದು ಸ್ಥಾನಿಕ ವೈದ್ಯರ ಸಂಘ ಈ ಹಿಂದೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿತ್ತು. ಸೆ.21ರಂದು ಆರೋಗ್ಯ ಸಚಿವಾಲಯವು ಕಟ್ ಆಫ್ ಅಂಕವನ್ನು ಶೂನ್ಯಕ್ಕೆ ತಗ್ಗಿಸಿ, ಆದೇಶ ಹೊರಡಿಸಿತ್ತು. ಈ ನಿರ್ಧಾರವನ್ನು ದೆಹಲಿಯ ಐಎಂಎ ಕೇಂದ್ರ ಕಚೇರಿ ಸ್ವಾಗತಿಸಿತ್ತು.

ಈಗ ಐಎಂಎ ಕರ್ನಾಟಕ ಶಾಖೆಯು ಕೇಂದ್ರದ ನಿರ್ಧಾರಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದು, ಈ ನಿರ್ಧಾರದಿಂದ ಅರ್ಹ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದೆ. 'ಕೇಂದ್ರದ ಈ ನಿರ್ಧಾರವು ದೇಶದ ಆರೋಗ್ಯ ವ್ಯವಸ್ಥೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ. ಜೀವರಸಾಯನ ವಿಜ್ಞಾನ, ಅಂಗರಚನಾ ವಿಜ್ಞಾನ ಸೇರಿ ಕೆಲವು ವಿಭಾಗಗಳನ್ನು ಹೊರತುಪಡಿಸಿದರೆ ಉಳಿದ ವೈದ್ಯಕೀಯ ಸ್ನಾತಕೋತ್ತರ ಪದವಿ ಸೀಟುಗಳಿಗೆ ಹೆಚ್ಚಿನ ಬೇಡಿಕೆ ಇದೆ. ಈ ನಿರ್ಧಾರದಿಂದ ಹೆಚ್ಚಿನ ಬೇಡಿಕೆಯುಳ್ಳ ವಿಭಾಗಗಳಲ್ಲಿ ಸೀಟುಗಳು ಅಧಿಕ ಮೊತ್ತಕ್ಕೆ ಮಾರಾಟವಾಗುತ್ತವೆ' ಎಂದು ಐಎಂಎ ಕರ್ನಾಟಕ ಶಾಖೆಯ ಅಧ್ಯಕ್ಷ ಶಿವಕುಮಾರ್ ಬಿ. ಲಕ್ಕೋಳ ತಿಳಿಸಿದ್ದಾರೆ.

ಐಎಂಎ ಕರ್ನಾಟಕ ಶಾಖೆಯ ಕಾರ್ಯದರ್ಶಿ ಬಿ.ಪಿ. ಕರುಣಾಕರ್, 'ಮಕ್ಕಳ ವೈದ್ಯ ವಿಜ್ಞಾನ, ಚರ್ಮ ವಿಜ್ಞಾನ ವಿಭಾಗದಲ್ಲಿ ಈಗಾಗಲೇ ಸೀಟುಗಳಿಗೆ ₹ 2.5 ಕೋಟಿ ಶುಲ್ಕ ಇದೆ. ಈ ಬೇಡಿಕೆ ಹೆಚ್ಚಳವಾಗುವ ನಿರೀಕ್ಷೆಯಿಂದ ಈಗಾಗಲೇ ಹಲವು ಖಾಸಗಿ ಕಾಲೇಜುಗಳು ಶುಲ್ಕವನ್ನು ಹೆಚ್ಚಿಸಿವೆ. ಏಜೆಂಟ್‌ಗಳು ಸಾಮಾನ್ಯವಾಗಿ ಸೀಟುಗಳನ್ನು ಬ್ಲಾಕ್ ಮಾಡುತ್ತಾರೆ. ಈ ಸೀಟುಗಳು ಮೆರಿಟ್ ಕೋಟಾ ವಿದ್ಯಾರ್ಥಿಗಳಿಗೆ ಲಭ್ಯವಾಗುವುದಿಲ್ಲ. ಆದ್ದರಿಂದ ಅಧಿಸೂಚನೆಯನ್ನು ವಾಪಸ್ ಪಡೆದು, ಖಾಲಿ ಇರುವ ಸೀಟುಗಳನ್ನು ಮೆರಿಟ್ ಮೂಲಕವೇ ಭರ್ತಿ ಮಾಡಲು ಕ್ರಮವಹಿಸಬೇಕು' ಎಂದು ಆಗ್ರಹಿಸಿದ್ದಾರೆ.

ಎಂಜಿನಿಯರಿಂಗ್: ಕೌನ್ಸೆಲಿಂಗ್ ಫಲಿತಾಂಶ ವಿಳಂಬ

ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್‌ಗಳ ಎರಡನೇ ಸುತ್ತಿನ ಕೌನ್ಸೆಲಿಂಗ್ ಫಲಿತಾಂಶ ಪ್ರಕಟಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವಿಳಂಬ ಮಾಡಿರುವುದು ವಿದ್ಯಾರ್ಥಿಗಳ ಆತಂಕಕ್ಕೆ ಕಾರಣವಾಗಿದೆ.


ಕೆಇಎ ಅಧಿಸೂಚನೆಯ ಪ್ರಕಾರ, ಎರಡನೇ ವಿಸ್ತೃತ ಸುತ್ತಿನ ಫಲಿತಾಂಶ ಸೆ.23 ರಂದು ರಾತ್ರಿ 8ರ ನಂತರ ಬಿಡುಗಡೆ ಮಾಡಬೇಕಿತ್ತು. ಆದರೆ, ಮೂರು ದಿನಗಳು ಕಳೆದರೂ ಫಲಿತಾಂಶಗಳನ್ನು ಬಿಡುಗಡೆ ಮಾಡಿಲ್ಲ ಎಂದು ಹಲವು ವಿದ್ಯಾರ್ಥಿಗಳು ದೂರಿದ್ದಾರೆ.

'ವಿದ್ಯಾರ್ಥಿಗಳು ಆತಂಕ ಪಡುವ ಅಗತ್ಯವಿಲ್ಲ. ಸೆ.27ರಂದು ಫಲಿತಾಂಶ ಪ್ರಕಟಿಸಲಾಗುವುದು' ಎಂದು ಕೆಇಎ ಪ್ರತಿಕ್ರಿಯಿಸಿದೆ.

ಕನ್ನಡೇತರರಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭಿಸಿದ್ದ 'ಕನ್ನಡ ನುಡಿ ಕಲಿಕೆ' ನನೆಗುದಿಗೆ

ಕನ್ನಡ ಕಲಿಕೆಗೆ ಇಲ್ಲ ಅನುದಾನ

• ವರುಣ ಹೆಗಡೆ



ಪ್ರಜಾವಾಣಿ ವಿಶೇಷ

ಬೆಂಗಳೂರು: ಕನ್ನಡೇತರರಿಗೆ ಕನ್ನಡ ಕಲಿಸುವ ಉದ್ದೇಶದಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭಿಸಿದ್ದ 'ಕನ್ನಡ ನುಡಿ ಕಲಿಕೆ' ಪಾಠಗಳಿಗೆ ಯಾವ ಸರ್ಕಾರಗಳೂ ಅನುದಾನ ಒದಗಿಸಿಲ್ಲ. ಇದರಿಂದಾಗಿ ಹತ್ತು ಪಾಠಗಳಿಗೇ ಯೋಜನೆ ಸ್ಥಗಿತವಾಗಿದೆ.

ತಮಿಳು, ತೆಲುಗು, ಹಿಂದಿ ಸೇರಿದಂತೆ ವಿವಿಧ ಭಾಷಿಕರು ಉದ್ಯೋಗ, ಕಲಿಕೆ ಸಂಬಂಧ ಇಲ್ಲಿಗೆ ಬಂದು, ನೆಲೆಸುತ್ತಿದ್ದಾರೆ. ಹೀಗೆ ಬಂದವರು ಇಲ್ಲಿನ ನೆಲದ ಭಾಷೆಯಾದ ಕನ್ನಡವನ್ನು ಕಲಿಯಬೇಕೆಂಬ ಉದ್ದೇಶದಿಂದ ಪ್ರಾಧಿಕಾರ 2021ರಲ್ಲಿ 'ಕನ್ನಡ ನುಡಿ ಕಲಿಕೆ' ಯೋಜನೆ ರೂಪಿಸಿತ್ತು.

ಈ ಯೋಜನೆಯಡಿ ಕನ್ನಡೇತರರಿಗೆ ಒಟ್ಟು 50 ಪಾಠಗಳನ್ನು ಸಿದ್ಧಪಡಿಸಬೇಕಿತ್ತು. ಆದರೆ, ಸರ್ಕಾರವು ಪ್ರಾಧಿಕಾರದ ವಾರ್ಷಿಕ ಅನುದಾನವನ್ನು ಕಡಿತ ಮಾಡಿದ್ದರಿಂದ ಪಾಠಗಳನ್ನು ಕೈಬಿಡಲಾಗಿದೆ. ಕೇವಲ 10 ಪಾಠಗಳನ್ನು ಮಾತ್ರ ಪೂರ್ಣಗೊಳಿಸಿ, ಪ್ರಾಧಿಕಾರದ ಪೋರ್ಟಲ್‌ಗೆ ಅಪ್ಲೋಡ್ ಮಾಡಲಾಗಿದೆ. ಇದರಿಂದಾಗಿ ಅನ್ಯಭಾಷಿಕರಿಗೆ ಕನ್ನಡ ಕಲಿಸುವ ಪ್ರಾಧಿಕಾರದ ಆಶಯಕ್ಕೆ ಹಿನ್ನಡೆಯಾಗಿದೆ.

ಈ ಹಿಂದೆ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು ಕನ್ನಡ ಭಾಷೆಯ ಅಭಿವೃದ್ಧಿ ಸಂಬಂಧ 2020ರ ನ.1ರಿಂದ 2021ರ ಅ.31ರವರೆಗೆ 'ಕನ್ನಡ ಕಾಯಕ ವರ್ಷ'ವೆಂದು ಘೋಷಿಸಿತ್ತು. ಕನ್ನಡ ಭಾಷೆ ಬಳಕೆ ಹೆಚ್ಚಿಸಲು ಹಾಗೂ ಬೆಳೆಸಲು ಕನ್ನಡ ಪರ ಕಾರ್ಯಕ್ರಮ ರೂಪಿಸಬೇಕೆಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಆದೇಶ ಹೊರಡಿಸಿದ್ದರು. ಇದರ ಭಾಗವಾಗಿ ಪ್ರಾಧಿಕಾರವು 'ಕನ್ನಡ ನುಡಿ ಕಲಿಕೆ' ಪಾಠ ಪ್ರಾರಂಭಿಸಿತ್ತು.

ವಿಡಿಯೊ ರೂಪದಲ್ಲಿರುವ ಈ ಪಾಠಗಳು ತಲಾ 11 ರಿಂದ 14 ನಿಮಿಷಗಳಿದ್ದವು. ಕನ್ನಡ ಕಲಿಯುವ ಸರಳ ವಿಧಾನದ ಕುರಿತು ನಿರೂಪಕರು ಈ ವಿಡಿಯೊದಲ್ಲಿ ವಿವರಿಸಿದ್ದಾರೆ. ಕನ್ನಡ ಕಲಿಕೆಗೆ ಪೂರಕವಾದ ಸಂಭಾಷಣೆಗಳನ್ನೂ ಚಿತ್ರೀಕರಿಸಲಾಗಿತ್ತು. ಸಿದ್ಧಪಡಿಸಲಾದ ವಿಡಿಯೊಗಳಲ್ಲಿ ಕನ್ನಡದ ಸಂಭಾಷಣೆಗಳಿಗೆ ಇಂಗ್ಲಿಷ್ ಅಡಿ ಬರಹ ನೀಡಲಾಗಿತ್ತು. ಅದೇ ರೀತಿ, ದೈನಂದಿನ ವ್ಯವಹಾರ ದಲ್ಲಿ ಕನ್ನಡ ಬಳಕೆ ಬಗ್ಗೆಯೂ ಕನ್ನಡೇತರರಿಗೆ ಅರ್ಥವಾಗುವ ರೀತಿ ವಿವರಿಸಲಾಗಿತ್ತು.

ಅನುದಾನ ಕಡಿತ: 'ಸರ್ಕಾರವು ಕೋವಿಡ್ ಸೇರಿ ವಿವಿಧ ಕಾರಣಗಳನ್ನೊಡ್ಡಿ ಪ್ರಾಧಿಕಾರದ ವಾರ್ಷಿಕ ಅನುದಾನವನ್ನು ಕಡಿತ ಮಾಡಿತು. ₹ 2.5 ಕೋಟಿ ಅನುದಾನ ನೀಡಬೇಕಾಗಿದ್ದ ಸರ್ಕಾರ, ₹ 1 ಕೋಟಿಯನ್ನು ಮಾತ್ರ ಒದಗಿಸಿತು. 50 ಪಾಠಗಳನ್ನು ರೂಪಿಸಲು ಅನುಮೋದನೆ ದೊರೆತಿದ್ದರೂ ಅನುದಾನ ಇಲ್ಲದಿದ್ದರಿಂದ ಸಾಧ್ಯವಾಗಲಿಲ್ಲ. ಹೆಚ್ಚುವರಿಯಾಗಿ ₹ 50 ಲಕ್ಷ ನೀಡಿದ್ದಲ್ಲಿ ಪಾಠಗಳನ್ನು ಪೂರ್ಣಗೊಳಿಸಬಹುದಾಗಿತ್ತು. ಸಿದ್ಧಪಡಿಸಲಾದ 10 ಪಾಠಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ' ಎಂದು ಪ್ರಾಧಿಕಾರದ ಮಾಜಿ ಅಧ್ಯಕ್ಷ ಟಿ.ಎಸ್. ನಾಗಾಭರಣ ತಿಳಿಸಿದರು.

'ಐಎಎಸ್ ಅಧಿಕಾರಿಗಳು ಕನ್ನಡ ಪರ ಕಾರ್ಯಚಟುವಟಿಕೆಗಳಿಗೆ ಅಡ್ಡಿಪಡಿಸುತ್ತಿದ್ದಾರೆ. ಅವರಿಗೆ ಕನ್ನಡ ಕಲಿಕೆ ಬಗ್ಗೆ ಆಸಕ್ತಿ ಇಲ್ಲ. ಇದರಿಂದಾಗಿ ಕನ್ನಡಪರ ಕಾರ್ಯಕ್ರಮಗಳ ಜಾರಿಗೆ ಅವಕಾಶ ನೀಡುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.



ಕನ್ನಡೇತರರಿಗೆ ಕನ್ನಡ ಕಲಿಸುವುದು ನಮ್ಮ ಆದ್ಯತೆಯಾಗಿದೆ. ಈ ಬಗ್ಗೆ ಅಗತ್ಯ ಕ್ರಮವಹಿಸಿ, ಅನುದಾನ ಒದಗಿಸಲಾಗುವುದು

ಶಿವರಾಜ್ ತಂಗಡಗಿ
ಕನ್ನಡ ಮತ್ತು ಸಂಸ್ಕೃತಿ ಸಚಿವ



ಕನ್ನಡದ ಕೆಲಸಗಳಿಗೆ ಎಲ್ಲಾ ಸರ್ಕಾರಗಳು ಪ್ರೋತ್ಸಾಹಿಸಬೇಕು. ಅನುದಾನ ಕಡಿತ ಮಾಡಿದಲ್ಲಿ ಕನ್ನಡ ಕೆಲಸಗಳು ಸಾಕಾರವಾಗುವುದಿಲ್ಲ

ಟಿ.ಎಸ್. ನಾಗಾಭರಣ
ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ

ಸಾಕಾರವಾಗದ ಭಾಷಾ ಕೌಶಲ ಪರೀಕ್ಷೆ

ಕನ್ನಡ ಕಲಿತ ಅನ್ಯ ಭಾಷಿಕರ ಭಾಷಾ ಪ್ರೌಢಿಮೆ ಅರಿಯುವ ಸಂಬಂಧ ಕನ್ನಡ ಭಾಷಾ ಕೌಶಲ ಪರೀಕ್ಷೆ ನಡೆಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕಾರ್ಯಯೋಜನೆ ರೂಪಿಸಿತ್ತು.

ಅನ್ಯ ರಾಜ್ಯದವರು ಹಾಗೂ ವಿದೇಶಿಗರು ಕನ್ನಡವನ್ನು ಎಷ್ಟರ ಮಟ್ಟಿಗೆ ಕಲಿತಿದ್ದಾರೆ ಎಂದು ತಿಳಿಯುವ ಜತೆಗೆ, ಅವರ ಕಲಿಕೆಯನ್ನು ಸರ್ಕಾರದ ಮಟ್ಟದಲ್ಲಿ ಗುರುತಿಸಲು ಆನ್‌ಲೈನ್ ಪರೀಕ್ಷಾ ವ್ಯವಸ್ಥೆಯನ್ನು ರೂಪಿಸಲು ಕ್ರಮವಹಿಸಿತ್ತು. ಈ ಪರೀಕ್ಷೆ ತೇರ್ಗಡೆಯಾದವರಿಗೆ ಪ್ರಮಾಣಪತ್ರ ನೀಡುವುದು ಯೋಜನೆಯಲ್ಲಿತ್ತು. ಆದರೆ, ಈ ಪರೀಕ್ಷೆ ನಡೆಸಲು ಸರ್ಕಾರ ಅನುಮೋದನೆ ನೀಡಲಿಲ್ಲ.

'ಪರೀಕ್ಷೆಗೆ ಸಂಬಂಧಿಸಿದಂತೆ ಒಂದಷ್ಟು ಪಠ್ಯವನ್ನು ಸಿದ್ಧಪಡಿಸಲಾಗಿತ್ತು. ಕಡಿಮೆ ವೆಚ್ಚದಲ್ಲಿ ಪರೀಕ್ಷೆ ನಡೆಸುವ ಬಗ್ಗೆಯೂ ಕಾರ್ಯಯೋಜನೆ ರೂಪಿಸಲಾಗಿತ್ತು. ಈ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಪ್ರಮಾಣ ಪತ್ರ ನೀಡಬೇಕೆಂದುಕೊಂಡಿದ್ದೆವು. ಈ ಪ್ರಮಾಣಪತ್ರವು ಉದ್ಯೋಗ ಸೇರಿ ವಿವಿಧ ಸಂದರ್ಭದಲ್ಲಿ ಸಹಕಾರಿಯಾಗುತ್ತಿತ್ತು. ಆದರೆ, ಅನುಮೋದನೆ ದೊರೆಯಲಿಲ್ಲ' ಎಂದು ಟಿ.ಎಸ್. ನಾಗಾಭರಣ ತಿಳಿಸಿದರು.

12 ವಾರ್ಡ್ ಹೆಸರು ಬದಲಾವಣೆ

ಪಾಲಿಕೆ 225 ವಾರ್ಡ್ ವಿಂಗಡಣೆಯ ಅಂತಿಮ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 225 ವಾರ್ಡ್‌ಗಳ ಮರುವಿಂಗಡಣೆ ಕರಡು ಪಟ್ಟಿಯಲ್ಲಿ ಕೆಲವು ಬದಲಾವಣೆ ಮಾಡಿ, ರಾಜ್ಯ ಸರ್ಕಾರ ಅಂತಿಮ ಪಟ್ಟಿ ಪ್ರಕಟಿಸಿದೆ. ಅದರಲ್ಲಿ 12 ವಾರ್ಡ್‌ಗಳ ಹೆಸರು ಬದಲಾವಣೆ ಮಾಡಲಾಗಿದೆ.

ಹೆಸರು ಬದಲಾವಣೆಯಿಂದ ಕೆಲವು ವಾರ್ಡ್‌ನ ಹೆಗ್ಗುರುತುಗಳಿಗೂ ಕುತ್ತು ಎದುರಾಗಿದೆ. ವಾರ್ಡ್ ಸಂಖ್ಯೆ 196 ಹನುಮಂತನಗರವು ಗವಿಗಂಗಾಧರೇಶ್ವರ ವಾರ್ಡ್ ಆಗಿ, ಬಸವನಗುಡಿ ವಾರ್ಡ್ ದೊಡ್ಡಗಣಪತಿ ವಾರ್ಡ್ ಆಗಿಯೂ ಬದಲಾವಣೆ ಕಂಡಿವೆ. ಕೆಲವು ವಾರ್ಡ್‌ಗಳ ಗಡಿಯಲ್ಲಿ ಕೊಂಚ ಬದಲಾವಣೆ ತರಲಾಗಿದೆ. ವಾರ್ಡ್ ಸಂಖ್ಯೆಯಲ್ಲೂ ಹಲವು ಬದಲಾವಣೆ ಮಾಡಿ ಪಟ್ಟಿ ಪ್ರಕಟಿಸಲಾಗಿದೆ.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ರಚಿಸಿದ್ದ 243 ವಾರ್ಡ್‌ಗಳನ್ನು ಹೈಕೋರ್ಟ್ ಸೂಚನೆಯ ಮೇರೆಗೆ ಈಗಿನ ಕಾಂಗ್ರೆಸ್ ಸರ್ಕಾರವು 225 ವಾರ್ಡ್‌ಗಳಿಗೆ ಇಳಿಸಿ ಆಗಸ್ಟ್‌ನಲ್ಲಿ ಕರಡು ಅಧಿಸೂಚನೆ ಪ್ರಕಟಿಸಿತ್ತು. ಈ ಕರಡು ಅಧಿಸೂಚನೆಗೆ ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಆಧರಿಸಿ ಅಂತಿಮ ಪಟ್ಟಿ ಪ್ರಕಟಿಸಲಾಗಿದೆ. ಈ ಪಟ್ಟಿಯನ್ನು ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ಸಲ್ಲಿಸಿದೆ.

ವಾರ್ಡ್‌ಗಳ ಮರುವಿಂಗಡಣೆ ಮಾಡಿ ಅಂತಿಮ ಪಟ್ಟಿ ಪ್ರಕಟವಾಗಿರುವುದರಿಂದ ಬಿಬಿಎಂಪಿಗೆ ಕೆಲವೇ ತಿಂಗಳಲ್ಲಿ ಚುನಾವಣೆ ನಡೆಯುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ.

ಬದಲಾದ ವಾರ್ಡ್‌ಗಳ ವಿವರ

ವಾರ್ಡ್ ಸಂಖ್ಯೆ	ಹಿಂದಿನ ಹೆಸರು	ಹೊಸ ಹೆಸರು
27	ಬ್ಯಾಡರಹಳ್ಳಿ	ಲಿಂಗಧೀರನಹಳ್ಳಿ
46	ಮಾರಪ್ಪನಪಾಳ್ಯ	ರಾಜೀವ್‌ನಗರ
47	ನಂದಿನಿಲೇಔಟ್	ಡಾ.ಪುನೀತ್‌ರಾಜ್‌ಕುಮಾರ್
50	ಡಾ.ಪುನೀತ್‌ರಾಜ್‌ಕುಮಾರ್	ನಾಲ್ವಡಿ ಕೃಷ್ಣರಾಜ ಒಡೆಯರ್
78	ಎಚ್‌ಆರ್‌ಬಿಆರ್ ಲೇಔಟ್	ಎಚ್‌ಬಿಆರ್ ಲೇಔಟ್
83	ಕೆಎಸ್‌ಎಫ್‌ಸಿ ಲೇಔಟ್	ಸುಬ್ಬಯ್ಯಪಾಳ್ಯ
99	ಬೆಳತ್ತೂರು	ಬೈರತಿ
165	ಸೋಮೇಶ್ವರನಗರ	ವೆಂಕಟರೆಡ್ಡಿನಗರ
167	ಶಾಂತಲಾನಗರ	ಅಶೋಕನಗರ
196	ಹನುಮಂತನಗರ	ಗವಿಗಂಗಾಧರೇಶ್ವರ
198	ಬಸವನಗುಡಿ	ದೊಡ್ಡಗಣಪತಿ
200	ಗಿರಿನಗರ	ಸ್ವಾಮಿ ವಿವೇಕಾನಂದ

ಇಂದು ಫಿಲ್ಮ್ ಛೇಂಬರ್ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಂಘಟನೆಗಳ ಒಕ್ಕೂಟ ಶುಕ್ರವಾರ(ಸೆ.29)ದಂದು ಕರ್ನಾಟಕ ಬಂದ್‌ಗೆ ಕರೆ ನೀಡಿದ್ದು, ಈ ವಿಷಯವಾಗಿ ಚರ್ಚಿಸಲು ಚಿತ್ರ ರಂಗದ ವಿವಿಧ ಸಂಘಗಳ ಜೊತೆ ಬುಧವಾರ(ಸೆ.27) ಸಭೆ ಆಯೋಜಿಸಲಾಗಿದೆ' ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ(ಕೆಎಫ್‌ಸಿಸಿ) ಅಧ್ಯಕ್ಷ ಎನ್.ಎಂ.ಸುರೇಶ್ ತಿಳಿಸಿದರು.

'ಸಭೆಯಲ್ಲಿ ಬಂದ್‌ಗೆ ಯಾವ ರೂಪದಲ್ಲಿ ಬೆಂಬಲ ನೀಡಬೇಕು ಎನ್ನುವುದರ ಕುರಿತು ನಿರ್ಧಾರ ಕೈಗೊಳ್ಳುತ್ತೇವೆ' ಎಂದು ಹೇಳಿದರು.

ಮನವರಿಕೆ ಮಾಡಿಕೊಡಿ: 'ಕನ್ನಡದ ನೆಲ, ಜಲ, ಭಾಷೆಯ ಎಲ್ಲ ಹೋರಾಟಗಳಲ್ಲಿ ನಾನು ಸದಾ ನಿಮ್ಮೊಂದಿಗೆ ಇದ್ದೇನೆ. ಕಾವೇರಿ ನದಿ ನೀರು ಹಂಚಿಕೆಯಲ್ಲಾಗಿರುವ ವ್ಯತ್ಯಾಸದಿಂದ ಕೃಷಿ ಮಾತ್ರವಲ್ಲದೆ ಕುಡಿಯುವ ನೀರಿಗೆ ತೊಂದರೆಯಾಗಿದೆ. ಬರ ಅಧ್ಯಯನ ಸಮಿತಿ- ಕಾವೇರಿ ಸಮಿತಿಯ ತಜ್ಞರು ಕರ್ನಾಟಕದ ಬರ ಪರಿಸ್ಥಿತಿಯನ್ನು ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ಕೇಂದ್ರ ಸರ್ಕಾರಕ್ಕೆ ತುರ್ತಾಗಿ ಮನವರಿಕೆ ಮಾಡಿಕೊಡ ಬೇಕಿದೆ' ಎಂದು ನಟ ಸುದೀಪ್ ಆಗ್ರಹಿಸಿದ್ದಾರೆ.

'ನಮ್ಮ ನೆಲ, ನಮ್ಮ ಜಲ ಮೊದಲು ನಮ್ಮ ಜನರಿಗೆ. ಮಳೆ ಅಭಾವದಿಂದ ರೈತರ ಕೃಷಿಗೆ ಮತ್ತು ಕುಡಿಯುವ ನೀರಿಗೆ ಸಹ ಸಮಸ್ಯೆ ಉಂಟಾಗುತ್ತಿದೆ . ಕಾವೇರಿ ನಮ್ಮ ಮೂಲ ಸಂಪನ್ಮೂಲ ಆದಕಾರಣ ಸರ್ಕಾರವು ಎಲ್ಲಾ ವಿಷಯವನ್ನು ಗಮನಿಸಿ, ನಮ್ಮ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರಕ್ಕೆ ಅರ್ಥಮಾಡಿಸಲಿ' ಎಂದು ನಟ ಗಣೇಶ್ ಹೇಳಿದ್ದಾರೆ.



ಸುದೀಪ್



ಗಣೇಶ್

'ಯುವಜನತೆ ಕೈಯಲ್ಲಿ ದೇಶದ ಭವಿಷ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತ ಎಲ್ಲ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿ ಸಾಧಿಸುತ್ತಿದೆ. ಈ ದೇಶದ ಭವಿಷ್ಯ ಯುವಜನತೆಯ ಕೈಯಲ್ಲಿದೆ' ಎಂದು ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಮಂಡಳಿ ಅಧ್ಯಕ್ಷ ಟಿ.ಜಿ. ಸೀತಾರಾಂ ಹೇಳಿದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸೋಮವಾರ ನಡೆದ ಪ್ರಥಮ ವರ್ಷದ ತರಗತಿಗಳ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಶಿಕ್ಷಣ ಎಂಬುದು ಕೇವಲ ಮಾಹಿತಿ ಅಥವಾ ಪದವಿ ಪಡೆಯುವುದಲ್ಲ. ಅದೊಂದು ನಿರಂತರ ಪ್ರಕ್ರಿಯೆಯಾಗಿದೆ. ವಿದ್ಯಾರ್ಥಿಗಳು ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ತೊಡಗಿಸಿಕೊಂಡು ಕೌಶಲಗಳನ್ನು ಕರಗತ ಮಾಡಿಕೊಳ್ಳಬೇಕು. ಹೊಸ ಹೊಸ ಆವಿಷ್ಕಾರಗಳನ್ನು ಮಾಡುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು' ಎಂದು ಸಲಹೆ ನೀಡಿದರು.

ಗೋಕುಲ ಎಜುಕೇಷನ್ ಫೌಂಡೇಷನ್ ಅಧ್ಯಕ್ಷ ಎಂ.ಆರ್. ಜಯರಾಂ, 'ಎಂ.ಎಸ್. ರಾಮಯ್ಯ ವಿದ್ಯಾಸಂಸ್ಥೆಯು ಗುಣಮಟ್ಟದ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತದೆ. ಉತ್ತಮ ಜ್ಞಾನವುಳ್ಳ ಬೋಧಕ ಸಿಬ್ಬಂದಿ ಇದ್ದಾರೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ಜೀವನದಲ್ಲಿ ಸಾಧನೆ ಮಾಡಬೇಕು' ಎಂದು ಹೇಳಿದರು.

ಪಶ್ಚಿಮ ವಿಭಾಗದ ಡಿಸಿಪಿ ಎಸ್. ಗಿರೀಶ್, ಉಪಾಧ್ಯಕ್ಷ ಎಂ.ಆರ್. ಸೀತಾರಾಮ್, ಗೌರವ ಕಾರ್ಯದರ್ಶಿ ಎಂ.ಆರ್. ರಾಮಯ್ಯ, ಬಿ.ಎಸ್. ರಾಮಪ್ರಸಾದ್, ಎನ್.ವಿ.ಆರ್. ನಾಯ್ಡು ಇದ್ದರು.



ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸೋಮವಾರ ನಡೆದ ಪ್ರಥಮ ವರ್ಷದ ತರಗತಿಗಳ ಸ್ವಾಗತ ಸಮಾರಂಭದಲ್ಲಿ ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ ಅಧ್ಯಕ್ಷ ಟಿ.ಜಿ. ಸೀತಾರಾಂ ಅವರನ್ನು ಸನ್ಮಾನಿಸಲಾಯಿತು. ಗೋಕುಲ ಎಜುಕೇಷನ್ ಫೌಂಡೇಷನ್ ಅಧ್ಯಕ್ಷ ಎಂ.ಆರ್. ಜಯರಾಂ ಇದ್ದಾರೆ



ಆಭರಣ ಬಿಡುಗಡೆ

ಕೀರ್ತಿಲಾಲ್ ಜುವೆಲರ್ಸ್ ಕಂಪನಿಯು ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಹೊಂದಿರುವ 'ಗ್ಲೋ' ಮಳಿಗೆಯಲ್ಲಿ ಕಿರುತೆರೆ ನಟಿ ಶ್ವೇತಾ ಆರ್. ಪ್ರಸಾದ್ (ಬಲತುದಿ) ಅವರು ವಜ್ರದ ಆಭರಣಗಳ ಸಂಗ್ರಹ 'ಮಿರಾಜ್' ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಗ್ಲೋನ ಕ್ರಿಯೇಟಿವ್ ಡೈರೆಕ್ಟರ್ ಸೀಮಾ ಮೆಹ್ತಾ ಇದ್ದರು

ಇನ್ಫಿನಿಟಿ ಲರ್ನ್ ವರಮಾನ ₹100 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಚೈತನ್ಯ ಶೈಕ್ಷಣಿಕ ಸಂಸ್ಥೆಗಳು ನಡೆಸುತ್ತಿರುವ ಡಿಜಿಟಲ್ ಕಲಿಕಾ ವೇದಿಕೆ 'ಇನ್ಫಿನಿಟಿ ಲರ್ನ್' 2022–23ರಲ್ಲಿ ಕಾರ್ಯಾಚರಣೆಗಳಿಂದ ಒಟ್ಟು ₹100 ಕೋಟಿ ವರಮಾನ ಗಳಿಸಿದೆ.

2021–22ರಲ್ಲಿ ಕಾರ್ಯಾಚರಣಾ ವರಮಾನವು ₹2.3 ಕೋಟಿಯಷ್ಟು ಇತ್ತು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಈ ವರ್ಷ ಕಂಪನಿಯು ಉತ್ತಮ ಪ್ರಗತಿ ಕಂಡಿದೆ. ಕೇವಲ ಎರಡು ವರ್ಷಗಳಲ್ಲಿ ಉನ್ನತ ಸ್ಥಾನ ತಲುಪಿದ್ದಲ್ಲದೆ ಗುರುತರವಾದ ಬೆಳವಣಿಗೆಯನ್ನೂ ಸಾಧಿಸಲಾಗಿದೆ ಎಂದು ಕಂಪನಿಯ ಸ್ಥಾಪಕ ಉಜ್ವಲ್ ಸಿಂಗ್ ತಿಳಿಸಿದ್ದಾರೆ.

ದೆಹಲಿ: ₹20 ಕೋಟಿ ಮೌಲ್ಯದ ಚಿನ್ನಾಭರಣ ಲೂಟಿ

ನವದೆಹಲಿ (ಪಿಟಿಐ): ನವದೆಹಲಿಯ ಜಂಗಪುರ ಪ್ರದೇಶದಲ್ಲಿರುವ ಚಿನ್ನದ ಅಂಗಡಿಯೊಂದರ ಗೋಡೆ ಕೊರೆದು ₹20 ಕೋಟಿ ಮೌಲ್ಯದ ಚಿನ್ನಾಭರಣಗಳನ್ನು ದೋಚಲಾಗಿದೆ.

'ಸೋಮವಾರದಂದು ಉಮ್ರಾವ್ ಹೆಸರಿನ ಈ ಚಿನ್ನಾಭರಣದ ಅಂಗಡಿಗೆ ಬೀಗ ಹಾಕಲಾಗಿತ್ತು. ಮಂಗಳವಾರ ಬೆಳಿಗ್ಗೆ ಅಂಗಡಿಯ ಬಾಗಿಲು ತೆರೆದಾಗ ಚಿನ್ನಾಭರಣ ದೋಚಿರುವುದು ಬೆಳಕಿಗೆ ಬಂದಿದೆ. ಭಾನುವಾರ ರಾತ್ರಿ ಅಥವಾ ಸೋಮವಾರ ದುಷ್ಕರ್ಮಿಗಳು ಈ ಕೃತ್ಯ ಎಸಗಿರುವ ಸಾಧ್ಯತೆಯಿದೆ. ಸಿ.ಸಿ.ಟಿ.ವಿ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ಆಗ್ನೇಯ ವಿಭಾಗದ ಡಿಸಿಪಿ ರಾಜೇಶ್ ದೇವು ತಿಳಿಸಿದ್ದಾರೆ.

ನಗರದ ಹಲವೆಡೆ ಉತ್ತಮ ಮಳೆ

ಬೆಂಗಳೂರು: ನಗರದ ಹಲವೆಡೆ ಮಂಗಳವಾರ ಉತ್ತಮ ಮಳೆಯಾಗಿದೆ.

ಕೊಟ್ಟಿಗೆಪಾಳ್ಯ, ವಿಶ್ವೇಶ್ವರಪುರಂ, ಲಾಲ್‌ಬಾಗ್ ಸುತ್ತಮುತ್ತ, ಸಂಪಂಗಿ ರಾಮನಗರ, ಹೆಮ್ಮಿಗೆನಗರ, ಕೊಟ್ಟಿಗೆಪುರ, ಅಂಜನಾಪುರ, ಬೊಮ್ಮನಹಳ್ಳಿ, ಕೋರಮಂಗಲ, ಕಾಟನ್‌ಪೇಟೆ, ಎಚ್‌ಎಸ್‌ಆರ್ ಲೇಔಟ್, ಯಲಹಂಕ, ಬಿಟಿಎಂ ಲೇಔಟ್, ನಾಯಂಡಹಳ್ಳಿ, ಜ್ಞಾನಭಾರತಿ, ಬೆಳ್ಳಂದೂರು ಮುಂತಾದೆಡೆ ಮಳೆಯಾಗಿದೆ.

ದೀಕ್ಷಾ ಭೂಮಿಗೆ ಭೇಟಿ: ಅರ್ಜಿ ಆಹ್ವಾನ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯಿಂದ 2023-24ನೇ ಸಾಲಿನ ಮಹಾರಾಷ್ಟ್ರದ ನಾಗ್ಪುರದಲ್ಲಿರುವ ದೀಕ್ಷಾ ಭೂಮಿಗೆ ಭೇಟಿ ನೀಡುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಯಾತ್ರಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಅಕ್ಟೋಬರ್ 10ರೊಳಗೆ www.sw.kar.nic.in ವೆಬ್‌ಸೈಟ್‌ಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗೆ: ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಎಸ್. ಕನಕಪುರ ಮುಖ್ಯರಸ್ತೆ, ಬನಶಂಕರಿ, ಬೆಂಗಳೂರು-70 ಅಥವಾ ದೂರವಾಣಿ ಸಂಖ್ಯೆ 080-26711096ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕ್ಲಿನಿಕ್ ಆರಂಭಕ್ಕೆ ಅನುಮತಿ ತಿರಸ್ಕರಿಸಿದ ಜಿಲ್ಲಾಧಿಕಾರಿ ಆದೇಶ ಎತ್ತಿಹಿಡಿದ ಹೈಕೋರ್ಟ್

‘ವೈದ್ಯರಿಗೆ ಜನರ ನಂಬಿಕೆಯೂ ಮುಖ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈದ್ಯರು ತಮ್ಮ ವೃತ್ತಿಯಲ್ಲಿ ಸಾರ್ವಜನಿಕರ ನಂಬಿಕೆ ಗಳಿಸುವುದರ ಮೂಲಕ ವೃತ್ತಿಪರ ನಡವಳಿಕೆಗಳನ್ನು ಶ್ರದ್ಧೆಯಿಂದ ಕಾಯ್ದುಕೊಂಡು ಹೋಗುವುದೂ ಕೂಡಾ ಅತಿ ಮುಖ್ಯವಾಗುತ್ತದೆ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

‘ನನ್ನ ಕ್ಲಿನಿಕ್ ನೋಂದಣಿಗೆ ಜಿಲ್ಲಾಧಿಕಾರಿ ಅನುಮತಿ ನೀಡಿಲ್ಲ’ ಎಂದು ಆಕ್ಷೇಪಿಸಿ ಉಡುಪಿಯ ಮೋಹನ್ ಭಟ್ಟ ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿರುವ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ, ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ

ಮುಖ್ಯಾಂಶಗಳು

- ಉಡುಪಿಯ ಮೋಹನ್ ಭಟ್ಟ ಎಂಬುವರಿಂದ ಅರ್ಜಿ ಸಲ್ಲಿಕೆ
- ವೈದ್ಯ ವೃತ್ತಿ ಕೈಗೊಳ್ಳುವವರು ಉತ್ತಮ ನಡತೆ, ಗುಣ ರೂಢಿಸಿಕೊಂಡಿರಬೇಕು

ವಿಭಾಗೀಯ ನ್ಯಾಯಪೀಠ, ‘ವೈದ್ಯ ವೃತ್ತಿ ಕೈಗೊಳ್ಳುವವರು ಉತ್ತಮ ನಡತೆ, ಗುಣ ಹಾಗೂ ಬದ್ಧತೆಯನ್ನು ರೂಢಿಸಿಕೊಂಡಿರಬೇಕು. ಇತರರಿಗೆ ಆದರ್ಶಪ್ರಾಯವಾಗಿರಬೇಕು‘ ಎಂದು ಹೇಳಿದೆ.

‘ಅಲೋಪತಿ ವಿಭಾಗದಲ್ಲಿ ವೈದ್ಯ



ವೃತ್ತಿ ಕೈಗೊಳ್ಳುವವರಿಗೆ ಭಾರತೀಯ ವೈದ್ಯಕೀಯ ಮಂಡಳಿ ಪ್ರಮಾಣ ಪತ್ರ ನೀಡುತ್ತದೆ. ಅದರಂತೆ ಪ್ರತಿಯೊಂದು ವೈದ್ಯಕೀಯ ವಿಭಾಗಕ್ಕೂ ಒಂದೊಂದು ನಿಯಂತ್ರಣ ಸಂಸ್ಥೆಗಳಿದ್ದು, ಅವುಗಳಿಂದ ಪ್ರಮಾಣ ಪತ್ರ ಪಡೆಯಬೇಕಾಗುತ್ತದೆ. ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ-2007ರ ಕಲಂ 5 (9)(ಬಿ) ಪ್ರಕಾರ ಕ್ಲಿನಿಕ್ ನೋಂದಣಿಗೆ ರಾಜ್ಯ ವೈದ್ಯಕೀಯ ಮಂಡಳಿ ನೀಡಿದ ಪ್ರಮಾಣಪತ್ರ ಮತ್ತು ಇತರ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಆದರೆ, ಈ ಪ್ರಕರಣದಲ್ಲಿ ಅರ್ಜಿದಾರರು ಅವುಗಳನ್ನು ಸಲ್ಲಿಸಿಲ್ಲ ಎಂಬುದು ಕಂಡುಬಂದಿದೆ’ ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ‘ಬಿಎಸ್ಸಿ ಪದವಿ, ಪರ್ಯಾಯ ವೈದ್ಯಕೀಯ ಡಿಪ್ಲೊಮಾ ಮತ್ತು ಕೋಲ್ಕತ್ತದ ಭಾರತೀಯ ಪರ್ಯಾಯ ವೈದ್ಯಕೀಯ ಮಂಡಳಿಯಿಂದ ಎಂ.ಡಿ ಪದವಿ ಪಡೆದಿರುವ ನನಗೆ ಕ್ಲಿನಿಕ್ ಆರಂಭಿಸಲು ಅನುಮತಿ ನೀಡಬೇಕು’ ಎಂದು ಕೋರಿ ಮೋಹನ್ ಭಟ್ 2010ರಲ್ಲಿ ಉಡುಪಿ ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಕಚೇರಿಯಿಂದ, ರಾಜ್ಯ ವೈದ್ಯಕೀಯ ಮಂಡಳಿ ನೀಡಿರುವ ವೈದ್ಯಕೀಯ ವೃತ್ತಿಪರತೆಯ ಪ್ರಮಾಣ ಪತ್ರ ಸಲ್ಲಿಸುವಂತೆ ಕೋರಲಾಗಿತ್ತು. ಆದರೆ ಅರ್ಜಿದಾರರು ಅದನ್ನು ಸಲ್ಲಿಸಿರಲಿಲ್ಲ. ಹೀಗಾಗಿ, ಜಿಲ್ಲಾಧಿಕಾರಿ 2018ರ ಡಿಸೆಂಬರ್ 6ರಂದು ಅರ್ಜಿ ತಿರಸ್ಕರಿಸಿರುವುದಾಗಿ ಹಿಂಬರಹ ನೀಡಿದ್ದರು.

ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದ ಅರ್ಜಿದಾರರು, ‘ನಮ್ಮ ವಿಭಾಗ ಆಯುಷ್ ಇಲಾಖೆ ವ್ಯಾಪ್ತಿಗೆ ಒಳಪಡುವುದಿಲ್ಲ, ವೈದ್ಯ ವೃತ್ತಿ ಕೈಗೊಳ್ಳಲು ನಾನು ಎಲ್ಲಾ ರೀತಿಯ ಅರ್ಹತೆ ಹೊಂದಿದ್ದೇನೆ‘ ಎಂದಿದ್ದರು. ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ ಮಾರ್ಚ್ 13ರಂದು ಅರ್ಜಿ ವಜಾಗೊಳಿಸಿತ್ತು.

ಸುದ್ದಿ 2 ನಿಮಿಷ

ಡ್ರಗ್ಸ್ ಮಾರಾಟ: ಆರೋಪಿಗಳ ಸೆರೆ

ಬೆಂಗಳೂರು: ಸಾರ್ವಜನಿಕರಿಗೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಡ್ರಗ್ಸ್ ಮಾರಾಟ ಮಾಡುತ್ತಿದ್ದ ತೋಹಿದ್ ಖಾನ್ (24), ಮೊಹಮ್ಮದ್ ಫಾರೂಕ್ ಶರೀಫ್ (22) ಎಂಬ ಆರೋಪಿಗಳನ್ನು ಸಂಪಿಗೆಹಳ್ಳಿ ಪೊಲೀಸರು ಬಂಧಿಸಿದ್ದಾರೆ.

‘ಸಂಪಿಗೆಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ತಿರುಮೇನಹಳ್ಳಿ – ಅಗ್ರಹಾರ ಗ್ರಾಮದ ರಸ್ತೆಯಲ್ಲಿ, ನಿಷೇಧಿತ ಮಾದಕ ವಸ್ತು ಎಂಎಡಿಎಂಎ ಡ್ರಗ್ಸ್ ಮಾರಾಟ ಮಾಡುತ್ತಿದ್ದರು. ಖಚಿತ ಮಾಹಿತಿಯೊಂದಿಗೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳಿಂದ ₹ 2 ಲಕ್ಷ ಮೌಲ್ಯದ ಎಂಡಿಎಂಎ ಡ್ರಗ್ಸ್, ಮೂರು ದೊಡ್ಡ ಕತ್ತಿಗಳು, ಒಂದು ಡ್ಯಾಗರ್, ಒಂದು ಸ್ಯಾಂಟ್ರೊ ಕಾರನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ಸ್ವಚ್ಛತೆಯೇ ಸೇವೆ’ ಅಭಿಯಾನ



ರಾಜರಾಜೇಶ್ವರಿನಗರ: ಬೆಂಗಳೂರು ನಗರ ಜಿಲ್ಲೆಯನ್ನು ತ್ಯಾಜ್ಯಮುಕ್ತ ಜಿಲ್ಲೆಯನ್ನಾಗಿ ಮಾಡಲು ನಾಗರಿಕರು, ಸಂಘ–ಸಂಸ್ಥೆಗಳು, ಚುನಾಯಿತ ಜನಪ್ರತಿನಿಧಿಗಳು ಮುಂದಾಗಬೇಕು ಎಂದು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಸಿಇಒ ಕಾಂತರಾಜು ಹೇಳಿದರು.

ದೊಡ್ಡಆಲದಮರದ ಗ್ರಾಮದಲ್ಲಿ ನಡೆದ ‘ಸ್ವಚ್ಛತೆಯೇ ಸೇವೆ’ ತ್ಯಾಜ್ಯ ಮುಕ್ತ ಭಾರತ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರಸ್ತೆ, ಚರಂಡಿ, ಖಾಲಿ ನಿವೇಶನ, ರಸ್ತೆ ಬದಿಯಲ್ಲಿ ತ್ಯಾಜ್ಯ ಮತ್ತು ಕಸವನ್ನು ಬಿಸಾಡುವುದರಿಂದ ಸಾಂಕ್ರಾಮಿಕ ರೋಗಗಳು ಬರುತ್ತವೆ ಎಂದು ಎಚ್ಚರಿಸಿದರು.

ಶಾಸಕ ಎಸ್.ಟಿ.ಸೋಮಶೇಖರ್ ಮಾತನಾಡಿ, ‘ಕಸವನ್ನು ಮೂಲದಲ್ಲಿಯೇ ಬೇರ್ಪಡಿಸಿ ಬಡಾವಣೆ, ರಸ್ತೆಗೆ ಬರುವ ಕಸದ ಗಾಡಿಗೆ ನೀಡಬೇಕು’ ಎಂದು ಸೂಚಿಸಿದರು.

ರಾಮೋಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ವಿ.ವೇಣುಗೋಪಾಲ್ ಅವರು, ‘ಇತ್ತೀಚಿನ ವರ್ಷಗಳಲ್ಲಿ ನೀರು, ಗಾಳಿ, ಆಹಾರ ವಿಷಯುಕ್ತವಾಗಿದ್ದು, ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದೇವೆ. ನಾವೆಲ್ಲರೂ ಪರಿಸರ ರಕ್ಷಣೆ ಮಾಡದಿದ್ದರೆ ಮುಂದೆ ದಿನ ಅಪಾಯ ಕಟ್ಟಿಟ್ಟಬುತ್ತಿ’ ಎಂದು ಎಚ್ಚರಿಸಿದರು.

ನಗರದಲ್ಲಿ ಇಂದು


ಆರೋಗ್ಯದ ಕುರಿತು ವಿಚಾರಸಂಕಿರಣ: ಪ್ರದೀಪ್ ಸಿಂಗ್, ರಾಮಜಿ ಸಿಂಗ್, ಆಯೋಜನೆ: ಎಸಿಎಚ್‌ಎಸ್ ಬೆಂಗಳೂರು, ಸ್ಥಳ: ಕಾವೇರಿ ಸಭಾಂಗಣ, ವಾಯುಪಡೆ, ಜಾಲಹಳ್ಳಿ, ಬೆಳಿಗ್ಗೆ 10

ನೈಸ್ ಕಂಪನಿ ದೌರ್ಜನ್ಯ, ಭ್ರಷ್ಟಾಚಾರದ ವಿರುದ್ಧ ದುಂಡುಮೇಜಿನ ಸಭೆ: ಅತಿಥಿಗಳು: ಎಚ್.ಡಿ.ಕುಮಾರಸ್ವಾಮಿ, ಜಿ.ಸಿ. ಬಯ್ಯಾರೆಡ್ಡಿ, ವಿ. ನಾಗರಾಜ್, ಬಡಗಲಪುರ ನಾಗೇಂದ್ರ, ಯು. ಬಸವರಾಜು, ಪುಟ್ಟಮಾದು, ದೇವಿ, ಮೀನಾಕ್ಷಿ ಸುಂದರಂ, ಅಧ್ಯಕ್ಷತೆ: ಎನ್. ವೆಂಕಟಾಚಲಯ್ಯ, ಆಯೋಜನೆ: ಕರ್ನಾಟಕ ಪ್ರಾಂತ ರೈತ ಸಂಘ, ನೈಸ್ ಸಂತ್ರಸ್ತ ರೈತರ ಹೋರಾಟ ಸಮಿತಿ, ಸ್ಥಳ: ಸಮ್ಮೇಳನ ಸಭಾಂಗಣ, ಶಾಸಕರ ಭವನ-2, ಬೆಳಿಗ್ಗೆ 10.30

ಮಹಿಳಾ ಸಾಹಿತ್ಯದ ಹಿರಿಯ ಚೇತನಗಳು, ಸಂವಾದ ಮತ್ತು ಗೌರವಾರ್ಪಣೆ: ಸುಶೀಲಾ ಸುಬ್ರಹ್ಮಣ್ಯ, ಸಂವಾದದಲ್ಲಿ: ಶೈಲಜಾ ಸುರೇಶ್, ಯಶೋಧಾ ಡಿ., ಮಧುರಾ ಕರ್ಣಂ, ತಾರಾ ನಂಜುಂಡ ಶಾಸ್ತ್ರಿ, ಕೆ.ವಿ. ರಾಜೇಶ್ವರಿ, ಆಯೋಜನೆ: ಲೇಖಿಕಾ ಸಾಹಿತ್ಯ ವೇದಿಕೆ, ಸ್ಥಳ: ಸೌಥರ್ನ್ ಎಕ್ನಾಮಿಸ್ಟ್, ನಂ. 9, 1ನೇ ಮೇನ್, ಜಾಮೀಯಾ ಮಸೀದಿ ಮಳಿಗೆ, ಗುಟ್ಟಹಳ್ಳಿ, ಬೆಳಿಗ್ಗೆ 11

ಪದವಿ ಪ್ರದಾನ ದಿನ: ಅತಿಥಿಗಳು: ಉದಯ್ ಬಿ. ದೇಸಾಯಿ, ಎಂ.ಆರ್. ಜಯರಾಂ, ಎಂ.ಆರ್. ಸೀತಾರಾಮ್, ಎಂ.ಆರ್. ರಾಮಯ್ಯ, ಬಿ.ಎಸ್. ರಾಮಪ್ರಸಾದ್, ಎನ್.ವಿ.ಆರ್. ನಾಯ್ಡು, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 11

‘ಸ್ವರ ಧಾರ’ ಸಂಗೀತ ಕಛೇರಿ: ಉದ್ಘಾಟನೆ: ನಿರಂಜನ್ ವಾನಳ್ಳಿ, ಅಗಸ್ಟಿನ್ ಜಾರ್ಜ್, ಗಾಯನ: ವಿದುಲಾ ವೇಣುಗೋಪಾಲ್, ತಬಲಾ: ಶೌರಿ ಶಾನಭೋಗ, ಹಾರ್ಮೋನಿಯಂ: ತೇಜಸ್ ಕಟೋಟಿ, ಸಿತಾರ್: ಸುಬ್ರಹ್ಮಣ್ಯ ಹೆಗಡೆ, ತಬಲಾ: ಶೈಲೇಶ್ ಶೆಣೈ, ಆಯೋಜನೆ: ಸಪ್ತಕ್, ಸ್ಥಳ: ಕ್ರಿಸ್ತು ಜಯಂತಿ ಕಾಲೇಜು, ಕೆ. ನಾರಾಯಣಪುರ, ಕೊತ್ತನೂರು, ಮಧ್ಯಾಹ್ನ 2.30



ಶ್ರೀನಿವಾಸ್ ಜಿ. ಕಪ್ಪಣ್ಣ

‘ಕೃಷ್ಣಂ ಕಲಯ ಸಖಿ’ ‘ಹಂಸ ಸಮ್ಮಾನ್’ ಪ್ರಶಸ್ತಿ ಪ್ರದಾನ: ಉದ್ಘಾಟನೆ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಬಿ.ಆರ್. ಹಿರೇಮಠ, ಅತಿಥಿಗಳು: ಶ್ರೀನಿವಾಸ್ ಜಿ. ಕಪ್ಪಣ್ಣ, ಜಿ.ಎಂ. ಶಿರಹಟ್ಟಿ, ಡಾ. ಸಿ. ರಾಮಚಂದ್ರ, ಎಂ.ಬಿ.ಜಯರಾಂ, ಪ್ರಶಸ್ತಿ ಪುರಸ್ಕೃತರು: ಟಿ.ವಿ. ವಿಶ್ವನಾಥ ಅಯ್ಯರ್, ಮೀರಾಕುಮಾರ್, ಎಸ್. ವೀರಭದ್ರಯ್ಯ, ಎಸ್. ಗೀತಾಶಂಕರ್, ಆರ್. ಶ್ರೀನಿವಾಸ್, ಆರ್. ಸರ್ವಮಂಗಳ, ಬಿ.ಕೆ. ಮುರಳೀಧರ, ಬಿ.ಕೆ. ರವಿಶಂಕರ್, ಜಯರಾಂ ಶೆಟ್ಟಿ, ರೂಪಶ್ರೀ ಮಧುಸೂದನ್, ಗುರುರಾಜ ಪೋಶೆಟ್ಟಿಹಳ್ಳಿ, ಸ್ನೇಹ ಕಪ್ಪಣ್ಣ, ಆಯೋಜನೆ: ಹಂಸಜ್ಯೋತಿ ಟ್ರಸ್ಟ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

‘ಹಾಡು ಬಾ ಕೋಗಿಲೆ’: ಆಯೋಜನೆ: ಗಾನಸಂಗಮ ಕಲಾ ಟ್ರಸ್ಟ್, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 3.30

‘ಶ್ರೀದೇವಿ ಮಹಾತ್ಮೆ’ ಪೌರಾಣಿಕ ಯಕ್ಷಗಾನ ಪ್ರದರ್ಶನ: ಭಾಗವತರು: ಗಿರೀಶ್ ರೈತ ಕಕ್ಕೆಪದವು, ದೇವರಾಜ ಆಚಾರ್ಯ, ಚಂಡೆ, ಮದ್ದಳೆ: ಚಂದ್ರಶೇಖರ ಸರಪಾಡಿ, ಶ್ರೀಧರ ವಿಟ್ಲ, ಆಯೋಜನೆ: ಪುತ್ತೂರು ಮಹಾಲಿಂಗೇಶ್ವರ ಪ್ರವಾಸಿ ಯಕ್ಷಗಾನ ಮಂಡಳಿ, ಸ್ಥಳ: ಅಯ್ಯಪ್ಪ ದೇವಸ್ಥಾನ, ಜಾಲಹಳ್ಳಿ ಕ್ರಾಸ್, ಸಂಜೆ 6

ಪೆರುವಿಯನ್ ಫಿಲ್ಮ್ ಫೆಸ್ಟಿವೆಲ್: ‘ಡೊಂಟ್ ಕಾಲ್ ಮಿ ಸ್ಪಿನ್‌ಸ್ಟರ್’ ಚಿತ್ರದ ಉದ್ಘಾಟನೆ: ಜೇವಿಯರ್ ಫೌಲಿಂಚ್, ಅತಿಥಿ: ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಆಯೋಜನೆ: ದಿ ಎಂಬೆಸಿ ಆಫ್ ದಿ ರಿಪಬ್ಲಿಕ್ ಆಫ್ ಪೆರು, ಸ್ಥಳ: ಸುಚಿತ್ರ ಪುರವಂಕರ ಹಾಲ್, ಬನಶಂಕರಿ 2ನೇ ಹಂತ, ಸಂಜೆ 6

‘ತಮಿಳುನಾಡಿಗೆ ನೀರು ಕಾವೇರಿ ಸಂಕಟ ಮುಂದೇನು?’ ಚಿಂತನ ಸಭೆ: ಅಧ್ಯಕ್ಷತೆ: ಪಿ.ಜಿ.ಆರ್. ಸಿಂಧ್ಯ, ಭಾಗವಹಿಸುವವರು: ರಾಜಾರಾವ್, ಎಚ್.ಎಸ್.ಎಂ. ಪ್ರಕಾಶ್, ಪಿ.ವಿ. ನಾರಾಯಣ, ದೇವರಕೊಂಡಾರೆಡ್ಡಿ, ಆರ್. ಶೇಷಶಾಸ್ತ್ರಿ, ವ.ಚ. ಚನ್ನೇಗೌಡ, ರಾ.ನಂ. ಚಂದ್ರಶೇಖರ, ರಫಾಯಲ್ ರಾಜ್, ಗೋವಿಂದಹಳ್ಳಿ ಕೃಷ್ಣೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್. ಆರ್. ಕಾಲೊನಿ, ಬೆಳಿಗ್ಗೆ 11

ಪ್ರವಚನ ವಾಹಿನಿ: ‘ಭಾಗವತದ ಪಂಚಗೀತೆಗಳು’ ಕುರಿತ ಉಪನ್ಯಾಸ: ರಮಾ ಶ್ರೀನಿವಾಸ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

‘ದೈಹಿಕ ಚಟುವಟಿಕೆ ಏಕೆ ಮುಖ್ಯ’: ಭಾಷಣಕಾರರು: ಅಜಿತ್ ಐಸಾಕ್, ದಿಲೀಪ್ ಕುಮಾರ್, ಶ್ವೇತಾ ಸುಬ್ಬಯ್ಯ, ಸ್ವಾಮಿಲ್ ಮಜುಂದಾರ್, ಅನಿಶಾ ಪಡಕೋಣೆ, ಆಯೋಜನೆ: ದಿ ಐಸಾಕ್ ಫ್ಯಾಮಿಲಿ ಫೌಂಡೇಷನ್, ಸ್ಪೋರ್ಟ್ಸ್ ಆ್ಯಂಡ್ ಸೊಸೈಟಿ ಆಕ್ಸಿಲರೇಟರ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 7

ಹೂಡಿಕೆ: ಅಮೆರಿಕದಲ್ಲಿ ಸಚಿವ ಪಾಟೀಲ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ವಿದೇಶಿ ಹೂಡಿಕೆ ಆಕರ್ಷಿಸಲು ಅಮೆರಿಕ ಪ್ರವಾಸ ಕೈಗೊಂಡಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಮೊದಲ ದಿನವಾದ ಸೋಮವಾರ ವಾಷಿಂಗ್ಟನ್ ಡಿ.ಸಿಯಲ್ಲಿ ಮೂರು ಸಭೆ ನಡೆಸಿದ್ದಾರೆ.

‘ಆರ್.ಟಿ.ಎಕ್ಸ್, ಏರೋಸ್ಪೇಸ್ ಕಂಪನಿ ಹಾಗೂ ಇಂಟೆಲ್ ಸ್ಯಾಟ್ ಕಂಪನಿಗಳ ಅಧಿಕಾರಿಗಳ ಜತೆ ಸಚಿವರು ನೇರವಾಗಿ ಮಾತುಕತೆ ನಡೆಸಿದ್ದಾರೆ. ಅಮೆರಿಕ–ಭಾರತ ಎಸ್‌ಎಂಇ ಕೌನ್ಸಿಲ್‌ನಲ್ಲಿ 30 ಕಂಪನಿಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದ್ದಾರೆ’ ಎಂದು ಸಚಿವರ ಕಚೇರಿಯ ಪ್ರಕಟಣೆ ತಿಳಿಸಿದೆ.

‘ರಾಜ್ಯದಲ್ಲಿ ಬೆಂಗಳೂರಿನ ಆಚೆಗೆ ಇರುವ ಹೂಡಿಕೆಯ ಅವಕಾಶಗಳ ಕುರಿತು ಅಮೆರಿಕದ ಹೂಡಿಕೆದಾರರಿಗೆ ಮಾಹಿತಿ ನೀಡಲಾಗಿದೆ. ಆರ್.ಟಿ.ಎಕ್ಸ್. ಕಂಪನಿಯು ರಾಜ್ಯದಲ್ಲಿ ಪೂರೈಕೆ ಮತ್ತು ವಿದ್ಯುನ್ಮಾನ ಸಾಧನಗಳ ಉತ್ಪಾದನಾ ಕ್ಷೇತ್ರದಲ್ಲಿ ಹೂಡಿಕೆಗೆ ಆಸಕ್ತಿ ತೋರಿದೆ. ಇಂಟೆಲ್ ಸ್ಯಾಟ್ ಕಂಪನಿ ಭಾರತೀಯ ಬಾಹ್ಯಾಕಾಶ ನವೋದ್ಯಮಗಳ ಜತೆಯಾಗಿ ‘ಸ್ಯಾಟಲೈಟ್ ಸೋರ್ಸಿಂಗ್’ ಕ್ಷೇತ್ರದಲ್ಲಿ ವಿಸ್ತೃತ ರೂಪದಲ್ಲಿ ಕೆಲಸ ಮಾಡಲು ಬಯಸಿದೆ. ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಇರುವ ಹೊಸ ಅವಕಾಶಗಳ ಬಗ್ಗೆಯೂ ಚರ್ಚಿಸಲಾಗಿದೆ’ ಎಂದು ಸಚಿವರ ಕಚೇರಿ ಮಾಹಿತಿ ನೀಡಿದೆ.



ವಾಷಿಂಗ್ಟನ್ ಡಿ.ಸಿಯಲ್ಲಿನ ಅಮೆರಿಕ– ಭಾರತ ಎಸ್‌ಎಂಇ ಕೌನ್ಸಿಲ್‌ನಲ್ಲಿ ಅಲ್ಲಿನ ಪ್ರಮುಖ ಕಂಪನಿಗಳ ಮುಖ್ಯಸ್ಥರೊಂದಿಗೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮಾತುಕತೆಯಲ್ಲಿ ತೊಡಗಿರುವುದು. ಮಾಂಟ್‌ಗೊಮೆರಿ ಕೌಂಟಿ ಆರ್ಥಿಕ ಅಭಿವೃದ್ಧಿ ಇಲಾಖೆ ಅಧ್ಯಕ್ಷ ಬಿಲ್ ಟಾಂಪ್‌ಕಿನ್ಸ್, ಗ್ಲೋಬಲ್ ಅಲಯಂಟ್ ಇಂಕ್‌ನ ಸಂಸ್ಥಾಪಕ ರಾಜನ್ ನಟರಾಜನ್, ಅಮೆರಿಕ– ಭಾರತ ಎಸ್‌ಎಂಇ ಕೌನ್ಸಿಲ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಲಿಷಾ ಪುಲಿವರ್ತಿ ಇದ್ದರು

ರಾಜ್ಯ ಸರ್ಕಾರ ಮತ್ತು ಶಿಕ್ಷಣ ಸಂಸ್ಥೆಗಳ ಪಾಲುದಾರಿಕೆಯಲ್ಲಿ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ವ್ಯವಸ್ಥೆ ಕುರಿತು ಚರ್ಚಿಸಲಾಗಿದೆ. ದೀರ್ಘಾವಧಿ ಯೋಜನೆಯ ಭಾಗವಾಗಿ ರಾಜ್ಯದಲ್ಲಿ ‘ಗ್ಲೋಬಲ್ ಕೆಪಬಿಲಿಟಿ ಸೆಂಟರ್’ ಸ್ಥಾಪಿಸುವ ಬಗ್ಗೆಯೂ ಚರ್ಚೆ ನಡೆಸಲಾಗಿದೆ ಎಂದು ತಿಳಿಸಿದೆ.

ಕೈಲ್ ಬೆಲಾರ್ಡ್ ಕಂಪನಿಯ ಉಪಾಧ್ಯಕ್ಷ ಕ್ಸೇವಿಯರ್ ರಮಿಸ್, ಆರ್.ಟಿ.ಎಕ್ಸ್ ಕಂಪನಿಯ ನಿರ್ದೇಶಕ ಹೆನ್ರಿ ಬಿ. ಮಾರ್ಟಿನ್, ಕ್ಲೌಡಿಯಾ ಡಯಾಮಾಂಟ್ ಕಂಪನಿಯ ಉಪಾಧ್ಯಕ್ಷ ರೋರಿ ವೆಲ್ಶ್, ರಾಜೀವ್ ಗಡ್ರೆ, ಇಂಟೆಲ್ ಸ್ಯಾಟ್ ಕಂಪನಿಯ ಹಿರಿಯ ನಿರ್ದೇಶಕ ಕೆನ್ ಟಕಗಿ, ಯುಎಸ್-ಇಂಡಿಯಾ ಎಸ್‌ಎಂಇ ಕೌನ್ಸಿಲ್‌ನ ಎಲಿಶಾ ಪುಲಿವರ್ತಿ, ಗ್ಲೋಬಲ್ ಎಲಿಯಂಟ್ ಸಂಸ್ಥಾಪಕ ರಾಜನ್ ನಟರಾಜನ್, ಮಾಂಟ್ಗೊಮೆರಿ ರಾಜ್ಯಾಡಳಿತದ ಉನ್ನತಾಧಿಕಾರಿ ಮಾರ್ಕ್ ಎಲ್ರಿಚ್ ಸಭೆಯಲ್ಲಿದ್ದರು.

ಸಚಿವರ ನೇತೃತ್ವದ ನಿಯೋಗದಲ್ಲಿ ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ ಮತ್ತು ಸಚಿವರ ಆಪ್ತ ಕಾರ್ಯದರ್ಶಿ ನರೇಂದ್ರ ಇದ್ದಾರೆ.

‘ಸ್ವಚ್ಛ ಆಸ್ಪತ್ರೆ–ನಮ್ಮ ಆದ್ಯತೆ’ ಅಭಿಯಾನ

ಬೆಂಗಳೂರು: ‘ಸ್ವಚ್ಛ ಆಸ್ಪತ್ರೆ–ನಮ್ಮ ಆದ್ಯತೆ ಅಭಿಯಾನದಡಿ ಆರೋಗ್ಯ ಕೇಂದ್ರಗಳಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರ ಸ್ವಚ್ಛತಾ ಕಾರ್ಯಗಳನ್ನು ಕೈಗೊಳ್ಳಲಾಗುವುದು. ಈ ಕಾರ್ಯಕ್ಕೆ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಕೈಜೋಡಿಸಬೇಕು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮನವಿ ಮಾಡಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ‘ಸಮಾಜದ ಎಲ್ಲಾ ನಾಗರಿಕರಿಗೆ ಆರೋಗ್ಯ ಸೇವೆಗಳನ್ನು ಅಂತ್ಯೋದಯ ಮಾದರಿಯಲ್ಲಿ ನೀಡಲು ‘ಆಯುಷ್ಮಾನ್ ಭವ’ ಅಭಿಯಾನವನ್ನು ಕೇಂದ್ರ ಸರ್ಕಾರ ವಿನ್ಯಾಸ ಮಾಡಿದೆ. ‘ಸ್ವಚ್ಛ ಆಸ್ಪತ್ರೆ–ನಮ್ಮ ಆದ್ಯತೆ’ ಅಭಿಯಾನದಡಿ ರಾಜ್ಯದ ಎಲ್ಲಾ ಹಂತಗಳ ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಸ್ವಚ್ಛತಾ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ’ ಎಂದು ಹೇಳಿದ್ದಾರೆ.

‘ಅಭಿಯಾನದಡಿ ಆರೋಗ್ಯ ಸಂಸ್ಥೆಯಲ್ಲಿ ಇರುವ ಅನುಪಯುಕ್ತ ಸಾಮಗ್ರಿಗಳು, ಪರಿಕರಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತದೆ. ಆವರಣದ ಗೋಡೆಗಳ ಸ್ವಚ್ಛತೆ, ಅನುಪಯುಕ್ತ ಗಿಡಗಂಟಿಗಳ ತೆರವು, ಕುಡಿಯುವ ನೀರು, ನೈರ್ಮಲ್ಯ ವ್ಯವಸ್ಥೆ ಸುಧಾರಣೆ, ರೋಗವಾಹಕ ಮೂಲಗಳ ನಾಶ ಹಾಗೂ ಸೋಂಕು ನಿಯಂತ್ರಣಾ ಚಟುವಟಿಕೆ ಹಮ್ಮಿಕೊಳ್ಳಲಾಗುವುದು. ಕೇಂದ್ರಗಳ ಆವರಣದಲ್ಲಿ ಔಷಧ ಸಸ್ಯಗಳ ಉದ್ಯಾನ ಹಾಗೂ ಮೀನು ಸಾಕಾಣಿಕೆ ತೊಟ್ಟಿ ನಿರ್ಮಿಸಲಾಗುವುದು’ ಎಂದರು.

ಪ್ರವಾದಿ ಮಹಮ್ಮದ್ ಜೀವನ ಸಂದೇಶ ಅಭಿಯಾನ ನಾಳೆಯಿಂದ



ಮುಹಮ್ಮದ್ ಸಾದ್ ಬೆಳಗಾಮಿ

ಬೆಂಗಳೂರು: ಜಮಾಅತೆ ಇಸ್ಲಾಮೀ ಹಿಂದ್ ವತಿಯಿಂದ ಇದೇ 28ರಿಂದ ಅ. 5ರವರೆಗೆ ರಾಜ್ಯದಾದ್ಯಂತ ಪ್ರವಾದಿ ಮಹಮ್ಮದ್ ಅವರ ಜೀವನ ಸಂದೇಶ ಅಭಿಯಾನ ನಡೆಯಲಿದೆ.

‘ಸಮಾನತೆ ಸಮಾಜದ ಶಿಲ್ಪಿ ಪ್ರವಾದಿ ಮಹಮ್ಮದ್ ಎಂಬ ಧ್ಯೇಯವಾಕ್ಯದ ಅಡಿಯಲ್ಲಿ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಪ್ರವಾದಿ ಅವರಿಗೆ ಸಂಬಂಧಿಸಿದ ಪುಸ್ತಕ ಬಿಡುಗಡೆ, ವಿಚಾರಗೋಷ್ಠಿ, ಸಮಾವೇಶಗಳು, ಪ್ರಬಂಧ ಸ್ಪರ್ಧೆ, ರಕ್ತದಾನ ಶಿಬಿರ, ಶುಚಿತ್ವ ಅಭಿಯಾನ, ಆಸ್ಪತ್ರೆ, ಅನಾಥಾಶ್ರಮ, ವೃದ್ಧಾಶ್ರಮಗಳಿಗೆ ಭೇಟಿ ನೀಡಿ ರೋಗಿಗಳಿಗೆ ಹಣ್ಣು-ಹಂಪಲು ವಿತರಣೆ ಮಾಡಲಾಗುವುದು’ ಎಂದು ಜಮಾಅತೆ ಇಸ್ಲಾಮೀ ಹಿಂದ್‌ನ ರಾಜ್ಯ ಘಟಕದ ಅಧ್ಯಕ್ಷ ಮುಹಮ್ಮದ್ ಸಾದ್ ಬೆಳಗಾಮಿ ತಿಳಿಸಿದ್ದಾರೆ.

‘ಪರಸ್ಪರ ತಪ್ಪು ಕಲ್ಪನೆಗಳು, ಪೂರ್ವಗ್ರಹಗಳು, ದ್ವೇಷದ ವಾತಾವರಣ ನಿವಾರಿಸಿ ಸಮಾಜದಲ್ಲಿ ಶಾಂತಿ, ಸಹಬಾಳ್ವೆ, ಪರಸ್ಪರರನ್ನು ಅರಿಯುವ ಉದ್ದೇಶದಿಂದ ಪ್ರವಾದಿ ಮಹಮ್ಮದ್ ಅವರ ಜನ್ಮದಿನದ ನಿಮಿತ್ತ ಇಂತಹ ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.







1. ಬಂದ್‌ನಿಂದಾಗಿ ಸಂಚಾರ ಸ್ಥಗಿತಗೊಳಿಸಿದ್ದ ಖಾಸಗಿ ಬಸ್‌ಗಳನ್ನು ಕಲಾಸಿಪಾಳ್ಯದಲ್ಲಿ ಸಾಲುಗಟ್ಟಿ ನಿಲ್ಲಿಸಲಾಗಿತ್ತು 2. ಪುರಭವನ ಎದುರು ವಾಹನ ಏರಿ ಪ್ರತಿಭಟನೆ ನಡೆಸಲು ಮುಂದಾಗಿದ್ದ ಪ್ರತಿಭಟನಕಾರರೊಬ್ಬರನ್ನು ಪೊಲೀಸರು ವಶಕ್ಕೆ ಪಡೆದರು 3. ಗಾಂಧಿನಗರದಲ್ಲಿ ಬಿಎಂಟಿಸಿ ಬಸ್ ಸಂಚಾರಕ್ಕೆ ಅಡ್ಡಿಪಡಿಸಲು ಯತ್ನಿಸಿದ್ದ ಪ್ರತಿಭಟನಕಾರರೊಬ್ಬರನ್ನು ಪೊಲೀಸರು ವಶಕ್ಕೆ ಪಡೆದು ಎಳೆದೊಯ್ದರು – ಪ್ರಜಾವಾಣಿ ಚಿತ್ರಗಳು

ಕಾವೇರಿ: ತಮಿಳುನಾಡು ಗಡಿಗೆ ಹೊಂದಿಕೊಂಡ ಪ್ರದೇಶಗಳಲ್ಲಿ ವ್ಯಾಪಕ ಭದ್ರತೆ • ಪಗಡೆಯಾಡಿ, ಮೊಬೈಲ್ ನೋಡುತ್ತ ಕಾಲ ಕಳೆದ ಕಾರ್ಮಿಕರು

ಬಂದ್ ಬಿಸಿ: ವಹಿವಾಟು ಸ್ಥಗಿತ, ರಸ್ತೆಗಳು ಬಿಕೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ದಟ್ಟಣೆ ಇಲ್ಲದ ರಸ್ತೆಗಳು, ಬಸ್‌ಗಳಿದ್ದರೂ ಪ್ರಯಾಣಿಕರಿಲ್ಲದೇ ಬಿಕೊ ಎನ್ನುತ್ತಿದ್ದ ಬಿಎಂಟಿಸಿ– ಕೆಎಸ್‌ಆರ್‌ಟಿಸಿ ನಿಲ್ದಾಣಗಳು, ಬಾಗಿಲು ತೆರೆಯದ ಅಂಗಡಿ–ಮಳಿಗೆಗಳು, ಕೈಗಾರಿಕೆಗಳ ಎದುರಿನ ಆವರಣದಲ್ಲಿ ಕ್ರಿಕೆಟ್ ಆಟವಾಡುತ್ತಿದ್ದ ಕಾರ್ಮಿಕರು...

ಬೆಂಗಳೂರು ಬಂದ್ ಹಿನ್ನೆಲೆಯಲ್ಲಿ ನಗರದಲ್ಲಿ ಮಂಗಳವಾರ ಕಂಡುಬಂದ ದೃಶ್ಯಗಳಿವು. ಬೆಂಗಳೂರು ಬಂದ್ ಅರಿತಿದ್ದ ಬಹುತೇಕ ಜನರು, ಮನೆಯಿಂದ ಹೊರಬರಲಿಲ್ಲ.

ಚಿಕ್ಕಪೇಟೆ ಹಾಗೂ ಸುತ್ತಮುತ್ತಲಿನ ಮಾರುಕಟ್ಟೆಯ ವರ್ತಕರು, ಚಿನ್ನಾಭರಣ ವ್ಯಾಪಾರಿಗಳು, ಆಟೊಮೊಬೈಲ್ಸ್ ಮಳಿಗೆ, ಗೃಹೋಪಯೋಗಿ ವಸ್ತುಗಳು ಮಳಿಗೆ ಸೇರಿದಂತೆ ಹಲವು ವ್ಯಾಪಾರಿಗಳು ಬಂದ್‌ಗೆ ಸಂಪೂರ್ಣ ಬೆಂಬಲ ನೀಡಿದ್ದರು. ಹೀಗಾಗಿ, ಬೆಳಿಗ್ಗೆಯಿಂದಲೇ ಎಲ್ಲಿಯೂ ಅಂಗಡಿಗಳು ತೆರೆಯಲಿಲ್ಲ.

ಮೈಸೂರು ಬ್ಯಾಂಕ್ ವೃತ್ತ, ಚಿಕ್ಕಪೇಟೆ, ಅವೆನ್ಯೂ ರಸ್ತೆ, ಕಾಟನ್‌ಪೇಟೆ, ಗಾಂಧಿನಗರ, ಮೆಜೆಸ್ಟಿಕ್, ಹಲಸೂರು ಗೇಟ್, ಎಸ್.ಪಿ ರಸ್ತೆ, ಕಲಾಸಿಪಾಳ್ಯ ಹಾಗೂ ಸುತ್ತಮುತ್ತ ಮಾರುಕಟ್ಟೆಗಳಲ್ಲಿ ಅಂಗಡಿಗಳು ಬಂದ್ ಆಗಿದ್ದವು. ಕೆಲಸವಿಲ್ಲದಿದ್ದರಿಂದ ಕೆಲ ಕಾರ್ಮಿಕರು, ಮಳಿಗೆಗಳ ಎದುರು ಕುಳಿತು ಪಗಡೆಯಾಟದಲ್ಲಿ ತೊಡಗಿದ್ದರು. ಹಲವು ಕಾರ್ಮಿಕರು, ಮೊಬೈಲ್ ನೋಡುತ್ತ ಮಲಗಿದ್ದ ದೃಶ್ಯಗಳು ಕಂಡುಬಂದವು.

ಕೆ.ಆರ್. ಮಾರುಕಟ್ಟೆಯ ಕಾರ್ಮಿಕರು ಹಾಗೂ ವ್ಯಾಪಾರಿಗಳು ಸಹ ಬಂದ್‌ಗೆ ಬೆಂಬಲ ನೀಡಿದ್ದರು. ಇದರಿಂದಾಗಿ ಮಾರುಕಟ್ಟೆಯ ಬಹುತೇಕ ಮಳಿಗೆಗಳ ಬಾಗಿಲಿಗೆ 'ಬೆಂಗಳೂರು ಬಂದ್' ಪೋಸ್ಟರ್ ಅಂಟಿಸಿ, ವಹಿವಾಟು ಸ್ಥಗಿತಗೊಳಿಸಲಾಗಿತ್ತು.

ಹಲವು ಕಡೆಗಳಲ್ಲಿ ಹೋಟೆಲ್, ಬೀಡಾ ಮಳಿಗೆಗಳು ತೆರೆದಿದ್ದವು. ಅಲ್ಲಲ್ಲ ಬೆಳಿಗ್ಗೆ ಮತ್ತು ಮಧ್ಯಾಹ್ನ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಬಹುತೇಕ ಕಡೆ ಬಾರ್ ಆ್ಯಂಡ್ ರೆಸ್ಟೊರೆಂಟ್‌ಗಳನ್ನೂ ಬಂದ್ ಮಾಡಲಾಗಿತ್ತು. ಪೆಟ್ರೋಲ್ ಬಂಕ್‌ಗಳು ತೆರೆದಿದ್ದವು. ಆದರೆ, ಬಂಕ್‌ಗೆ ಬರುವ ವಾಹನಗಳ ಸಂಖ್ಯೆ ಕಡಿಮೆ ಇತ್ತು.

ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಬಸ್‌ಗಳು ಹಾಗೂ ಮೆಟ್ರೊ ರೈಲು ಸಂಚಾರ ಎಂದಿನಂತಿತ್ತು. ಆದರೆ, ಪ್ರಯಾಣಿಕರ ಸಂಖ್ಯೆ ವಿರಳವಾಗಿತ್ತು. ಕೆಲ ಮಾರ್ಗಗಳಲ್ಲಿ ಸಂಚರಿಸಿದ ಬಸ್‌ಗಳು ಖಾಲಿಯಾಗಿದ್ದವು. ಸಂಜೆಯವರೆಗೂ ಹೆಚ್ಚು ಪ್ರಯಾಣಿಕರ ಸುಳಿವು ಇರಲಿಲ್ಲ. ಹಾಗಾಗಿ, ಕೆಲ ಮಾರ್ಗಗಳ ಬಸ್‌ಗಳ ಸಂಚಾರ ಅವಧಿ ಬದಲಾಯಿಸಲಾಯಿತು.

ಬಸ್ ನಿಲ್ದಾಣಗಳಲ್ಲಿ ಮಳಿಗೆಗಳನ್ನೂ ಬಂದ್ ಮಾಡಲಾಗಿತ್ತು. ಹೋಟೆಲ್ ತೆರೆಯಲಾಗಿತ್ತು. ನಿಲ್ದಾಣಕ್ಕೆ ಬಂದ ಜನರು, ಹೋಟೆಲ್‌ಗಳಲ್ಲಿ ತಿಂಡಿ – ತಿನಿಸು ತಿನ್ನುತ್ತಿದ್ದ ದೃಶ್ಯಗಳು ಕಂಡುಬಂದವು. ಬಂದ್‌ಗೆ ಬೆಂಬಲಿಸಿದ್ದ ಸಂಘಟನೆಗಳ ಕೆಲ ಕಾರ್ಯಕರ್ತರು ಸಹ ಅದೇ ಹೋಟೆಲ್‌ನಲ್ಲಿ ತಿಂಡಿ ತಿಂದು, 'ಬಂದ್ ಬೆಂಬಲಿಸಿ' ಎಂದು ಜನರನ್ನು ಕೋರಿದರು.

ಶಾಲೆ-ಕಾಲೇಜಿಗೆ ರಜೆ: ಮಕ್ಕಳ ರಕ್ಷಣೆ ಹಾಗೂ ಸುರಕ್ಷತೆ ದೃಷ್ಟಿಯಿಂದ, ಶಾಲೆ–ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಮಕ್ಕಳು, ಮನೆಯೊಳಗೆ ಹಾಗೂ ಮನೆ ಅಂಗಳದಲ್ಲಿ ಆಟವಾಡುತ್ತಿದ್ದ ದೃಶ್ಯಗಳು ಕಂಡುಬಂದವು.

ಆಸ್ಪತ್ರೆಯಲ್ಲೂ ಜನಸಂಖ್ಯೆ ವಿರಳ : ನಗರದ ವಿಕ್ಟೋರಿಯಾ, ಮಿಂಟೊ, ಬೌರಿಂಗ್ ಸೇರಿದಂತೆ ಹಲವು ಆಸ್ಪತ್ರೆಗಳಲ್ಲಿ ಹೊರ ರೋಗಿಗಳ ಸಂಖ್ಯೆ ತೀರಾ ಕಡಿಮೆ ಇತ್ತು.

ರಾತ್ರಿಯೇ ವಿಮಾನ ನಿಲ್ದಾಣ ಸೇರಿದ್ದ ಜನ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಪ್ರಯಾಣಿಕರ ಸಂಖ್ಯೆ ಯಥಾಪ್ರಕಾರವಿತ್ತು. ಬಂದ್ ಮಾಹಿತಿ ಅರಿತಿದ್ದ ಪ್ರಯಾಣಿಕರು, ರಾತ್ರಿಯೇ ನಿಲ್ದಾಣಕ್ಕೆ ತಲುಪಿದ್ದರು. ತಮ್ಮ ವಿಮಾನದ ಸರದಿಗಾಗಿ ಕಾಯುತ್ತ ನಿಲ್ದಾಣದಲ್ಲಿ ಸಮಯ ಕಳೆದರು.

ಎಪಿಎಂಸಿ, ಕೈಗಾರಿಕೆಗಳು ಬಂದ್: ಪೀಣ್ಯ ಕೈಗಾರಿಕೆ ಪ್ರದೇಶ, ಯಶವಂತಪುರ, ಆರ್‌ಎಂಸಿ ಯಾರ್ಡ್, ಹಾಗೂ ಸುತ್ತಮುತ್ತಲಿನ ವ್ಯಾಪಾರ ವಹಿವಾಟು ಸಂಪೂರ್ಣ ಬಂದ್ ಆಗಿತ್ತು. ಎಪಿಎಂಸಿ ವರ್ತಕರು, ಉದ್ಯಮಗಳು ಹಾಗೂ ಕೈಗಾರಿಕೆಗಳ ಮಾಲೀಕರು, ಸ್ವಯಂಪ್ರೇರಿತವಾಗಿ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದ್ದರು.

ಕೈಗಾರಿಕೆಗಳು ಹೆಚ್ಚಿರುವ ಪ್ರದೇಶಗಳಲ್ಲಿ ಕಾರ್ಮಿಕರ ಓಡಾಟ ಇರಲಿಲ್ಲ. ಅಗತ್ಯ ವಸ್ತುಗಳ ಕೈಗಾರಿಕೆ ಹೊರತು ಪಡಿಸಿ ಉಳಿದೆಲ್ಲ ಕೈಗಾರಿಗಳ ಬಾಗಿಲುಗಳು ಬಂದ್ ಆಗಿದ್ದವು. ಕೆಲ ಕೈಗಾರಿಕಾ ಘಟಕಗಳ ಎದುರು ಯುವಕರ ಗುಂಪು, ಕ್ರಿಕೆಟ್ ಆಡುತ್ತಿದ್ದ ದೃಶ್ಯಗಳು ಕಂಡುಬಂದವು.

ಬಂದ್‌ನಿಂದಾಗಿ ಹೆಚ್ಚಿನ ವಾಹನಗಳು ರಸ್ತೆಗಿಳಿಯಲಿಲ್ಲ. ತುಮಕೂರು ರಸ್ತೆ, ಬಳ್ಳಾರಿ ರಸ್ತೆ, ಕನಕಪುರ, ಬನ್ನೇರುಘಟ್ಟ ರಸ್ತೆ, ಮಾಗಡಿ ರಸ್ತೆ, ಮೈಸೂರು ರಸ್ತೆ, ಹೊರವರ್ತುಲ ರಸ್ತೆಗಳು ಹಾಗೂ ಇತರೆ ರಸ್ತೆಗಳಲ್ಲಿ ವಾಹನಗಳ ಸಂಖ್ಯೆ ಕಡಿಮೆ ಇತ್ತು.

ಬಿಗಿ ಭದ್ರತೆ: ಪುರಭವನ, ಮೈಸೂರು ಬ್ಯಾಂಕ್ ವೃತ್ತ, ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನ, ಸ್ವಾತಂತ್ರ್ಯ ಉದ್ಯಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿತ್ತು. ಡಿಸಿಪಿ, ಎಸಿಪಿಗಳಿಗೆ ಭದ್ರತೆ ಹೊಣೆ ವಹಿಸಲಾಗಿತ್ತು. ಪ್ರಮುಖ ರಸ್ತೆಗಳು ಹಾಗೂ ಒಳ ರಸ್ತೆಗಳಲ್ಲೂ ಪೊಲೀಸರು ಗಸ್ತು ತಿರುಗಿದರು. ಕೆಎಸ್‌ಆರ್‌ಪಿ, ಸಿಎಆರ್ ಪೊಲೀಸರೂ ಭದ್ರತೆಯಲ್ಲಿದ್ದರು.

ತಮಿಳುನಾಡು ಗಡಿ ಪ್ರದೇಶವಾದ ಅತ್ತಿಬೆಲೆ, ಆನೇಕಲ್ ಹಾಗೂ ಸುತ್ತಮುತ್ತ ಭದ್ರತೆ ಹೆಚ್ಚಿತ್ತು. ಮುಂಜಾಗ್ರತಾ ಕ್ರಮವಾಗಿ ತಮಿಳುನಾಡು ಬಸ್‌ಗಳ ಸಂಚಾರ ಮಂಗಳವಾರ ಬಂದ್ ಮಾಡಲಾಗಿತ್ತು. ಹೊಸೂರು ರಸ್ತೆಯುದ್ದಕ್ಕೂ ನಿಂತಿದ್ದ ಪೊಲೀಸರು, ತಮಿಳುನಾಡು ನೋಂದಣಿ ಸಂಖ್ಯೆ ವಾಹನಗಳು ಕಂಡಾಗ ಭದ್ರತೆ ಒದಗಿಸಿ ಸುರಕ್ಷಿತವಾಗಿ ಮುಂದಕ್ಕೆ ಕಳುಹಿಸಿದರು.



ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಬಾಲಕನೊಬ್ಬ ಭಿತ್ತಿಪತ್ರ ಪ್ರದರ್ಶಿಸಿ ಘೋಷಣೆ ಕೂಗಿದ ಪ್ರಜಾವಾಣಿ ಚಿತ್ರ– ರಂಜು ಪಿ

ಜನರಿಗೆ ಕುಡಿಯಲು ನೀರು ಕೊಡಿ ಎಂದರೆ, ರಾಜ್ಯದ ಕಾಂಗ್ರೆಸ್ ಸರ್ಕಾರ ಬ್ರಾಂಡಿ ಕೊಡ್ತೀನಿ ಎನ್ನುತ್ತಿದೆ

'ಮುಖ್ಯಮಂತ್ರಿ' ಚಂದ್ರು, ರಾಜ್ಯ ಅಧ್ಯಕ್ಷ, ಎಎಪಿ

ಮೂರು ಹೋಟೆಲ್‌ಗಳಿಗೆ ನುಗ್ಗಿ ಗಲಾಟೆ: ಇಬ್ಬರು ಆರೋಪಿಗಳು ವಶಕ್ಕೆ

ಬೆಂಗಳೂರು: ಬಂದ್ ಸಂದರ್ಭದಲ್ಲಿ ಜಯನಗರ ಬಳಿಯ ಮೂರು ಹೋಟೆಲ್‌ಗಳಿಗೆ ನುಗ್ಗಿ ಕಿಡಿಗೇಡಿಗಳು ಗಲಾಟೆ ಮಾಡಿದ್ದಾರೆ. ಪ್ರಕರಣವೊಂದರಲ್ಲಿ ಇಬ್ಬರು ಆರೋಪಿಗಳನ್ನು ಜಯನಗರ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಜಯನಗರ ಬಳಿಯ 'ಉಡುಪಿ ಹಬ್' ಹೋಟೆಲ್‌ಗೆ ನುಗ್ಗಿದ್ದ ಆರೋಪಿ, ಗಾಜಿನ ಟೇಬಲ್‌ಗೆ ಕಲ್ಲಿನಿಂದ ಹೊಡೆದು ಪುಡಿ ಪುಡಿ ಮಾಡಿದ್ದು, ಕೃತ್ಯದ ದೃಶ್ಯ ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

'ಬೆಂಗಳೂರು ಬಂದ್ ಇದೆ. ಬಾಗಿಲು ಬಂದ್ ಮಾಡಿ' ಎಂದು ಕೂಗಾಡುತ್ತ ಹೋಟೆಲ್‌ಗೆ ನುಗ್ಗಿದ್ದ ಕಿಡಿಗೇಡಿಗಳು ಕೃತ್ಯ ಎಸಗಿ ಪರಾರಿಯಾಗಿದ್ದರು. ಮಾಹಿತಿ ಬರುತ್ತಿದ್ದಂತೆ ಹೋಟೆಲ್ ಮಾಲೀಕನಿಂದ ದೂರು ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಾದ ಶಿವ ಹಾಗೂ ವಿಶ್ವ ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ. ಇವರಿಬ್ಬರು ಸ್ಥಳೀಯ ಶಾಸಕನ ಜೊತೆ ಓಡಾಡಿಕೊಂಡಿದ್ದ ಮಾಹಿತಿ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪ್ರತ್ಯೇಕ ಪ್ರಕರಣದಲ್ಲಿ, ಜಯನಗರದ 3ನೇ ಹಂತದ ಎರಡು ಹೋಟೆಲ್‌ಗಳಿಗೆ ನುಗ್ಗಿ ಗಲಾಟೆ ಮಾಡಲಾಗಿದೆ. ಮಾಲೀಕರ ಮೇಲೆ ಹಲ್ಲೆಗೆ ಯತ್ನಿಸಲಾಗಿದೆ. ಈ ಸಂಬಂಧ ಸದ್ಯಕ್ಕೆ ಪ್ರಕರಣ ದಾಖಲಾಗಿಲ್ಲವೆಂದು ಪೊಲೀಸರು ತಿಳಿಸಿದ್ದಾರೆ.

ಪ್ರಯಾಣಿಕರ ಸಂಖ್ಯೆ ವಿರಳ

ಖಾಸಗಿ ವಾಹನಗಳ ಚಾಲಕರು ಹಾಗೂ ಮಾಲೀಕರ ಒಕ್ಕೂಟ ಬಂದ್‌ಗೆ ಬೆಂಬಲ ನೀಡಿತ್ತು. ಐಟಿ ಬಿಟಿ ಕಂಪನಿಗಳ ವಾಹನಗಳು, ಶಾಲಾ–ಕಾಲೇಜು ಮಕ್ಕಳ ವಾಹನಗಳು, ಪ್ರಯಾಣಿಕರ ಬಸ್‌ಗಳು ಹಾಗೂ ಮ್ಯಾಕ್ಸಿ ಕ್ಯಾಬ್‌ಗಳ ಓಡಾಟ ಸಂಪೂರ್ಣ ಸ್ಥಗಿತಗೊಂಡಿತ್ತು.

ಖಾಸಗಿ ವಾಹನಗಳ ಚಾಲಕರು ಹಾಗೂ ಮಾಲೀಕರು, ಬಸವನಗುಡಿ ಮೈದಾನದಿಂದ ಪುರಭವನದವರೆಗೆ ಮೆರವಣಿಗೆ ನಡೆಸಲು ಮುಂದಾಗಿದ್ದರು. ಅವರನ್ನು ವಶಕ್ಕೆ ಪಡೆದ ಪೊಲೀಸರು, ಸ್ವಾತಂತ್ರ್ಯ ಉದ್ಯಾನಕ್ಕೆ ತಂದು ಬಿಟ್ಟರು.

ಮೊಬೈಲ್ ಆ್ಯಪ್ ಆಧರಿತ ಕ್ಯಾಬ್ ಸೇವೆ ಮಂಗಳವಾರ ಲಭ್ಯವಿತ್ತು. ಓಲಾ–ಉಬರ್ ಹಾಗೂ ಇತರೆ ಕಂಪನಿಗಳ ಕ್ಯಾಬ್‌ಗಳು ಯಥಾಪ್ರಕಾರ ಸಂಚರಿಸಿದವು. ಕೆಲವೆಡೆ ಆಟೊಗಳ ಓಡಾಟವೂ ಇತ್ತು. ಆದರೆ, ಪ್ರಯಾಣಿಕರ ಸಂಖ್ಯೆ ವಿರಳವಾಗಿತ್ತು. 'ನಿತ್ಯ ಬರುವಂತೆ ಇಂದು ಬೆಳಿಗ್ಗೆ 6 ಗಂಟೆಗೆ ಕೆಲಸಕ್ಕೆ ಬಂದಿದ್ದೇನೆ. ಪ್ರಯಾಣಿಕರಿಗಾಗಿ ಕಾಯುತ್ತಿದ್ದೇನೆ. ಆದರೆ, ಇದುವರೆಗೂ ಒಬ್ಬ ಪ್ರಯಾಣಿಕರು ಬಂದಿಲ್ಲ. ಬಂದ್‌ಗೆ ಹೆದರಿ ಜನರು ಮನೆಯಲ್ಲಿದ್ದಾರೆ' ಎಂದು ಓಲಾ ಕ್ಯಾಬ್ ಚಾಲಕ ಚಂದ್ರಶೇಖರ್ ತಿಳಿಸಿದರು.

ರ‍್ಯಾಲಿ ನಡೆಸಲು ಮುಂದಾಗಿದ್ದ ಹೋರಾಟಗಾರರನ್ನು ವಶಕ್ಕೆ ಪಡೆದ ಪೊಲೀಸರು

'ಸರ್ಕಾರ ಎಚ್ಚೆತ್ತುಕೊಳ್ಳದಿದ್ದರೆ ಮತ್ತೆ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸ್ವಾತಂತ್ರ್ಯ ಉದ್ಯಾನಕ್ಕೆ ಮಂಗಳವಾರ ಮಧ್ಯಾಹ್ನ 12ರ ವೇಳೆಗೆ ಹಲವು ಕಡೆಯಿಂದ ಪ್ರತಿಭಟನಕಾರರು ಬಂದು ಜಮಾವಣೆಗೊಂಡರು. ರ‍್ಯಾಲಿ ನಡೆಸಲು ಮುಂದಾಗಿದ್ದ ಹೋರಾಟಗಾರರನ್ನು ಅಲ್ಲಲ್ಲಿ ವಶಕ್ಕೆ ಬಸ್‌ನಲ್ಲಿ ಕರೆತಂದು ಸ್ವಾತಂತ್ರ್ಯ ಉದ್ಯಾನಕ್ಕೆ ಬಿಡಲಾಯಿತು. ಬಳಿಕ ನಡೆದ ಸಮಾವೇಶದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನಕಾರರು ಆಕ್ರೋಶ ಹೊರಹಾಕಿ, ಧಿಕ್ಕಾರ ಕೂಗಿದರು.

ಆಮ್ ಆದ್ಮಿ ಪಕ್ಷದ ರಾಜ್ಯ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಮಾತನಾಡಿ, 'ತಕ್ಷಣವೇ ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರನ್ನು ಸ್ಥಗಿತಗೊಳಿಸಬೇಕು. ಸರ್ಕಾರ ಈಗಲೇ ಎಚ್ಚೆತ್ತುಕೊಳ್ಳಬೇಕು. ಇಲ್ಲದಿದ್ದರೆ ಮತ್ತೆ ಹೋರಾಟ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಇದು ಸರ್ಕಾರಕ್ಕೆ ಎಚ್ಚರಿಕೆ ಗಂಟೆಯಾಗಿದ್ದು, ನ್ಯಾಯಾಲಯಕ್ಕೂ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡಬೇಕು. ತಮಿಳುನಾಡಿಗೆ ನೀರು ಬಿಡಬೇಕು ಎನ್ನುವ ಆದೇಶವನ್ನು ಹಿಂಪಡೆಯಬೇಕು' ಎಂದು ಕೋರಿದರು.

'ನೀರಿಲ್ಲದಿದ್ದರೂ ತಮಿಳುನಾಡಿಗೆ ನೀರು ಹರಿಸಲಾಗುತ್ತಿದೆ. ನೀರು ಬಿಡುವುದಿಲ್ಲ ಎಂದು ಸರ್ಕಾರ ಹೇಳುತ್ತದೆ. ರಾತ್ರೋರಾತ್ರಿ 5 ಸಾವಿರ ಕ್ಯೂಸೆಕ್ ನೀರು ಬಿಟ್ಟು 3.5 ಸಾವಿರ ಕ್ಯೂಸೆಕ್ ನೀರು ಹರಿಸುತ್ತಿದ್ದೇವೆ ಎಂದು ಹೇಳುತ್ತಿದೆ. ರಾಜ್ಯ ಸರ್ಕಾರವೇ ತಮಿಳುನಾಡಿಗೆ ಬೆಂಬಲ ಸೂಚಿಸುವುದರ ಜೊತೆಗೆ ಕಾನೂನಿನ ಕುಣಿಕೆಗೆ ಹೆದರುತ್ತಿದೆ' ಎಂದು ಹೇಳಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ಇದು ರೈತರಿಗಾಗಿ, ಕನ್ನಡಿಗರಿಗಾಗಿ ನಡೆಯುತ್ತಿರುವ ಬಂದ್ ಆಗಿದೆ. ಪೊಲೀಸರ ಮೂಲಕ ಹೋರಾಟ ಹತ್ತಿಕ್ಕುವ ಪ್ರಯತ್ನ ಮಾಡಲಾಯಿತು. ನಮ್ಮ ಹೋರಾಟ ಬೆಂಗಳೂರು ಮತ್ತು ಕರ್ನಾಟಕದ ಜೀವನದಿ ಕಾವೇರಿಗಾಗಿ ಎಂದು ಹೇಳಿದರು.

ನಗರದ ಟೌನ್‌ಹಾಲ್ ಮುಂಭಾಗದಲ್ಲಿ ಪ್ರತಿಭಟನೆ ನಡೆಸಲು ಮೊದಲೇ ಘೋಷಣೆ ಮಾಡಲಾಗಿತ್ತು. ಜೊತೆಗೆ ಪ್ರತಿಭಟನೆಗೆ ಪೊಲೀಸರಿಂದ ಅನುಮತಿ ಪಡೆಯಲಾಗಿತ್ತು. ಆದರೂ ಏಕಾಏಕಿ ಮಧ್ಯರಾತ್ರಿಯಿಂದಲೇ ನಿಷೇಧಾಜ್ಞೆ ಜಾರಿ ಮಾಡಿ ರ‍್ಯಾಲಿಗೆ ತಡೆಯೊಡ್ಡಲಾಯಿತು ಎಂದು ದೂರಿದರು. ಮಂಡ್ಯ ರೈತ ಹಿತರಕ್ಷಣಾ ಸಮಿತಿ ಸುನಂದಾ ಜಯರಾಂ ಇದ್ದರು.

'ಗೋಮುಖ ವ್ಯಾಘ್ರಗಳಿಂದ ಬಂದ್ ವಿಫಲಗೊಳಿಸಲು ಯತ್ನ'

ಕರ್ನಾಟಕ ಜಲ ಸಂರಕ್ಷಣಾ ಸಮಿತಿ ಕರೆ ನೀಡಿದ್ದ ಬೆಂಗಳೂರು ಬಂದ್ ಸಂಪೂರ್ಣ ಶಾಂತಿಯುತವಾಗಿ ನಡೆದಿದೆ. ಸ್ವಯಂ ಪ್ರೇರಿತವಾಗಿ ಜನರು ಬಂದ್ ನಡೆಸುವ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ರವಾನಿಸಿದ್ದಾರೆ. ಇದು ಜನತಂತ್ರದ ಜಯ. ಕೆಲವು ಗೋಮುಖ ವ್ಯಾಘ್ರಗಳು ಬಂದ್ ವಿಫಲಗೊಳಿಸಲು ಯತ್ನಿಸಿದರು. ಅದು ಪ್ರಯೋಜನವಾಗಲಿಲ್ಲ ಎಂದು ಕುರುಬೂರು ಶಾಂತಕುಮಾರ್, 'ಮುಖ್ಯಮಂತ್ರಿ' ಚಂದ್ರು ಆಪಾದಿಸಿದ್ದಾರೆ.

ಮೂರು ದಿನಗಳಲ್ಲಿ ಸಭೆ



ಪ್ರತಿಭಟನಾ ಸ್ಥಳಕ್ಕೆ ಬಂದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಮನವಿ ಸ್ವೀಕರಿಸಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರು ಪ್ರವಾಸದಲ್ಲಿದ್ದಾರೆ. ಅವರು ಬಂದ ನಂತರ ನಿಮ್ಮ ಮನವಿಯನ್ನು ಅವರಿಗೆ ಸಲ್ಲಿಸುತ್ತೇನೆ. ಮೂರು ದಿನಗಳ ಒಳಗಾಗಿ ವಿವಿಧ ಸಂಘಟನೆಗಳ ಪ್ರಮುಖರನ್ನು ಕರೆದು ಸಭೆ ನಡೆಸಲಾಗುವುದು' ಎಂದು ಸಚಿವರು ಭರವಸೆ ನೀಡಿದರು.

ಆತ್ಮಹತ್ಯೆಗೆ ಹೋರಾಟಗಾರ ಯತ್ನ

ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿದ್ದ ಪ್ರತಿಭಟನಾ ಸಮಾವೇಶದ ವೇಳೆ ಹೋರಾಟಗಾರರೊಬ್ಬರು ಆತ್ಮಹತ್ಯೆಗೆ ಯತ್ನಿಸಿದ್ದರು. ಮರಕ್ಕೆ ಟವಲ್‌ನಿಂದ ನೇಣುಬಿಗಿದು ಕೊಳ್ಳಲು ಮುಂದಾದ ವೇಳೆ ಬಂದೋಬಸ್ತ್‌ಗೆ ನಿಯೋಜಿಸಿದ್ದ ಪೊಲೀಸರು ಹೋರಾಟಗಾರರನ್ನು ರಕ್ಷಿಸಿದರು.

'ಬೆಂಗಳೂರಿನ ಹಿತಾಸಕ್ತಿ ಕಾಪಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಜನತೆಗೇ ನೀರಿಲ್ಲದಿರುವಾಗ ತಮಿಳುನಾಡಿಗೆ ನೀರು ಹರಿಸುವುದು ಹೇಗೆ' ಎಂದು ಪ್ರಶ್ನಿಸಿರುವ ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, 'ಕಾವೇರಿ ವಿಷಯದಲ್ಲಿ ರಾಜ್ಯ ಹಾಗೂ ಬೆಂಗಳೂರಿನ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕಿದೆ' ಎಂದು ಆಗ್ರಹಿಸಿದರು.

ಕಾವೇರಿ ನದಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ, 'ಜಲಸಂರಕ್ಷಣಾ ಸಮಿತಿ' ಕರೆ ನೀಡಿದ್ದ ಬೆಂಗಳೂರು ಬಂದ್‌ಗೆ ಬೆಂಬಲ ವ್ಯಕ್ತಪಡಿಸಿ ಮಂಗಳವಾರ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ವಕೀಲರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಕಾವೇರಿ ವಿಷಯದಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯವನ್ನು ವಕೀಲರ ಸಂಘ ಸಹಿಸುವುದಿಲ್ಲ' ಎಂದರು.

'ಬೆಂಗಳೂರಿಗೆ ಅಗತ್ಯವಿರುವ ಪ್ರಮಾಣದಲ್ಲಿ ನೀರನ್ನು ಪೂರೈಸುವ ಜವಾಬ್ದಾರಿ ಕೇವಲ ರಾಜ್ಯ ಸರ್ಕಾರದ್ದಷ್ಟೇ ಅಲ್ಲ, ಕೇಂದ್ರದ ಹೊಣೆಯೂ ಆಗಿದೆ. ಕಾವೇರಿ ವಿಚಾರದಲ್ಲಿ ರಾಜ್ಯಕ್ಕೆ ನ್ಯಾಯ ಸಿಗಬೇಕಿದೆ. ಹೀಗಾಗಿ ನಾವು ಬೆಂಬಲಿಸುತ್ತಿದ್ದೇವೆ' ಎಂದರು.

'ಕಾವೇರಿ ವಿಚಾರಕ್ಕೆ ಸಂಬಂಧಿಸಿ ಕಾನೂನು ಸಮರದಲ್ಲಿ ಬೆಂಗಳೂರು ವಕೀಲರ ಸಂಘವು ಈಗಾಗಲೇ ರಾಜ್ಯದ ಪರವಾಗಿ ಮಧ್ಯಂತರ ಅರ್ಜಿ ಸಲ್ಲಿಸಿದೆ. ಬೆಂಗಳೂರಿಗೆ ಅಗತ್ಯವಿರುವಷ್ಟು ನೀರು ಸಿಗುವಂತಾಗಬೇಕು ಎಂದು ನ್ಯಾಯಪೀಠದ ಗಮನ ಸೆಳೆದಿದೆ. ಬೆಂಗಳೂರು ನಗರವು ಜಗತ್ತಿನ ಪ್ರಮುಖ ಶಕ್ತಿ ಕೇಂದ್ರಗಳಲ್ಲಿ ಒಂದಾಗಿದ್ದು, ಬೆಂಗಳೂರು ಜಲಮಂಡಳಿ ಪ್ರಕಾರ ನಗರಕ್ಕೆ 25 ಟಿಎಂಸಿ ಅಡಿ ನೀರು ಕುಡಿಯುವ ಉದ್ದೇಶಕ್ಕೆ ಅಗತ್ಯವಿದೆ ಎಂಬ ಅಂಶವನ್ನು ಕೋರ್ಟ್ ಗಮನಕ್ಕೆ ತರಲಾಗಿದೆ' ಎಂದರು.

ನೂರಾರು ವಕೀಲರು ಕೋರ್ಟ್ ಆವರಣದಲ್ಲಿ ಒಗ್ಗೂಡಿ ಪ್ರತಿಭಟನೆಯಲ್ಲಿ ಸಾಂಕೇತಿಕವಾಗಿ ಪಾಲ್ಗೊಂಡರು. ಬೆಂಗಳೂರು ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ, ಖಜಾಂಚಿ ಎಂ.ಟಿ.ಹರೀಶ್ ಮತ್ತು ಹಿರಿಕಿರಿಯ ವಕೀಲರು ಇದ್ದರು.



'ಬೆಂಗಳೂರು ಬಂದ್' ಬೆಂಬಲಿಸಿದ ಬೆಂಗಳೂರು ವಕೀಲರ ಸಂಘದ ಪದಾಧಿಕಾರಿಗಳು ಮತ್ತು ವಕೀಲರು ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಸೇರಿ ಪ್ರತಿಭಟನೆಯಲ್ಲಿ ಪಾಲ್ಗೊಂಡರು



ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಯಲಹಂಕ: ಕರವೇ ರಸ್ತೆತಡೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಂಗಳೂರು ಬಂದ್‌ಗೆ ಯಲಹಂಕ ಭಾಗದಲ್ಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪ್ರಮುಖ ರಸ್ತೆಯಲ್ಲಿ ವಾಹನ ಸಂಚಾರ ಇರಲಿಲ್ಲ.

ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಮಾರಸಂದ್ರದ ಟೋಲ್ ಬಳಿ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು, ಮುಖಂಡ ಚಂದ್ರು ನೇತೃತ್ವದಲ್ಲಿ ಕೆಲಕಾಲ ರಸ್ತೆತಡೆ ನಡೆಸಿ, ಪ್ರತಿಭಟಿಸಿದರು.

ಬಂದ್ ಹಿನ್ನೆಲೆಯಲ್ಲಿ ಯಲಹಂಕ ಹಳೇನಗರ, ಉಪನಗರ, ಬ್ಯಾಟರಾಯನಪುರ, ಸಹಕಾರನಗರ, ವಿದ್ಯಾರಣ್ಯಪುರ ಸುತ್ತಮುತ್ತಲ ಪ್ರದೇಶಗಳಲ್ಲಿ ಕೆಲವೊಂದು ಹೋಟೆಲ್, ಅಂಗಡಿಗಳು ತೆರೆದಿದ್ದರೂ ಬಹುತೇಕ ಅಂಗಡಿ-ಮುಂಗಟ್ಟುಗಳನ್ನು ಮಾಲೀಕರು ಸ್ವಯಂಪ್ರೇರಿತರಾಗಿ ಬಂದ್ ಮಾಡಿದ್ದರು.

ಮಿನಿ ವಿಧಾನಸೌಧದ ಕಚೇರಿಗಳಲ್ಲಿ ಸಿಬ್ಬಂದಿ ಎಂದಿನಂತೆ ಕರ್ತವ್ಯಕ್ಕೆ ಹಾಜರಾಗಿದ್ದರು. ಸಾರ್ವಜನಿಕರಿಲ್ಲದೆ ಬಿಕೊ ಎನ್ನುತ್ತಿದ್ದ ದೃಶ್ಯ ಕಂಡುಬಂತು. ಯಲಹಂಕದ ಗರುಡ ಮಾಲ್ ಬಂದ್ ಆಗಿತ್ತು. ಆರ್.ಎಂ.ಝಡ್ ಗ್ಯಾಲರಿಯಾ ಮಾಲ್ ತೆರೆದಿದ್ದರೂ ಜನರಿಲ್ಲದೆ ಬಿಕೊ ಎನ್ನುತ್ತಿತ್ತು.

ಬೆಂಗಳೂರು ವಿ.ವಿ ಘಟಿಕೋತ್ಸವ ಮುಂದೂಡಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುವುದನ್ನು ವಿರೋಧಿಸಿ ಇದೇ 29ರಂದು ಕರ್ನಾಟಕ ಬಂದ್‌ಗೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಆ ದಿನ ನಿಗದಿಯಾಗಿದ್ದ ಬೆಂಗಳೂರು ವಿಶ್ವವಿದ್ಯಾಲಯದ 58ನೇ ಘಟಿಕೋತ್ಸವವನ್ನು ಮುಂದೂಡಲಾಗಿದೆ.

ಮುಂದಿನ ದಿನಾಂಕವನ್ನು ಸದ್ಯದಲ್ಲಿ ತಿಳಿಸಲಾಗುವುದೆಂದು ಎಂದು ವಿಶ್ವವಿದ್ಯಾಲಯದ ಕುಲಸಚಿವ ಶೇಕ್ ಲತೀಫ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಂಗಳೂರು ಬಂದ್‌ಗೆ ಬೆಂಬಲಿಸಿ ಕನ್ನಡ ನಾಡು ಹಿತರಕ್ಷಣಾ ವೇದಿಕೆ ಕಾರ್ಯಕರ್ತರು 8ನೇ ಮೈಲಿನಲ್ಲಿ ಪ್ರತಿಭಟಿಸಿದರು

ವಕೀಲರನ್ನು ಬದಲಾವಣೆ ಮಾಡಲು ಆಗ್ರಹ

ಪೀಣ್ಯ ದಾಸರಹಳ್ಳಿ: ಕಾವೇರಿ ವಿಚಾರವಾಗಿ ವಾದ ಮಂಡಿಸುತ್ತಿರುವ ವಕೀಲರನ್ನು ಬದಲಾಯಿಸಬೇಕು ಎಂದು ಕನ್ನಡ ನಾಡು ಹಿತರಕ್ಷಣಾ ಸಮಿತಿ ಸಂಸ್ಥಾಪಕ ರಾಜ್ಯ ಅಧ್ಯಕ್ಷ ಕೆ.ವಿ. ಕೃಷ್ಣಮೂರ್ತಿ ಆಗ್ರಹಿಸಿದರು.

ಕಾವೇರಿ ವಿಚಾರವಾಗಿ ಬೆಂಗಳೂರು ಬಂದ್‌ಗೆ ಬೆಂಬಲ ಸೂಚಿಸಿ, ಎಂಟನೇ ಮೈಲಿಯಲ್ಲಿ ಪ್ರತಿಭಟನೆ ನಡೆಸಿ ಮಾತನಾಡಿದರು.

'ವಕೀಲರು ಸರಿಯಾಗಿ ವಾದ ಮಂಡಿಸುತ್ತಿಲ್ಲ. ಈಗ ಜಲಾಶಯದಲ್ಲಿ ನೀರಿನಮಟ್ಟ ಕನಿಷ್ಠಮಟ್ಟಕ್ಕೆ ತಲುಪಿದೆ' ಎಂದು ಹೇಳಿದರು.

ಮಹಿಳಾ ಘಟಕದ ಅಧ್ಯಕ್ಷೆ ಗೀತಾ ಗಿರಿಜಾ ಮಾತನಾಡಿ, 'ನಮ್ಮ ಮನೆಯಲ್ಲಿ ಕುಡಿಯಲು ನೀರಿಲ್ಲ ಎಂದರೆ ಪಕ್ಕದ ಮನೆಯವರಿಗೆ ಹೇಗೆ ಕೊಡಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದರು. ಸುಮಾರು 25ಕ್ಕೂ ಹೆಚ್ಚು ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದರು.



ಕೆ.ಆರ್‌.ಪುರದ ತೂಗುಸೇತುವೆ ಬಳಿ ವಾಹನ ಸಂಚಾರ ವಿರಳವಾಗಿತ್ತು


ಕೆ.ಆರ್‌.ಪುರದಲ್ಲಿ ಮಿಶ್ರ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಕೆ.ಆರ್‌.ಪುರ: ಕಾವೇರಿ ನೀರು ವಿಚಾರವಾಗಿ ವಿವಿಧ ಸಂಘಟನೆಗಳು ಕರೆ ನೀಡಿದ್ದ ಬೆಂಗಳೂರು ಬಂದ್‌ಗೆ ಕೆ.ಆರ್‌.ಪುರದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಇಲ್ಲಿನ ಬಹುತೇಕ ಕಡೆಗಳಲ್ಲಿ ಬೀದಿ ಬದಿ ವ್ಯಾಪಾರಿಗಳು, ಆಭರಣ ಮಳಿಗೆ ಮಾಲೀಕರು ಹಾಗೂ ವರ್ತಕರು ಬೆಂಬಲ ವ್ಯಕ್ತಪಡಿಸಿ ಸ್ವಯಂಪ್ರೇರಿತವಾಗಿ ಅಂಗಡಿ ಮುಂಗಟ್ಟುಗಳು ಮುಚ್ಚಿದ್ದರು. ವಹಿವಾಟು ಸ್ಥಗಿತವಾಗಿತ್ತು. ಹಳೇ ಮದ್ರಾಸ್ ರಸ್ತೆ ರಾಷ್ಟ್ರೀಯ ಹೆದ್ದಾರಿ, ಟಿನ್ ಫ್ಯಾಕ್ಟರಿ, ದೇವಸಂದ್ರ, ರಾಮಮೂರ್ತಿ ನಗರ, ಟಿಸಿ ಪಾಳ್ಯ ಮುಂತಾದ ಪ್ರಮುಖ ರಸ್ತೆಗಳಲ್ಲಿ ವಾಹನ ಸಂಚಾರ ವಿರಳವಾಗಿತ್ತು.

ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ವಾಹನಗಳು ಸಂಚಾರ ಎಂದಿನಂತೆ ಇತ್ತು. ಮುಂಜಾಗ್ರತಾ ಕ್ರಮವಾಗಿ ಎಲ್ಲೆಡೆ ಬಿಗಿ ಪೊಲೀಸ್ ಭದ್ರತೆ ನಿಯೋಜನೆಗೊಂಡಿದ್ದರಿಂದ ಯಾವುದೇ ಅಹಿತಕರ ಘಟನೆ ನಡೆಯಲಿಲ್ಲ.






ಜಾಲಲೋಕದ ಮಾರ್ಜಾಲಸನ್ಯಾಸಿ

ಗಣೇಶ್ ಭಟ್ ನೆಲೆಮಾವ್

ಹತ್ತು ವರ್ಷಗಳ ಕಾಲ ಟ್ರಾಯ್ ನಗರಕ್ಕೆ ಮುತ್ತಿಗೆ ಹಾಕಿ, ಟ್ರಾಯ್‌ನ ಅಭೇದ್ಯ ಕೋಟೆಯನ್ನು ಗೆಲ್ಲಲು ತವಕಿಸುತ್ತಿದ್ದ ಗ್ರೀಕ್ ಸೈನಿಕರು ಕೈಚೆಲ್ಲಿ ಹಿಂದೆಗೆದಿದ್ದನ್ನು ನೋಡಿದ ಟ್ರಾಯ್ ಜನರ ಖುಷಿಗೆ ಪಾರವೇ ಇರಲಿಲ್ಲ. ಸೋತವರು ಕಪ್ಪ-ಕಾಣಿಕೆ ಸಲ್ಲಿಸುವ ರೀತಿಯಲ್ಲಿ, ಬೃಹದ್ಗಾತ್ರದ ಮರದ ಕುದುರೆಯೊಂದನ್ನು ಕೋಟೆಯ ಹೆಬ್ಬಾಗಿಲಿನ ಬಳಿ ಗ್ರೀಕ್ ಸೈನಿಕರು ಬಿಟ್ಟು ಹೋಗಿದ್ದರು. ಆ ಕುದುರೆಯನ್ನು ತಮ್ಮ ಗೆಲುವಿನ ಸಂಕೇತವಾಗಿ ನಗರದ ನಡುವೆ ನಿಲ್ಲಿಸಿದ ಟ್ರಾಯ್ ಜನರು ವಿಜಯೋತ್ಸವದ ಸಂಭ್ರಮಾಚರಣೆಯಲ್ಲಿ, ಮದಿರೆಯ ನಶೆಯಲ್ಲಿ ಮುಳುಗಿದರು. ರಾತ್ರಿಯ ವೇಳೆ ಕುದುರೆಯಲ್ಲಿ ಅಡಗಿದ್ದ ಗ್ರೀಕ್ ಸೈನಿಕರು ಹೊರಬಂದು ಕೋಟೆಯ ಬಾಗಿಲನ್ನು ತೆರೆದು ಉಳಿದ ಗ್ರೀಕ್ ಸೈನಿಕರು ಒಳಬರಲು ಅನುವು ಮಾಡಿದರು. ಹೀಗೆ ಟ್ರಾಯ್ ನಗರ ಪತನವಾಯಿತು.

ಇದು ಗ್ರೀಕ್ ಪುರಾಣದಲ್ಲಿ ಕಾಣಿಸುವ ಒಂದು ಪ್ರಸಂಗ. ಈ ಪ್ರಸಂಗದಿಂದ, 'ಗೋಮುಖವ್ಯಾಘ್ರ' ಎಂದು ನಾವು ಹೇಳುವಂತೆ, 'ಟ್ರೋಜನ್ ಹಾರ್ಸ್' ಎಂಬ ನುಡಿಗಟ್ಟು ಇಂಗ್ಲಿಷಿನಲ್ಲಿ ಬಳಕೆಗೆ ಬಂತು. ನಿರುಪದ್ರವಿಯ ವೇಷವನ್ನು ಧರಿಸಿ ನಂಬಿಕೆ ಹುಟ್ಟಿಸಿ, ಅನಂತರ ತನ್ನ ದುರುದ್ದೇಶ ಸಾಧಿಸಲು ತೊಡಗುವಂಥದನ್ನು 'ಟ್ರೋಜನ್ ಹಾರ್ಸ್' (Trojan Horse) ಎನ್ನುತ್ತಾರೆ. ಸಾವಿರಾರು ವರ್ಷಗಳಷ್ಟು ಹಳೆಯದಾದರೂ ಈ ತಂತ್ರ ಈಗಲೂ ಬಳಕೆಯಲ್ಲಿದೆ, ವಿಶೇಷವಾಗಿ ಸಾಫ್ಟ್‌ವೇರ್ ಕ್ಷೇತ್ರದಲ್ಲಿ.

ಸಾಫ್ಟ್‌ವೇರ್ ಅಥವಾ ತಂತ್ರಾಂಶದಲ್ಲಿ 'ಕುತಂತ್ರಾಂಶ' (ಮಾಲ್‌ವೇರ್) ಎನ್ನುವುದು ಒಂದು ವಿಧ. ಕುತಂತ್ರಾಂಶ ಎಂದರೆ, ದುರುದ್ದೇಶಪೂರಿತ ಚಟುವಟಿಕೆಗಳನ್ನು ನಡೆಸಲು ಕಂಪ್ಯೂಟರ್ ಸಿಸ್ಟಂ, ಮೊಬೈಲ್ ಅಥವಾ ನೆಟ್‌ವರ್ಕ್‌ಗೆ ಸೇರಿಸಲ್ಪಡುವ ಯಾವುದೇ ಒಂದು ಸಾಫ್ಟ್‌ವೇರ್. ಇದರಲ್ಲಿ ಟ್ರೋಜನ್ ಕುದುರೆಯ ಶೈಲಿಯಲ್ಲೇ ಕೆಲಸ ಮಾಡುವ ಕುತಂತ್ರಾಂಶಗಳಿದ್ದು ಅವುಗಳನ್ನು 'ಟ್ರೋಜನ್‌ಗಳು' (Trojans) ಎಂದೇ ಕರೆಯಲಾಗುತ್ತದೆ. ಈ ಟ್ರೋಜನ್‌ಗಳು ನೋಡಲು ನೈಜ, ಸುರಕ್ಷಿತ, ಉಪಯುಕ್ತ ಸಾಫ್ಟ್‌ವೇರ್‌ಗಳಂತೆಯೇ ಕಾಣಿಸುತ್ತವೆ. ಆದರೆ ಅವುಗಳನ್ನು ಇನ್‌ಸ್ಟಾಲ್ ಮಾಡಿದರೆ ಕಂಪ್ಯೂಟರ್‌ನಲ್ಲಿ ಮಾಲ್‌ವೇರ್ ರಹಸ್ಯವಾಗಿ ಪ್ರವೇಶಿಸಿ ಕಂಪ್ಯೂಟರ್‌ಗೆ ಹಾನಿ ಮಾಡುತ್ತವೆ. ಮನುಷ್ಯ ತಾನು ಒಳ್ಳೆಯವನಂತೆ ಸೋಗು ಹಾಕಿ ವಂಚಿಸುವುದು ಸಾಲದೆಂಬಂತೆ ಸಾಫ್ಟ್‌ವೇರ್‌ಗಳಿಗೂ ಅದನ್ನೇ ಕಲಿಸಿದ್ದಾನೆ.



ಪ್ರಸ್ತುತ ಭಾರತೀಯರನ್ನೇ ಪ್ರಮುಖವಾಗಿ ಗುರಿ ಮಾಡುತ್ತಿರುವ ಹೊಸ ಕುತಂತ್ರಾಂಶವೊಂದು ಸುದ್ದಿಯಲ್ಲಿದೆ. ಅದುವೇ DogeRAT (ಡಾಜ್‌ರ್‍ಯಾಟ್). ಬೆಂಗಳೂರಿನ CloudSEK ಎಂಬ ಸೈಬರ್ ಸೆಕ್ಯೂರಿಟಿ ಕಂಪನಿ ಈ ತಂತ್ರಾಂಶವನ್ನು ಮೊದಲು ಪತ್ತೆ ಮಾಡಿದ್ದು ಅವರ ವರದಿಯ ಪ್ರಕಾರ ಬ್ಯಾಂಕಿಂಗ್, ಇನ್ಶೂರೆನ್ಸ್, ಇ-ಕಾಮರ್ಸ್ ಮುಂತಾದ ಹಣಕಾಸಿಗೆ ಸಂಬಂಧಪಟ್ಟ ಕ್ಷೇತ್ರಗಳು ಈ ಕುತಂತ್ರಾಂಶದ ಮುಖ್ಯ ಗುರಿಗಳಾಗಿವೆ.

- **DogeRAT ಮೊಬೈಲನ್ನು ಹೇಗೆ ಪ್ರವೇಶಿಸುತ್ತದೆ?**

ಸಾಮಾಜಿಕ ಜಾಲತಾಣಗಳು, ಮೆಸೇಜಿಂಗ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಈ ಕುತಂತ್ರಾಂಶವನ್ನು ಹರಡಲಾಗುತ್ತಿದೆ. ಈ ತಂತ್ರಾಂಶವು ನೋಡಲು ಸಾಮಾನ್ಯವಾಗಿ ನಾವು ಬಳಸುವ ಅಧಿಕೃತ ಬ್ಯಾಂಕಿಂಗ್ ಆ್ಯಪ್‌ಗಳು, ಯೂಟ್ಯೂಬ್ ಪ್ರೀಮಿಯಂ, ನೆಟ್‌ಫ್ಲಿಕ್ಸ್ ಮುಂತಾದವುಗಳಂತೆಯೇ ಕಾಣುತ್ತಿದ್ದು ವಾಸ್ತವದಲ್ಲಿ ಬೇರೆಯೇ ಆಗಿರುತ್ತವೆ. ಒಮ್ಮೆ ಮೊಬೈಲಿನಲ್ಲಿ ಇನ್‌ಸ್ಟಾಲ್ ಆದ ಬಳಿಕ ಬಳಕೆದಾರರ ಮಾಹಿತಿಯನ್ನು ಕದಿಯುವುದು, ಅನಧಿಕೃತವಾಗಿ ಹಣವನ್ನು ಬೇರೆಯವರಿಗೆ ರವಾನಿಸುವುದು, ಬಳಕೆದಾರರ ಮೊಬೈಲಿನಲ್ಲಿರುವ ಇತರರ ಮೊಬೈಲ್ ಸಂಖ್ಯೆಗಳನ್ನು ಕದಿಯುವುದು, ಎಸ್‌ಎಂಎಸ್ ಕಳಿಸುವುದು, ಮೊಬೈಲಿನ ಕ್ಯಾಮೆರಾದಿಂದ ಫೋಟೋಗಳನ್ನು ತೆಗೆಯುವುದು, ಮುಂತಾದ ಹಲವು ಚಟುವಟಿಕೆಗಳನ್ನು ಮಾಡತೊಡಗುತ್ತದೆ. ಈ ಎಲ್ಲ ಚಟುವಟಿಕೆಗಳು ಬಳಕೆದಾರರ ಗಮನಕ್ಕೆ ಬರದಂತೆಯೇ ನಡೆಯುತ್ತವೆ.

ಆತಂಕಕಾರಿ ಬೆಳವಣಿಗೆ ಎಂದರೆ ಈ ಕುತಂತ್ರಾಂಶವನ್ನು ನಿರ್ಮಿಸಿದವರು ಅದನ್ನು ಒಂದು MaaS (Malware as a Service) ಆಗಿ ನಡೆಸುತ್ತಿರುವುದು. Malware as a Service ಎಂದರೆ ಒಂದು ನಿಗದಿತ ಮೊತ್ತದ ಹಣವನ್ನು ಪಾವತಿಸುವ ಯಾವುದೇ ವ್ಯಕ್ತಿಗೂ ಈ ತಂತ್ರಾಂಶವನ್ನು ಬಳಸಲು ಇದರ ನಿರ್ಮಾತೃಗಳು ಅನುವು ಮಾಡಿಕೊಡುತ್ತಾರೆ. ಇದರಿಂದಾಗಿ ಸಾಫ್ಟ್‌ವೇರ್‌ಗಳ ಬಗ್ಗೆ ಪರಿಣತಿ ಇಲ್ಲದ ಅಪರಾಧಿಗಳು ಕೂಡ ಈ ತಂತ್ರಾಂಶವನ್ನು ಖರೀದಿಸಿ ಸೈಬರ್ ಅಪರಾಧಗಳನ್ನು ನಡೆಸಲು ಸಾಧ್ಯವಾಗುತ್ತದೆ. ಇದು ಕಡಿಮೆ ವೆಚ್ಚದಲ್ಲಿ ಸುಲಭವಾಗಿ ಹಣವನ್ನು ದೋಚುವ ದಾರಿಯನ್ನು ಅಪರಾಧಿಗಳಿಗೆ ಒದಗಿಸುತ್ತದೆ ಎಂಬುದು ಸೈಬರ್ ತಜ್ಞರ ಕಳವಳಕ್ಕೆ ಕಾರಣವಾಗಿದೆ.

DogeRAT ಮಾಲ್‌ವೇರ್‌ನಿಂದ ರಕ್ಷಿಸಿಕೊಳ್ಳಲು, ಸಾಮಾನ್ಯವಾಗಿ ಪಾಲಿಸುವ ಸೈಬರ್ ಸುರಕ್ಷತೆಯ ಈ ಕೆಲವು ನಿಯಮಗಳನ್ನೇ ಪಾಲಿಸಬಹುದು:

- ಅನಧಿಕೃತ ಮೂಲಗಳಿಂದ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಬೇಡಿ. ಗೂಗಲ್ ಪ್ಲೇ ಸ್ಟೋರ್‌ನಿಂದ ಮಾತ್ರ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿ.
- ಅಪರಿಚಿತ ಅಥವಾ ಅನುಮಾನಾಸ್ಪದ ಮೂಲಗಳಿಂದ ಬಂದ ಲಿಂಕ್‌ಗಳನ್ನು, ಫೈಲ್‌ಗಳನ್ನು ತೆರೆಯಬೇಡಿ.
- ಆ್ಯಪ್‌ಗಳಿಗೆ ಕೊಡುವ ಅನುಮತಿಗಳನ್ನು (app permissions) ಎಚ್ಚರಿಕೆಯಿಂದ ಪರಿಶೀಲಿಸಿ ಮತ್ತು ಅಗತ್ಯವಿರುವ ಅನುಮತಿಗಳನ್ನು ಮಾತ್ರ ನೀಡಿ.
- ಮೊಬೈಲಿನ ಸಾಫ್ಟ್‌ವೇರನ್ನು ಅಪ್ಡೇಟ್ ಮಾಡುತ್ತಿರಿ. ಇದಲ್ಲದೆ, ನೆಟ್ ಬ್ಯಾಂಕಿಂಗ್, UPI ಮುಂತಾದ ವಹಿವಾಟುಗಳಿಗೆಂದೇ ಪ್ರತ್ಯೇಕ ಬ್ಯಾಂಕ್ ಖಾತೆಗಳನ್ನು ಬಳಸುವುದು ಮತ್ತು ಅಂತಹ ಖಾತೆಯಲ್ಲಿ ಅವಶ್ಯಕತೆಗೆ ತಕ್ಕಂತೆ ಕಡಿಮೆ ಮೊತ್ತದ ಹಣವನ್ನು ಇಡುವುದು ಉತ್ತಮ. ಹೀಗೆ ಮಾಡುವುದರಿಂದ, ಅಕಸ್ಮಾತ್ತಾಗಿ ಸೈಬರ್ ಅಪರಾಧಿಗಳು ಖಾತೆಯಲ್ಲಿರುವ ಹಣವನ್ನು ಪಡೆಯಲು ಸಾಧ್ಯವಾದರೂ ಸಣ್ಣ ಮೊತ್ತವನ್ನಷ್ಟೇ ಕಳೆದುಕೊಂಡಂತಾಗುತ್ತದೆ. ಉಳಿತಾಯಕ್ಕೆಂದು ಹೆಚ್ಚಿನ ಮೊತ್ತದ ಹಣ ಇಡುವ ಖಾತೆಯಲ್ಲಿ ನೆಟ್ ಬ್ಯಾಂಕಿಂಗ್ ಮೂಲಕ ವಹಿವಾಟು ನಡೆಸದೆ ಇರುವುದು ಸೂಕ್ತ.

'ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು'

> 'ಇಲ್ಯೂಶನ್ ಡಿಫ್ಯೂಶನ್ ಎಐ' ಎಂಬುದು ಹೊಸ ತಂತ್ರಜ್ಞಾನ. 'ಇಂಥದ್ದಿರುವುದು ಸಾಧ್ಯವೇ ಇಲ್ಲ' ಎಂದು ನಾವಂದುಕೊಂಡಿರುವ, ವಸ್ತುಗಳು ಅಥವಾ ದೃಶ್ಯಗಳಿಂದ ನೈಜವೆಂಬಂತೆ ತೋರುವ ಚಿತ್ರಗಳನ್ನು ರಚಿಸುವ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವಿದು.



ಎಐ ತಂತ್ರಜ್ಞಾನ ಬಳಸಿ ಮಾಡಿದ ನಟ ಯಶ್ ಹೋಲಿಕೆಯ ಚಿತ್ರ

ಅವಿನಾಶ್ ಬಿ.

ಅತ್ಯಾಕರ್ಷಕ ಪ್ರಕೃತಿ, ನೀರಿನ ನಡುವಿನಲ್ಲೊಂದು ದ್ವೀಪ, ದೋಣಿಗಳು, ಹರಿಯುವ ತೊರೆ, ಹಚ್ಚ ಹಸಿರಿನ ಬೆಟ್ಟಗುಡ್ಡಗಳು, ಝರಿ, ಅಲ್ಲೊಂದು ಸುಂದರ ಮನೆ - ಈ ಚಿತ್ರ ಯಾರಿಗಿಷ್ಟವಾಗುವುದಿಲ್ಲ? ಆದರೆ ಇದರಲ್ಲಿ ಇಷ್ಟೇ ಇರುವುದಲ್ಲ. ನಿಮ್ಮ ನೆಚ್ಚಿನ ನಾಯಕನ ಮುಖವೂ ಅಲ್ಲಿ ನಿಮಗೆ ಕಂಡೀತು!

ಇದುವೇ 'ಆಪ್ಟಿಕಲ್ ಇಲ್ಯೂಶನ್' ಅಥವಾ 'ದೃಗ್‌ಭ್ರಾಂತಿ' (ದೃಷ್ಟಿಭ್ರಮೆ). ದೃಷ್ಟಿಗೆ ನೇರವಾಗಿ ಕಾಣುವ ದೃಶ್ಯವೇ ಒಂದು, ಮತ್ತಷ್ಟು ಸೂಕ್ಷ್ಮವಾಗಿ ಗಮನಿಸಿದಾಗ ಅದರಲ್ಲಿ ಕಾಣಿಸುವ ಚಿತ್ರಣವೇ ಇನ್ನೊಂದು. 'ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು' ಅಥವಾ 'ನೋಡಿದ್ದು ಸುಳ್ಳಾಗಬಹುದು' ಎಂಬೆಲ್ಲ ಗಾದೆಮಾತುಗಳು ಇದಕ್ಕೆ ಅನ್ವಯವೇ. ಇನ್ನು, ಅವರವರ ಭಾವಕ್ಕೆ, ಬುದ್ಧಿಶಕ್ತಿಗೆ ತಕ್ಕ ನೋಟ ಎಂಬ ಮಾತು ಕೂಡ ಅನ್ವಯವಾಗಬಲ್ಲದು. ಏಕೆಂದರೆ, 'ನಾನು ನೋಡಿದ್ದೇ ಸರಿ' ಎಂದು ಇಲ್ಲಿ ದರ್ಪ ತೋರುವಂತಿಲ್ಲ. ಒಟ್ಟಾರೆಯಾಗಿ ಇದರರ್ಥ, ಒಂದು ನೋಟಕ್ಕೆ ಹಲವು ಭಾವಗಳಿರಬಹುದು.

ಕಳೆದ ವಾರದಿಂದ ಸಾಮಾಜಿಕ ಜಾಲತಾಣಗಳಲ್ಲಿ ಇಂಥ ಫೋಟೊಗಳದ್ದೇ ಕಾರುಬಾರು. ಸುಂದರ ಪ್ರಕೃತಿಯ ಆಕರ್ಷಕ ಚಿತ್ರಗಳನ್ನು ಸರಿಯಾಗಿ ಗಮನಿಸಿದಾಗ, ಅಲ್ಲೊಬ್ಬ ವ್ಯಕ್ತಿಯ ಮುಖ ಕಾಣಿಸುತ್ತದೆ. ಸಿನಿಮಾ ತಾರೆಯರು, ಕ್ರೀಡಾಪಟುಗಳು, ರಾಜಕೀಯ ಮುಖಂಡರ ಚಿತ್ರಗಳೆಲ್ಲ ಈ ರೀತಿಯಾಗಿ ಅಂತರ್ಜಾಲದಲ್ಲಿ ಹರಿದಾಡುತ್ತಿರುವುದು ನಿಮ್ಮ ಗಮನಕ್ಕೂ ಬಂದಿರಬಹುದು.

ಏನಿದು?

ಇದು ಎಐ ಚಮತ್ಕಾರ. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಎಂಬ ಕ್ರಾಂತಿಕಾರಿ ತಂತ್ರಜ್ಞಾನದ ಫಲವಿದು. ಯಾವಾಗ ಚಾಟ್‌ಜಿಪಿಟಿ ಎಂಬ ಆ್ಯಪ್/ವೆಬ್ ಇಂಟರ್‌ಫೇಸ್ ಜನಸಾಮಾನ್ಯರಿಗೆ ಸುಲಭವಾಗಿ ದೊರೆಯತೊಡಗಿತೋ, ಅಲ್ಲಿ ಸೃಜನಶೀಲ ಸಾಹಿತ್ಯ ಮತ್ತು ಇತರ ಕಂಟೆಂಟ್ ರಚನೆಯೂ ಹೆಚ್ಚಾಗತೊಡಗಿತು. ಪಠ್ಯವಷ್ಟೇ ಅಲ್ಲ, ಧ್ವನಿ ಹಾಗೂ ವೈವಿಧ್ಯಮಯವಾದ ವಿಡಿಯೊಗಳು ಕೂಡ ಸಾಕಷ್ಟು ನಿರ್ಮಾಣಗೊಂಡವು. ನಾವು ನಿರ್ದಿಷ್ಟ ವಿಷಯದ ಕುರಿತು ಒಂದು ಸುದ್ದಿ ಅಥವಾ ಲೇಖನ ಮಾಡಿಕೊಡು ಎಂದು ಎಐ ಎಂಜಿನ್‌ಗೆ ಆದೇಶಿಸಿದರೆ ಕೆಲವೇ ಕ್ಷಣಗಳಲ್ಲಿ ಆ ಕುರಿತ ಸಮಗ್ರ ವರದಿ ಅಥವಾ ಲೇಖನವೊಂದು ಸಿದ್ಧವಾಗುತ್ತದೆ. ಅಥವಾ ವಿಡಿಯೊಗೆ ಬೇಕಾದ ಸ್ಕ್ರಿಪ್ಟ್ ಸಿದ್ಧ. ಅದನ್ನು ಓದುವುದಕ್ಕೆ ಆ್ಯಂಕರ್‌ಗಳನ್ನೂ ನೇಮಿಸಬೇಕಿಲ್ಲ, ನಿರೂಪಕರನ್ನು ಕೂಡ ಆನ್‌ಲೈನ್‌ನಲ್ಲೇ ಸಿದ್ಧಪಡಿಸುವ ವಿಡಿಯೊ ತಂತ್ರಜ್ಞಾನಗಳೀಗ ಉಚಿತವಾಗಿಯೂ ಲಭ್ಯವಾಗತೊಡಗಿವೆ. ಅದಕ್ಕೆ ಹೊಸ ಸೇರ್ಪಡೆ ವಿನ್ಯಾಸಭರಿತ ಚಿತ್ರಗಳು. ಕೆಲವು ವರ್ಷಗಳ ಹಿಂದೆ ದೇವರ ಅಥವಾ ದೃಶ್ಯಗಳ 3ಡಿ ಚಿತ್ರಪಟಗಳನ್ನು ಕೆಲವರಾದರೂ ನೋಡಿರುತ್ತೀರಿ. ಸ್ವಲ್ಪವೇ ಓರೆಯಾಗಿಸಿದರೆ ಅದು ಬೇರೆ ದೇವರ ಚಿತ್ರವನ್ನು ಅಥವಾ ದೃಶ್ಯವನ್ನು ತೋರಿಸುತ್ತಿತ್ತು. ಅದರ ಮುಂದುವರಿದ ರೂಪವೇ ಈ ತಂತ್ರಜ್ಞಾನ.

ಹೊಸ ಟ್ರೆಂಡ್

'ಇಲ್ಯೂಶನ್ ಡಿಫ್ಯೂಶನ್ ಎಐ' (Illusion Diffusion AI) ಎಂಬುದು ಈ ಹೊಸ ತಂತ್ರಜ್ಞಾನದ ಹೆಸರು. ಇದುವರೆಗೆ ಇಂಥದ್ದಿರುವುದು ಸಾಧ್ಯವೇ ಇಲ್ಲ ಎಂದು ನಾವಂದುಕೊಂಡಿರುವ, ವಸ್ತುಗಳು ಅಥವಾ ದೃಶ್ಯಗಳಿಂದ ನೈಜವೆಂಬಂತೆ ತೋರುವ ಚಿತ್ರಗಳನ್ನು ರಚಿಸುವ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವಿದು. ಸುಂದರವಾದ ದೃಶ್ಯವೊಂದು ನಿಧಾನವಾಗಿ ಚದುರುತ್ತಾ ಹೋಗಿ, ಎರಡೂ ಚಿತ್ರಣಗಳನ್ನು ತೋರಿಸುವ ಹಂತದಲ್ಲಿ ಭ್ರಾಮಕ ಚಿತ್ರವೊಂದು ಸೃಷ್ಟಿಯಾಗುತ್ತದೆ. ಇದು ನಿರ್ದಿಷ್ಟವಾದ ಚದುರುವಿಕೆ (ಸ್ಟೇಬಲ್ ಡಿಫ್ಯೂಶನ್) ತಂತ್ರಜ್ಞಾನ.

'ಯಂತ್ರದ ಕಲಿಕೆ' (ಮೆಶಿನ್ ಲರ್ನಿಂಗ್) ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನಗಳ ಸಮ್ಮಿಲನದ ಮತ್ತೊಂದು ಮಗ್ಗುಲು ಇದು. ಒಂದು ಸುಂದರ ಪ್ರಕೃತಿಯ ದೃಶ್ಯವನ್ನು, ಮನುಷ್ಯನ ಮುಖವಾಗಿ ಪರಿವರ್ತಿಸಬಹುದು. ಈಗಾಗಲೇ, 'ಇದು ಪ್ರಕೃತಿಯ ಲೀಲೆ, ನೋಡಿ ನಮ್ಮ ನೆಚ್ಚಿನ ನಟ, ನೇತಾರ ಅಥವಾ ಪೂಜನೀಯ ವ್ಯಕ್ತಿಯ ಚಿತ್ರವು ಪ್ರಕೃತಿಯಲ್ಲೇ ಮೂಡಿದೆ' ಎಂದೆಲ್ಲ ಈಗಾಗಲೇ ಜನರು ಸಾಮಾಜಿಕ ಜಾಲತಾಣಗಳಲ್ಲಿ ಬಿಂಬಿಸಲು ಆರಂಭಿಸಿದ್ದಾರೆ. ತಂತ್ರಜ್ಞಾನದ ಅರಿವಿದ್ದವರು, ಈ ರೀತಿಯ ತಂತ್ರಜ್ಞಾನವೂ ಬಂತೇ? ಇನ್ನೂ ಏನೆಲ್ಲಾ ಇದೆಯೋ ಅಂತ ಕುತೂಹಲಿಗಳಾದರೆ, ಅರಿವಿಲ್ಲದವರು 'ಓಹ್' ಎನ್ನುತ್ತಾ ಇದನ್ನೇ ನಂಬಿ ಫಾರ್ವರ್ಡ್/ಶೇರ್ ಮಾಡುತ್ತಾರೆ.



ಎಐ ತಂತ್ರಜ್ಞಾನ ಬಳಸಿ ರೂಪಿಸಿದ ಪ್ರಧಾನಿ ನರೇಂದ್ರ ಮೋದಿ ಹೋಲಿಕೆಯ ಚಿತ್ರ

ಚಿಂತನೆಗೆ ಹೊಸ ಹಾದಿ

ಈ ತಂತ್ರಜ್ಞಾನ ಮತ್ತಷ್ಟು ಅಭಿವೃದ್ಧಿಯಾಗುತ್ತಿದ್ದು, ದೃಶ್ಯ ಮಾಧ್ಯಮದಲ್ಲಿ ಅಸಾಧ್ಯವಾದುದನ್ನೆಲ್ಲ ಸಾಧ್ಯವಾಗಿಸುವ ಅಪಾರ ಸಾಮರ್ಥ್ಯವನ್ನು ಹೊಂದಿದೆ. ನಿಜಜೀವನದಲ್ಲಿ ಯಾವೆಲ್ಲ ಕಸರತ್ತು ಮಾಡಿದರೂ ಒಳ್ಳೆಯ ಕೋನದ ಛಾಯಾಚಿತ್ರ ತೆಗೆಯುವುದು ಸಾಧ್ಯವಿಲ್ಲ ಎಂದು ಕೈಬಿಟ್ಟ ಸನ್ನಿವೇಶಗಳನ್ನೆಲ್ಲಾ, ಈ ಇಲ್ಯೂಶನ್ ಡಿಫ್ಯೂಶನ್ ಎಐ ತಂತ್ರಜ್ಞಾನದಿಂದ ಸಾಧ್ಯವಾಗಿಸಿ, ಫೋಟೋಗ್ರಫಿ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಸೃಷ್ಟಿಸಬಲ್ಲುದು. ಈಗಾಗಲೇ ಸರ್ವೇಸಾಮಾನ್ಯವಾಗಿ ತಿರುಚಿದ, ತಿದ್ದುಪಡಿ ಮಾಡಿದ ಚಿತ್ರಗಳನ್ನೇ ನೋಡುತ್ತಾ, ಅದನ್ನೇ ನಿಜವೆಂದು ನಂಬಿ ಸೋಷಿಯಲ್ ಮೀಡಿಯಾಗಳಲ್ಲಿ ಫಾರ್ವರ್ಡ್ ಮಾಡುತ್ತಿದ್ದವರಿಗೆ ಇನ್ನು, ಆಶ್ಚರ್ಯಪಡಲು, ಕುತೂಹಲ ಹೆಚ್ಚಿಸಲು ಮತ್ತೊಂದು ಟೂಲ್ ಸಿಕ್ಕಂತಾಗಿದೆ.

huggingface.co, fal.ai ಮುಂತಾದ ಜಾಲತಾಣಗಳಲ್ಲಿ ನಾವೇ ಇದನ್ನು ಉಚಿತವಾಗಿ ನಿರ್ಮಿಸಿಕೊಳ್ಳಬಹುದು. ಇದಕ್ಕೆ ಯಾವುದೇ ತಾಂತ್ರಿಕ ನೈಪುಣ್ಯ ಬೇಕಿಲ್ಲ. ಸ್ವಲ್ಪ ಓದಿಕೊಂಡು ಮುಂದುವರಿದರಾಯಿತು.

ಹಾಂ! ಒಂದನ್ನು ಗಮನಿಸಬೇಕೀಗ. ಇದು ಟ್ರೆಂಡ್ ಆಗಿರುವುದರಿಂದ ಸುಲಭವಾಗಿ ಎಐ ಆರ್ಟ್ ಸಿದ್ಧಪಡಿಸಿಕೊಳ್ಳಿ ಎಂಬರ್ಥದ ಸಂದೇಶಗಳಿರುವ ಸ್ಪ್ಯಾಮ್ ಅಥವಾ ಮಾಲ್‌ವೇರ್‌ಗಳಿರುವ ಲಿಂಕ್‌ಗಳು ಕೂಡ ನಿಮಗೆ ಸೋಷಿಯಲ್ ಮೀಡಿಯಾ, ಇಮೇಲ್ ಮೂಲಕ ಬರಬಹುದು. ಎಚ್ಚರ ವಹಿಸುವುದು ಅಗತ್ಯ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಲೋಹಗಳು ಮತ್ತು ಅಲೋಹಗಳು

13) ಲೋಹಗಳ ರಾಸಾಯನಿಕ ಗುಣಗಳನ್ನು ಬರೆಯಿರಿ

ಉತ್ತರ:- (.......ಹಿಂದಿನ ಸಂಚಿಕೆಯಿಂದ)

4) ಪೊಟ್ಯಾಸಿಯಂ ಮತ್ತು ಸೋಡಿಯಂನಂಥ ಲೋಹಗಳು ಅತ್ಯಂತ ರಭಸವಾಗಿ ತಣ್ಣೀರಿನ ಜೊತೆ ಪ್ರತಿವರ್ತಿಸುತ್ತವೆ. ಸೋಡಿಯಂ ಮತ್ತು ಪೊಟ್ಯಾಸಿಯಂಗಳ ಪ್ರಕರಣದಲ್ಲಿ ಪ್ರತಿವರ್ತನೆಯು ಎಷ್ಟೊಂದು ತೀವ್ರ ಮತ್ತು ಬಹಿರುಷ್ಣಕವಾಗಿರುತ್ತದೆಂದರೆ ಬಿಡುಗಡೆಯಾದ ಹೈಡ್ರೋಜನ್ ಅನಿಲವು ತಕ್ಷಣವೇ ಹೊತ್ತಿಕೊಂಡು ಉರಿಯುತ್ತವೆ.

5) ನೀರಿನೊಂದಿಗೆ ಕ್ಯಾಲ್ಸಿಯಂನ ಪ್ರತಿವರ್ತನೆಯ ತೀವ್ರತೆ ಕಡಿಮೆ. ಬಿಡುಗಡೆಯಾಗುವ ಉಷ್ಣವು ಹೈಡ್ರೋಜನ್ ಹೊತ್ತಿಕೊಳ್ಳಲು ಸಾಕಾಗುವುದಿಲ್ಲ.

6) ತಣ್ಣೀರಿನೊಂದಿಗೆ ಮೆಗ್ನೀಸಿಯಂ ಪ್ರತಿವರ್ತಿಸುವುದಿಲ್ಲ. ಬಿಸಿ ನೀರಿನೊಂದಿಗೆ ಪ್ರತಿವರ್ತಿಸಿ ಮೆಗ್ನೀಸಿಯಂ ಹೈಡ್ರಾಕ್ಸೈಡ್ ಮತ್ತು ಹೈಡ್ರೋಜನ್ ಬಿಡುಗಡೆ ಮಾಡುತ್ತದೆ. ಹೈಡ್ರೋಜನ್ ಅನಿಲದ ಗುಳ್ಳೆಗಳು ಲೋಹದ ಮೇಲ್ಮೈಗೆ ಅಂಟಿಕೊಳ್ಳುವ ಕಾರಣ ಇದೂ ಕೂಡ ನೀರಿನ ಮೇಲೆ ತೇಲಲು ಪ್ರಾರಂಭಿಸುತ್ತದೆ.

ಅಲ್ಯುಮಿನಿಯಂ, ಕಬ್ಬಿಣ, ಮತ್ತು ಸತುವಿನಂಥ ಲೋಹಗಳು ತಣ್ಣನೆಯ ಅಥವಾ ಬಿಸಿ ನೀರಿನ ಜೊತೆ ಪ್ರತಿವರ್ತಿಸುವುದಿಲ್ಲ ಆದರೆ ಹಬೆಯ ಜೊತೆ ಪ್ರತಿವರ್ತಿಸಿ ಲೋಹದ ಆಕ್ಸೈಡ್ ಮತ್ತು ಹೈಡ್ರೋಜನ್‌ಗಳನ್ನು ಉಂಟುಮಾಡುತ್ತವೆ.

7) ಲೋಹಗಳು ಆಮ್ಲಗಳ ಜೊತೆ ಪ್ರತಿವರ್ತಿಸಿ ಲವಣ ಮತ್ತು ಹೈಡ್ರೋಜನ್ ಅನಿಲ ಉಂಟುಮಾಡುತ್ತವೆ

8) ರಾಸಾಯನಿಕವಾಗಿ ಕ್ರಿಯಾಪಟುತ್ವ ಹೊಂದಿದ ಧಾತುಗಳು ತಮಗಿಂತ ಕಡಿಮೆ ಕ್ರಿಯಾಪಟುತ್ವ ಹೊಂದಿದ ಧಾತುಗಳನ್ನು ಅವುಗಳ ದ್ರಾವಣ ಅಥವಾ ದ್ರವಿಸಿದ ಸಂಯುಕ್ತದಿಂದ ಸ್ಥಳಾಂತರಿಸುತ್ತವೆ.

14) ಅಯಾನಿಕ ಸಂಯುಕ್ತಗಳ ಗುಣಲಕ್ಷಣಗಳನ್ನು ಬರೆಯಿರಿ

ಉತ್ತರ:- ಅಯಾನಿಕ ಸಂಯುಕ್ತಗಳ ಸಾಮಾನ್ಯ ಗುಣಲಕ್ಷಣಗಳು ಹೀಗಿವೆ

(i) **ಭೌತ ಸ್ಥಿತಿ :** ಅಯಾನಿಕ ಸಂಯುಕ್ತಗಳು ಘನವಸ್ತುಗಳಾಗಿದ್ದು, ಧನ ಮತ್ತು ಋಣ ಅಯಾನುಗಳ ನಡುವೆ ಇರುವ ಪ್ರಬಲ ಆಕರ್ಷಣ ಬಲದಿಂದಾಗಿ ಸ್ವಲ್ಪ ಮಟ್ಟಿಗೆ ಕಠಿಣವಾಗಿರುತ್ತವೆ. ಈ ಸಂಯುಕ್ತಗಳು ಸಾಮಾನ್ಯವಾಗಿ ಬಿಧುರವಾಗಿದ್ದು ಒತ್ತಡವನ್ನು ಹಾಕಿದಾಗ ಪುಡಿಯಾಗುತ್ತವೆ.

(ii) **ಕರಗುವ ಮತ್ತು ಕುದಿಬಿಂದುಗಳು :** ಅಯಾನಿಕ ಸಂಯುಕ್ತಗಳು ಹೆಚ್ಚಿನ ಕರಗುವ ಬಿಂದು ಮತ್ತು ಕುದಿಬಿಂದುಗಳನ್ನು ಹೊಂದಿವೆ. ಏಕೆಂದರೆ ಅಣುಗಳ ನಡುವಿನ ಪ್ರಬಲ ಅಯಾನಿಕ್ ಬಂಧವನ್ನು ಒಡೆಯಲು ಹೆಚ್ಚಿನ ಶಕ್ತಿ ಬೇಕಾಗುತ್ತದೆ.

(iii) **ವಿಲೀನತೆ :** ಅಯಾನಿಕ ಸಂಯುಕ್ತಗಳು ಸಾಮಾನ್ಯವಾಗಿ ನೀರಿನಲ್ಲಿ ವಿಲೀನವಾಗುತ್ತವೆ. ಮತ್ತು ಸಾವಯವ ದ್ರಾವಕಗಳಾದ ಸೀಮೆಎಣ್ಣೆ, ಪೆಟ್ರೋಲ್ ಇತ್ಯಾದಿಗಳಲ್ಲಿ ವಿಲೀನಗೊಳ್ಳುವುದಿಲ್ಲ.

(iv) **ವಿದ್ಯುದ್ವಾಹಕತೆ :** ಒಂದು ದ್ರಾವಣದ ಮೂಲಕ ವಿದ್ಯುತ್ತಿನ ಹರಿಯುವಿಕೆಯು ವಿದ್ಯುದಂಶಪೂರಿತ ಕಣಗಳ ಚಲನೆಯನ್ನು ಒಳಗೊಂಡಿದೆ. ಅಯಾನಿಕ ಸಂಯುಕ್ತದ ಜಲೀಯ ದ್ರಾವಣವು ಅಯಾನುಗಳನ್ನು ಹೊಂದಿದ್ದು ದ್ರಾವಣದ ಮೂಲಕ ವಿದ್ಯುತ್ ಹಾಯಿಸಿದಾಗ ಅವು, ವಿರುದ್ಧ ವಿದ್ಯುದ್ವಾರಗಳ ಕಡೆ ಚಲಿಸುತ್ತವೆ. ಘನಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುವುದಿಲ್ಲ ಏಕೆಂದರೆ, ಘನವಸ್ತುಗಳ ಕಠಿಣ ರಚನೆಯಿಂದಾಗಿ ಅಯಾನುಗಳ ಚಲನೆ ಸಾಧ್ಯವಿಲ್ಲ. ಆದರೆ ದ್ರವಿಸಿದ ಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುತ್ತವೆ. ಇದು ದ್ರವಿಸಿದ ಸ್ಥಿತಿಯಲ್ಲಿ ಸಾಧ್ಯವಾಗಲು ಕಾರಣವೇನೆಂದರೆ ವಿದ್ಯುದಂಶಪೂರಿತ, ವಿರುದ್ಧ ಅಯಾನುಗಳ ನಡುವಣ ವಿದ್ಯುದಾಕರ್ಷಣ ಬಲಗಳು ಉಷ್ಣತೆಗೆ ಒಡೆಯುತ್ತವೆ. ಹಾಗಾಗಿ ಅಯಾನುಗಳು ಸ್ವತಂತ್ರವಾಗಿ ಚಲಿಸುತ್ತವೆ ಮತ್ತು ವಿದ್ಯುತ್‌ಅನ್ನು ಹರಿಯಲು ಬಿಡುತ್ತವೆ.

15) ಯಾವುದನ್ನು ಖನಿಜ ಎನ್ನುವರು?

ಉತ್ತರ:- ಭೂತೊಗಟೆಯಲ್ಲಿ ನೈಸರ್ಗಿಕವಾಗಿ ದೊರೆಯುವ ಧಾತು ಅಥವಾ ಸಂಯುಕ್ತಗಳನ್ನು ಖನಿಜಗಳು ಎನ್ನುವರು

16) ಯಾವುದನ್ನು ಅದುರು ಎನ್ನುವರು?

ಉತ್ತರ:- ಕೆಲವು ಸ್ಥಳಗಳಲ್ಲಿನ ಖನಿಜಗಳು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ನಿರ್ದಿಷ್ಟ ಲೋಹವನ್ನು ಹೊಂದಿರುತ್ತವೆ ಮತ್ತು ಇವುಗಳಿಂದ ಅದನ್ನು ಲಾಭದಾಯಕವಾಗಿ ಹೊರತೆಗೆಯಬಹುದು. ಈ ಖನಿಜಗಳನ್ನು ಅದುರುಗಳು ಎನ್ನುವರು.

17) ಯಾವೆಲ್ಲಾ ಲೋಹಗಳು ಮುಕ್ತ ರೂಪದಲ್ಲಿ ದೊರೆಯುತ್ತವೆ?

ಉತ್ತರ:- ಚಿನ್ನ, ಬೆಳ್ಳಿ, ಪ್ಲಾಟಿನಂ ಮತ್ತು ತಾಮ್ರಗಳು ಮುಕ್ತ ಸ್ಥಿತಿಯಲ್ಲಿ ದೊರೆಯುತ್ತವೆ.

18) ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಎಷ್ಟು ಗುಂಪುಗಳನ್ನಾಗಿ ವಿಂಗಡಿಸಬಹುದು? ಯಾವುವು?

ಉತ್ತರ:- ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು. (i) ಕಡಿಮೆ ಕ್ರಿಯಾಪಟುತ್ವ ಹೊಂದಿರುವ ಲೋಹಗಳು (ii) ಮಧ್ಯಮ ಕ್ರಿಯಾಪಟುತ್ವ ಹೊಂದಿರುವ ಲೋಹಗಳು ಮತ್ತು (iii) ಹೆಚ್ಚಿನ ಕ್ರಿಯಾಪಟುತ್ವ ಹೊಂದಿರುವ ಲೋಹಗಳು.

ಪ್ರತಿಯೊಂದು ಗುಂಪಿನ ಲೋಹಗಳನ್ನು ವಿಭಿನ್ನ ತಂತ್ರಗಳನ್ನು ಬಳಸಿ ಪಡೆಯಲಾಗುತ್ತದೆ.

19) ಯಾವುದನ್ನು ಮಡ್ಡಿ ಎನ್ನುವರು?

ಉತ್ತರ:- ಸಾಮಾನ್ಯವಾಗಿ ಭೂಮಿಯಿಂದ ಗಣಿಗಾರಿಕೆ ಮಾಡಿದ ಅದುರುಗಳು ಮಣ್ಣು, ಮರಳು ಇತ್ಯಾದಿಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಕಲುಷಿತಗೊಂಡಿರುತ್ತವೆ. ಇದನ್ನು ಮಡ್ಡಿ ಎನ್ನುವರು.

20) ಕ್ರಿಯಾಶೀಲ ಸರಣಿಯಲ್ಲಿ ಕೆಳಗಿರುವ ಲೋಹಗಳನ್ನು ಹೇಗೆ ಅಪಕರ್ಷಿಸಬಹುದು?

ಉತ್ತರ:- ಕ್ರಿಯಾಶೀಲ ಸರಣಿಯಲ್ಲಿ ಕೆಳಗಿರುವ ಲೋಹಗಳು ಅತಿ ಕಡಿಮೆ ಕ್ರಿಯಾಶೀಲತೆ ಹೊಂದಿರುವುದರಿಂದ ಲೋಹದ ಆಕ್ಸೈಡ್‌ಗಳನ್ನು ಕಾಸುವುದರಿಂದ ಮಾತ್ರ ಲೋಹಗಳನ್ನು ಅಪಕರ್ಷಿಸಬಹುದು.

ನೆನಪಿಡಿ: ಕ್ರಿಯಾಶೀಲ ಸರಣಿಯ ಮೇಲ್ಭಾಗದಲ್ಲಿರುವ ಲೋಹಗಳು (K,Na, Ca, Mg ಮತ್ತು Al) ಹೆಚ್ಚು ಕ್ರಿಯಾಪಟುತ್ವ ಹೊಂದಿರುವುದರಿಂದ ನಿಸರ್ಗದಲ್ಲಿ ಮುಕ್ತ ಧಾತುಗಳಾಗಿ ದೊರೆಯುವುದಿಲ್ಲ. ಕ್ರಿಯಾಶೀಲ ಸರಣಿಯ ಮಧ್ಯಭಾಗದಲ್ಲಿರುವ ಲೋಹಗಳು (Zn, Fe, Pb ಇತ್ಯಾದಿ) ಮಧ್ಯಮ ಕ್ರಿಯಾಪಟುತ್ವ ಹೊಂದಿವೆ. ಅವು ಭೂ ತೊಗಟೆಯಲ್ಲಿ ಆಕ್ಸೈಡ್‌ಗಳು, ಸಲ್ಫೈಡ್‌ಗಳು ಅಥವಾ ಕಾರ್ಬೋನೇಟ್‌ಗಳ ರೂಪದಲ್ಲಿ ದೊರೆಯುತ್ತವೆ.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

Types of Solutions

Problems:-

1. Calculate the molality of a solution containing 5.3 g of anhydrous NaCO in 200 g of water?

Ans:-

$$\text{Molality (m)} = \frac{\left(\frac{\text{Mass of solute in grams}}{\text{molar mass}}\right)}{\left(\frac{\text{Mass of solvent in grams}}{1000}\right)}$$

$$\therefore \text{Molality (m)} = \frac{5.3\text{g}/106\,\text{g mol}}{200\,\text{g}/1000} = \frac{(0.05\,\text{mol})}{(0.2\,\text{kg})} = 0.25\,\text{mol}/\text{kg}\,(\text{or})\,0.25\,\text{m}$$

2. Calculate the molarity of the solution containing 4.9 grams of HSO dissolved in 250 mL of the solution?

Ans:-

$$\text{Molarity (M)} = \frac{\left(\frac{\text{Mass of solute in grams}}{\text{molar mass}}\right)}{\left(\frac{\text{Volume of solution in mL}}{1000}\right)} = \frac{4.9\text{g}/98\,\text{g mol}^{-1}}{250\,\text{mL}/1000} = \frac{(0.05\text{ mol})}{(0.25\text{ L})} = 0.2\text{ mol L}^{-1}\,(\text{or})\;0.2\,\text{M}$$

3. Calculate the normality of a solution containing 0.74 g of $Ca(OH)_2$ dissolved in 200 mL of the solution?

Ans:-

$$\text{Normality (N)} = \frac{\text{Gram equivalents of the solute}}{\text{Volume of solution in litres}}$$

$$\text{Equivalent mass of } Ca(OH)_2 = \frac{\text{Molar mass}}{\text{Acidity}} = \frac{74}{2} = 37\,\text{g equiv}^{-1}$$

$$\therefore \text{Normality of solution (N)} = \frac{0.74\text{g}/37\,\text{g equiv}^{-1}}{200\text{mL}/1000} = 0.1\text{ equiv}/\text{L}\,(\text{or})\,0.1\,\text{N}$$

4. The density of 10% by mass of KCl solution is 1.06 g cm^{-3}. Calculate the molarity of the solution.

Ans:- ***I. Calculation of volume of the solution:***

Mass of the solution = 100 g

Density of the solution = 1.06 g cm^{-3}

$$\text{Volume of solution} = \frac{\text{Mass of solution}}{\text{Density}} = \frac{100\,\text{g}}{1.06\,\text{g cm}^{-3}} = 94.34\,\text{cm}^3$$

II. Calculation of molarity of the solution:

$$\text{Molarity of solution (M)} = \frac{\left(\frac{\text{Mass of KCl}}{\text{Molar mass of KCl}}\right)}{\text{Volume of solution in dm}^3}$$

Mass of the KCl = 10 g

Molar mass of KCl = 39 + 35.5 = 74.5 g mol^{-1}

Volume of the solution = 94.34 cm^3 = 0.0943 dm^3

$$\text{Molarity (M)} = \frac{10\text{g}/(74.5\,\text{g mol}^{-1})}{0.0943\,\text{dm}^3} = 1.42\text{ mol dm}^{-3} = 1.42\,\text{M}$$

5. 3.6 M sulphuric acid solution is 29% H_2SO_4. Calculate the density of the solution.

Soln:- ***I. Calculation of mass of the solution:***

Mass of H_2SO_4 in 3.6 M solution

= (3.6 mol) x (98 g mol^{-1})

= 352.8 g

29% H_2SO_4 means,

29 g of H_2SO_4 are present in solution = 100 g

∴ 352.8 g of H_2SO_4 are present in solution

$$= \frac{100\,\text{g}}{29\,\text{g}}(352.8\,\text{g}) = 1216.5\,\text{g}$$

II. Calculation of the density of the solution:

$$\text{Density of the solution} = \frac{\text{Mass of solution}}{\text{Volume of solution}} = \frac{1216.5\,\text{g}}{1000\,\text{mL}} = 1.22\,\text{g mL}^{-1}$$

6. The solubility of $Ba(OH)_2 . 8H_2O$ in water at 298 K is 5.6 g per 100 g of water. What is the molality of the hydroxide ions in a saturated solution of barium hydroxide at 298 K? (Atomic mass of Ba = 137, O = 16)

Soln:- ***I. Calculation of molality of the solution:***

$$\text{Molality of solution (m)} = \frac{\left(\frac{\text{Mass of solute}}{\text{Molar mass of solute}}\right)}{\text{Mass of solvent in kg}}$$

Mass of solute, $Ba(OH)_2 . 8H_2O$ = 5.6 g

Molar mass of solute, $Ba(OH)_2 . 8H_2O$

= 137 + 2 x (16 + 1) + 8 x 18 = 315 g mol^{-1}

Mass of the solvent (water) = 100 g = 0.1 kg

$$\text{Molality (m)} = \frac{5.6\text{g}/(315\,\text{g mol}^{-1})}{0.1\text{ kg}} = 0.18\text{ mol kg}^{-1} = 0.18\,\text{m}$$

II. Calculation of molality of the OH^- ions:

Barium hydroxide ionises in water as follows –

$$Ba(OH)_2 \xrightarrow{(aq)} Ba^{2+}\,(aq) + 2OH^-\,(aq)$$

This shows that the molality of OH^- ions is twice the molaltiy of $Ba(OH)_2$ = 2 x 0.18 m = 0.36 m

7. A solution has been prepared by dissolving 0.49 g of sulphuric acid in 100 mL of the solution. Calculate normality of the solution.

Soln:- Normality of solution (N)

$$= \frac{\text{No. of gram equivalents of } H_2SO_4}{\text{Volume of solution in litres}}$$

Mass of H_2SO_4 = 0.49 g

Equivalent Mass of H_2SO_4 =

$$= \frac{\text{Molar mass}}{\text{Basicity}} = \frac{98.0}{2} = 49.0\text{ g equiv}^{-1}$$

Volume of the solution = 100 mL

$$= \frac{100}{1000} = 0.1\text{ L}$$

$$\text{Normality of solution (N)} = \frac{\left(\frac{\text{Mass of } H_2SO_4}{\text{Eq. mass of } H_2SO_4}\right)}{\text{Volume of solution in litres}} = \frac{0.49\,\text{g}/49\,\text{g equiv}^{-1}}{0.1\text{L}} = 0.1\,\text{equiv.L}^{-1} = 0.1\,\text{N}$$

5. Calculate the number of molecules of oxalic acid ($H_2C_2O_4 . 2H_2O$) in 100 mL of 0.2 N oxalic acid solution.

Soln:- ***I. Calculation of mass of the oxalic acid:***

$$\text{Normality of solution} = \frac{\left(\frac{\text{Mass of Oxalic acid}}{\text{Equivalent mass}}\right)}{\text{Volume of solution in litres}} = 0.2\,\text{N} = 0.2\text{ equiv.L}^{-1}$$

Equivalent mass of the acid = Molar mass / Basicity

(Contd......)

ಪರೀಕ್ಷಾ ಆತಂಕ?



ಎಲ್ಲ ಓದಿದ್ದರೂ ಕೆಲವೊಮ್ಮೆ ಪರೀಕ್ಷೆ ಎಂದೊಡನೆ ಭಯವಾಗುತ್ತದೆ. ಪರೀಕ್ಷಾ ಕೇಂದ್ರಕ್ಕೆ ಹೋದಾಗ ಎಲ್ಲ ಮರೆತಂತೆ ಆಗುತ್ತದೆ. ಪೂರ್ಣ ತಯಾರಿ ಇಲ್ಲದಿದ್ದಲ್ಲಿ, ಆತ್ಮವಿಶ್ವಾಸದ ಕೊರತೆ ಇದ್ದಲ್ಲಿ ಇಂಥ ಸಮಸ್ಯೆಯನ್ನು ಎದುರಿಸುತ್ತಾರೆ. ಇದಕ್ಕೆ ಪರೀಕ್ಷಾ ಆತಂಕ ಎನ್ನುತ್ತಾರೆ. ನಿಮ್ಮಲ್ಲಿಯೂ ಈ ಲಕ್ಷಣಗಳಿವೆಯೇ?

ಆತಂಕವಾಗುತ್ತಿದೆಯೇ?

- ಪರೀಕ್ಷೆ ಎಂದೊಡನೆ ಮೈ ಬೆವರುವುದು
- ಅಂಗೈ ಬೆವರುವುದು
- ತೊಡೆಗಳಲ್ಲಿ ನಡುಕ ಉಂಟಾಗುವುದು
- ಬಾಯಾರಿಕೆ ಆಗುವುದು
- ತುಟಿ ಒಣಗಿದಂತಾಗುವುದು
- ಓದಿರುವುದು ಮರೆತಂತಾಗುವುದು

ಹೀಗೆಲ್ಲ ಆಗುತ್ತಿದ್ದರೆ ಪಾಲಕರ ಬಳಿ, ಶಿಕ್ಷಕರ ಬಳಿ ಚರ್ಚಿಸಿ. ನಿಮ್ಮ ಸಮಸ್ಯೆಯನ್ನು ಹೇಳಿಕೊಳ್ಳಿ. ಇಂಥ ಸಮಸ್ಯೆಗೆ ಸಮಾಲೋಚನೆ ಮತ್ತು ಆತ್ಮಸ್ಥೈರ್ಯವೇ ಚಿಕಿತ್ಸೆಯಾಗಿದೆ. ಒಳಗೊಳಗೇ ಆತಂಕ ಪಟ್ಟರೆ ಮುಖ್ಯ ಪರೀಕ್ಷೆ ಬಂದಾಗ ಆ ಆತಂಕ ಇನ್ನೂ ಹೆಚ್ಚುತ್ತದೆ.

ಪರೀಕ್ಷಾ ಆತಂಕದಿಂದ ಹೊರ ಬರಲು, ಇದೇ ಸೂಕ್ತ ಸಮಯವಾಗಿದೆ.

- ಈ ಹಿಂದಿನ ಪ್ರಶ್ನೆಪತ್ರಿಕೆಗಳಿಗೆ ನಿಗದಿತ ಸಮಯದಲ್ಲಿ ಉತ್ತರಿಸಲು ಪ್ರಯತ್ನಿಸಿ.
- ಪ್ರತಿದಿನ ಸಾಕಷ್ಟು ನೀರು ಕುಡಿಯಿರಿ.
- ಒಂದರ್ಧ ಗಂಟೆಯಾದರೂ ವಾಕ್, ಯೋಗ ಮಾಡಿ.
- ಸಮಾಧಾನದಿಂದಿರಲು ಯೋಜಿತ ಅಭ್ಯಾಸ ಮಾಡಿ.
- ಪರೀಕ್ಷಾ ಕೇಂದ್ರದಲ್ಲಿ ಸುದೀರ್ಘವಾಗಿ ಉಸಿರಾಡಿ.
- ನಿಗದಿತ ಸಮಯದಲ್ಲಿ ಅಭ್ಯಾಸ ಮಾಡಿ ಹೆಚ್ಚು ಹೆಚ್ಚು ಬರೆಯುವುದನ್ನು ರೂಢಿಸಿಕೊಳ್ಳಿ
- ಪ್ರತಿದಿನವೂ ಓದಿರುವುದನ್ನು ಸ್ನೇಹಿತರ ಜೊತೆ, ಗುರುಗಳ ಜೊತೆಗೆ ಚರ್ಚಿಸಿ ಕ್ರಮೇಣ ಪರೀಕ್ಷೆಯ ಕುರಿತ ಭಯ ಕಡಿಮೆಯಾಗುತ್ತ ಹೋಗುವುದು.

'ಟುಪಲೇವ್' ಬಿಡಿಭಾಗ ಕಾರವಾರಕ್ಕೆ

ಕಡಲತೀರದಲ್ಲಿ ಸ್ಥಾಪನೆಗೊಳ್ಳಲಿದೆ ಯುದ್ಧ ವಿಮಾನದ ವಸ್ತು ಸಂಗ್ರಹಾಲಯ

• ಗಣಪತಿ ಹೆಗಡೆ

ಕಾರವಾರ: ಭಾರತೀಯ ನೌಕಾದಳದ ವಿಶ್ರಾಂತ ಯುದ್ಧ ವಿಮಾನ ಟುಪಲೇವ್ (ಟಿಯು–142) ಬಿಡಿಭಾಗ ಮಂಗಳವಾರ ಕಾರವಾರಕ್ಕೆ ತಲುಪಿದೆ. ತಮಿಳುನಾಡಿನ ಅರಕ್ಕೋಣಮ್‌ನಲ್ಲಿರುವ ಐಎನ್ಎಸ್ ರಾಜಾಲಿಯಿಂದ ಬಿಡಿ ಸ್ಥಿತಿಯಲ್ಲಿ 9 ಟ್ರಕ್‌ಗಳಲ್ಲಿ ಅವುಗಳನ್ನು ತರಲಾಯಿತು. ಒಟ್ಟು 5 ದಿನ ಬೇಕಾಯಿತು.

ಭಾರತೀಯ ನೌಕಾದಳವು ಸುಮಾರು ನಾಲ್ಕು ಟನ್ ತೂಕದ, 50 ಮೀಟರ್ ಉದ್ದದ ಟುಪಲೇವ್ ಯುದ್ಧ ವಿಮಾನವನ್ನು ಬಿಡಿಭಾಗಗಳನ್ನಾಗಿಸಲು ತಿಂಗಳ ಹಿಂದಿನಿಂದ ಕೆಲಸ ಆರಂಭಿಸಿತ್ತು. ಇಲ್ಲಿನ ಟ್ಯಾಗೋರ್ ಕಡಲತೀರದಲ್ಲಿರುವ ಐಎನ್ಎಸ್ ಚಾಪೆಲ್ ಯುದ್ಧನೌಕೆ ವಸ್ತು ಸಂಗ್ರಹಾಲಯದ ಬಳಿ ಯುದ್ಧ ವಿಮಾನ ವಸ್ತು ಸಂಗ್ರಹಾಲಯ ಅಸ್ತಿತ್ವಕ್ಕೆ ಬರಲಿದ್ದು, ಈ ಯುದ್ಧ ವಿಮಾನವನ್ನು ಇಲ್ಲಿ ತರಲಾಗಿದೆ.

'ರಷ್ಯಾ ನಿರ್ಮಿತ ಟುಪಲೇವ್–142 ಯುದ್ಧ ವಿಮಾನ 1988ರಲ್ಲಿ ಭಾರತೀಯ ನೌಕಾದಳಕ್ಕೆ ಸೇರ್ಪಡೆಯಾಯಿತು. 2017ರಲ್ಲಿ ಸೇವಾ ಅವಧಿ ಪೂರ್ಣವಾದ ಬಳಿಕ ಅದನ್ನು ರಾಜಾಲಿಯ ನೌಕಾನೆಲೆಯಲ್ಲಿ ಇರಿಸಲಾಗಿತ್ತು. ಇದೇ ಮಾದರಿಯ ಒಂದು ಯುದ್ಧ ವಿಮಾನವನ್ನು ವಿಶಾಖಪಟ್ಟಣದ ವಸ್ತು ಸಂಗ್ರಹಾಲಯದಲ್ಲಿಡಲಾಗಿದೆ.

ಇಲ್ಲಿ ತರಲಾದ ವಿಮಾನ ಅದಕ್ಕಿಂತ ಗಾತ್ರದಲ್ಲಿ ದೊಡ್ಡದಿದೆ. ಅದರ ಸಾಗಣೆ, ಜೋಡಣೆಗೆ ₹4 ಕೋಟಿಗೂ ಹೆಚ್ಚು ವೆಚ್ಚವಾಗಿದ್ದು, ನೌಕಾದಳ ಅದನ್ನು ಭರಿಸಲಿದೆ' ಎಂದು ನೌಕಾದಳದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಟುಪಲೇವ್ ಯುದ್ಧ ವಿಮಾನ ವಸ್ತು ಸಂಗ್ರಹಾಲಯ ಸ್ಥಾಪನೆಗೆ ನಾಲ್ಕು ವರ್ಷಗಳಿಂದ ಪ್ರಯತ್ನ ನಡೆದಿದೆ. 2020ರಲ್ಲಿ ಜಿಲ್ಲಾಡಳಿತ ನೌಕಾದಳದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಅದರಂತೆ ವಿಮಾನದ ಸಾಗಣೆ, ಜೋಡಣೆಗೆ ನೌಕಾದಳ ಒಪ್ಪಿಗೆ ನೀಡಿತ್ತು. ಅದರ ಜೋಡಣೆ ಪೂರ್ಣಗೊಂಡ ಬಳಿಕ ವಸ್ತು ಸಂಗ್ರಹಾಲಯವಾಗಿ ಮಾರ್ಪಡಿಸಿ, ಅದರ ನಿರ್ವಹಣೆ ಜವಾಬ್ದಾರಿ ಪ್ರವಾಸೋದ್ಯಮ ಇಲಾಖೆಗೆ ನೀಡಲಾಗುತ್ತದೆ' ಎಂದು ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ ವಿವರಿಸಿದರು.



ಕಾರವಾರಕ್ಕೆ ಮಂಗಳವಾರ ಟುಪಲೇವ್ (ಟಿಯು–142) ಯುದ್ಧ ವಿಮಾನದ ಮುಖ್ಯ ಭಾಗವನ್ನು ಟ್ರಕ್‌ನಲ್ಲಿ ತರಲಾಯಿತು –ಪ್ರಜಾವಾಣಿ ಚಿತ್ರ

ಟುಪಲೇವ್ ಜೋಡಣೆಗೆ ಒಂದು ತಿಂಗಳು ಆಗಬಹುದು. ನಂತರ ವಸ್ತು ಸಂಗ್ರಹಾಲಯ ಆರಂಭವಾಗಲಿದೆ. ಈಗಾಗಲೇ ಸರ್ಕಾರ ₹2 ಕೋಟಿ ನೀಡಿದ್ದು, ಅಭಿವೃದ್ಧಿ ಕಾಮಗಾರಿ ಮುಗಿದಿದೆ

ಗಂಗೂಬಾಯಿ ಮಾನಕರ, ಜಿಲ್ಲಾಧಿಕಾರಿ

ನ್ಯಾಯಮಂಡಳಿ ಆದೇಶ ಎತ್ತಿಹಿಡಿದ ಹೈಕೋರ್ಟ್

ಐದು ದಿನ ರಜೆ: ಶಿಕ್ಷಕಿ ಸೇವೆಗೆ ಕೊಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐದು ದಿನಗಳ ಕಾಲ ಗೈರು ಹಾಜರಾಗಿದ್ದರು' ಎಂಬ ಕಾರಣಕ್ಕಾಗಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅರೆಕಾಲಿಕ ಶಿಕ್ಷಕಿಯನ್ನು ಸೇವೆಯಿಂದ ಬಿಡುಗಡೆ ಮಾಡಿದ್ದನ್ನು ದೃಢೀಕರಿಸಿದ್ದ ಶೈಕ್ಷಣಿಕ ಮೇಲ್ಮನವಿ ನ್ಯಾಯಮಂಡಳಿಯ ಆದೇಶವನ್ನು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಎತ್ತಿಹಿಡಿದಿದೆ.

ಈ ಕುರಿತಂತೆ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ದಾವಣಗೆರೆ ತಾಲ್ಲೂಕು ನಲ್ಲೂರು ಗ್ರಾಮದ ಆರ್.ಸುಜಾತಮ್ಮ ಸಲ್ಲಿಸಿದ್ದ ಮೇಲ್ಮನವಿಯನ್ನು (ಡಬ್ಲ್ಯು.ಎ 239/2023) ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

ರಾಜಾಜಿನಗರದ 'ಇ' ಬ್ಲಾಕ್‌ನಲ್ಲಿರುವ ವಾಣಿ ವಿದ್ಯಾಕೇಂದ್ರದಲ್ಲಿ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಆರ್.ಸುಜಾತಮ್ಮ (56) ಅವರನ್ನು 2013ರ ಜುಲೈ 22ರಂದು ಸೇವೆಯಿಂದ ಬಿಡುಗಡೆ ಮಾಡಲಾಗಿತ್ತು. 'ಸುಜಾತಮ್ಮ ತಮ್ಮ ಪುತ್ರಿಯ ಅನಾರೋಗ್ಯದ ಕಾರಣ ನೀಡಿ ದೀರ್ಘಕಾಲದ ರಜೆ ಪಡೆಯುತ್ತಿದ್ದರು. ಅಂತೆಯೇ ಅವರ ಬೋಧನಾ ಮಟ್ಟವೂ ಹೇಳಿಕೊಳ್ಳುವಂತಿರಲಿಲ್ಲ. ಐದು ದಿನಗಳ ರಜೆ ಪಡೆದಿದ್ದ ಅವರಿಗೆ ನೋಟಿಸ್ ನೀಡಲಾಗಿತ್ತು. ಅದಕ್ಕೆ ಅವರು ವಿವರಣೆ ನೀಡಿಲ್ಲ' ಎಂದು ಸಂಸ್ಥೆಯು ಅವರನ್ನು ಸೇವೆಯಿಂದ ಬಿಡುಗಡೆ ಮಾಡಿದ್ದಕ್ಕೆ ಕಾರಣ ನೀಡಿತ್ತು.

ಇದನ್ನು ಪ್ರಶ್ನಿಸಿ ಸುಜಾತಮ್ಮ ಶೈಕ್ಷಣಿಕ ನ್ಯಾಯಮಂಡಳಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಮಂಡಳಿ, 'ಅರ್ಜಿದಾರರು ಕಾಯಂ ಉದ್ಯೋಗಿ ಅಲ್ಲ. ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಹೀಗಾಗಿ, ಸಂಸ್ಥೆಯ ನಿಲುವು ಸರಿ ಇದೆ' ಎಂದು ದೃಢೀಕರಿಸಿತ್ತು. ಇದನ್ನು ಪ್ರಶ್ನಿಸಿ ಸುಜಾತಮ್ಮ ಹೈಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ ಕೂಡಾ ನ್ಯಾಯಮಂಡಳಿ ಆದೇಶವನ್ನು ಎತ್ತಿಹಿಡಿದಿತ್ತು. ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಸಲ್ಲಿಸಲಾಗಿದ್ದ ಮೇಲ್ಮನವಿಯನ್ನೂ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

ಸಿ.ಎಂ ಭಾವಚಿತ್ರಕ್ಕೆ ಆಕ್ಷೇಪಿಸಿದ್ದ ಪಿಐಎಲ್ ವಜಾ

ಬೆಂಗಳೂರು: 'ಗೃಹಲಕ್ಷ್ಮಿ ಮತ್ತು ಗೃಹಜ್ಯೋತಿ ಯೋಜನೆಗಳ ಜಾಹೀರಾತು ಮತ್ತು ಒಪ್ಪಿಗೆ ಆದೇಶಗಳಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಮಂತ್ರಿಗಳ ಭಾವಚಿತ್ರ, ಹೆಸರು ಬಳಕೆಗೆ ನಿರ್ಬಂಧ ವಿಧಿಸಬೇಕು' ಎಂದು ಕೋರಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಸಾಮಾಜಿಕ ಕಾರ್ಯಕರ್ತ ಬೆಳಗಾವಿಯ ಭೀಮಪ್ಪ ಗಡಾದ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ



ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಎಸ್. ಉಮಾಪತಿ, 'ಸರ್ಕಾರಿ ಜಾಹೀರಾತುಗಳಲ್ಲಿ ಮುಖ್ಯಮಂತ್ರಿ, ಮಂತ್ರಿಗಳ ಭಾವಚಿತ್ರ ಬಳಸಿರುವುದು ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆ. ಲೋಕಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಭಾವಚಿತ್ರ ಬಳಕೆ ಮಾಡಿಕೊಂಡು ಪ್ರಚಾರ ನಡೆಸಲಾಗುತ್ತಿದೆ. ಈ ಮೂಲಕ ಸರ್ಕಾರದ ಹಣವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ' ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, 'ಇದರಲ್ಲಿ ತಪ್ಪೇನಿದೆ? ಜನರಿಗೆ ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದವರು ಸಹಜವಾಗಿ ಯಾವೆಲ್ಲಾ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂಬ ಮಾಹಿತಿಯನ್ನು ಮತದಾರರಿಗೆ ನೀಡುತ್ತಾರೆ. ಒಂದು ವೇಳೆ ಇದಕ್ಕೆ ನಿಮ್ಮ ಆಕ್ಷೇಪ ಇದ್ದರೆ ಅಂಥವರನ್ನು ಆಯ್ಕೆ ಮಾಡದಿದ್ದರೆ ಆಯಿತು' ಎಂದು ಹೇಳಿತು.

ಶೀಘ್ರ ಸ್ಪೀಕರ್‌ಗೆ ಮನವಿ: ಸಂಸದ ಮುನಿಸ್ವಾಮಿ

'ಎಸ್‌.ಪಿ ವಿರುದ್ಧ ಹಕ್ಕುಚ್ಯುತಿ ಮಂಡನೆ'

ಪ್ರಜಾವಾಣಿ ವಾರ್ತೆ

ಕೋಲಾರ: 'ಕೋಲಾರದಲ್ಲಿ ಮಂಗಳವಾರ ನಡೆದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನನ್ನನ್ನು ಹೊರಗೆ ತಳ್ಳಿ ಶಿಷ್ಟಾಚಾರ ಉಲ್ಲಂಘಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ವಿರುದ್ಧ ಹಕ್ಕುಚ್ಯುತಿ ಮಂಡಿಸಲು ಲೋಕಸಭೆ ಸ್ಪೀಕರ್‌ಗೆ ಮನವಿ ಸಲ್ಲಿಸುತ್ತೇನೆ. ರಾಜ್ಯಪಾಲರಿಗೂ ದೂರು ನೀಡುತ್ತೇನೆ' ಎಂದು ಬಿಜೆಪಿ ಸಂಸದ ಎಸ್.ಮುನಿಸ್ವಾಮಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೋಲಾರ ಪೊಲೀಸ್ ವರಿಷ್ಠಾಧಿಕಾರಿ ನಾರಾಯಣ ಅವರು ಕಾಂಗ್ರೆಸ್ ಏಜೆಂಟ್‌ರಂತೆ ವರ್ತಿಸುತ್ತಿದ್ದಾರೆ. ಅವಾಚ್ಯ ಶಬ್ದಗಳಿಂದ ನಿಂದಿಸಿದ ಶಾಸಕ ಎಸ್.ಎನ್.ನಾರಾಯಣಸ್ವಾಮಿ ಅವರಿಗೆ ಏನೂ ಮಾಡದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯು ಬಿಜೆಪಿ ಸಂಸದನಾದ ನನ್ನನ್ನು ಉದ್ದೇಶಪೂರ್ವಕವಾಗಿ ಬಲವಂತದಿಂದ ಹೊರಗೆ ಕಳುಹಿಸಿದ್ದಾರೆ. ಅವರ ವಿರುದ್ಧ ಸರ್ಕಾರ ಶಿಸ್ತು ಕ್ರಮ ಕೈಗೊಳ್ಳಬೇಕು. ಶಾಸಕ ನಾರಾಯಣಸ್ವಾಮಿ ವಿರುದ್ಧವೂ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಕಾಂಗ್ರೆಸ್ ಪಕ್ಷ ಈ ಹಿಂದೆ ಅಂಬೇಡ್ಕರ್ ಅವರನ್ನು ಸೋಲಿಸಬೇಕು, ಸಂಸತ್‌ಗೆ ಬರಲು ಬಿಡಬಾರದು ಎಂಬ ಲೆಕ್ಕಾಚಾರ ಹೊಂದಿತ್ತು. ಈಗ ಕೋಲಾರದ ದಲಿತ ಸಂಸದನಾಗಿರುವ ನನಗೆ ಕಾಂಗ್ರೆಸ್ ಅಪಮಾನ ಮಾಡುವ ಉದ್ದೇಶ ಹೊಂದಿದೆ' ಎಂದು ಆರೋಪಿಸಿದರು.

'ಶ್ರೀನಿವಾಸಪುರದಲ್ಲಿ ರೈತರ ಮೇಲೆ ದಾಖಲಿಸಿರುವ ದೂರುಗಳನ್ನು ರದ್ದುಗೊಳಿಸಬೇಕು. ಭೂಗಳ್ಳರ ವಿರುದ್ಧ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ವಿಧಾನ ಸೌಧ ಚಲೊ ಹಮ್ಮಿಕೊಳ್ಳಲಾಗುವುದು' ಎಂದು ಮುನಿಸ್ವಾಮಿ ತಿಳಿಸಿದರು.

ಶಾಸಕ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ವಿರುದ್ಧ ಪ್ರತಿಭಟನೆ ನಡೆಸಿದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಹೆಚ್ಚುವರಿ ಜಿಲ್ಲಾಧಿಕಾರಿ ಶಂಕರ ವಣಿಕ್ಯಾಳ ಅವರಿಗೆ ದೂರು ಸಲ್ಲಿಸಿದರು.

ದೀಪಾವಳಿ: 11,000 ಕುಟುಂಬಕ್ಕೆ ತಲಾ ₹2 ಸಾವಿರ– ಯತ್ನಾಳ

ವಿಜಯಪುರ: 'ಎಲ್ಲರೂ ಚುನಾವಣೆ ವೇಳೆ ಹಣ ಹಂಚಿ, ಆಮಿಷ ಒಡ್ಡುವರು. ಆದರೆ, ನಾನು ದೀಪಾವಳಿ ಆಚರಿಸಲು ಕ್ಷೇತ್ರದ 11 ಸಾವಿರ ಕುಟುಂಬಗಳಿಗೆ ತಲಾ ₹2 ಸಾವಿರ ನೀಡಲು ನಿರ್ಧರಿಸಿದ್ದೇನೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

ನಗರದಲ್ಲಿ ಸೋಮವಾರ ರಾತ್ರಿ ನಡೆದ ಸರ್ವ ಗಜಾನನ ಮಂಡಳಿಗಳಿಗೆ ಸನ್ಮಾನ ಸಮಾವೇಶದಲ್ಲಿ ಮಾತನಾಡಿ, 'ಸಾಕಷ್ಟು ಜನ ಬಂದರೂ ಸನಾತನ ಧರ್ಮ ನಾಶ ಮಾಡಲು ಆಗಿಲ್ಲ. ಉಳಿದ ಧರ್ಮಗಳಿಗೆ ಸಂಸ್ಥಾಪಕರು ಇದ್ದಾರೆ. ಆದರೆ, ಸನಾತನ ಧರ್ಮ ದೇವರಿಂದ ಹುಟ್ಟಿಕೊಂಡಿದೆ. ಬ್ರಹ್ಮ, ವಿಷ್ಣು, ಮಹೇಶ್ವರರೇ ಸಂಸ್ಥಾಪಕರು. ಯಾರಿಗೂ ನಮ್ಮ ಧರ್ಮ ಅನ್ಯಾಯ ಮಾಡಿಲ್ಲ' ಎಂದರು.

ಪ್ರಥಮ ದೇಸಿ ಸಮ್ಮೇಳನ ಮುಂದೂಡಿಕೆ

ಬೆಂಗಳೂರು: ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ವಿರೋಧಿಸಿ ಇದೇ 29ರಂದು ಕರ್ನಾಟಕ ಬಂದ್‌ಗೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಆ ದಿನ ನಿಗದಿಯಾಗಿದ್ದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಪ್ರಥಮ ದೇಸಿ ಸಮ್ಮೇಳನ ಮುಂದೂಡಲಾಗಿದೆ.

'ಈ ಸಮ್ಮೇಳನದಲ್ಲಿ ದಕ್ಷಿಣ ಕರ್ನಾಟಕ 16 ಜಿಲ್ಲೆಗಳ ವ್ಯಾಪ್ತಿಯ ಕೃಷಿ ಪರಿಕರ ಮಾರಾಟಗಾರರು ಭಾಗವಹಿಸಲಿದ್ದರು'. ಆದರೆ, ಬಂದ್ ಕಾರಣ ಸಮ್ಮೇಳನ ಮುಂದೂಡಲಾಗಿದೆ. ಮುಂದಿನ ದಿನಾಂಕ ಸದ್ಯದಲ್ಲಿ ತಿಳಿಸಲಾಗುವುದು' ಎಂದು ಬೆಂಗಳೂರು ಕೃಷಿ ವಿ.ವಿಯ ವಿಸ್ತರಣಾ ನಿರ್ದೇಶಕ ವಿ.ಎಲ್. ಮಧು ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಭಾಸ್ಕರ' ಪ್ರಶಸ್ತಿಗೆ ಪ್ರೊ.ಕಿರಣ್ ಕುಮಾರ್ ಆಯ್ಕೆ



ಸಿಂದಗಿ (ವಿಜಯಪುರ ಜಿಲ್ಲೆ): 'ಪಟ್ಟಣದ ಸಾರಂಗಮಠದ ಚೆನ್ನವೀರಸ್ವಾಮೀಜಿ ಪ್ರತಿಷ್ಠಾನದಿಂದ ನೀಡುವ ರಾಷ್ಟ್ರ ಮಟ್ಟದ 'ಭಾಸ್ಕರ' ಶ್ರೇಷ್ಠ ವಿಜ್ಞಾನಿ ಪ್ರಶಸ್ತಿಗೆ ಇಸ್ರೊ ಮಾಜಿ ಅಧ್ಯಕ್ಷ ಪ್ರೊ.ಎ.ಎಸ್.ಕಿರಣ್ ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ' ಎಂದು ಸಾರಂಗಮಠದ ಪೀಠಾಧ್ಯಕ್ಷ ಪ್ರಭು ಸಾರಂಗದೇವ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

'ಪ್ರಶಸ್ತಿಯು ₹1 ಲಕ್ಷ ನಗದು, ಬೆಳ್ಳಿ ಪ್ರಶಸ್ತಿ ಫಲಕ ಒಳಗೊಂಡಿದೆ. ನವೆಂಬರ್‌ನಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ' ಎಂದು ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಶಾಸಕ ಅಶೋಕ ಮನಗೂಳಿ ಮಾತನಾಡಿ, 'ವಿಜಯಪುರದ ಜ್ಞಾನ ಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ಅವರ ಪ್ರೇರಣೆಯಿಂದ ಜಿಲ್ಲೆಯ 11ನೇ ಶತಮಾನದ ಖಗೋಳ ವಿಜ್ಞಾನಿ, ಗಣಿತಜ್ಞ ಭಾಸ್ಕರಾಚಾರ್ಯ ಅವರ ಸ್ಮರಣೆಯಲ್ಲಿ ಈ ಪ್ರಶಸ್ತಿ ನಾಲ್ಕು ವರ್ಷಗಳಿಂದ ನೀಡಲಾಗುತ್ತಿದೆ. ಈವರೆಗೆ ಸಿ.ಎನ್. ಆರ್. ರಾವ್, ಯು.ಆರ್.ರಾವ್, ಎಸ್.ಎ.ಪಾಟೀಲ ಮತ್ತು ಕೆ.ಕಸ್ತೂರಿ ರಂಗನ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗಿದೆ' ಎಂದರು.

ಪ್ರತಿಷ್ಠಾನದ ಸಂಚಾಲಕ ಪ್ರೊ. ವಿ.ಡಿ.ವಸ್ತ್ರದ ಇದ್ದರು.

237 ಪಂಚಾಯಿತಿಗಳಿಗೆ ಗಾಂಧಿ ಗ್ರಾಮ ಪುರಸ್ಕಾರ: 2ಕ್ಕೆ ಪ್ರದಾನ

ಬೆಂಗಳೂರು: ಪಂಚಾಯತ್ ರಾಜ್ ಇಲಾಖೆ 2022–23ನೇ ಸಾಲಿನ 'ಗಾಂಧಿ ಗ್ರಾಮ ಪುರಸ್ಕಾರ'ಕ್ಕೆ 233 ಹಾಗೂ 'ವಿಶೇಷ ಗಾಂಧಿ ಗ್ರಾಮ ಪುರಸ್ಕಾರ'ಕ್ಕೆ ನಾಲ್ಕು ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಿದೆ.

ಉಡುಪಿ ಜಿಲ್ಲೆಯ ಹೊಸಾಡು, 80 ಬಡಗಬೆಟ್ಟು, ಉತ್ತರ ಕನ್ನಡ ಜಿಲ್ಲೆಯ ತಟ್ಟೇಗೇರಿ, ಬೆಳವಟಿಗೆ ವಿಶೇಷ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಭಾಜನವಾದ ಪಂಚಾಯತಿಗಳು.

ಪುರಸ್ಕಾರಕ್ಕೆ ಆಯ್ಕೆಯಾದ ಎಲ್ಲ 237 ಪಂಚಾಯತಿಗಳಿಗೂ ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಅ.2ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ತಲಾ ₹ 5 ಲಕ್ಷ ನಗದು, ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುತ್ತದೆ. ಆಯ್ಕೆಯಾದ ಪಂಚಾಯಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಬೇಕು ಎಂದು ಸೂಚಿಸಲಾಗಿದೆ.

ಸುಧಾ ಓದಿರಿ

ನಿಧನ ವಾರ್ತೆ

ವೀರೇಂದ್ರ ಪಾಟೀಲ ಪತ್ನಿ ಶಾರದಾ



ಚಿಂಚೋಳಿ (ಕಲಬುರಗಿ ಜಿಲ್ಲೆ): ಮಾಜಿ ಮುಖ್ಯಮಂತ್ರಿ ದಿವಂಗತ ವೀರೇಂದ್ರ ಪಾಟೀಲ ಅವರ ಪತ್ನಿ ಶಾರದಾ ವಿ.ಪಾಟೀಲ (93) ಅವರು ಬೆಂಗಳೂರಿನ ಸದಾಶಿವ ನಗರದ ನಿವಾಸದಲ್ಲಿ ವಯೋಸಹಜ ಕಾಯಿಲೆಯಿಂದ ಮಂಗಳವಾರ ನಿಧನರಾದರು.

ಅವರಿಗೆ, ಪುತ್ರ ಕೈಲಾಸ ವೀರೇಂದ್ರ ಪಾಟೀಲ (ಮಾಜಿ ಶಾಸಕ) ಹಾಗೂ ಪುತ್ರಿಯರಾದ ಶಕುಂತಲಾ ಸುಗಂಧಿ, ಲಲಿತಾ ಜವಳಿ ಹಾಗೂ ಅಳಿಯ ಡಾ.ಬಿ.ಜಿ ಜವಳಿ(ಮಾಜಿ ಸಂಸದ) ಇದ್ದಾರೆ. ಮೂಲತಃ ಕೆರೊಳ್ಳಿ ಗ್ರಾಮದ ಪಾಟೀಲ ಮನೆತನದ ಶಾರದಾ ಪಾಟೀಲ ಅವರನ್ನು ಹೂಡದಳ್ಳಿಯ ವೀರೇಂದ್ರ ಪಾಟೀಲ ಅವರಿಗೆ ಕೊಟ್ಟು ಮದುವೆ ಮಾಡಲಾಗಿತ್ತು.

1968ರಿಂದ 1971ರವರೆಗೆ ಹಾಗೂ 1989ರಿಂದ 1990ರವರೆಗೆ ಎರಡು ಬಾರಿಗೆ ಮುಖ್ಯಮಂತ್ರಿಯಾಗಿದ್ದ ವೀರೇಂದ್ರ ಪಾಟೀಲ ಅವರು 1997ರ ಮಾರ್ಚ್ 14ರಂದು ನಿಧನರಾಗಿದ್ದರು.

ಚಿಂಚೋಳಿಯ ವೀರೇಂದ್ರ ಪಾಟೀಲ ಪಿಯು ವಿಜ್ಞಾನ ಮಹಾವಿದ್ಯಾಲಯದ ಆವರಣದಲ್ಲಿ ಬುಧವಾರ (ಸೆ.27) ಬೆಳಿಗ್ಗೆಯಿಂದ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗುವುದು. ವೀರೇಂದ್ರ ಪಾಟೀಲ ಅವರ ಸಮಾಧಿ ಪಕ್ಕದಲ್ಲಿ ಮಧ್ಯಾಹ್ನ 2ಕ್ಕೆ ಶಾರದಾ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



❦ ಸುಭಾಷಿತ ❦

ಎಲ್ಲವನ್ನೂ ಹೇಳಿ, ಬಹು ದಾರುಣವಾದ ವಿಷಯವನ್ನೇ ಹೇಳದಿದ್ದರೆ ಅದರಿಂದ ಸತ್ಯವನ್ನು ಹತ್ತಿಕ್ಕಿದಂತೆ ಆಗುತ್ತದೆ.

-ಕೆ.ವಿ.ತಿರುಮಲೇಶ್

ಸರ್ಕಾರಿ ಜಮೀನು ಲೆಕ್ಕಪರಿಶೋಧನೆ ರಾಜ್ಯದಾದ್ಯಂತ ನಡೆಯಲಿ

ಬೆಂಗಳೂರು ನಗರ ಮತ್ತು ಬೆಂಗಳೂರು ಸುತ್ತಮುತ್ತಲಿನ 100 ಕಿ.ಮೀ. ವ್ಯಾಪ್ತಿಯಲ್ಲಿ ರೆಸಾರ್ಟ್‌ಗಳು ಹಾಗೂ ಹೋಮ್‌ಸ್ಟೇಗಳಿಂದ ಸರ್ಕಾರಿ ಜಮೀನು ಒತ್ತುವರಿಯಾಗಿರುವುದನ್ನು ಪತ್ತೆಹಚ್ಚಲು ಜಮೀನು ಲೆಕ್ಕಪರಿಶೋಧನೆ (ಲ್ಯಾಂಡ್ ಆಡಿಟ್) ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಂದಾಯ ಇಲಾಖೆಗೆ ನಿರ್ದೇಶನ ನೀಡಿದ್ದಾರೆ. ಬೆಂಗಳೂರು ಮತ್ತು ಸುತ್ತಮುತ್ತ 75,000 ಎಕರೆಯಷ್ಟು ಸರ್ಕಾರಿ ಜಮೀನು ಒತ್ತುವರಿಯಾಗಿದ್ದು, ಅದರಲ್ಲಿ 6,000 ಎಕರೆಗೂ ಹೆಚ್ಚು ವಿಸ್ತೀರ್ಣದ ಸರ್ಕಾರಿ ಜಮೀನುಗಳನ್ನು ರೆಸಾರ್ಟ್‌ಗಳ ಹೆಸರಿನಲ್ಲಿ ಕಬಳಿಸಲಾಗಿದೆ ಎಂದು ಕಾಂಗ್ರೆಸ್ ಮುಖಂಡ ರಮೇಶ್ ಬಾಬು ಅವರು ಮುಖ್ಯಮಂತ್ರಿಯವರಿಗೆ ದೂರು ನೀಡಿದ್ದರು. ಆ ದೂರನ್ನು ಆಧರಿಸಿ ಸರ್ಕಾರಿ ಜಮೀನುಗಳ ಲೆಕ್ಕ ಪರಿಶೋಧನೆ ನಡೆಸುವಂತೆ ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ. ಸರ್ಕಾರಿ ಜಮೀನುಗಳ ವಾಸ್ತವಿಕ ಸ್ಥಿತಿಗತಿಯನ್ನು ಖಚಿತಪಡಿಸಿಕೊಳ್ಳಲು ನೆರವಾಗುವ ಜಮೀನು ಲೆಕ್ಕಪರಿಶೋಧನೆಯನ್ನು ಬೆಂಗಳೂರಿಗೆ ಸೀಮಿತಗೊಳಿಸಬಾರದು. ಈ ಪ್ರಕ್ರಿಯೆಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸಬೇಕು. ಅನಧಿಕೃತ ರೆಸಾರ್ಟ್‌ಗಳು, ಹೋಮ್‌ಸ್ಟೇಗಳು ಕರ್ನಾಟಕದಲ್ಲಿ ದೊಡ್ಡ ತಲೆನೋವಾಗಿ ಪರಿಣಮಿಸಿವೆ. ವಿಶೇಷವಾಗಿ ಪಶ್ಚಿಮ ಘಟ್ಟಗಳು, ಹುಲಿ ಸಂರಕ್ಷಿತ ಪ್ರದೇಶಗಳು ಮತ್ತು ಇತರ ಪರಿಸರಸೂಕ್ಷ್ಮ ಪ್ರದೇಶಗಳಲ್ಲಿ ಅನಧಿಕೃತ ರೆಸಾರ್ಟ್, ಹೋಮ್‌ಸ್ಟೇಗಳು ವ್ಯಾಪಕವಾಗಿ ತಲೆ ಎತ್ತುತ್ತಿವೆ. ಬಿಳಿಗಿರಿ ರಂಗನಾಥಸ್ವಾಮಿ ಹುಲಿ ಸಂರಕ್ಷಿತಾರಣ್ಯದ ವ್ಯಾಪ್ತಿಯಲ್ಲೇ ಪರಿಸರ ಸಂರಕ್ಷಣಾ ಕಾಯ್ದೆ- 1986 ಅನ್ನು ಉಲ್ಲಂಘಿಸಿ ಒಂಬತ್ತು ಹೋಮ್‌ಸ್ಟೇ, ಹೋಟೆಲ್ ಮತ್ತು ರೆಸಾರ್ಟ್‌ಗಳು ಕಾರ್ಯನಿರ್ವಹಿಸುತ್ತಿರುವುದನ್ನು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ಅಧಿಕಾರಿಗಳು ಕಳೆದ ವರ್ಷ ಪತ್ತೆ ಮಾಡಿದ್ದರು. ಈ ಹೋಟೆಲ್, ಹೋಮ್‌ಸ್ಟೇ ಮತ್ತು ರೆಸಾರ್ಟ್‌ಗಳ ಮಾಲೀಕರು ಪ್ರವಾಸೋದ್ಯಮ ಇಲಾಖೆಯಿಂದ ಅನುಮತಿ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆದಿರಲಿಲ್ಲ ಎಂಬುದು ಪರಿಶೀಲನೆಯಲ್ಲಿ ಪತ್ತೆಯಾಗಿತ್ತು. ಈ ರೀತಿ ಕಾನೂನು ಉಲ್ಲಂಘಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಪ್ರಾಧಿಕಾರ ಶಿಫಾರಸು ಮಾಡಿತ್ತು.



ಒತ್ತುವರಿಗೆ ಕಾರಣರಾದ ಸರ್ಕಾರಿ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳದೇ ಇದ್ದರೆ, ನಮ್ಮ ಸರ್ಕಾರಿ ಜಮೀನು ಹಾಗೂ ಅರಣ್ಯ ಪ್ರದೇಶಗಳನ್ನು ಭೂಗಳ್ಳರ ಹಾವಳಿಯಿಂದ ರಕ್ಷಿಸಲು ಸಾಧ್ಯವಿಲ್ಲ

ನಾಗರಹೊಳೆ ಹುಲಿ ಸಂರಕ್ಷಿತಾರಣ್ಯದಲ್ಲಿ ರೆಸಾರ್ಟ್ ಒಂದು ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಿದ್ದಕ್ಕಾಗಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು ರಾಜ್ಯ ಸರ್ಕಾರವನ್ನು 2014ರಲ್ಲಿ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿತ್ತು. ಆ ಪ್ರಕರಣ ನಡೆದು ಒಂಬತ್ತು ವರ್ಷಗಳಾದರೂ ಈ ವಿಚಾರದಲ್ಲಿ ಹೆಚ್ಚೇನೂ ಬದಲಾವಣೆ ಆಗಿಲ್ಲ. ಬಂಡೀಪುರ ಅರಣ್ಯ ಪ್ರದೇಶದ ಗಡಿಭಾಗಕ್ಕೆ, ಅದರಲ್ಲೂ ವಿಶೇಷವಾಗಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅಕ್ರಮ ರೆಸಾರ್ಟ್‌ಗಳು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿವೆ. ಸಕಲೇಶಪುರ ತಾಲ್ಲೂಕಿನ ಗ್ರಾಮವೊಂದರಲ್ಲಿ 14 ಎಕರೆ ವಿಸ್ತೀರ್ಣದಲ್ಲಿ ಶೋಲಾ ಅರಣ್ಯವನ್ನು ನಾಶಪಡಿಸಿ ಐಷಾರಾಮಿ ರೆಸಾರ್ಟ್ ನಿರ್ಮಿಸಿದ್ದನ್ನು ಅರಣ್ಯ ಇಲಾಖೆ ಇತ್ತೀಚೆಗೆ ಪತ್ತೆ ಮಾಡಿದೆ. ಅಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆಯನ್ನು ಉಲ್ಲಂಘಿಸಿ ಬೃಹತ್ ಕಟ್ಟಡಗಳು, ರಸ್ತೆ, ಈಜುಕೊಳ ಸೇರಿದಂತೆ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು. ಕೊಡಗು ಜಿಲ್ಲೆಯ ಹೊರೂರು ಗ್ರಾಮದಲ್ಲಿ ರೆಸಾರ್ಟ್ ಒಂದರ ಮಾಲೀಕರು ತಮ್ಮ ಅನುಕೂಲಕ್ಕಾಗಿ ತೊರೆಯೊಂದಕ್ಕೆ ಅಕ್ರಮವಾಗಿ ಚೆಕ್ ಡ್ಯಾಂ ನಿರ್ಮಿಸಿರುವುದು ಪತ್ತೆಯಾಗಿದೆ. ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳೂ ಇದರಲ್ಲಿ ಶಾಮೀಲಾಗಿರುವ ಆರೋಪವಿದೆ. ಇದೇ ರೀತಿಯಲ್ಲಿ ಕಾವೇರಿ ವನ್ಯಜೀವಿ ಅಭಯಾರಣ್ಯದ ವ್ಯಾಪ್ತಿಯಲ್ಲಿ ಅಗತ್ಯ ಅನುಮತಿಗಳನ್ನು ಪಡೆಯದೆ ರೆಸಾರ್ಟ್ ಒಂದನ್ನು ನಡೆಸುತ್ತಿರುವುದೂ ಕಂಡುಬಂದಿದೆ. ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಾವಿರಾರು ಅನಧಿಕೃತ ಹೋಮ್‌ಸ್ಟೇಗಳು ನಾಯಿಕೊಡೆಗಳಂತೆ ತಲೆಎತ್ತಿವೆ. ಜಿಲ್ಲಾಡಳಿತಗಳು ಹೋಮ್‌ಸ್ಟೇಗಳನ್ನು ಕಾನೂನಿನ ವ್ಯಾಪ್ತಿಗೆ ತರುವಲ್ಲಿ ವಿಫಲವಾಗಿರುವುದೇ ಇದಕ್ಕೆ ಕಾರಣ. ಸರ್ಕಾರಿ ಜಮೀನುಗಳನ್ನು ಕಬಳಿಸಿ ರೆಸಾರ್ಟ್, ಹೋಮ್‌ಸ್ಟೇ, ಹೋಟೆಲ್ ನಿರ್ಮಿಸುವವರಿಗೆ ಪ್ರಭಾವಿ ರಾಜಕಾರಣಿಗಳ ಅಭಯವೂ ಇರುತ್ತದೆ. ಹೀಗಾಗಿ ಮುಖ್ಯಮಂತ್ರಿಯವರು ಸರ್ಕಾರಿ ಜಮೀನುಗಳ ಲೆಕ್ಕಪರಿಶೋಧನೆಗೆ ನಿರ್ದೇಶನ ನೀಡಿರುವುದು ಕಣ್ಣೊರೆಸುವ ತಂತ್ರದಂತೆ ಆಗಬಾರದು. ಅಕ್ರಮವಾಗಿ ನಿರ್ಮಾಣವಾದ ರೆಸಾರ್ಟ್, ಹೋಮ್‌ಸ್ಟೇ, ಹೋಟೆಲ್‌ಗಳ ಕಟ್ಟಡಗಳನ್ನು ಕೆಲವೊಮ್ಮೆ ಅಧಿಕಾರಿಗಳು ನೆಲಸಮ ಮಾಡುತ್ತಾರೆ. ಆದರೆ, ಆ ರೀತಿ ಸರ್ಕಾರಿ ಜಮೀನುಗಳಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಾಣಕ್ಕೆ ಅವಕಾಶ ಕಲ್ಪಿಸಿದ್ದೇಕೆ ಎಂಬ ಪ್ರಶ್ನೆಗೆ ಉತ್ತರ ನೀಡುವ ಹೊಣೆಯೂ ಅದೇ ಅಧಿಕಾರಿಗಳದ್ದು. ಸರ್ಕಾರಿ ಅಧಿಕಾರಿಗಳು ಶಾಮೀಲಾಗದೇ ಅರಣ್ಯ ಪ್ರದೇಶ ಅಥವಾ ಸರ್ಕಾರಿ ಜಮೀನುಗಳಲ್ಲಿ ಬೃಹತ್ ನಿರ್ಮಾಣ ಕಾಮಗಾರಿಗಳನ್ನು ನಡೆಸಲಾಗುವುದಿಲ್ಲ ಎಂಬುದು ನಿಸ್ಸಂಶಯ. ಈಗ ಆರಂಭವಾಗಿರುವ ಸರ್ಕಾರಿ ಜಮೀನುಗಳ ಲೆಕ್ಕಪರಿಶೋಧನೆಯು ಒತ್ತುವರಿಗೊಳಗಾಗಿರುವ ಸ್ವತ್ತುಗಳ ವಿಸ್ತೀರ್ಣವನ್ನು ಲೆಕ್ಕ ಹಾಕುವುದಕ್ಕೆ ಸೀಮಿತವಾಗಬಾರದು. ಒತ್ತುವರಿಗೆ ಕಾರಣರಾದ ಸರ್ಕಾರಿ ಅಧಿಕಾರಿಗಳನ್ನೂ ಪತ್ತೆ ಮಾಡಿ ಹೊಣೆ ನಿಗದಿ ಮಾಡಬೇಕು. ಇಂತಹ ಪ್ರಕರಣಗಳಲ್ಲಿ ಶಾಮೀಲಾದ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿ, ಅವರನ್ನು ಸೇವೆಯಿಂದ ವಜಾ ಮಾಡುವಂತಹ ಕಠಿಣ ಕ್ರಮಗಳನ್ನು ಕೈಗೊಳ್ಳದೇ ಇದ್ದರೆ ನಮ್ಮ ಸರ್ಕಾರಿ ಜಮೀನು ಹಾಗೂ ಅರಣ್ಯ ಪ್ರದೇಶಗಳನ್ನು ಭೂಗಳ್ಳರ ಹಾವಳಿಯಿಂದ ರಕ್ಷಿಸಲು ಸಾಧ್ಯವಿಲ್ಲ.

ದಿನದ ಟ್ವೀಟ್


ಸೂಕ್ತ ಮನ್ನಣೆ ಸಿಗಲಿ



ಈಶ್ವರಚಂದ್ರ ವಿದ್ಯಾಸಾಗರ್ ಅವರ 203ನೇ ಜನ್ಮದಿನಾಚರಣೆಯ ಸಂದರ್ಭ ಇದು. ಆದರೆ, ನಮ್ಮ ಇತಿಹಾಸದ ಪುಸ್ತಕಗಳಲ್ಲಿ ಅವರಿಗೆ ಸೂಕ್ತ ಸ್ಥಾನ ಸಿಗದಿರುವುದು ದುಃಖದ ಸಂಗತಿ. ಮಹಿಳೆಯರ ಹಕ್ಕುಗಳು, ಶಿಕ್ಷಣ ಮತ್ತು ಪ್ರಾಚೀನ ಭಾಷೆಗಳಿಗೆ ಸಂಬಂಧಿಸಿದಂತೆ ಈ ಮಹನೀಯರು ನೀಡಿದಷ್ಟು ಕೊಡುಗೆಯನ್ನು ಯಾವ ಸಮಾಜ ಸುಧಾರಕರೂ ನೀಡಿಲ್ಲ.

ಅನಂತ್ ರೂಪನಗುಡಿ, ರೈಲ್ವೆ ಅಧಿಕಾರಿ

ಕಿಡಿನುಡಿ



'ಕಾವೇರಿ ವಿವಾದ ಈಗ ಎಲ್ಲಿಗ್ ಬಂದಿದೆ? ಎಲ್ಲಿ ಶುರುವಾಯ್ತೋ ಅದು ಅಲ್ಲೇ ನಿಂತಿದೆ!'- ಇಪ್ಪತ್ತೇಳು ವರ್ಷಗಳ ಹಿಂದೆ ನಾನು 'ಅಮೆರಿಕಾ! ಅಮೆರಿಕಾ!!' ಚಿತ್ರಕ್ಕೆ ಬರೆದ ಗೀತೆಯ ಸಾಲು.

ನಾಗತಿಹಳ್ಳಿ ಚಂದ್ರಶೇಖರ, ಚಲನಚಿತ್ರ ನಿರ್ದೇಶಕ

25 ವರ್ಷಗಳ ಹಿಂದೆ

ಭಾನುವಾರ, 27-9-1998

• ರಾಷ್ಟ್ರಪತಿಗಳ ಸೂಚನೆಗೆ ತಲೆಬಾಗಿದ ಸಂಪುಟ

ನವದೆಹಲಿ, ಸೆ. 26 (ಪಿಟಿಐ)- ಬಿಹಾರ ಸರ್ಕಾರ ವಜಾ ಮಾಡುವಂತೆ ರಾಷ್ಟ್ರಪತಿ ಅವರನ್ನು ಮತ್ತೆ ಒತ್ತಾಯಿಸದಿರಲು ಇಂದು ರಾತ್ರಿ ಸಭೆ ಸೇರಿದ ಕೇಂದ್ರ ಸಚಿವ ಸಂಪುಟ ನಿರ್ಧರಿಸಿದೆ. ಇದರಿಂದ ರಾಬ್ಡಿದೇವಿ ನೇತೃತ್ವದ ಸರ್ಕಾರ ಅಪಾಯದಿಂದ ಪಾರಾಗಿದೆ.

ಬಿಹಾರದಲ್ಲಿ ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸು ಮಾಡಿದ ಕ್ರಮವನ್ನು ಪುನರ್ ಪರಿಶೀಲಿಸುವಂತೆ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಸೂಚಿಸಿದ್ದ ಹಿನ್ನೆಲೆಯಲ್ಲಿ ನಡೆದ ಸಂಪುಟದ ತುರ್ತುಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಯಿತು.

ಬಿಹಾರದಲ್ಲಿ ಸಂವಿಧಾನ ಉಲ್ಲಂಘನೆ ಆಗಿರುವುದರಿಂದ ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ. ಆದ್ದರಿಂದ ಆ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಬೇಕು ಎಂಬ ಹಿನ್ನೆಲೆಯಲ್ಲಿ ಸಭೆ ಸೇರಲಾಗಿತ್ತು. ಆದರೆ, ಸರ್ಕಾರವು ತನ್ನ ನಿರ್ಧಾರವನ್ನು ಪುನರ್‌ಪರಿಶೀಲಿಸುವಂತೆ ರಾಷ್ಟ್ರಪತಿ ಅವರು ನೀಡಿದ ಸೂಚನೆಯಂತೆ ತನ್ನ ಶಿಫಾರಸನ್ನು ರಾಷ್ಟ್ರಪತಿ ಅವರಿಗೆ ಮತ್ತೆ ಕಳಿಸುವ ತೀರ್ಮಾನವನ್ನು ಕೈಬಿಡಲು ಸಚಿವ ಸಂಪುಟ ತೀರ್ಮಾನಿಸಿತು ಎಂದು ಗೃಹ ಸಚಿವ ಎಲ್.ಕೆ.ಅಡ್ವಾಣಿ ತಿಳಿಸಿದರು.

ಬಿಹಾರ ರಾಜ್ಯಕ್ಕೆ ಸಂಬಂಧಿಸಿದಂತೆ ತಾನು ಮಾಡಿರುವ ಶಿಫಾರಸನ್ನು ಕೈಬಿಡಲು ಸರ್ಕಾರ ಕೈಗೊಂಡ ನಿರ್ಧಾರವನ್ನು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಆದ ವಿಜಯ ಎಂದು ವಿರೋಧ ಪಕ್ಷಗಳು ವರ್ಣಿಸಿವೆ. ಬಿಜೆಪಿಯ ತಂತ್ರ 'ಭಸ್ಮ'ವಾಗಿ ಹೋಗಿದೆ ಎಂದು ಅವು ಹೇಳಿವೆ.

• ಲೀಲಾವತಿ, ತಾರಾನಾಥ್, ವೈದೇಹಿಗೆ ಪ್ರಶಸ್ತಿ ಗರಿ

ಬೆಂಗಳೂರು, ಸೆ. 26- ಖ್ಯಾತ ಸರೋದ್ ವಾದಕ ಡಾ. ರಾಜೀವ್ ತಾರಾನಾಥ್ ಅವರು ರಾಜ್ಯ ಸರ್ಕಾರದ 1997ನೇ ಸಾಲಿನ ಪ್ರತಿಷ್ಠಿತ ಟಿ.ಚೌಡಯ್ಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಸಾಹಿತಿ ವೈದೇಹಿ ಮತ್ತು ಹಿರಿಯ ಸುಗಮ ಸಂಗೀತ ಕಲಾವಿದೆ ಎಚ್.ಆರ್.ಲೀಲಾವತಿ ಅವರನ್ನು ಕ್ರಮವಾಗಿ ದಾನ ಚಿಂತಾಮಣಿ ಅತ್ತಿಮಬ್ಬೆ ಮತ್ತು ಸಂತ ಶಿಶುನಾಳ ಷರೀಫ ಪ್ರಶಸ್ತಿಗಳಿಗೆ ಆಯ್ಕೆ ಮಾಡಲಾಗಿದೆ.

ಈ ವಿಷಯವನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾದ್ಯಸಂಗೀತ ಕ್ಷೇತ್ರದಲ್ಲಿ ರಾಷ್ಟ್ರಮಟ್ಟದಲ್ಲಿ ಅಮೂಲ್ಯ ಸೇವೆ ಸಲ್ಲಿಸಿರುವ ಕಲಾವಿದರನ್ನು ಗುರುತಿಸಿ ಗೌರವಿಸಲು ನಾಡಿನ ಹಿರಿಯ ಪಿಟೀಲು ವಾದನ ಕಲಾವಿದ ದಿವಂಗತ ಟಿ. ಚೌಡಯ್ಯ ಅವರ ಹೆಸರಿನಲ್ಲಿ ಸ್ಥಾಪಿಸಿರುವ ರಾಷ್ಟ್ರಮಟ್ಟದ ಪ್ರಶಸ್ತಿಗೆ ಎ.ವೀರಭದ್ರಯ್ಯ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಆಯ್ಕೆ ಸಮಿತಿಯು ಅಂತರ ರಾಷ್ಟ್ರೀಯ ಸರೋದ್ ವಾದಕ ಡಾ. ರಾಜೀವ್ ತಾರಾನಾಥ್ ಅವರನ್ನು ಆಯ್ಕೆ ಮಾಡಿದೆ.

ಈ ಪ್ರಶಸ್ತಿಯು 1.50 ಲಕ್ಷ ರೂಪಾಯಿ ನಗದು, ಕಂಚಿನ ವಿಗ್ರಹ ಹಾಗೂ ತಾಮ್ರಪತ್ರವನ್ನು ಒಳಗೊಂಡಿದೆ.

ಅರ್ಥಶಾಸ್ತ್ರಕ್ಕೆ ಬೇಕು ಮಾತೃವಾತ್ಸಲ್ಯದ ಮಾನವೀಯ ಸ್ಪರ್ಶ

ವಾತ್ಸಲ್ಯದ ಹಂಗಿನಲ್ಲಿ ಮಹಿಳೆ



ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

'ನಾನು ಮನೆಗೆಲಸದಾಕೆಯನ್ನು ಮದುವೆಯಾದರೆ ದೇಶದ ಜಿಡಿಪಿ ಕಮ್ಮಿಯಾಗುತ್ತದೆ' ಎಂದು ಬರ್ನಾರ್ಡ್ ಶಾ ಹೇಳಿದ್ದರು. ಮದುವೆ ಆದ ಮೇಲೆ ಅವಳ ಕೆಲಸಕ್ಕೆ ಸಂಬಳ ಸಿಗುವುದಿಲ್ಲ. ಜಿಡಿಪಿ ಲೆಕ್ಕಕ್ಕೆ ತೆಗೆದುಕೊಳ್ಳುವುದು ಮಾರುಕಟ್ಟೆಯಲ್ಲಿ ಬೆಲೆ ಕಟ್ಟಲಾಗುವ ಸರಕು- ಸೇವೆಗಳನ್ನು ಮಾತ್ರ. ಹಾಗಾಗಿಯೇ ಶೇಕಡ 92ರಷ್ಟು ಮಹಿಳೆಯರು ಮಾಡುವ ವೇತನರಹಿತ ಕೆಲಸವು ಜಿಡಿಪಿ ಲೆಕ್ಕದಲ್ಲಿ ಬರುವುದಿಲ್ಲ.

ಅಪಘಾತದಲ್ಲಿ ಮೃತರಾದ ದಂಪತಿಯ ಕುಟುಂಬಕ್ಕೆ ಪರಿಹಾರದ ಮೊತ್ತವನ್ನು ನಿರ್ಧರಿಸುವ ಸಂದರ್ಭದಲ್ಲಿ, ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಎನ್.ವಿ.ರಮಣ ಅವರು ತಮ್ಮ ತೀರ್ಪಿನಲ್ಲಿ ಹೀಗೆ ಹೇಳಿದ್ದಾರೆ: 'ಸಾಮಾನ್ಯವಾಗಿ ಮನೆಗೆಲಸವನ್ನೆಲ್ಲಾ ಮಾಡುವವರು ಮಹಿಳೆಯರೇ. ಮನೆಯವರಿಗೆಲ್ಲಾ ಅಡುಗೆ ಮಾಡುತ್ತಾರೆ. ಮನೆಯನ್ನು ಒಪ್ಪಮಾಡುತ್ತಾರೆ. ಮಕ್ಕಳು, ಮುದುಕರು ಮತ್ತು ರೋಗಿಗಳನ್ನು ನೋಡಿಕೊಳ್ಳುತ್ತಾರೆ. ವ್ಯವಸಾಯ, ಪಶುಪಾಲನೆಯಂತಹ ಕಾರ್ಯಗಳಲ್ಲಿ ನೆರವಾಗುತ್ತಿರುತ್ತಾರೆ. ಆದರೂ ಗೃಹಿಣಿಯರು ದುಡಿಯುವುದಿಲ್ಲ, ಅವರಿಂದ ಮನೆಗೆ ಆದಾಯವಿಲ್ಲ ಎಂದೇ ಭಾವಿಸಲಾಗಿದೆ. ಈ ಗ್ರಹಿಕೆ ಬಹುಕಾಲದಿಂದ ಉಳಿದುಕೊಂಡೇ ಬಂದಿದೆ. ಇದನ್ನು ಮೀರಬೇಕಾಗಿದೆ'.

ಮಹಿಳೆ ತೋರುವ ಪ್ರೀತಿ, ವಾತ್ಸಲ್ಯವೇ ಅವಳಿಗೆ ಉರುಳಾಗಿದೆ. ಮಕ್ಕಳು, ಹಿರಿಯರು ಹಾಗೂ ರೋಗಿಗಳನ್ನು ಆರೈಕೆ ಮಾಡುವ ಕೆಲಸ ವಾತ್ಸಲ್ಯವನ್ನು ಬೇಡುತ್ತದೆ. ಆರೈಕೆಯ ಪ್ರಕ್ರಿಯೆಯಲ್ಲಿ ಅವರೊಂದಿಗೆ ಭಾವನಾತ್ಮಕ ಬಂಧ ಬೆಳೆಯುತ್ತದೆ. ಅದರಿಂದಾಗಿ ಅವಳಿಗೆ ಆ ಜವಾಬ್ದಾರಿಯಿಂದ ಕಳಚಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆಕೆಯ ಪ್ರೀತಿಯೇ ಆಕೆಯ ದೌರ್ಬಲ್ಯವೂ ಆಗಿದೆ. ಸ್ತ್ರೀವಾದಿ ಅರ್ಥಶಾಸ್ತ್ರಜ್ಞೆ ನ್ಯಾನ್ಸಿ ಫೋಲ್‌ಬ್ರೆ ಅವರು ಹೇಳುವಂತೆ, 'ಮಹಿಳೆಯರು ಪ್ರೀತಿಯ ಕೈದಿಗಳಾಗಿದ್ದಾರೆ'.

ಮಹಿಳೆಯರ ಈ ಯಾವ ಕೆಲಸಗಳಿಗೂ ವೇತನ ಸಿಗುವುದಿಲ್ಲ. ಒಂದು ಅಂದಾಜಿನ ಪ್ರಕಾರ, 15ರಿಂದ 29ರ ವಯೋಮಾನದ ಮಹಿಳೆಯರು ದಿನಕ್ಕೆ ಸುಮಾರು ಐದೂವರೆ ಗಂಟೆಗಳು ವೇತನವಿಲ್ಲದೆ ದುಡಿಯುತ್ತಾರೆ. ಅದೇ ವಯೋಮಾನದ ಪುರುಷರು ವೇತನವಿಲ್ಲದೆ ಒಂದು ಗಂಟೆ ದುಡಿದರೆ ಹೆಚ್ಚು. ರಾಷ್ಟ್ರೀಯ ಮಾದರಿ ಸಮೀಕ್ಷೆಯ (ಎನ್‌ಎಸ್‌ಎಸ್‌ಒ) ಅಂಕಿಅಂಶದ ಪ್ರಕಾರ, 2019ರಲ್ಲಿ ಗ್ರಾಮೀಣ ಭಾರತದಲ್ಲಿ ಶೇ 93.2ರಷ್ಟು ಮಹಿಳೆಯರು ವೇತನವಿಲ್ಲದ ಕೆಲಸ ಮಾಡುತ್ತಿದ್ದರು. ಹಾಗೆ ವೇತನವಿಲ್ಲದೆ ದುಡಿಯುತ್ತಿದ್ದ ಪುರುಷರ ಸಂಖ್ಯೆ ಬರೀ ಶೇ 29.2ರಷ್ಟು. ಮಹಿಳೆಯರು ಮಾಡುವ ಎಲ್ಲ ಕೆಲಸಗಳೂ ಕುಟುಂಬದ ದೃಷ್ಟಿಯಿಂದ, ದೇಶದ ಆರ್ಥಿಕತೆಯ ದೃಷ್ಟಿಯಿಂದ ತುಂಬಾ ಮುಖ್ಯ. ಆದರೆ ಅರ್ಥಶಾಸ್ತ್ರ ಇದನ್ನು ಲೆಕ್ಕಕ್ಕೇ ತೆಗೆದುಕೊಳ್ಳುವುದಿಲ್ಲ. ಆದಾಯದ ಹಾಗೂ ಸಂಪತ್ತಿನ ಅಸಮಾನತೆಯನ್ನಷ್ಟೇ ಅದು ನೋಡುತ್ತದೆ. ಅದಕ್ಕೆ ಸಂಬಂಧಗಳಲ್ಲಿನ ಅಸಮಾನತೆ ಕಾಣುವುದಿಲ್ಲ. ಇವೆಲ್ಲ ಹೆಂಗಸರ ಕೆಲಸ ಅಂತಷ್ಟೇ ಭಾವಿಸುತ್ತದೆ.

ಮಕ್ಕಳನ್ನು ಹೆರುವುದು ಹಾಗೂ ಹಾಲುಣಿಸುವುದನ್ನು ಬಿಟ್ಟು ಉಳಿದೆಲ್ಲ ಕೆಲಸಗಳನ್ನು ಪುರುಷರೂ ಮಾಡಬಹುದು. ಆದರೆ ಈ ದೈಹಿಕ ವ್ಯತ್ಯಾಸವನ್ನೇ ಬಳಸಿಕೊಂಡು ಲಿಂಗಾಧಾರಿತ ಶ್ರಮ ವಿಭಜನೆಯನ್ನು ರೂಪಿಸಲಾಗಿದೆ. ಪಾಲನೆ- ಪೋಷಣೆಯ ಕೆಲಸ ಮಹಿಳೆಯರದೇ ಅಂತಾಗಿಬಿಟ್ಟಿದೆ. ಹಾಗಾಗಿ ಅವರು ಹೊರಗಡೆ ದುಡಿಯುತ್ತಿದ್ದರೂ ಈ ಕೆಲಸ ತಪ್ಪುವುದಿಲ್ಲ. ಉದ್ಯೋಗಸ್ಥ ಮಹಿಳೆಯರೂ ಮನೆಯಲ್ಲಿ ಸುಮಾರು ಐದಾರು ಗಂಟೆಗಳು ವೇತನರಹಿತವಾಗಿ ದುಡಿಯುತ್ತಾರೆ. ಅದರಲ್ಲೂ ವಿಶೇಷವಾಗಿ, ಹಣ ಕೊಟ್ಟು ಬೇರೆಯವರಿಂದ ಕೆಲಸ ಮಾಡಿಸುವ ಸ್ಥಿತಿಯಲ್ಲಿ ಇಲ್ಲದ ಕುಟುಂಬಗಳಲ್ಲಿ ಮಹಿಳೆಯರ ಹೊರೆ ದುಪ್ಪಟ್ಟಾಗುತ್ತದೆ.

ಗೃಹಕೃತ್ಯಗಳು ಹೆಚ್ಚಿದಷ್ಟೂ ಗೃಹಿಣಿ ಹೆಚ್ಚೆಚ್ಚು ಮನೆಗೇ ಅಂಟಿಕೊಳ್ಳಬೇಕಾಗುತ್ತದೆ. ಉದ್ಯೋಗಸ್ಥ ಮಹಿಳೆಯರ ಸಂಖ್ಯೆ ಕುಸಿಯುತ್ತಿರುವುದಕ್ಕೆ ಇದೂ ಕಾರಣ. ಭಾರತದಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ 20 ವರ್ಷಗಳ ಹಿಂದೆ ಶೇ 30ರಷ್ಟು ಇದ್ದುದು ಈಗ ಶೇ 24ಕ್ಕೆ ಕುಸಿದಿದೆ. ಆದರೆ ಬಿಕ್ಕಟ್ಟಿನ ಸಮಯದಲ್ಲಿ ಕುಟುಂಬದ ಆದಾಯ ಕಡಿಮೆಯಾದಾಗ ಹೆಚ್ಚುವರಿ ವರಮಾನಕ್ಕಾಗಿ ಮಹಿಳೆಯರು ದುಡಿಯಲು ಹೋಗುತ್ತಾರೆ. ವಿವಿಧ ಬಿಕ್ಕಟ್ಟುಗಳು ಇದ್ದಾಗ ಮಹಿಳೆಯರು ಸಂಪಾದನೆ ಮಾಡಿ, ಪರಿಸ್ಥಿತಿ ಸುಧಾರಿಸಿದ ಮೇಲೆ ಗೃಹಕೃತ್ಯಕ್ಕೇ ಹಿಂದಿರುಗಿದ್ದನ್ನು ಅಧ್ಯಯನಗಳು ಗಮನಿಸಿವೆ. ಮಹಿಳೆಯರ ದುಡಿಮೆ ಬಡ ಕುಟುಂಬಗಳಿಗೆ ಒಂದು ರೀತಿಯಲ್ಲಿ ಸಬ್ಸಿಡಿ ಇದ್ದಂತೆ.

ಮಹಿಳೆಯರಿಗೆ ಸಿಗುತ್ತಿರುವ ವೇತನದಲ್ಲೂ ತಾರತಮ್ಯವಿದೆ. ಇದನ್ನು ಜಗತ್ತಿನೆಲ್ಲೆಡೆ ನೋಡಬಹುದು. 1970ರಲ್ಲಿ ಫ್ರಾನ್ಸಿನಲ್ಲಿ ಮಹಿಳಾ ಉದ್ಯೋಗಿಗಳಿಗೆ ಸಿಗುತ್ತಿದ್ದ ವೇತನವು ಪುರುಷರು ಪಡೆಯುತ್ತಿದ್ದ ವೇತನಕ್ಕೆ ಹೋಲಿಸಿದರೆ ಬರೀ ಶೇ 30ರಷ್ಟು. 2020ರಲ್ಲಿ ಅದು ಶೇ 38ರಷ್ಟಾಯಿತು. ಇಬ್ಬರೂ ಮಾಡುವ ಕೆಲಸಗಳಲ್ಲೇ ವ್ಯತ್ಯಾಸವಿದೆ.

ಈ ಲಿಂಗತಾರತಮ್ಯವನ್ನು ಎಲ್ಲ ಕ್ಷೇತ್ರಗಳಲ್ಲೂ ನೋಡಬಹುದು. ಪುರುಷ, ಮಹಿಳೆಯರ ಸಂಖ್ಯೆಯ ಅನುಪಾತ, ಪೌಷ್ಟಿಕಾಂಶದ ಕೊರತೆ, ಶಿಕ್ಷಣದ ಮಟ್ಟ ಇವನ್ನೆಲ್ಲಾ ನೋಡಿದರೆ ತಾರತಮ್ಯದ ತೀವ್ರತೆ ತಿಳಿಯುತ್ತದೆ. ಪ್ರಗತಿಯನ್ನು ಅಳೆಯುವುದಕ್ಕೆ ಬಳಸುವ ಸೂಚಿಗಳಲ್ಲೂ ಸಮಸ್ಯೆಗಳಿವೆ. ಜಿಡಿಪಿ ಲೆಕ್ಕಾಚಾರದಲ್ಲಿ ಮಹಿಳೆಯರ ಬಹುತೇಕ ಚಟುವಟಿಕೆಗಳು ಸೇರುವುದೇ ಇಲ್ಲ. ಜಿಡಿಪಿ ಆ ವರ್ಷ ರಾಷ್ಟ್ರದಲ್ಲಿ ತಯಾರಾದ ಎಲ್ಲಾ ಸರಕು, ಸೇವೆಗಳ ಒಟ್ಟು ಮೊತ್ತವನ್ನು ನೀಡುತ್ತದೆ. ಹಣದ ವಿನಿಮಯ ಇಲ್ಲದ ಮಹಿಳೆಯರ ಮನೆಗೆಲಸ, ಹಳ್ಳಿಗಳಲ್ಲಿ ಮೈಲುಗಟ್ಟಲೆ ನಡೆದು ಹೊತ್ತು ತರುವ ನೀರು, ಉರುವಲು... ಇವೆಲ್ಲಾ ಅದರಲ್ಲಿ ಸೇರುವುದಿಲ್ಲ. ಆದರೆ ಮಾಲ್‌ಗಳಲ್ಲಿ ಮಾರುವ ಬಿಸ್ಲೇರಿ, ಹಾಲಿನಪುಡಿ ಅಂತಹವುಗಳಿಗೆ ಅಲ್ಲಿ ಜಾಗ ಉಂಟು.



ಮಹಿಳೆಯರ ವೇತನರಹಿತ ಕೆಲಸಗಳ ಮೌಲ್ಯವನ್ನು ಅಂದಾಜು ಮಾಡುವುದಕ್ಕೂ ಸಾಧ್ಯವಾಗಬೇಕು. ಅಂತಹ ಹಲವು ಪ್ರಯತ್ನಗಳು ನಡೆದಿವೆ. ಕೆಲವರು ಮಹಿಳೆಯರ ವೇತನರಹಿತ ದುಡಿಮೆಯ ಸಮಯವನ್ನು ಸಮೀಕ್ಷೆಗಳ ಮೂಲಕ ಅಂದಾಜು ಮಾಡಿ, ಕನಿಷ್ಠ ಕೂಲಿಯ ಲೆಕ್ಕದಲ್ಲಿ ಅದರ ಮೌಲ್ಯವನ್ನು ಲೆಕ್ಕ ಹಾಕಿದ್ದಾರೆ. ಕೆಲವರು ಆ ಸಮಯದಲ್ಲಿ ಬೇರೆ ಕೆಲಸ ಮಾಡಿದ್ದರೆ ಬರಬಹುದಾಗಿದ್ದ ವೇತನವನ್ನು ಆಧರಿಸಿ, ಇದರ ಮೌಲ್ಯವನ್ನು ಲೆಕ್ಕ ಹಾಕಲು ಪ್ರಯತ್ನಿಸಿದ್ದಾರೆ. ಎದೆಹಾಲಿನ ಮೌಲ್ಯವನ್ನು ಲೆಕ್ಕ ಹಾಕುವ ಪ್ರಯತ್ನವೂ ನಡೆದಿದೆ. ಆರ್ಥಿಕತೆಗೆ ಮಹಿಳೆಯರ ಕೊಡುಗೆಯನ್ನು ಅರಿಯುವ ದಿಸೆಯಲ್ಲಿ ಇಂತಹ ಪ್ರಯತ್ನಗಳು ಮುಖ್ಯವಾಗುತ್ತವೆ.

ಆದರೆ ಇದಕ್ಕೆ ಇದರದೇ ಆದ ಸವಾಲುಗಳಿವೆ. ಮಹಿಳೆಯರು ಮಾಡುವ ಆರೈಕೆಗಳನ್ನು ಸಾಮಾನ್ಯವಾಗಿ ಕೆಲಸವೆಂದೇ ಭಾವಿಸುವುದಿಲ್ಲ. ಹಾಗಾಗಿ ಜನ ಅವುಗಳನ್ನು ಸಮೀಕ್ಷೆಯಲ್ಲಿ ದಾಖಲಿಸುವುದೇ ಇಲ್ಲ. ಜೊತೆಗೆ ಹೆಚ್ಚಿನ ಸಂದರ್ಭಗಳಲ್ಲಿ ಮಹಿಳೆಯರು ಒಟ್ಟೊಟ್ಟಿಗೆ ಅನೇಕ ಕೆಲಸಗಳನ್ನು ಮಾಡುತ್ತಿರುತ್ತಾರೆ. ಅಡುಗೆ ಮಾಡುತ್ತಿರುವಾಗಲೇ ಮಕ್ಕಳನ್ನು ನೋಡಿಕೊಳ್ಳುತ್ತಿರುತ್ತಾರೆ, ಮನೆಯ ಇತರ ಕೆಲಸಗಳನ್ನೂ ಮಾಡುತ್ತಿರುತ್ತಾರೆ. ಹಾಗಾಗಿ, ಆರೈಕೆಗಾಗಿ ವಿನಿಯೋಗಿಸಿದ ಸಮಯವನ್ನು ಅಂದಾಜು ಮಾಡುವುದು ಕಷ್ಟವಾಗಬಹುದು.

ಈ ಬಗ್ಗೆ ಗಂಭೀರವಾದ ಅಧ್ಯಯನ ನಡೆಯಬೇಕಾಗಿದೆ. ಆಗಷ್ಟೇ ಲಿಂಗತಾರತಮ್ಯ ನಿವಾರಣೆಗೆ ನೀತಿಗಳನ್ನು ರೂಪಿಸಬಹುದು. ಉದಾಹರಣೆಗೆ, ಒಂದು ಅಧ್ಯಯನದ ಪ್ರಕಾರ, ಕುಡಿಯುವ ನೀರಿನ ಸೌಲಭ್ಯ ಹಾಗೂ ಅಡುಗೆ ಇಂಧನ ಸೌಲಭ್ಯಗಳನ್ನು ಒದಗಿಸಿದಾಗ ಮಹಿಳೆಯರ ಮನೆಗೆಲಸದ ಅವಧಿ ಕಡಿಮೆಯಾಗಿದೆ. ಹೊರಗಡೆ ದುಡಿಯುವ ಅವಧಿ ಹೆಚ್ಚಾಗಿದೆ. ಅಂದರೆ ಕೆಲವು ಮೂಲ ಸೌಕರ್ಯಗಳು ದೊರಕಿದಾಗ ಮನೆಗೆಲಸದ ಹೊರೆ ಕಡಿಮೆಯಾಗಿ, ಹೊರಗೆ ದುಡಿಯಲು ಅವಕಾಶವಾಗುತ್ತದೆ. ಮಹಿಳೆಯರ ಕೆಲಸದ ಹೊರೆಯನ್ನು ಕುಟುಂಬ ಹಾಗೂ ಸರ್ಕಾರ ಹಂಚಿಕೊಂಡಾಗ ಮಹಿಳೆಯರಿಗೆ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳುವುದಕ್ಕೆ ಸಮಯ ಸಿಗುತ್ತದೆ.

ಮಹಿಳೆಯರ ದೃಷ್ಟಿಯಿಂದ ಅರ್ಥಶಾಸ್ತ್ರವನ್ನು ನೋಡುವುದಕ್ಕೆ ಸಾಧ್ಯವಾದರೆ ಅದಕ್ಕೆ ಹೊಸ ಆಯಾಮ ಸಾಧ್ಯವಾಗುತ್ತದೆ. ಅರ್ಥಶಾಸ್ತ್ರವು ಪ್ರಗತಿಯನ್ನು ಅರ್ಥೈಸುವ ಕ್ರಮವೂ ಬದಲಾಗುತ್ತದೆ. ಮನುಷ್ಯನ ಕ್ಷೇಮವನ್ನು, ಒಳಿತನ್ನು ಗರಿಷ್ಠಗೊಳಿಸುವ ದಿಸೆಯಲ್ಲಿ ಅದು ಯೋಚಿಸುವುದಕ್ಕೆ ಪ್ರಾರಂಭಿಸಬಹುದು. ಒಂದು ಕೆಲಸ ಉತ್ಪಾದಕವೋ ಅಲ್ಲವೋ ಅನ್ನುವುದನ್ನು ನಿರ್ಧರಿಸುವುದಕ್ಕೂ ಇದೇ ಅಳತೆಗೋಲಾಗಬೇಕು, ವೇತನ ಸಿಗುತ್ತದೋ ಇಲ್ಲವೋ ಅನ್ನುವುದು ಆಗಬಾರದು. ಆಗ 'ಉತ್ಪಾದಕ ಕೆಲಸ'ಗಳಲ್ಲಿ ತೊಡಗಿರುವವರ ಆರೈಕೆಯನ್ನು ಮಾಡುತ್ತಿರುವ ಮಹಿಳೆಯರ ಕೆಲಸವೂ ಉತ್ಪಾದಕ ಎನಿಸಿಕೊಳ್ಳುತ್ತದೆ. ಅದಕ್ಕೂ 'ಬೆಲೆ' ಬರುತ್ತದೆ. ಇಂತಹ ಆಲೋಚನೆ ಸಾಧ್ಯವಾದರೆ ಅರ್ಥಶಾಸ್ತ್ರಕ್ಕೆ ಮಾತೃವಾತ್ಸಲ್ಯದ ಮಾನವೀಯ ಸ್ಪರ್ಶ ಸಿಗುತ್ತದೆ.

ಚುರುಮುರಿ



ಅಂಕವ್ಯಾಧಿ

• ಮಣ್ಣೆರಾಜು

ಮಗಳು ಪಮ್ಮಿಗೆ ಮ್ಯಾಥ್ಸ್ ಟೆಸ್ಟ್‌ನಲ್ಲಿ ಎರಡು ಮಾರ್ಕ್ಸ್ ಕಮ್ಮಿ ಬಂದಿದ್ದಕ್ಕೆ ಶಂಕ್ರಿ, ಸುಮಿ ಆತಂಕಪಟ್ಟರು.

'ಔಟಾಫ್ ಔಟ್ ಬರೆದಿದ್ದೆ ಮಮ್ಮಿ...' ಪಮ್ಮಿ ಅಳು ಜೋರು ಮಾಡಿದಳು.

'ಮ್ಯಾಥ್ಸ್ ಟೀಚರ್ ಕಂಜೂಸ್, ಮಾರ್ಕ್ಸ್ ಕೊಡಲ್ಲ ಅಂತ ನನಗೆ ಮೊದಲೇ ಗೊತ್ತಿತ್ತು' ಸುಮಿಗೆ ಸಿಟ್ಟು ಬಂತು.

'ಕೇಳಿದಷ್ಟು ಫೀಸ್ ಕೊಟ್ಟಿದ್ದೇವೆ, ಮಾರ್ಕ್ಸ್ ಕೊಡಬೇಡ್ವಾ? ಆ ಎರಡು ಮಾರ್ಕ್ಸ್ ಅನ್ನು ಟೀಚರ್ ತಮ್ಮ ಮಗಳಿಗೆಂದು ಮನೆಗೆ ತಗೊಂಡೋದ್ರೇನೊ' ಅಂದ ಶಂಕ್ರಿ.

'ಇರಬಹುದು ಡ್ಯಾಡಿ, ಮೊನ್ನೆ ಮಗಳಿಗೆಂದು ಎರಡು ಚಾಕ್‌ಪೀಸ್ ತಗೊಂಡು ಹೋಗಿದ್ರು' ಪಮ್ಮಿ ಚಾಡಿ ಹೇಳಿದಳು.

'ನಾಳೆ ಸ್ಕೂಲಿಗೆ ಹೋಗಿ ಟೀಚರ್‌ನ ತರಾಟೆಗೆ ತೆಗೆದುಕೊಳ್ತೀನಿ' ಸುಮಿ ಸಿಟ್ಟಾದಳು.

'ಬೇಡ ಮಮ್ಮಿ, ಮ್ಯಾಥ್ಸ್ ಟೀಚರ್ ತುಂಬಾ ಸ್ಟ್ರಿಕ್ಟ್, ಕೇಳಿದರೆ ಇನ್ನೆರಡು ಮಾರ್ಕ್ಸ್ ಕಟ್ ಮಾಡ್ತಾರೆ. ಅವರು ಎಚ್‌ಎಂಗೇ ಹೆದರಲ್ಲ, ನಿನಗೆ ಹೆದರ್ತಾರಾ?!' ಪಮ್ಮಿ ಹೆದರಿಸಿದಳು.

ತಡೆಯಲಾಗದೆ ಸುಮಿ ತನ್ನ ಚಿಕ್ಕಮ್ಮನಿಗೆ ಫೋನ್ ಮಾಡಿ ಸಂಕಟ ಹೇಳಿಕೊಂಡಳು. ಚಿಕ್ಕಮ್ಮ ಬಂಧುಬಳಗಕ್ಕೆ ವಿಷಯ ಮುಟ್ಟಿಸಿದಳು. ಶಂಕ್ರಿ ಮೊಬೈಲ್‌ಗೆ ಕಾಲ್ ಮೇಲೆ ಕಾಲ್ ಬಂದವು.

'ಕಡಿಮೆ ಮಾರ್ಕ್ಸ್ ತಗೊಂಡಿದ್ದಾಳೆ ಅಂತ ಮಗಳಿಗೆ ಹೊಡೆಯೋದು, ಬಡಿಯೋದು ಮಾಡ್ಬೇಡಿ. ಮೂರನೇ ಕ್ಲಾಸ್ ಹುಡುಗಿ ಮುಂದೆ ಬುದ್ಧಿ ಕಲಿಯುತ್ತಾಳೆ' ಎಂದರು ಒಬ್ಬರು.

'ಈಗಲೇ ಹೀಗಾದ್ರೆ ನಿಮ್ಮ ಮಗಳು ಮುಂದೆ ಚೆನ್ನಾಗಿ ಓದಿ ಡಾಕ್ಟರಾಗ್ತಾಳಾ?' ಎಂದರು ಇನ್ನೊಬ್ಬರು.

'ಸ್ಕೂಲ್ ಚೇಂಜ್ ಮಾಡಿ, ಜಾಸ್ತಿ ಮಾರ್ಕ್ಸ್ ಕೊಡುವ ಸ್ಕೂಲಿಗೆ ಸೇರಿಸಿ' ಮತ್ತೊಬ್ಬರ ಸಲಹೆ.

'ಎಜುಕೇಷನ್ ನೆಗ್ಲೆಕ್ಟ್ ಮಾಡ್ಬೇಡಿ, ಟ್ಯೂಷನ್ನಿಗೆ ಕಳಿಸಿ'. 'ಮಗಳ ಜಾತಕವನ್ನು ಜ್ಯೋತಿಷಿಗೆ ತೋರಿಸಿ, ದೋಷವಿದ್ದರೆ ಪರಿಹಾರ ಮಾಡಿಕೊಳ್ಳಿ' ಎಂಬೆಲ್ಲಾ ಸಲಹೆಗಳು ಬಂದವು.

ತಲೆಕೆಟ್ಟು ಶಂಕ್ರಿ ಮೊಬೈಲ್ ಬಂದ್ ಮಾಡಿದ.

ಸಂಗತ

ಪ್ರವಾಸ: ಪ್ರಯಾಸವಲ್ಲ, ಪ್ರಶಾಂತ!

ಈಗ ಪ್ರವಾಸ ಎಂಬುದು ಆರೋಗ್ಯದ ಅವಶ್ಯಕತೆಯೂ ಹೌದು ಜೀವನಕೌಶಲಗಳನ್ನು ಪ್ರಾಯೋಗಿಕವಾಗಿ ಕಲಿಸುವ ವಿಧಾನವೂ ಹೌದು

• ಡಾ. ಕೆ.ಎಸ್.ಪವಿತ್ರ

ಸೆಪ್ಟೆಂಬರ್ 27, ಜಗತ್ತು 'ವಿಶ್ವ ಪ್ರವಾಸೋದ್ಯಮ ದಿನ' ಆಚರಿಸುತ್ತದೆ. 'ಕೋಶ ಓದು ದೇಶ ಸುತ್ತು' ಎಂಬ ಪ್ರಸಿದ್ಧ ನಾಣ್ಣುಡಿ ನಮ್ಮೆಲ್ಲರಿಗೂ ಮೊದಲಿನಿಂದ ಗೊತ್ತು. ಕೋಶ ಓದುವುದನ್ನು ನಾವು ಅಷ್ಟಿಷ್ಟೇ ಉಳಿಸಿಕೊಂಡಿದ್ದರೂ ದೇಶ ಸುತ್ತುವುದರಲ್ಲಿ ಮಾತ್ರ ಬಹಳಷ್ಟು ಮುಂದುವರಿದಿದ್ದೇವೆ. ವಿವಿಧ ರೀತಿಯ ಪ್ರವಾಸೋದ್ಯಮಗಳನ್ನು ಬೆಳೆಸಿದ್ದೇವೆ. ಪ್ರವಾಸ ಮಾಡುತ್ತಲೇ ಕೆಲಸವನ್ನೂ ಮುಂದುವರಿಸುವ ಸಾಧ್ಯತೆಯನ್ನೂ ಪ್ರಯೋಗ ಮಾಡಿ ನೋಡಿದ್ದೇವೆ. ಆದರೆ ಪ್ರವಾಸದಿಂದ ಮನಸ್ಸಿನ ಮೇಲೆ, ನಮ್ಮದೇ ವ್ಯಕ್ತಿತ್ವದ ಮೇಲೆ ಆಗಬಹುದಾದ ಪ್ರಭಾವಗಳನ್ನು ಮಾತ್ರ ನಾವು ಗಮನಿಸುವ ಸಾಧ್ಯತೆ ಕಡಿಮೆ.

ಕೋವಿಡ್ ನಂತರದ ದಿನಗಳಲ್ಲಿ ಈಗ ಪ್ರವಾಸದ 'ಸೀಸನ್' ಯಾವಾಗಲೂ ಎಂಬಂತಾಗಿಬಿಟ್ಟಿದೆ. 'ಆಫ್ ಸೀಸನ್' ಎಂಬ ಪದ ಯಾವ ಪ್ರವಾಸಿ ತಾಣಕ್ಕೂ ಅನ್ವಯಿಸದಂತಾಗಿದೆ. ಇಂತಹ ಸ್ಥಿತಿಯಲ್ಲಿ ಪ್ರವಾಸ ನಮ್ಮ ಜೀವನದ ಮೇಲೆ ಬೀರುವ ಪರಿಣಾಮ, ನಮ್ಮ ಪ್ರವಾಸ ಇತರ ಜನರ, ನೆಲದ ಮೇಲೆ ಉಳಿಸುವ ಪರಿಣಾಮದ ಬಗ್ಗೆ ಚಿಂತನೆ ಮಾಡದಿದ್ದರೆ ಪ್ರವಾಸ ಮಾಡಿಯೂ ಅದರ ಪೂರ್ಣ ಲಾಭ ನಮಗೆ ದಕ್ಕದೇ ಹೋದೀತು. ಶಾಲಾ ಪ್ರವಾಸಗಳನ್ನು ಏರ್ಪಡಿಸುವ ಶಾಲೆಗಳು, ಅವುಗಳಿಗೆ ಹೋಗುವ ಮಕ್ಕಳು, ಪ್ರವಾಸಗಳಿಗೆ ಮಕ್ಕಳನ್ನು ಕರೆದೊಯ್ಯದಿರುವ ಪೋಷಕರು ಈ ಅಂಶಗಳನ್ನು ಗಮನಿಸಬೇಕು.

ಪ್ರಯಾಣ ಎಂಬುದು ಪ್ರವಾಸದ ಅವಿಭಾಜ್ಯ ಅಂಗ. 'ಪ್ರಯಾಣ' ಎಂಬ ಪ್ರಕ್ರಿಯೆಯನ್ನು ನಾವು ನೋಡುವುದು ಸಾಮಾನ್ಯವಾಗಿ ಒಂದು ಯಾಂತ್ರಿಕ, ಬೋರು ಹೊಡೆಸುವ, ಪ್ರಯಾಸದ ಕ್ರಿಯೆಯಾಗಿ. ದೂರದ ಸ್ಥಳಗಳಿಗೆ ಪ್ರವಾಸ ಹೋಗುವ ಹೆಚ್ಚಿನವರ ಒಂದೇ ದೂರು 'ಅದು ದೂರ, ಬಹಳ ಹೊತ್ತು ಪ್ರಯಾಣಿಸಬೇಕು' ಎಂಬುದು. ದೂರ ಹೆಚ್ಚಿದಷ್ಟೂ ಖರ್ಚು ಹೆಚ್ಚುತ್ತದೆ, ಸಮಯವೂ ಹೆಚ್ಚು ಬೇಕಾಗುತ್ತದೆ ಎಂದರೂ, ಪ್ರಯಾಣ ಕಷ್ಟಕರ ಎಂಬ ಭಾವನೆಯೇ ಪ್ರಧಾನವಾಗಿ ಇಲ್ಲಿ ನಿಲ್ಲುತ್ತದೆ. ಆದರೆ ಪ್ರಯಾಣವನ್ನೂ ಪ್ರವಾಸದ ಅಂಗವಾಗಿ, ಕುತೂಹಲಕಾರಿ ಅನುಭವವಾಗಿ ಪರಿಗಣಿಸುವುದು ಉಪಯುಕ್ತವಷ್ಟೇ ಅಲ್ಲ, ಮನಸ್ಸು, ಮಿದುಳಿನ ದೃಷ್ಟಿಯಿಂದ ಪ್ರಯೋಜನಕಾರಿಯೂ ಹೌದು.

ನಡಿಗೆ, ಬಸ್ಸು, ಕಾರು, ರೈಲು, ವಿಮಾನ, ಹಡಗು ಯಾವುದೇ ಇರಲಿ, ಸಂಚಾರ ವ್ಯವಸ್ಥೆ ಹೇಗೇ ಇರಲಿ, ಆ ಕ್ಷಣದಲ್ಲಿ ಪೂರ್ತಿಯಾಗಿ ಅನುಭವಿಸುವುದು ವಿವಿಧ ಅಂಶಗಳನ್ನು ಕಲಿಯುವ ಅವಕಾಶವನ್ನು ನಮಗೆ ನೀಡುತ್ತದೆ. ಆನ್‌ಲೈನ್ ಪರದೆಗಳಲ್ಲಿಯೇ ಮುಳುಗಿರುವ ಇಂದಿನ ಮಕ್ಕಳಿಗೆ ಜಗತ್ತಿನೊಡನೆ ಕೆಲಗಂಟೆಗಳಾದರೂ ವ್ಯವಹರಿಸುವ, ಸಂವಹನ ಕೌಶಲವನ್ನು ಕಲಿಯುವ ಅವಕಾಶಗಳನ್ನೂ ಒದಗಿಸಬಲ್ಲದು. ಪ್ರವಾಸಕ್ಕಾಗಿ ಯೋಜಿಸುವುದು, ಮಾಹಿತಿ ಕಲೆಹಾಕುವುದು, ಪ್ರವಾಸದಲ್ಲಿ ಉಂಟಾಗಬಹುದಾದ ಸಮಸ್ಯೆಗಳಿಗೆ ಅಲ್ಲಲ್ಲಿಯೇ ಪರಿಹಾರೋಪಾಯ ಹುಡುಕುವುದು, ಹೊಸ ವಾತಾವರಣ, ಸಂಸ್ಕೃತಿಗೆ ತಕ್ಷಣ ತೆರೆದುಕೊಂಡು ಹೊಂದಿಕೊಳ್ಳುವುದು ಇವೆಲ್ಲವೂ ವಿಶ್ವ ಆರೋಗ್ಯ ಸಂಸ್ಥೆ ಶಿಫಾರಸು ಮಾಡುವ, ಜೀವನಕೌಶಲಗಳನ್ನು ಪ್ರಾಯೋಗಿಕವಾಗಿ ನಾವು ಕಲಿಯಬಹುದಾದ ವಿಧಾನಗಳೇ.

ಸಮುದ್ರ, ಬೆಟ್ಟ, ಕಾಡು, ಮ್ಯೂಸಿಯಂಗಳನ್ನು ನೋಡುವಾಗ ಆ ಕ್ಷಣದಲ್ಲಿ ಬದುಕಿನ ಸಮಸ್ಯೆಗಳಿಂದ ಮನಸ್ಸು-ಬುದ್ಧಿಗಳು ತಾವೂ 'ಪ್ರವಾಸ' ಮಾಡಿ ಸಮಸ್ಯೆಗಳನ್ನು ಮರೆಯುತ್ತವೆ. ಶಾಂತವಾದ ಮನಸ್ಸು-ಬುದ್ಧಿಗೆ ಸಮಸ್ಯೆಗೆ ಪರಿಹಾರ ಹುಡುಕುವುದು ಸುಲಭವಾಗುತ್ತದೆ. ಈ ಅಂಶಗಳನ್ನು ಮನೋವೈಜ್ಞಾನಿಕ ಅಧ್ಯಯನಗಳು ಸ್ಪಷ್ಟಪಡಿಸಿವೆ. ಅಷ್ಟೇ ಅಲ್ಲ, ಒಂದೊಮ್ಮೆ ದೈಹಿಕವಾಗಿ ಪ್ರವಾಸ ಮಾಡುವುದು ಸಾಧ್ಯವೇ ಇಲ್ಲ ಎಂಬಂತಹ ಪರಿಸ್ಥಿತಿಯಲ್ಲಿ (ಉದಾ: ವಿವಿಧ ಆರೋಗ್ಯ ಸಮಸ್ಯೆಗಳು, ಕೋವಿಡ್‌ನಂತಹ ಸಂಚಾರ ನಿರ್ಬಂಧದ ಸನ್ನಿವೇಶ) ಹಿಂದಿನ ಪ್ರವಾಸದ ಅನುಭವಗಳನ್ನು ಮೆಲುಕು ಹಾಕುವುದು, ಪ್ರವಾಸ ಕಥನಗಳನ್ನು ಓದುವುದು, ಇತರರ ಅನುಭವಗಳನ್ನು ಕೇಳುವುದು ಆರೋಗ್ಯಕ್ಕೆ ಒಂದು ಉಪಯುಕ್ತ ಚಟುವಟಿಕೆಯಾಗಬಲ್ಲದು.



ಪ್ರವಾಸ ಎಂಬುದು 'ವೈಭವ' ಎನ್ನುವುದಕ್ಕಿಂತ ಅದು ಆರೋಗ್ಯದ ಅವಶ್ಯಕತೆಯೂ ಹೌದು. ಪ್ರತಿನಿತ್ಯ ನಮ್ಮಲ್ಲಿ ಏನೂ ಇಲ್ಲ ಎಂಬ ಬಗ್ಗೆಯೇ ಚಿಂತಿಸುವ ನಮಗೆ 'ನಮ್ಮಲ್ಲಿ ಏನೆಲ್ಲ ಇದೆ, ನಾವು ಬದುಕುತ್ತಿದ್ದೇವೆ' ಎಂಬ ಸತ್ಯದ ಅರಿವು ಮೂಡಿಸುವ ಅವಕಾಶ ದೊರೆಯುತ್ತದೆ. ನಾವು ಪ್ರವಾಸ ಮಾಡಿದಾಗ ಅಲ್ಲಿಯ ಪರಿಸರದ ಮೇಲೆ, ಸ್ಥಳೀಯರ ಬದುಕಿನ ಮೇಲೂ ನಮ್ಮ ಪ್ರವಾಸದ ಪರಿಣಾಮವನ್ನು ಉಳಿಸಿಬಿಡಬಹುದು ಎಂಬ ಅರಿವು ಅಗತ್ಯ. ಪ್ಲಾಸ್ಟಿಕ್ ನಿಷೇಧವಿದ್ದರೂ ಪ್ಲಾಸ್ಟಿಕ್ ಎಸೆಯುವುದು, ಪ್ಲಾಸ್ಟಿಕ್ ಬಾಟಲಿಯಲ್ಲಿ ನೀರು ಕುಡಿದು ಬಿಸಾಡುವುದು, ನೀರನ್ನು ವ್ಯರ್ಥ ಮಾಡುವುದು, ಕಸ ಎಲ್ಲೆಂದರಲ್ಲಿ ಎಸೆಯುವುದು, ಉಗುಳುವುದು... ಇವೆಲ್ಲ ಎಂತಹ ವಿದ್ಯಾವಂತ ನಾಗರಿಕರೂ ಮಾಡುವುದನ್ನು ನಾವು ನೋಡಬಲ್ಲೆವು. ಇದರ ನೇರ ಪರಿಣಾಮ ಪರಿಸರದ ಹಾಳುಗೆಡಹುವಿಕೆ, ಜಾಗತಿಕ ತಾಪಮಾನದ ಏರುವಿಕೆ.

'ಪ್ರವಾಸೋದ್ಯಮ ಮತ್ತು ಹಸಿರು ಬಂಡವಾಳ' ಎಂಬ ಈ ಬಾರಿಯ ಧ್ಯೇಯ ವಾಕ್ಯವನ್ನು ನಿಜವಾಗಿಸಲು ಬೇಕಾದದ್ದು ಮತ್ತೆ ಪರಿಸರವನ್ನು ಬದ್ಧತೆ, ನಿಷ್ಠೆ, ಅರಿವಿನಿಂದ ಕಾಯ್ದುಕೊಳ್ಳುವ ಪ್ರವಾಸಿ ಮನಸ್ಸುಗಳೇ. ನಾವು ಪರಿಸರ ಪ್ರಜ್ಞೆಯನ್ನು ಪ್ರವಾಸದಲ್ಲಿ ಕಾಯ್ದುಕೊಂಡು, ಪಾಲಿಸಿ ಮಕ್ಕಳಿಗೆ ಮಾದರಿಯಾಗಬೇಕು. ಸ್ಥಿರ ಪ್ರವಾಸೋದ್ಯಮದ ಕನಸನ್ನು ಸಾಧ್ಯವಾಗಿಸಬೇಕು.

ವಾಚಕರ ವಾಣಿ

ಬದುಕಿದ್ದಾಗ ಒಂದು, ಸತ್ತ ಬಳಿಕ ಮತ್ತೊಂದು...

'ಅನಂತಕುಮಾರ್ ಅವರು ಈಗ ಇದ್ದಿದ್ದರೆ ಕಾವೇರಿ ನದಿ ನೀರಿನ ವಿಚಾರದಲ್ಲಿ ಇಂದು ನಮಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ 'ಅನಂತ ನಮನ- 64' ಕಾರ್ಯಕ್ರಮದಲ್ಲಿ, ಬಿಜೆಪಿ ಮುಖಂಡರಾಗಿದ್ದ ದಿವಂಗತ ಅನಂತಕುಮಾರ್ ಅವರ ಗುಣಗಾನ ಮಾಡಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಈ ಮಟ್ಟಕ್ಕೆ ಬೆಳೆಯಲು ಅನಂತಕುಮಾರ್ ಅವರೇ ಕಾರಣ ಎಂದು ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ. ಅನಂತಕುಮಾರ್ ಅವರು ಜೀವಂತ ಇದ್ದಾಗ ಇವರಿಗೇಕೆ ಈಗಿರುವ ಭಾವನೆ ಇರಲಿಲ್ಲ?

ಶಿವಕುಮಾರ ಬಂಡೋಳಿ, ಹುಣಸಗಿ

ಲೈಂಗಿಕ ಅಲ್ಪಸಂಖ್ಯಾತರ ಕಿರಿಕಿರಿಗೆ ಸಹಕಾರ?

ಲೈಂಗಿಕ ಅಲ್ಪಸಂಖ್ಯಾತರಿಂದ ಬೆಂಗಳೂರಿನಲ್ಲಿ ಸಂಜೀವಿನಿ ಅವರಿಗೆ ಆದಂತಹ ಕೆಟ್ಟ ಅನುಭವ (ವಾ.ವಾ., ಸೆ. 26) ನಮಗೂ ಆಗಿತ್ತು. ಮಾರ್ಚ್ ತಿಂಗಳಲ್ಲಿ ನಮ್ಮ ಗೃಹಪ್ರವೇಶದ ದಿನ ಸರಿಯಾಗಿ ಊಟದ ಸಮಯಕ್ಕೆ ಒಂದು ತಂಡ ಬಂದು, ಅತಿಥಿಗಳ ಸಮ್ಮುಖದಲ್ಲಿ ನಮ್ಮ ಮಾನ ಕಳೆದು, ಕೇಳಿದಷ್ಟು ಹಣ ಪಡೆದು ವಾಪಸ್ ಹೋಯಿತು. ಅದಾದ ಹತ್ತು ನಿಮಿಷಗಳ ನಂತರ ಇನ್ನೊಂದು ತಂಡ ಬಂದಿತು. ಪುನಃ ಇದೇ ನಾಟಕದ ಪುನರಾವರ್ತನೆ. ಇವರಿಗೆ ಕೆಲವು ಆಟೊ ಡ್ರೈವರ್‌ಗಳು, ಸಮಾರಂಭಗಳಿಗೆ ಶಾಮಿಯಾನ ಅಳವಡಿಸುವವರಿಂದ ಇಂತಹ ಸಮಾರಂಭಗಳ ಮಾಹಿತಿ ಮಾತ್ರವಲ್ಲದೆ ಸಹಕಾರವೂ ಸಿಗುತ್ತದೆ, ಇದರಲ್ಲಿ ಅವರ ಪಾಲುದಾರಿಕೆಯೂ ಇದೆ ಎಂಬ ಮಾತಿದೆ.

ಪೊಲೀಸ್ ನಿಷ್ಕ್ರಿಯತೆ ಇಂತಹವರಿಗೆ ಉತ್ತೇಜನ ನೀಡುತ್ತದೆ. ಕರ್ಣಕಠೋರವಾಗಿ ಚಪ್ಪಾಳೆ ತಟ್ಟುತ್ತಾ ರೈಲು, ಬಸ್ ನಿಲ್ದಾಣಗಳಲ್ಲಿ, ಸಂಚಾರ ಸಿಗ್ನಲ್ ತಾಣಗಳಲ್ಲಿ ಜನರಿಗೆ ವಿಪರೀತ ಕಾಟ ಕೊಡುವ ಇವರಿಗೆ ಮೈ ಬಗ್ಗಿಸಿ ಕೆಲಸ ಮಾಡಲು ಇಷ್ಟವಿದ್ದಂತಿಲ್ಲ. ಈ ಕಿರಿಕಿರಿಗೆ ಕೊನೆ ಎಂದು?

ಗೋಪಾಡ ಕೃಷ್ಣ ಭಟ್, ಬೆಂಗಳೂರು

ನಮ್ಮ ಕ್ಲಿನಿಕ್: ಆರೋಗ್ಯ ಹದಗೆಡದಿರಲಿ!

ಜನರಿಗೆ ಉಚಿತವಾಗಿ ಆರೋಗ್ಯ ಸೇವೆ ನೀಡುವ ಉದ್ದೇಶದ 'ನಮ್ಮ ಕ್ಲಿನಿಕ್'ಗಳ ಅನಾರೋಗ್ಯದ ಬಗ್ಗೆ ತಿಳಿದು ಬೇಸರವಾಯಿತು. ದೇಶದಲ್ಲಿ ಭ್ರಷ್ಟಾಚಾರ, ಬಡತನದ ಶಾಶ್ವತ ನಿರ್ಮೂಲನೆಗೆ ಉಚಿತ ಶಿಕ್ಷಣ, ಸಮಾನ ಶಿಕ್ಷಣ ಹಾಗೂ ಉಚಿತ ಆರೋಗ್ಯ ಸೇವೆಯೇ ಮದ್ದು.

ಇದರಲ್ಲಿ 'ನಮ್ಮ ಕ್ಲಿನಿಕ್' ಬಹುಸಂಖ್ಯೆಯ ಜನರಿಗೆ ಉಚಿತವಾಗಿ ಆರೋಗ್ಯ ಸೇವೆ ನೀಡುವ ಯೋಜನೆ. ಇದನ್ನು ಯಾರೇ ಆರಂಭಿಸಿರಲಿ, ಈ ಯೋಜನೆ ಯಶಸ್ವಿಯಾದರೆ ಆರೋಗ್ಯ ಕ್ಷೇತ್ರದಲ್ಲಿನ ಭ್ರಷ್ಟಾಚಾರಕ್ಕೆ ಕೊಂಚ ಕಡಿವಾಣ ಹಾಕಿದಂತೆ ಆಗುತ್ತದೆ.

ಇಂದು ಕೆಲವು ಖಾಸಗಿ ಆಸ್ಪತ್ರೆಗಳು ವಿನಾಕಾರಣ ಸಣ್ಣ ಕಾಯಿಲೆಗೂ ಲಕ್ಷಾಂತರ ರೂಪಾಯಿ ವಸೂಲಿ ಮಾಡುತ್ತಿವೆ. ಹೀಗಿರುವಾಗ ನಮ್ಮ ಕ್ಲಿನಿಕ್‌ಗಳು ಉಚಿತವಾಗಿ ಸೇವೆ ನೀಡಿದರೆ, ಇಂದಿನ ಒತ್ತಡದ ಬದುಕಿನಲ್ಲಿ ಆರೋಗ್ಯ ಸೇವಾ ಕ್ಷೇತ್ರದಲ್ಲಿನ ದೊಡ್ಡ ಸಮಸ್ಯೆ ಬಗೆಹರಿಯಲಿದೆ. ಈ ಕ್ಲಿನಿಕ್‌ಗಳಲ್ಲಿ ಗರಿಷ್ಠ ಮಟ್ಟದ ಸೇವೆ ಒದಗಿಸಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುವಂತಾಗಲಿ. ಈಗ ನೀಡುತ್ತಿರುವ ಉಚಿತ ಯೋಜನೆಗಳಲ್ಲಿ ಈ ಯೋಜನೆಯೂ ಸೇರ್ಪಡೆಯಾದರೆ ಒಳ್ಳೆಯದು.

ಎ.ಆರ್.ಗೋವಿಂದ ಸ್ವಾಮಿ, ಬೆಂಗಳೂರು

ಕಾವೇರಿ: ಬೇಕಾಗಿದೆ ಒಗ್ಗಟ್ಟು ಪ್ರದರ್ಶನ

ಕರ್ನಾಟಕದ ಕಾಂಗ್ರೆಸ್ ನೇತೃತ್ವದ ಸರ್ಕಾರ ಮತ್ತು ತಮಿಳುನಾಡಿನ ಡಿಎಂಕೆ ನೇತೃತ್ವದ ಸರ್ಕಾರದ ನಡುವೆ ಉತ್ತಮ ಬಾಂಧವ್ಯ ಇದೆ. ಆದರೂ ಎರಡೂ ರಾಜ್ಯಗಳು ಮಾತುಕತೆಯ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ಮುಂದಾಗುತ್ತಿಲ್ಲ. ಇನ್ನೊಂದೆಡೆ, ಕರ್ನಾಟಕದಿಂದ ಆಯ್ಕೆಯಾದ ಬಿಜೆಪಿಯ 25 ಸಂಸದರಲ್ಲಿ ಒಬ್ಬರು ಕೂಡ ಸಮಸ್ಯೆ ಬಗೆಹರಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತಿಲ್ಲ. ಆದರೆ ಎಲ್ಲಾ ಪಕ್ಷದವರು ಕಾವೇರಿ ಹೋರಾಟದಲ್ಲಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮುಂದಾಗಿರುವುದಂತೂ ಸತ್ಯ.

ರಾಜಕೀಯದವರು ಸಮಸ್ಯೆಯನ್ನು ಜೀವಂತವಾಗಿ ಇಡಲು ಪ್ರಯತ್ನಿಸುತ್ತಾರೆಯೇ ವಿನಾ ಪೂರ್ಣವಾಗಿ ಅದನ್ನು ಬಗೆಹರಿಸಲು ಮುಂದಾಗುವುದಿಲ್ಲ. ಸಾಮಾನ್ಯ ಪ್ರಜೆಗಳು ಇದನ್ನು ಅರಿತು ಸ್ವಯಂಪ್ರೇರಿತರಾಗಿ ಹೋರಾಟದಲ್ಲಿ ಪಾಲ್ಗೊಂಡು, ಕಾವೇರಿ ಸಮಸ್ಯೆಯ ಬಗ್ಗೆ ಸರ್ಕಾರಗಳಿಗೆ ಬಿಸಿ ಮುಟ್ಟಿಸಬೇಕಿದೆ. ಜನರನ್ನು ಒಡೆದು ಆಳುವ ರಾಜಕೀಯ ಪಕ್ಷಗಳನ್ನು ತಿರಸ್ಕರಿಸಿ ಎಲ್ಲಾ ಕನ್ನಡಿಗರು ಒಟ್ಟುಗೂಡಿ ಒಗ್ಗಟ್ಟು ಪ್ರದರ್ಶಿಸಬೇಕಾಗಿದೆ.

ಸಂತೋಷ್ ಕುಮಾರ್ ಎಲ್., ಹಿರಿಯೂರು

ನೀರಿನ ಕೊರತೆ ನಿವಾರಣೆಗೆ ವೈಜ್ಞಾನಿಕ ಮಂತ್ರದಂಡ

ರಾಜಕೀಯ ಪಕ್ಷಗಳು ಅಥವಾ ಸಂಘಟನೆಗಳು ಬಂದ್ ನಡೆಸುವುದರಿಂದ ಅಥವಾ ಪ್ರತಿಭಟನೆ ಮಾಡುವುದರಿಂದ ಕಾವೇರಿ ನೀರಿನ ಕೊರತೆಗೆ ಪರಿಹಾರ ದೊರೆಯುವುದಿಲ್ಲ. ಎರಡೂ ರಾಜ್ಯಗಳಲ್ಲಿ ನೀರಿನ ಕೊರತೆಯಿಂದ ಬೆಳೆ ನಷ್ಟವಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀರಿನ ಸಮಸ್ಯೆಗೆ ಪರಿಹಾರೋಪಾಯವಾಗಿ ಕೃಷಿಯಲ್ಲಿ ವೈಜ್ಞಾನಿಕ ಮಂತ್ರದಂಡ ಬಳಸಲು ವಿಫಲವಾಗಿವೆ.

ನಬಾರ್ಡ್ ಸಂಸ್ಥೆಯ ಸಂಶೋಧನೆಯಂತೆ, ಹೆಚ್ಚು ನೀರು ಬೇಡುವ, ಕಡಿಮೆ ಆದಾಯ ನೀಡುವ ಬೆಳೆಯಾದ ಭತ್ತದ ಬದಲು ಕಡಿಮೆ ನೀರಿನಲ್ಲಿ ಹೆಚ್ಚು ಆದಾಯ ನೀಡುವ ಬೆಳೆಯಾದ ಆಲೂಗಡ್ಡೆ ಬೆಳೆಯುವುದರಿಂದ ಲಾಭವಾಗುತ್ತದೆ. ಬೆಳೆ ಪರಿವರ್ತನೆ ಮಾಡಿ ನೆಲಗಡಲೆ, ಮುಸುಕಿನಜೋಳ, ಎಲೆಕೋಸು, ದೊಣ್ಣೆ ಮೆಣಸಿನಕಾಯಿ, ಕಲ್ಲಂಗಡಿ, ಹೂವು ಬೆಳೆಯುವುದು ನೀರಿನ ಸಮಸ್ಯೆಗೆ ಪರಿಹಾರವಾಗಬಲ್ಲದು.

ಡಾ. ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪಶ್ಚಿಮ ಬಂಗಾಳದ ಹೊಂಡಗಳ ಯಶೋಗಾಥೆ

ನೂರಾರು ಟಿಎಂಸಿ ಅಡಿಗಳಷ್ಟು ನೀರು ಸಂಗ್ರಹಣಾ ಸಾಮರ್ಥ್ಯವಿರುವ ಬೃಹತ್ ಜಲಾಶಯಗಳನ್ನು ನಿರ್ಮಿಸುವುದರಿಂದ ಬರಗಾಲದ ಸಂದರ್ಭದಲ್ಲಿ ನೀರಿನ ಕೊರತೆಯನ್ನು ನೀಗಿಸಬಹುದು ಎಂಬುದು ಬಹುತೇಕ ಸರ್ಕಾರಗಳು ಇಡುವ ವಾದ. ಇಂತಹ ಯೋಜನೆಗಳ ಅನುಷ್ಠಾನಕ್ಕೆ ಸಾವಿರಾರು ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಆದರೆ, ಪಶ್ಚಿಮ ಬಂಗಾಳ ಸರ್ಕಾರವು ದೊಡ್ಡ-ದೊಡ್ಡ ಜಲಾಶಯಗಳ ಬದಲಿಗೆ ಕಿರುಹೊಂಡಗಳ ನಿರ್ಮಾಣಕ್ಕೆ ಒತ್ತು ನೀಡಿದೆ. ಹೊಂಡಗಳ ಮೂಲಕವೇ ನೀರಿನ ಕೊರತೆಯನ್ನು ನೀಗುವ ಮತ್ತು ಜನರ ಆರ್ಥಿಕತೆಯನ್ನು ಸುಧಾರಿಸುವ ರೀತಿಯಲ್ಲಿ ಯೋಜನೆ ರೂಪಿಸಿದೆ. ಮಳೆ ಕೊರತೆಯಾದಾಗಲೆಲ್ಲಾ ನೀರಿನ ಕೊರತೆ ಎದುರಿಸುವ ಕರ್ನಾಟಕಕ್ಕೂ ಇಂತಹ ಯೋಜನೆ ಮಾದರಿಯಾಗಬಲ್ಲದು

ಪ್ರಜಾವಾಣಿ ವಾರ್ತೆ


ಎಲ್ಲಾ ರಾಜ್ಯಗಳಂತೆ ಪಶ್ಚಿಮ ಬಂಗಾಳದಲ್ಲೂ ದೊಡ್ಡ ಜಲಾಶಯಗಳು ಇವೆಯಾದರೂ, ಯಾವೊಂದು ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯವೂ 50 ಟಿಎಂಸಿ ಅಡಿಯನ್ನು ಮುಟ್ಟುವುದಿಲ್ಲ. ಅತಿ ಮಳೆ ಮತ್ತು ಸದಾ ಪ್ರವಾಹಕ್ಕೆ ತುತ್ತಾಗುವ ರಾಜ್ಯಗಳಲ್ಲಿ ಒಂದಾದ ಪಶ್ಚಿಮ ಬಂಗಾಳವೂ ನೀರಿನ ಸಂರಕ್ಷಣೆಗೆ ಹಲವು ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದೆ. ಪ್ರವಾಹದ ಪರಿಣಾಮವನ್ನು ತಗ್ಗಿಸುವುದು ಈ ಯೋಜನೆಗಳ ಮುಖ್ಯ ಉದ್ದೇಶವಾದರೆ, ಅದರ ಜತೆಯಲ್ಲೇ ಕೃಷಿ ಬಳಕೆ ಮತ್ತು ಮೀನುಸಾಕಾಣಿಕೆಯ ಉದ್ದೇಶವನ್ನೂ ಈ ಯೋಜನೆಗಳು ಹೊಂದಿವೆ. ಎಲ್ಲಾ ರಾಜ್ಯಗಳು ಮಳೆ ನೀರಿನ ಸಂಗ್ರಹ, ನೀರಿನ ಸಂರಕ್ಷಣೆ ಮತ್ತು ನೀರಿನ ಬಳಕೆಗೆ ಕೆರೆ ಮತ್ತು ಕಾಲುವೆಗಳ ಮೊರೆ ಹೋಗಿದ್ದರೆ, ಪಶ್ಚಿಮ ಬಂಗಾಳವು ಹೊಂಡಗಳ ಮೊರೆ ಹೋಗಿದೆ. ದೇಶದಲ್ಲಿ ಅತಿಹೆಚ್ಚು ಹೊಂಡಗಳಿರುವ ರಾಜ್ಯಗಳಲ್ಲಿ ಪಶ್ಚಿಮ ಬಂಗಾಳ ಮೊದಲ ಸಾಲಿನಲ್ಲಿದೆ. ರಾಜ್ಯದಲ್ಲಿ 7.47 ಲಕ್ಷ ಜಲಮೂಲಗಳಿವೆ. ಅವುಗಳಲ್ಲಿ ಶೇ 61ರಷ್ಟು ಅಂದರೆ, 4.57 ಲಕ್ಷ ಜಲಮೂಲಗಳು ಹೊಂಡಗಳೇ ಆಗಿವೆ.

ಪಶ್ಚಿಮ ಬಂಗಾಳದ ಜನರು ಸಾಂಪ್ರದಾಯಿಕವಾಗಿ ಹೊಂಡಗಳನ್ನು ಬಳಸುತ್ತಾರೆ. ಬಹುತೇಕ ರೈತರೂ ತಮ್ಮ ಜಮೀನಿನಲ್ಲೇ ಹೊಂಡವನ್ನು ನಿರ್ಮಿಸಿಕೊಂಡು ನೀರು ಸಂಗ್ರಹಿಸುತ್ತಾರೆ. ಆ ನೀರನ್ನು ಕೃಷಿ ಮತ್ತು ಮೀನುಸಾಕಾಣಿಕೆಗೆ ಬಳಸುತ್ತಾರೆ. ಈ ಹೊಂಡಗಳು ತೀರಾ ಚಿಕ್ಕದಾಗಿದ್ದು, ಕೆಲವೇ ಚದರ ಮೀಟರ್ ವಿಸ್ತೀರ್ಣದಷ್ಟು ಇರುತ್ತವೆ. ದೊಡ್ಡವು ಎಂದರೂ ಅರ್ಧ ಎಕರೆಗಿಂತಲೂ ಕಡಿಮೆ ವಿಸ್ತೀರ್ಣ ಹೊಂದಿರುತ್ತವೆ. 2008-10ರ ಅವಧಿಯಲ್ಲಿ ಒಮ್ಮೆ ಪ್ರವಾಹ ಮತ್ತೊಮ್ಮೆ ಮಳೆ ಕೊರತೆಯನ್ನು ಪಶ್ಚಿಮ ಬಂಗಾಳ ಎದುರಿಸಿತ್ತು. ಅದರ ಪರಿಣಾಮವಾಗಿ ಜಲಸಂರಕ್ಷಣೆ ಯೋಜನೆಯನ್ನು ಬಂಗಾಳ ಸರ್ಕಾರ ಆರಂಭಿಸಿತ್ತು.

2011ರಲ್ಲಿ ಸರ್ಕಾರವು 'ನೀರನ್ನು ಉಳಿಸಿ, ನೀರನ್ನು ಭರಿಸಿ' ಎಂಬ ಯೋಜನೆಗೆ ಚಾಲನೆ ನೀಡಿತು. ಅತಿಯಾದ ಮಳೆ ಮತ್ತು ಪ್ರವಾಹದ ಸಂದರ್ಭದಲ್ಲಿ ನೀರನ್ನು ಹೊಂಡ, ಕಟ್ಟೆ ಮತ್ತು ಕೆರೆಗಳಲ್ಲಿ ಸಂಗ್ರಹಿಸುವುದು ಮತ್ತು ಅದನ್ನು ಕೃಷಿಗೆ ಬಳಸಿಕೊಳ್ಳುವುದು. ಜತೆಗೆ ಮೀನು ಸಾಕಾಣಿಕೆಗೆಂದೇ ಹೊಂಡಗಳನ್ನು ನಿರ್ಮಿಸಿ, ಮೀನು ಸಾಕಾಣಿಕೆ ಮಾಡುವುದು. ಮಳೆ ಕೊರತೆಯ ವರ್ಷಗಳಲ್ಲಿ ಮೀನು ಸಾಕಾಣಿಕೆ ಹೊಂಡಗಳ ನೀರನ್ನು ಕೃಷಿಗೆ ಬಳಸಿಕೊಳ್ಳುವುದು 'ನೀರನ್ನು ಉಳಿಸಿ, ನೀರನ್ನು ಭರಿಸಿ'ಯ ಕಾರ್ಯಯೋಜನೆಯಾಗಿತ್ತು. ಇಂತಹ ಹೊಂಡಗಳನ್ನು ಸರ್ಕಾರವೆ ನಿರ್ಮಿಸಿದರೂ, ಅವನ್ನು ರೈತರ ಜಮೀನಿನಲ್ಲಿ ನಿರ್ಮಿಸುತ್ತಿತ್ತು. ಆಯಾ ಜಮೀನಿನ ಒಡೆಯನೇ ಆಯಾ ಹೊಂಡದ ಒಡೆಯನೂ ಆಗಿರುತ್ತಿದ್ದ. ಹೊಂಡ ನಿರ್ಮಾಣದ ಸಂಪೂರ್ಣ ವೆಚ್ಚವನ್ನು ನರೇಗಾ ಯೋಜನೆ ಅಡಿಯಲ್ಲಿ ಭರಿಸಲಾಗುತ್ತಿತ್ತು. ಹೊಂಡ ಮಾಡಿಸಿಕೊಂಡ ರೈತನಿಗೆ ಭೂಗಂದಾಯದಲ್ಲಿ ರಿಯಾಯಿತಿ ಮತ್ತಿತರ ಸವಲತ್ತುಗಳನ್ನು ಒದಗಿಸಿತ್ತು. ಹೀಗಾಗಿ ಎಲ್ಲಾ ರೈತರು ತಮ್ಮ ಜಮೀನಿನಲ್ಲಿ ಹೊಂಡಗಳನ್ನು ನಿರ್ಮಿಸಿಕೊಂಡರು. ಈ ಕಾರಣದಿಂದಲೇ ಪಶ್ಚಿಮ ಬಂಗಾಳದಲ್ಲಿನ ಒಟ್ಟು ಜಲಮೂಲಗಳಲ್ಲಿ ಶೇ 96.6ರಷ್ಟು ಜಲಮೂಲಗಳು ಖಾಸಗಿ ವ್ಯಕ್ತಿಗಳ ಒಡೆತನದಲ್ಲಿಯೇ ಇವೆ.

ಈ ಯೋಜನೆ ಆರಂಭಿಸುವುದಕ್ಕೂ ಮುನ್ನ ರಾಜ್ಯದಲ್ಲಿ ಇಂತಹ 2.80 ಲಕ್ಷದಷ್ಟು ಹೊಂಡಗಳಿದ್ದವು. 'ನೀರನ್ನು ಉಳಿಸಿ, ನೀರನ್ನು ಭರಿಸಿ' ಯೋಜನೆ ಅಡಿ ಸರ್ಕಾರವು 1.7 ಲಕ್ಷದಷ್ಟು ಹೊಂಡಗಳನ್ನು ಹೊಸದಾಗಿ ನಿರ್ಮಿಸಿತು. ಬರಿಯ ಹೊಂಡಗಳು ಮಾತ್ರವಲ್ಲದೆ, ಚೆಕ್‌ಡ್ಯಾಂಗಳು ಮತ್ತು ಬ್ಯಾರೇಜ್‌ಗಳ ನಿರ್ಮಾಣಕ್ಕೂ ರಾಜ್ಯ ಸರ್ಕಾರ ಒತ್ತು ನೀಡಿದೆ. ಪಶ್ಚಿಮ ಬಂಗಾಳವು ದೇಶದಲ್ಲೇ ಅತಿಹೆಚ್ಚು ಚೆಕ್‌ಡ್ಯಾಂ ಮತ್ತು ಬ್ಯಾರೇಜ್ ಹೊಂದಿರುವ ರಾಜ್ಯ ಎನಿಸಿದೆ. ಕೇಂದ್ರ ಸರ್ಕಾರದ ಜಲಮೂಲಗಳ ಗಣತಿಯ ಪ್ರಕಾರ ಪಶ್ಚಿಮ ಬಂಗಾಳದಲ್ಲಿ 2.81 ಲಕ್ಷ ಚೆಕ್‌ಡ್ಯಾಂ ಮತ್ತು ಬ್ಯಾರೇಜ್‌ಗಳಿವೆ. ರಾಜ್ಯದಲ್ಲಿ 30 ಕಿರು ಜಲಾಶಯಗಳು ಮತ್ತು 5 ದೊಡ್ಡ ಜಲಾಶಯಗಳಿದ್ದರೂ, ಕೃಷಿ ಜಮೀನಿಗೆ, 4.57 ಲಕ್ಷದಷ್ಟಿರುವ ಹೊಂಡಗಳಿಗೆ ನೀರನ್ನು ಈ ಚೆಕ್‌ಡ್ಯಾಂ ಮತ್ತು ಬ್ಯಾರೇಜ್‌ಗಳಿಂದ ಒದಗಿಸಲಾಗುತ್ತದೆ.

ನದಿ-ತೊರೆಗಳಿಗೆ ಅಡ್ಡವಾಗಿ ನಿರ್ಮಿಸಿರುವ ಚೆಕ್‌ಡ್ಯಾಂ ಮತ್ತು ಬ್ಯಾರೇಜ್‌ಗಳಿಂದ ಹೊಂಡಗಳಿಗೆ ನೀರು ಹರಿದುಹೋಗಲು ಕಾಲುವೆಗಳನ್ನು ನಿರ್ಮಿಸಿ, ಅವನ್ನು ಸದಾ ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಲಾಗಿದೆ. ಇದರಿಂದಾಗಿ ಅತಿಯಾದ ಮಳೆ ಬಂದರೂ, ಪ್ರವಾಹ ಉಂಟಾಗದೆ ಹೆಚ್ಚುವರಿ ನೀರು ಹೊಂಡಗಳಿಗೆ ಹರಿದುಹೋಗುತ್ತದೆ. ಮಳೆ ಕೊರತೆಯಾದಾಗ ಕಾಲುವೆಗಳಿಗೆ ನೀರು ಹರಿಸಲಾಗುತ್ತದೆ. ಹೀಗಾಗಿ ರಾಜ್ಯದ ಶೇ 93ರಷ್ಟು ಜಲಮೂಲಗಳು ವರ್ಷದ ಎಲ್ಲಾ ಕಾಲದಲ್ಲೂ ತುಂಬೇ ಇರುತ್ತವೆ ಎನ್ನುತ್ತದೆ ಕೇಂದ್ರ ಸರ್ಕಾರದ ಜಲಮೂಲಗಳ ಗಣತಿ ವರದಿ. ಹೀಗೆ ಕಡಿಮೆ ಪ್ರಮಾಣದ ಸಂಗ್ರಹ ಸಾಮರ್ಥ್ಯ ಇರುವ ಜಲಮೂಲಗಳನ್ನು ನಿರ್ಮಿಸಿ ಪ್ರವಾಹ ನಿಯಂತ್ರಣ ಮತ್ತು ಮಳೆ ಕೊರತೆ ನಿರ್ವಹಣೆ ಎರಡನ್ನೂ ಸಾಧಿಸಿರುವುದಕ್ಕೆ ಪಶ್ಚಿಮ ಬಂಗಾಳದ 'ನೀರನ್ನು ಉಳಿಸಿ, ನೀರನ್ನು ಭರಿಸಿ' ಯೋಜನೆ ಉತ್ತಮ ನಿದರ್ಶನ.



7.47 ಲಕ್ಷ ಪಶ್ಚಿಮ ಬಂಗಾಳದಲ್ಲಿನ ಒಟ್ಟು ಜಲಮೂಲಗಳ ಸಂಖ್ಯೆ



ತೀಸ್ತಾ ನದಿಯ ಉಪನದಿಯೊಂದಕ್ಕೆ ಅಡ್ಡವಾಗಿ ನಿರ್ಮಿಸಲಾದ ಚೆಕ್‌ಡ್ಯಾಂ

ದೊಡ್ಡ ಜಲಾಶಯಗಳಷ್ಟೇ ಪರಿಹಾರವಲ್ಲ

ದೊಡ್ಡ ದೊಡ್ಡ ಅಣೆಕಟ್ಟುಗಳು ಮಾನವನ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸಿವೆ. ಇದರಲ್ಲಿ ಯಾವುದೇ ಸಂಶಯವಿಲ್ಲ. ಇಂಥ ಅಣೆಕಟ್ಟುಗಳಿಂದ ಮಾನವನು ಪಡೆದುಕೊಳ್ಳುತ್ತಿರುವ ಲಾಭ ಕೂಡ ಅಷ್ಟೇ ಮಹತ್ವದ್ದು. ಆದರೆ, ಹಲವು ಸಂದರ್ಭಗಳಲ್ಲಿ ಪ್ರಮುಖವಾಗಿ ಸಾಮಾಜಿಕವಾಗಿ ಹಾಗೂ ಪರಿಸರದ ದೃಷ್ಟಿಯಿಂದ ಈ 'ಲಾಭ'ಕ್ಕಾಗಿ ತೆರುತ್ತಿರುವ ಹಣವು ಅನಾವಶ್ಯಕ ಹಾಗೂ ಒಪ್ಪಲು ಅಸಾಧ್ಯವಾದುದು. ಜಲಾಶಯ ನಿರ್ಮಾಣದಿಂದಾಗಿ ಜನರು ತಮ್ಮ ಮನೆ, ಜಮೀನುಗಳನ್ನು ಕಳೆದುಕೊಂಡಿದ್ದಾರೆ, ಮುಳುಗಿಸಿಕೊಂಡಿದ್ದಾರೆ

ವರ್ಲ್ಡ್ ಕಮಿಷನ್ ಆನ್ ಡ್ಯಾಂ

ಜಲಾಶಯ	ರಾಜ್ಯ	ನೀರು ಸಂಗ್ರಹಣಾ ಸಾಮರ್ಥ್ಯ (ಟಿಎಂಸಿಗಳಲ್ಲಿ)	ಮುಳುಗಡೆ ಪ್ರದೇಶ (ಹೆಕ್ಟೇರ್‌ಗಳಲ್ಲಿ)
ಭಾಖಡಾ ನಂಗಲ್	ಹಿಮಾಚಲ ಪ್ರದೇಶ	348	30,000
ಪೊಂಗಾ	ಹಿಮಾಚಲ ಪ್ರದೇಶ	302	30,459
ನಾಗಾರ್ಜುನ ಸಾಗರ	ಆಂಧ್ರಪ್ರದೇಶ-ತೆಲಂಗಾಣ	408	22,000
ಸರ್ದಾರ್ ಸರೋವರ	ಗುಜರಾತ್-ಮಧ್ಯಪ್ರದೇಶ	335	37,690
ಹೀರಾಕುಡ್	ಒಡಿಶಾ	290	74,300
ಇಂದಿರಾ ಸಾಗರ	ಮಧ್ಯಪ್ರದೇಶ	432	91,348
ರಿಹಂದ್	ಉತ್ತರ ಪ್ರದೇಶ	375	18,000

ದೇಶದ ಕೆಲವು ಬೃಹತ್ ಜಲಾಶಯಗಳು

ದೇಶದಲ್ಲಿ ದೊಡ್ಡ ಪ್ರಮಾಣದ ನೀರು ಸಂಗ್ರಹ ಸಾಮರ್ಥ್ಯ ಹೊಂದಿದ ಹಲವು ಅಣೆಕಟ್ಟುಗಳಿವೆ. ಸ್ವಾತಂತ್ರ ಪಡೆದ ಕೆಲವು ವರ್ಷಗಳಲ್ಲಿಯೇ ಹಲವು ಅಣೆಕಟ್ಟು ನಿರ್ಮಾಣಕ್ಕೆ ಶಿಲಾನ್ಯಾಸ ಮಾಡಲಾಗಿತ್ತು. ಹಸಿರು ಕ್ರಾಂತಿ ಮಾಡಲಾಗಿತ್ತು. ದೊಡ್ಡ ಪ್ರಮಾಣದ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿದ ದೇಶದ ಪ್ರಥಮ ಅಣೆಕಟ್ಟು ಎಂದರೆ ಭಾಖಡಾ ನಂಗಲ್ ಅಣೆಕಟ್ಟು. ಎರಡು ಮೂರು ರಾಜ್ಯಗಳ ಬಹುಭಾಗಕ್ಕೆ ಇಂಥ ಹಲವು ಅಣೆಕಟ್ಟೆಗಳು ನೀರುಣಿಸಿವೆ. ಜೊತೆಗೆ ಕೃಷಿ ಭೂಮಿಯ ನೀರಾವರಿಗೆ ಆಧಾರವಾಗಿದ್ದಾವೆ.

ಇಂತೆಲ್ಲಾ ಹಲವು ಕ್ರಾಂತಿಕಾರಿ ಬದಲಾವಣೆಗಳನ್ನು ತಂದ ಅಣೆಕಟ್ಟುಗಳು ಜನರ ಬದುಕನ್ನೂ ಮುಳುಗಿಸಿವೆ ಎನ್ನುವುದೂ ಸತ್ಯ. ಅಣೆಕಟ್ಟು ನಿರ್ಮಾಣಕ್ಕಾಗಿ ತಮ್ಮ ಸ್ವಂತ ಭೂಮಿಗಳನ್ನು ನೀಡಿದ ಜನರ ಬದುಕು ದುಸ್ತರವಾಗಿದೆ; ಅವರುಗಳು ಬೀದಿಗೆ ಬಿದ್ದಿದ್ದಾರೆ. ಇಂಥ ಹಲವು ಯೋಜನೆಗಳ ಸಂತ್ರಸ್ತರಿಗೆ ಪುನರ್‌ವಸತಿ ಕಲ್ಪಿಸಿಕೊಡಬೇಕಾದ ಸರ್ಕಾರಗಳು ತಮ್ಮ ಕರ್ತವ್ಯ ಮರೆತಿವೆ. ಅಣೆಕಟ್ಟು ನಿರ್ಮಾಣವಾದ 50, 40 ವರ್ಷಗಳ ಬಳಿಕವೂ ಜನರಿಗೆ ಪುನರ್‌ವಸತಿ ಕಲ್ಪಿಸಿ ಕೊಡಲು ಸರ್ಕಾರಗಳು ಸೋತಿವೆ. ಭೂಮಿ ಮುಳುಗಿಸಿಕೊಂಡಿದ್ದಕ್ಕಾಗಿ ಸರ್ಕಾರ ಗೊತ್ತು ಮಾಡಿದ್ದ ಪರಿಹಾರ ಕೂಡ ಇಂದಿಗೂ ಎಲ್ಲ ಸಂತ್ರಸ್ತರ ಕೈ ಸೇರಿಲ್ಲ. 2017ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಹುಟ್ಟುಹಬ್ಬದ ದಿನದಂದು ಸರ್ದಾರ್ ಸರೋವರ ಅಣೆಕಟ್ಟಿನ ಉದ್ಘಾಟನೆ ಮಾಡಿದ್ದರು. ಈ ಅಣೆಕಟ್ಟಿನ ನಿರ್ಮಾಣ ಹಿಂದೆ ಹೋರಾಟದ ದೊಡ್ಡ ಇತಿಹಾಸವೇ ಇದೆ. ನೆಹರೂ ಅವಧಿಯಲ್ಲಿ ರೂಪಿಸಲಾದ ಈ ಯೋಜನೆಗೆ ಆಗಿನಿಂದಲೂ ವಿರೋಧವಿದ್ದೇ ಇತ್ತು. ಈ ಅಣೆಕಟ್ಟು ನಿರ್ಮಾಣವನ್ನು ವಿರೋಧಿಸಿ ಹೋರಾಟಗಾರ್ತಿ ಮೇಧಾ ಪಾಟ್ಕರ್ ಅವರು 'ನರ್ಮದಾ ಬಚಾವೊ ಆಂದೋಲನ'ವನ್ನು ಕಟ್ಟಿದ್ದರು. ಇಂದಿನವರೆಗೂ ಈ ಹೋರಾಟ ಮುಂದುವರೆದಿದೆ. 2017ರಲ್ಲಿ ಮೋದಿ ಅವರು ಅಣೆಕಟ್ಟನ್ನು ಉದ್ಘಾಟಿಸಿದ ದಿನವೇ, ಮಧ್ಯಪ್ರದೇಶದಲ್ಲಿ ಮುಳುಗಡೆ ಆಗುತ್ತಿದ್ದ ಗ್ರಾಮಸ್ಥರು ಹಾಗೂ ಮೇಧಾ ಪಾಟ್ಕರ್ ಅವರು ಜೊತೆಗೂಡಿ ನದಿ ನೀರಿನಲ್ಲಿ ಅರ್ಧ ಮುಳುಗಿ ಪ್ರತಿಭಟನೆ ನಡೆಸಿದ್ದರು.

'ರಾಷ್ಟ್ರೀಯ ಹಿತಕ್ಕಾಗಿ' ಮನೆ, ಜಮೀನು ಕಳೆದುಕೊಂಡ ಜನರ ಸಂಕಷ್ಟವನ್ನು ಆಲಿಸುವ ವ್ಯವಧಾನವನ್ನು ಸರ್ಕಾರಗಳು ಇನ್ನುವರೆಗೂ ಮೈಗೂಡಿಸಿಕೊಂಡಿಲ್ಲ. ಅಣೆಕಟ್ಟುಗಳಿಂದ ಆಗುವ ಲಾಭದ ಕುರಿತು ಮಾತ್ರವೇ ಸರ್ಕಾರಗಳು ಗಮನ ಕೇಂದ್ರೀಕರಿಸುತ್ತವೆ. ಇದು ಒಪ್ಪತಕ್ಕದ್ದಲ್ಲ ಎನ್ನುವುದು ವರ್ಲ್ಡ್ ಕಮಿಷನ್ ಆನ್ ಡ್ಯಾಂನ ಸ್ಪಷ್ಟ ನಿಲುವು. ಇಂಥ 'ಅಭಿವೃದ್ಧಿ ಸಂತ್ರಸ್ತರು ಕಾಲಾಂತರಲ್ಲಿ ಕಳೆದೇ ಹೋಗುತ್ತಾರೆ. ಇವರುಗಳಿಗೆ ಸರ್ಕಾರಗಳು ನೀಡುವ ಭರವಸೆಗಳನ್ನು ಕಡ್ಡಾಯವಾಗಿ ಈಡೇರಿಸಬೇಕು ಎಂದೂ ಅದು ಅಭಿಪ್ರಾಯಪಡುತ್ತದೆ.

ಆಧಾರ: ಕೇಂದ್ರ ಜಲ ಸಂಪನ್ಮೂಲ ಸಚಿವಾಲಯದ 'ಜಲಮೂಲಗಳ ಗಣತಿ ವರದಿ-1 ಮತ್ತು 2', ಪಶ್ಚಿಮ ಬಂಗಾಳದ ಜಲ ಸಂಪನ್ಮೂಲ ಇಲಾಖೆ ವರದಿಗಳು



ಮೇಘನಾ ಗಾಂವ್ಕರ್, ರವಿಚಂದ್ರನ್

ಜಡ್ಜ್‌ಮೆಂಟ್ ಮುಗಿಸಿದ ರವಿಚಂದ್ರನ್

ಕ್ರೇಜಿಸ್ಟಾರ್ ರವಿಚಂದ್ರನ್, ದಿಗಂತ್, ಮೇಘನಾ ಗಾಂವ್ಕರ್ ಮುಖ್ಯಭೂಮಿಕೆಯಲ್ಲಿರುವ 'ದ ಜಡ್ಜ್ ಮೆಂಟ್' ಚಿತ್ರೀಕರಣ ಮುಕ್ತಾಯಗೊಂಡಿದೆ. ಜಿ9 ಕಮ್ಯೂನಿಕೇಷನ್ ಮೀಡಿಯಾ ಆ್ಯಂಡ್ ಎಂಟರ್‌ಟೈನ್‌ಮೆಂಟ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ ಚಿತ್ರಕ್ಕೆ ಗುರುರಾಜ ಕುಲಕರ್ಣಿ(ನಾಡಗೌಡ) ಆ್ಯಕ್ಷನ್-ಕಟ್ ಹೇಳಿದ್ದಾರೆ.

ಧನ್ಯಾ ರಾಮ್‌ಕುಮಾರ್, ಲಕ್ಷ್ಮೀ ಗೋಪಾಲಸ್ವಾಮಿ, ಟಿ.ಎಸ್. ನಾಗಾಭರಣ, ಪ್ರಕಾಶ್ ಬೆಳವಾಡಿ, ರಂಗಾಯಣ ರಘು, ಸುಜಯ್ ಶಾಸ್ತ್ರಿ, ರಾಜೇಂದ್ರ ಕಾರಂತ್, ರವಿಶಂಕರ್ ಗೌಡ ಮೊದಲಾದವರು ತಾರಾಗಣದಲ್ಲಿದ್ದಾರೆ.

'ಇದೊಂದು ಕಾನೂನಿನ ಕಥೆಯನ್ನು ಹೊಂದಿರುವ ಚಿತ್ರ. ಸರ್ಕಾರ ಮತ್ತು ನ್ಯಾಯಾಂಗದ ಸುತ್ತ ನಡೆಯುವ ಘಟನೆಗಳನ್ನು ಬಳಸಿಕೊಂಡು ಕಾಲ್ಪನಿಕ ಕಥೆ ಹೆಣೆಯಲಾಗಿದೆ. ಮಾತಿನ ಭಾಗದ ಚಿತ್ರೀಕರಣ ಮುಕ್ತಾಯಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸ ಪ್ರಾರಂಭವಾಗಿದೆ' ಎಂದು ನಿರ್ದೇಶಕ ಗುರುರಾಜ ಕುಲಕರ್ಣಿ ತಿಳಿಸಿದ್ದಾರೆ.

ಈ ಚಿತ್ರಕ್ಕೆ ಪಿಕೆಎಚ್ ದಾಸ್ ಛಾಯಾಗ್ರಹಣ, ಅನೂಪ್ ಸೀಳಿನ್ ಸಂಗೀತ ನಿರ್ದೇಶನ, ಕೆಂಪರಾಜು ಬಿ.ಎಸ್. ಸಂಕಲನವಿದೆ.



ಫೈರ್ ಫ್ಲೈ
ಮೊದಲ ಹಂತದ ಚಿತ್ರೀಕರಣ ಪೂರ್ಣ

ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣದ 'ಫೈರ್ ಫ್ಲೈ' ಸಿನಿಮಾದ ಮೊದಲ ಹಂತದ ಚಿತ್ರೀಕರಣ ಮುಕ್ತಾಯವಾಗಿದೆ. ಶ್ರೀ ಮುತ್ತು ಸಿನಿ ಸರ್ವೀಸ್‌ನಡಿ ಈ ಸಿನಿಮಾ ಕಳೆದ ಜೂನ್‌ನಲ್ಲಿ ಸೆಟ್ಟೇರಿತ್ತು.

ಮೂರು ವೆಬ್ ಸರಣಿಗಳನ್ನು ನಿರ್ಮಾಣ ಮಾಡಿದ್ದ ನಿವೇದಿತಾ ಅವರು ಈ ಸಿನಿಮಾ ನಿರ್ಮಾಣದ ಮುಖಾಂತರ ಸ್ಯಾಂಡಲ್‌ವುಡ್‌ಗೆ ಅಧಿಕೃತವಾಗಿ ಪ್ರವೇಶ ಮಾಡಿದ್ದರು. ಚಿತ್ರದ ಮೊದಲ ಹಂತದ ಚಿತ್ರೀಕರಣ ಮೈಸೂರು, ಬೆಂಗಳೂರಿನ ಸುತ್ತಮುತ್ತ ನಡೆದಿದೆ. ಅಕ್ಟೋಬರ್ ತಿಂಗಳ ಮೂರನೇ ವಾರದಿಂದ ದ್ವಿತೀಯ ಹಂತದ ಚಿತ್ರೀಕರಣ ಶುರುವಾಗಲಿದೆ ಎಂದಿದೆ ಚಿತ್ರತಂಡ.

'ಫೈರ್ ಫ್ಲೈ' ಸಿನಿಮಾವನ್ನು ನಟ ವಂಶಿ ನಿರ್ದೇಶಿಸುತ್ತಿದ್ದು, ನಾಯಕರಾಗಿಯೂ ಕನ್ನಡಕ್ಕೆ ಪರಿಚಯಗೊಳ್ಳಲಿದ್ದಾರೆ. ಚಿತ್ರಕ್ಕೆ ಅಭಿಲಾಷ್ ಕಲ್ಲಟ್ಟಿ ಛಾಯಾಚಿತ್ರಗ್ರಹಣವಿದ್ದು, ಚರಣ್ ರಾಜ್ ಸಂಗೀತ ನೀಡಿದ್ದಾರೆ. ರಘು ನಿಡುವಳ್ಳಿ ಸಂಭಾಷಣೆ ಬರೆದಿದ್ದಾರೆ. ವಂಶಿ ಈ ಹಿಂದೆ ಪಿಆರ್‌ಕೆ ನಿರ್ಮಾಣದ 'ಮಾಯಾಬಜಾರ್' ಚಿತ್ರದಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದರು. ಗುರು ದೇಶಪಾಂಡೆ ಅವರ 'ಪೆಂಟಗನ್' ಸಿನಿಮಾದಲ್ಲೂ ಪ್ರಮುಖ ಪಾತ್ರ ನಿರ್ವಹಿಸಿದ್ದರು. ಜಯ್ ರಾಮ್ ಈ ಚಿತ್ರಕ್ಕೆ ಸಹನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕಾಲಿಗೆ ಬ್ಯಾಂಡೇಜ್ ಸುತ್ತಿಕೊಂಡಿರುವ ಯುವಕರು, ನೆಲದ ಮೇಲೆ ತೆವಳುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ವಿಡಿಯೊ ಜೊತೆಯಲ್ಲಿ, 'ಬಾಲಕಿಯೊಬ್ಬಳ ದುಪ್ಪಟವನ್ನು ಎಳೆದು, ಸೈಕಲ್‌ನಿಂದ ಆಕೆ ಬಿದ್ದು, ಬೈಕ್‌ವೊಂದು ಆಕೆಯ ಮೇಲೆ ಹರಿದು ಬಾಲಕಿಯ ಸಾವಿಗೆ ಕಾರಣರಾದ ಶಹಬಾಸ್, ಅರ್ಬಾಸ್ ಹಾಗೂ ಫೈಸಲ್‌ರ ಈಗಿನ ಸ್ಥಿತಿ ನೋಡಿ. ಯೋಗಿ ಇದ್ದರೆ ಎಲ್ಲವೂ ಸಾಧ್ಯ' ಎಂಬ ಬರಹವೂ ಇದೆ. ಆದರೆ, ಇದು ಸುಳ್ಳು ಸುದ್ದಿ.

ಹಲವು ಮಾಧ್ಯಮಗಳು ಉತ್ತರ ಪ್ರದೇಶದಲ್ಲಿ ನಡೆದ ಘಟನೆಯ ಆರೋಪಿಗಳನ್ನು ಪೊಲೀಸರು ಠಾಣೆಗೆ ಕರೆದುಕೊಂಡು ಬರುತ್ತಿರುವ ವಿಡಿಯೊವನ್ನು ಪ್ರಕಟಿಸಿವೆ. ಆ ವಿಡಿಯೊದಲ್ಲಿ ಇರುವ ಆರೋಪಿಗಳಿಗೂ, ಹಂಚಿಕೆಯಾಗುತ್ತಿರುವ ವಿಡಿಯೊದಲ್ಲಿರುವ ವ್ಯಕ್ತಿಗಳಿಗೂ ಹೋಲಿಕೆ ಇಲ್ಲ. ಹಂಚಿಕೆಯಾಗುತ್ತಿರುವ ವಿಡಿಯೊದಲ್ಲಿರುವ ಆರೋಪಿಗಳ ಕೃತ್ಯದ ಬಗ್ಗೆ 'ದೈನಿಕ್ ಭಾಸ್ಕರ್' ಪತ್ರಿಕೆ ವರದಿ ಮಾಡಿವೆ. ಕೊಲೆ ಆರೋಪಿಗಳಾದ ತೇಜ್‌ವೀರ್, ಯುವರಾಜ್ ಹಾಗೂ ಬಂಟಿ ರಾಜಸ್ಥಾನದವರು ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಪ್ರೀತಿ, ಪ್ರೇಮ, ಪ್ರಣಯ

ನುಡಿ ಬೆಳಗು



ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಈ ಹುಡುಗ ತುಂಬಾ ಚೆನ್ನಾಗಿ ಓದುತ್ತಿದ್ದ. ತಂದೆ ಇಲ್ಲದೆ ತಾಯಿ ದುಡಿಮೆಯಲ್ಲಿ ಬೆಳೆಯುತ್ತಿದ್ದ. ಇವನ ತಾಯಿ ಒಂದು ಸಣ್ಣ ಹೊಟೇಲಿನಲ್ಲಿ ಕೆಲಸ ಮಾಡುತ್ತಿದ್ದರು. ಅನೇಕ ಸಲ ಮಗನ ಓದಿನ ಹಂಬಲ ಹೊತ್ತು ಆಸೆಗಣ್ಣಿಂದ ಕಾಲೇಜಿಗೆ ಬರುತ್ತಿದ್ದರು. ಈತನೂ ನಗುಮುಖದ ಮುಗ್ಧ. ಆದರೆ ಏನಾಯ್ತು ಏನೋ ಗೊತ್ತಿಲ್ಲ. ವಿಜ್ಞಾನ ವಿಭಾಗದಲ್ಲಿ ನಿಗಾ ವಹಿಸಿ ಓದುತ್ತಿದ್ದ ಇವನು ಒಮ್ಮೆಗೆ ಮಂಕಾಗಿ ಬಿಟ್ಟ. ಕಾರಣ ಕೇಳಿದರೆ ಹೇಳದೆ ಮೌನವಾಗುತ್ತಿದ್ದ. ಅವನ ಆಪ್ತ ಗೆಳೆಯರ ವಿಚಾರಿಸಿದರೂ ವಿಷಯ ಸ್ಪಷ್ಟವಾಗಲಿಲ್ಲ. ನಡು ನಡುವೆ ಕಾಲೇಜಿಗೆ ಚಕ್ಕರ್ ಹೊಡೆಯುವುದು ಶುರುವಾಯಿತು.

ಬದಲಾದ ಮಗನ ನಡವಳಿಕೆಯ ಬಗ್ಗೆ ನನ್ನ ಜೊತೆ ತಾಯಿ ಬೇಸರದಿಂದ ಹೇಳಿಕೊಂಡರು. 'ನಾನು ಕರೆದು ಮಾತಾಡುತ್ತೇನೆ ಇರಿ' ಎಂದು ಹೇಳಿದೆ. 'ಯಾಕೋ ಏನಾಗಿದೆ ನಿನಗೆ' ಎಂದು ಪ್ರೀತಿಯಿಂದಲೇ ಕೇಳಿದೆ. ಮನಸ್ಸು ಓದಿನಲ್ಲಿ ನಾಟುತ್ತಿಲ್ಲ ಎಂದ. ಪ್ರೀತಿ-ಗೀತಿ ಅಂತ ಏನಾದರೂ ಹುಚ್ಚು ಹತ್ತಿಸಿಕೊಂಡಿದ್ದಿಯಾ ಎಂದು ಕೇಳಿದಾಗ ಇಲ್ಲವೇ ಇಲ್ಲ ಎಂದು ಸ್ಪಷ್ಟವಾಗಿ ನಿರಾಕರಿಸಿದ.

ಅಮ್ಮ ನಿನಗಾಗಿ ಅಷ್ಟು ಕಷ್ಟಪಡುತ್ತಿದ್ದಾಳೆ. ಇರುವ ನೀನೊಬ್ಬನೇ ಮಗ ಓದಿ ಬುದ್ಧಿವಂತನಾಗಲಿ ಎಂದು ಹಂಬಲಿಸುತ್ತಿದ್ದಾಳೆ. ಆಕೆ ಕಾಯಿಲೆ ಬಿದ್ದರೂ, ಕೂಲಿ ತಪ್ಪುತ್ತದೆ ಎಂದು ನಿನಗಾಗಿ ಕೆಲಸ ತಪ್ಪಿಸುವುದಿಲ್ಲ. ಈ ಪ್ರಕೃತಿ ನಮಗೆ ಇಂತಹ ಸಂಕಷ್ಟಗಳನ್ನು ಕೊಡುವುದೇ ನಾವು ಬದುಕಲ್ಲಿ ಗೆದ್ದು, ಎದ್ದು ನಿಲ್ಲಲಿ ಎಂದು. ನಮ್ಮ ತೊಂದರೆಗಳೇ ನಮಗೆ ದಿಕ್ಕು ತೋರುವ ದೀಪದಾರಿಗಳು. ಜೀವನದಲ್ಲಿ ನೋವು ಅನುಭವಿಸುವವರು ಮುಂದೆ ಸುಖದ ಅರ್ಥ ಅರಿಯುವವರು ಎಂದೆಲ್ಲಾ ಭಾಷಣ ಬಿಗಿದೆ. ಅವನು 'ಆಯಿತು' ಎಂಬಂತೆ ಕತ್ತು ಅಲ್ಲಾಡಿಸಿ ಹೊರಟು ಹೋದ.

ಕೆಲವೇ ವಾರಗಳಲ್ಲಿ ಪೊಲೀಸರು ಅವನ ಫೋಟೋ ಹಿಡಿದು ಕಾಲೇಜಿಗೆ ಬಂದರು. ನನ್ನ ಮನಸ್ಸಿಗೆ ಇವನು ಖಂಡಿತಾ ಹೀಗೆ ಮಾಡಿರಲಾರ ಎಂಬ ನಂಬಿಕೆ. ಆದರೆ ಅನಾಹುತ ಆಗಿ ಹೋಗಿತ್ತು. ವಯಸ್ಸೇ ತುಂಬದ ಇವನು ತನಗಿಂತ ಕಿರು ಹರೆಯದ ಹುಡುಗಿಯ ಜೊತೆ ಕಾಣೆಯಾಗಿದ್ದ. ಇತ್ತ ತಾಯಿಯ ಸಂಕಟ ಹೆಚ್ಚಾಯಿತು. ಮಾಡುತ್ತಿದ್ದ ಕೂಲಿ ಕೆಲಸವನ್ನೂ ತಕ್ಷಣ ನಿಲ್ಲಿಸಬೇಕಾಯಿತು. ಸುತ್ತಲಿನ ಜನ ಹಂಗಿಸತೊಡಗಿದಾಗ ಇಂತಹ ಮಗನ ಹೆತ್ತು ತಪ್ಪು ಮಾಡಿದೆ ಎಂದು ಕಣ್ಣೀರು ಹಾಕಿದರು. ಕೊನೆಗೊಂದು ದಿನ ಇವನು ಸಿಕ್ಕಿಬಿದ್ದ.

ಕೇಸು, ಜೈಲು, ರಗಳೆ ರಂಪಾಟಗಳಾಗಿ ಓದು ಸಂಪೂರ್ಣ ನಿಂತೇ ಹೋಯಿತು. ಕಲಿಯುವ ಕಿರುವಯಸ್ಸಿನಲ್ಲೇ ಪ್ರೇಮ ಪಾಶಕ್ಕೆ ಬೀಳುವ ಮಕ್ಕಳ ಮನಸ್ಸನ್ನು ತಿದ್ದುವ ಬಗೆ ಹೇಗೆ? ವಯೋ ಸಂಯಮದ ತಿಳಿವಳಿಕೆ ಕಲಿಸುವ ರೀತಿ ಹೇಗೆ? ಎಂದು ಚಿಂತಿಸಬೇಕಿದೆ. ಹಟ, ಸಿಟ್ಟು, ಭಾವುಕತೆ, ಹೊಂದಿದ ಹದಿಹರೆಯದ ಮಕ್ಕಳ ಸಣ್ಣ ದುಡುಕು ಆಲೋಚನೆ ಬದುಕಿನ ಲಯವನ್ನೇ ತುಂಡು ಮಾಡಿಬಿಡುತ್ತದೆ. ಗುರುಗಳು, ಹಿರಿಯರು, ಹೆತ್ತವರು ಇವರ ಜೊತೆ ಸ್ನೇಹವನ್ನು ಹೆಚ್ಚು ಮಾಡಿಕೊಂಡು ಇವರ ಮನಸ್ಸಿನ ಮಾತುಗಳನ್ನು ಕೇಳುವ ತಾಳ್ಮೆ ಬೆಳೆಸಿಕೊಳ್ಳಬೇಕು. ನಯವಾಗಿ ತಿದ್ದುವ, ಹಿತವಾಗಿ ಹೇಳುವ ಕೆಲಸ ನಮ್ಮಿಂದ ನಡೆಯುತ್ತಲೇ ಇರಬೇಕು. ಈ ವಯಸ್ಸಿನ ಮಕ್ಕಳನ್ನು ದೂರುವುದಕ್ಕಿಂತ ಅವರನ್ನು ಸರಿದಾರಿಗೆ ತರುವ ವಿವೇಕವೇ ನಮ್ಮ ಮುಂದಿರುವ ದೊಡ್ಡ ಸವಾಲು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಸೆಪ್ಟೆಂಬರ್ 27, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ತ್ರಯೋದಶಿ ಗಂ. 22-19 ನಕ್ಷತ್ರ: ಧನಿಷ್ಠ ಗಂ. 07-10 ನಂತರ ಶತಭಿಷ ಗಂ. 28-29 ಯೋಗ: ಧೃತಿ ಗಂ. 07-54, ಕನ್ಯಾ ಮಾಸದ 10 ನೇ ದಿನ, ಮಳೆನಕ್ಷತ್ರ: ಉತ್ತರ ಫಲ್ಗುಣಿ 4. ರಾಹುಕಾಲ : ಮಧ್ಯಾಹ್ನ 12-00-01-30, ಸೂರ್ಯೋದಯ : 06-23 ಸೂರ್ಯಾಸ್ತ : 06-20, ಮುಸ್ಲಿಂ ದಿನಾಂಕ : 11 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ : 11, 9

ಮೇಷ: ವಿದ್ಯಾರ್ಥಿಗಳು ಓದಿನ ವಿಷಯದ ಬಗ್ಗೆ ಸ್ನೇಹಿತರೊಡನೆ ಚರ್ಚೆ ನಡೆಸುವುದರಿಂದ ವಿಚಾರ ಸಂಪೂರ್ಣವಾಗಿ ಅರ್ಥವಾಗಲಿದೆ. ಪರಿಚಿತರಿಂದ ಹೊಸ ಸ್ಥಳದಲ್ಲಿ ಸಕಾಲಕ್ಕೆ ಸರಿಯಾಗಿ ನೆರವು ದೊರೆಯುವುದು.

ವೃಷಭ: ಪರಿಸ್ಥಿತಿಗೆ ಅನುಗುಣವಾಗಿ ಭಾವನೆಗಳನ್ನು ವ್ಯಕ್ತ ಪಡಿಸಿ, ಇಲ್ಲವಾದಲ್ಲಿ ಮುಜುಗರದ ಸಂದರ್ಭ ಎದುರಿಸಬೇಕಾಗಬಹುದು. ಕಾರ್ಯಕ್ಷೇತ್ರದಲ್ಲಿ ಶ್ರಮಕ್ಕೆ ತಕ್ಕಂತೆ ದಿನದಿಂದ ದಿನಕ್ಕೆ ಅಭಿವೃದ್ಧಿಯಾಗಲಿದೆ.

ಮಿಥುನ: ಹರಿತವಾದ ವಸ್ತುಗಳ ಬಳಕೆಯಲ್ಲಿ ಅಥವಾ ಯಂತ್ರೋಪಕರಣಗಳ ಬಳಕೆಯಲ್ಲಿ ಅವಘಡ ಸಂಭವಿಸಬಹುದು, ಎಚ್ಚರದಿಂದಿರಿ. ಅನಿರೀಕ್ಷಿತವಾಗಿ ನಡೆದ ದುರ್ಘಟನೆಗಳಿಂದ ವಿಚಲಿತರಾಗದೆ ಕಾರ್ಯ ನಿರ್ವಹಿಸಿ.

ಕರ್ಕಾಟಕ: ಅಪ್ಪ ಮಗನ ಮಧ್ಯದಲ್ಲಿ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವುದರಿಂದ ನೆಮ್ಮದಿ ಮೂಡುವುದು. ಒಂದು ಬಾರಿ ನಿರ್ಧರಿಸಿದ ನಿಲುವಿನಿಂದ ಹಿಂದೆ ಸರಿಯಬೇಡಿ. ಮಕ್ಕಳ ಆರೋಗ್ಯದಲ್ಲಿ ಗಮನವಿರಲಿ.

ಸಿಂಹ: ಪಶುಸಂಗೋಪನೆ ಮಾಡುವವರಿಗೆ ಅಥವಾ ಸಾಕು ಪ್ರಾಣಿಗಳಿಂದಲೇ ಸಣ್ಣಪುಟ್ಟ ಹಾನಿ ಉಂಟಾಗಬಹುದು; ಜಾಗ್ರತೆ ಇರಲಿ. ದೈವಾನುಗ್ರಹದಿಂದ ಕೆಲಸಗಳೆಲ್ಲವೂ ನಿರಾಳವಾಗಿ ನೆರವೇರುವುದು.

ಕನ್ಯಾ: ವ್ಯಾಪಾರದ ವಿಚಾರದಲ್ಲಿ ಕೈಗೊಂಡಿರುವ ಕಾರ್ಯಗಳನ್ನು ದೇವರ ಪ್ರಾರ್ಥನೆಯ ಮೂಲಕ ಮುಂದುವರಿಸಿರಿ. ಹಿರಿಯರು ಮತ್ತು ಹಿತೈಷಿಗಳಿಂದ ಆಶೀರ್ವಾದ ಪಡೆಯುವುದು ಶುಭ ಸಮಾರಂಭಗಳಿಗೆ ನಾಂದಿಯಾಗುತ್ತದೆ.

ತುಲಾ: ವಿದ್ಯಾರ್ಥಿಗಳಿಗೆ ಆಲಸ್ಯದ ಪರ್ವತ ಎದುರಾಗುವುದರಿಂದ ವಿದ್ಯಾರ್ಜನೆಯಲ್ಲಿ ಹಿನ್ನಡೆ. ದಾಂಪತ್ಯದಲ್ಲಿ ಮುಖಾಮುಖಿಯಾಗಿ ಎಲ್ಲಾ ವಿಚಾರಗಳನ್ನು ಹಂಚಿಕೊಳ್ಳುವುದು ಸಮಸ್ಯೆ ಬಾರದಂತೆ ಕಾಪಾಡುತ್ತದೆ.

ವೃಶ್ಚಿಕ: ಅಪರಾಧಿ ಸ್ಥಾನದಲ್ಲಿರುವ ನಿಮಗೆ ಇಂದು ನಿರಪರಾಧಿ ಎನ್ನುವುದು ಸಾಬೀತಾಗಿ ನ್ಯಾಯಾಲಯದಲ್ಲಿ ಜಯ ಸಿಗುವುದು. ರಾಜಕಾರಣದಲ್ಲಿ ಮೇಲುಗೈ ಸಾಧಿಸಲು ಅಕ್ಕ ಪಕ್ಕದ ವಾತಾವರಣವು ಪೂರಕವಾಗುತ್ತದೆ.

ಧನು: ನೂತನವಾಗಿ ಪರಿಚಯವಾದ ರಾಜಕೀಯ ವ್ಯಕ್ತಿಯೊಂದಿಗೆ ಸಂಬಂಧ ಉತ್ತಮಗೊಳ್ಳುವುದು. ಜವಾಬ್ದಾರಿಯ ಕೆಲಸಗಳನ್ನು ಸಮರ್ಥವಾಗಿ ನಿರ್ವಹಿಸಿದ ತೃಪ್ತಿ ಬರಲಿದೆ. ಅಪೇಕ್ಷಿತರಿಗೆ ಬ್ಯಾಂಕ್‌ನಿಂದ ಸೌಲಭ್ಯ ಸಿಗಲಿದೆ.

ಮಕರ: ವ್ಯವಹಾರಗಳನ್ನು ನೇರ ನಡೆ ನುಡಿ ಹೊಂದಿದವರೊಂದಿಗೆ ಮಾತ್ರ ಮುಂದುವರಿಸಿಕೊಂಡು ಹೋಗುವ ತೀರ್ಮಾನ ಒಳ್ಳೆಯದು. ಮೇಲಧಿಕಾರಿಗಳೊಂದಿಗಿನ ಮಾತುಕತೆ ಹೆಚ್ಚಿನ ಫಲ ನೀಡಲಿದೆ.


ಕುಂಭ: ಮಕ್ಕಳ ಆರೋಗ್ಯದ ವಿಚಾರದಲ್ಲಿ ಬೆಳವಣಿಗೆಗೆ ಬೇಕಾದ ಪೌಷ್ಠಿಕಾಂಶ ಆಹಾರದ ಕೊರತೆ ಕಾಣುತ್ತದೆ. ಪದವೀಧರರಿಗೆ ವಿದೇಶದಲ್ಲಿ ಉದ್ಯೋಗ ದೊರೆಯುವ ಸಂಭವವಿದೆ. ಉಮಾಮಹೇಶ್ವರನ ಆರಾಧನೆಯಿಂದ ಶುಭ.

ಮೀನ: ನಿವೇಶನದ ಅಥವಾ ಜಮೀನಿನ ಖರೀದಿ ವಿಷಯದಲ್ಲಿ ದಾಖಲೆ ಪತ್ರಗಳನ್ನು ಕೂಲಂಕಷವಾಗಿ ಪರಿಶೀಲಿಸುವುದು ಲೇಸು. ಈ ದಿನದ ಹೆಚ್ಚು ಕಾಲ ವ್ಯಾಪಾರ ವ್ಯವಹಾರದಿಂದ ದೂರ ಉಳಿಯುವುದು ಉತ್ತಮ.

ಪದಬಂಧ 5453
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪುಷ್ಪದ ಸಿಹಿರಸದೊಡಗೂಡಿದ ತಿಂಗಳು (4)
3.ಇಂದ್ರಿಯಗಳ ಮೂಲಕ ಬರುವ ಜ್ಞಾನ (4)
5.ಸಿರಿತನವಲ್ಲ ದುಡ್ಡಿಲ್ಲದಿರುವಿಕೆ! (4)
7.ಕ್ಷಣದೊಳಗೆ ತಾಳ್ಮೆ! (4)
9.ಅರಣ್ಯವನ್ನು ಕಾಪಾಡುವವ (5)
12.ಕೊಬ್ಬಿದ ಆನೆ (4)
13.ದೇವಸ್ಥಾನದ ಸಭಾಮಂಟಪ (4)
15.ವ್ಯಾಕರಣದಲ್ಲಿ ನಾಮಪದದ ಬದಲು ಉಪಯೋಗಿಸುವ ಶಬ್ದ (4)
16.ಈತ ಗುರುತುಳ್ಳವನು (4)

ಮೇಲಿಂದ ಕೆಳಕ್ಕೆ
1.ಮನಸ್ಸಿನ ಶಕ್ತಿಯಿದು (4)
2.ಗಜಪಡೆಯನ್ನು ನಡೆಸುವಾತ (3)
4.ನೀರಿನ ಅಧಿದೇವತೆ (3)
6.ನಯನಕ್ಕೆ ಕಂಡದ್ದು ಬಲು ಹೊಸತು! (3)
8.ಅಮಲೇರಿಸುವಂಥದ್ದು (3)
9.ವರ್ತಮಾನ ತಿಳಿಸಿದ ವ್ಯಾಪಾರಿ (3)
10.ಶುನಕದ ಹತ್ತಿರವಿರುವ ಬೆಳ್ಳುಳ್ಳಿ! (3)
11.ಅಜಗಜಾಂತರದಲ್ಲೇ ಮನ್ಮಥನಿದ್ದಾನೆ! (4)
12.ಏರು ತಗ್ಗಿಲ್ಲದಿರುವುದು (3)
14.ಬಳ್ಳಿ ಇಲ್ಲಿದೆ (3)



5452ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕಟಾವು 4.ಡಾಮರ
5.ಅನುಭೂತಿ 6.ತಾಪತ್ರಯ
7.ನಗು 9.ತಮ
13.ತಳಮಳ 14.ಪ್ರತೀಹಾರ
15.ಗಂಜಲ 16.ಗರುಡ

ಮೇಲಿಂದ ಕೆಳಕ್ಕೆ:
1.ಗಂಡಾಗುಂಡಿ 2.ಕರತಾಡನ
3.ವಿಭೂತಿ 5.ಅಯಸ್ಕಾಂತ
8.ಗುರುತರ 10.ಮಗಳಗಂಡ
11.ತರುಲತೆ 12.ಪ್ರತೀಕ

ಸುಡೊಕು 5839

8				1			6	
				5		7		3
					3		2	
	4	2		9		8	3	
3			8	4	1			2
1	9			2				7
	8						7	
2		4	9		7	1	5	6
	5			3			8	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5838 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8





ಮಳವಳ್ಳಿಯ ಅನಂತರಾಂ ಸರ್ಕಲ್‌ನಲ್ಲಿ ವಿವಿಧ ಸಂಘಟನೆಗಳ ಮುಖಂಡರು ಉರುಳುಸೇವೆ ಮಾಡಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು (ಎಡಚಿತ್ರ) ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ವಿರೋಧಿಸಿ ವಿವಿಧ ಸಂಘಟನೆಗಳು ಮಂಗಳವಾರ ಬೆಂಗಳೂರು ಬಂದ್ ಗೆ ಕರೆ ನೀಡಿದ್ದರಿಂದ ಬೆಂಗಳೂರಿನ ಕಲಾಸಿಪಾಳ್ಯದ ಅಂಗಡಿ ಮುಂಗಟ್ಟುಗಳು ಮುಚ್ಚಿದ್ದವು –ಪ್ರಜಾವಾಣಿ ಚಿತ್ರಗಳು

ಕೆ.ಆರ್‌.ಪೇಟೆ, ಮಳವಳ್ಳಿ ಬಂದ್ ಯಶಸ್ವಿ • ರಸ್ತೆಗಿಳಿದ ವಿವಿಧ ಸಂಘಟನೆಗಳ ಸದಸ್ಯರು, ವಿದ್ಯಾರ್ಥಿಗಳು, ವಕೀಲರು

ಸಕ್ಕರೆ ನಾಡಿನಲ್ಲೂ ಬಂದ್‌ಗೆ ಬೆಂಬಲ

ಪ್ರಜಾವಾಣಿ ವಾರ್ತೆ

ಮೈಸೂರು: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ವಿವಿಧ ಸಂಘಟನೆಗಳು ಮಂಗಳವಾರ ಕರೆ ನೀಡಿದ್ದ ಮಂಡ್ಯ ಜಿಲ್ಲೆಯ ಕೆ.ಆರ್‌. ಪೇಟೆ, ಮಳವಳ್ಳಿ ಹಾಗೂ ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕು ಕೇಂದ್ರಗಳ ಬಂದ್ ಯಶಸ್ವಿಯಾಯಿತು.

ಕೆ.ಆರ್‌.ಪೇಟೆಯಲ್ಲಿ ಬೆಳಿಗ್ಗೆ 8 ಗಂಟೆಗೇ ರಸ್ತೆಗಿಳಿದ ವಿವಿಧ ಸಂಘಟನೆಗಳ ಮುಖಂಡರು ಕೆಲ ಅಂಗಡಿಗಳ ಬಾಗಿಲು ಮುಚ್ಚಿಸಿದರು. ಬಹುತೇಕ ವರ್ತಕರು ಸ್ವಯಂಪ್ರೇರಿತವಾಗಿ ಬಾಗಿಲು ಮುಚ್ಚಿ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದರು.

ಹೋಟೆಲ್, ಸಿನಿಮಾ ಮಂದಿರಗಳೂ ಮುಚ್ಚಿದ್ದವು. ಬಿದಿ ಬದಿ ವ್ಯಾಪರಸ್ಥರು ಕೂಡ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿ ತಮ್ಮ ಚಟುವಟಿಕೆಗಳಿಂದ ದೂರ ಉಳಿದರು. ಖಾಸಗಿ ಶಾಲಾ, ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿತ್ತು. ಸರ್ಕಾರಿ ಕಾಲೇಜುಗಳು ನಡೆದರೂ ವಿದ್ಯಾರ್ಥಿಗಳಿಲ್ಲದೇ ಭಣಗುಡುತ್ತಿದ್ದವು. ಸರ್ಕಾರಿ ಕಚೇರಿ, ಬ್ಯಾಂಕ್‌ಗಳ ಬಾಗಿಲು ಮುಚ್ಚಿಸುವಲ್ಲೂ ಪ್ರತಿಭಟನಾಕಾರರು ಯಶಸ್ವಿಯಾದರು.

ವಿದ್ಯಾರ್ಥಿಗಳೂ ಪಾಲ್ಗೊಂಡಿದ್ದರು, ವಕೀಲರು ಕೋರ್ಟ್ ಕಲಾಪದಿಂದ ದೂರ ಉಳಿದರು. ರೈತಸಂಘ ಸೇರಿದಂತೆ 20ಕ್ಕೂ ಹೆಚ್ಚು ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿದ್ದವು. 'ಕಾವೇರಿ, ಹೇಮಾವತಿ ನದಿ ನೀರು ನಮ್ಮ ಹಕ್ಕು' ಎಂದು ಘೋಷಣೆ ಕೂಗಿದರು.

ಶಾಸಕ ಎಚ್‌.ಟಿ.ಮಂಜು, ರೈತಸಂಘ ಜಿಲ್ಲಾ ಘಟಕದ ಉಪಾಧ್ಯಕ್ಷ ಮರುವಿನಹಳ್ಳಿ ಶಂಕರ್, ಮುಖಂಡ ಮಂದಗೆರೆ ಜಯರಾಂ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮುಂಜಾನೆ ಮಿಶ್ರ, ಮಧ್ಯಾಹ್ನ ಸಂಪೂರ್ಣ:

ಮಳವಳ್ಳಿ ಪಟ್ಟಣದಲ್ಲಿ ಮುಂಜಾನೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಅಂಗಡಿ ಮುಂಗಟ್ಟು ತೆರೆದಿದ್ದವು. ಆಟೊ, ಖಾಸಗಿ ವಾಹನಗಳು ರಸ್ತೆಗೆ ಇಳಿದಿದ್ದವು. ಶಾಲಾ, ಕಾಲೇಜುಗಳು ಕೂಡ ಆರಂಭಗೊಂಡಿದ್ದವು. ಆದರೆ ಮಧ್ಯಾಹ್ನವಾಗುತ್ತಿದ್ದಂತೆ ಚಿತ್ರಣ ಬದಲಾಯಿತು. ರಸ್ತೆಗಿಳಿದ ಜೆಡಿಎಸ್ ಮುಖಂಡರು, ವಿವಿಧ ಸಂಘಟನೆಗಳ ಕಾರ್ಯಕರ್ತರು ಅಂಗಡಿ ಮುಚ್ಚಿಸಿದರು. ನಂತರ ಶಾಲಾ, ಕಾಲೇಜುಗಳು ಕೂಡ ರಜೆ ಘೋಷಣೆ ಮಾಡಿದವು.

ವಿವಿಧ ಸಂಘಟನೆಗಳ ಕಾರ್ಯಕರ್ತರು ಪಟ್ಟಣದಾದ್ಯಂತ ಬೈಕ್ ರ್‍ಯಾಲಿ ನಡೆಸಿ ಬಂದ್‌ಗೆ ಬೆಂಬಲಿಸುವಂತೆ ಕೋರಿದರು. ಬಳಿಕ ಅನಂತ್ ರಾಂ ವೃತ್ತದ ಬಳಿ ಮಾನವ ಸರಪಳಿ ನಿರ್ಮಿಸಿ ರಸ್ತೆತಡೆ ನಡೆಸಿದರು. ರಸ್ತೆ ಮಧ್ಯೆಯೇ ಉಪಾಹಾರ ಸೇವಿಸಿದರು. ಉರುಳು ಸೇವೆ ಮಾಡಿದರು.

ಜೆಡಿಎಸ್ ಮುಖಂಡ ಕೆ.ಅನ್ನದಾನಿ ಮಾತನಾಡಿ '25 ದಿನಗಳಿಂದ ನಿರಂತರವಾಗಿ ತಮಿಳುನಾಡಿಗೆ ನೀರು ಹರಿಸುವ ಮೂಲಕ ಸರ್ಕಾರ ರೈತರ ಹಿತವನ್ನು ಬಲಿಕೊಟ್ಟಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ಕಾವೇರಿ ಕ್ರಿಯಾ ಸಮಿತಿ ಸದಸ್ಯರು ಅಶೋಕಪುರಂ ಅಂಚೆ ಕಚೇರಿ ಮುಂದೆ ಕಪ್ಪು ಪಟ್ಟಿ ಧರಣಿ ನಡೆಸಿದರು. ಬ್ರಾಹ್ಮಣ ಸಂಘದ ಸದಸ್ಯರು ಜಿಲ್ಲಾ ಪಂಚಾಯ್ತಿ ಮುಂದೆ ಸಾಮೂಹಿಕ ಭಜನೆ ಮಾಡಿದರು. ಗಂಧದಗುಡಿ ಫೌಂಡೇಶನ್ ಏರ್ಪಡಿಸಿದ್ದ ಪ್ರತಿಭಟನೆಯಲ್ಲಿ ಬಾಲಕಿ ನಿಯತಿ ವಿಜಯಕುಮಾರ್ ಕಾವೇರಿ ಮಾತೆಯ ವೇಷಧರಿಸಿ ಖಾಲಿ ಕೊಡ ಪ್ರದರ್ಶಿಸಿದರು. ಪುರಭವನದ ಮುಂದೆ ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ ಸದಸ್ಯರು ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ಪತ್ರ ಚಳವಳಿ: ಶ್ರೀರಂಗಪಟ್ಟಣದಲ್ಲಿ ಭೂಮಿತಾಯಿ ಹೋರಾಟ ಸಮಿತಿ ಸದಸ್ಯರು ಹೋರಾಟ ಮುಂದುವರಿಸಿದ್ದು ಮಂಗಳವಾರ ರಾಷ್ಟ್ರಪತಿಗೆ ಪತ್ರ ಚಳವಳಿ ನಡೆಸಿದರು. ಕೆಆರ್‌ಎಸ್ ಜಲಾಶಯಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ಬಿಡುಗಡೆ ಮಾಡಿದರು.

ಪ್ರತಿಭಟನೆಯಲ್ಲಿ ತಮಿಳು ಸಂಘ ಭಾಗಿ: ಚಾಮರಾಜನಗರದಲ್ಲಿ ಕಾವೇರಿ ಕ್ರಿಯಾ ಸಮಿತಿ ಸದಸ್ಯರು ಮಂಗಳವಾರದಿಂದ ಅನಿರ್ದಿಷ್ಟ ಅವಧಿಯ ಪ್ರತಿಭಟನೆ ಆರಂಭಿಸಿ, ರಾಷ್ಟ್ರಪತಿಗೆ ಪತ್ರ ಚಳವಳಿ ನಡೆಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ತಮಿಳು ಸಂಘದ ಗೌರವ ಅಧ್ಯಕ್ಷ ಎಸ್‌.ಆರ್‌. ಪೊನ್ನಸ್ವಾಮಿ, ಖಜಾಂಚಿ ಎಸ್‌.ಆರ್‌. ರಾಮಸ್ವಾಮಿ ಕೂಡ ಪಾಲ್ಗೊಂಡು ಬೆಂಬಲ ಸೂಚಿಸಿದರು.

ನೀರು ಬಿಡುವ ಆದೇಶಕ್ಕೆ ವಿರೋಧ

ಕಾವೇರಿ ನೀರು ನಿಯಂತ್ರಣಾ ಸಮಿತಿ ತಮಿಳುನಾಡಿಗೆ ಮತ್ತೆ 3 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಶಿಫಾರಸು ಮಾಡಿರುವುದನ್ನು ರೈತಸಂಘ ಸೇರಿ ವಿವಿಧ ಸಂಘಟನೆಗಳು ಖಂಡಿಸಿವೆ. ರೈತಸಂಘ, ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, 'ಮತ್ತೆ ನೀರು ಹರಿಸಲು ಶಿಫಾರಸು ಮಾಡಿರುವುದನ್ನು ಒಪ್ಪಲು ಸಾಧ್ಯವಿಲ್ಲ. ಸೆ.29ರಂದು ನಡೆಯಲಿರುವ ಕರ್ನಾಟಕ ಬಂದ್‌ಗೆ ನಮ್ಮ ಬೆಂಬಲವಿದೆ' ಎಂದರು.

ಶಿಫಾರಸು ಪ್ರತಿ ಸುಟ್ಟು ಆಕ್ರೋಶ

ಕಾವೇರಿ ನೀರು ನಿಯಂತ್ರಣಾ ಸಮಿತಿಯ ಶಿಫಾರಸು ಹೊರ ಬರುತ್ತಿದ್ದಂತೆ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸದಸ್ಯರು ಮಂಡ್ಯದಲ್ಲಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ತಡೆದು ಆಕ್ರೋಶ ವ್ಯಕ್ತಪಡಿಸಿದರು, ರಸ್ತೆಯಲ್ಲೇ ಕುರ್ಚಿ ಹಾಕಿ ಧರಣಿ ಕುಳಿತರು. ಸಮಿತಿ ನೀಡಿರುವ ಶಿಫಾರಸು ವರದಿಯ ಪ್ರತಿ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ–ಜೆಡಿಎಸ್ ಕಾರ್ಯಕರ್ತರು ವಶಕ್ಕೆ

ಬೆಂಗಳೂರು: ನಗರದಲ್ಲಿ ಪ್ರತ್ಯೇಕ ಪ್ರತಿಭಟನೆ ನಡೆಸಲು ಮುಂದಾಗಿದ್ದ ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿದ್ದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು, ಪ್ರತಿಭಟನೆ ನಡೆಸಲು ಮುಂದಾಗಿದ್ದರು. ಪ್ರತಿಭಟನೆಗೆ ಅನುಮತಿ ಇಲ್ಲವೆಂದು ಹೇಳಿದ ಪೊಲೀಸರು, ಪ್ರತಿಭಟನಾಕಾರರನ್ನು ಸ್ಥಳದಿಂದ ಚದುರಿಸಲು ಮುಂದಾದರು. ಇದೇ ಸಂದರ್ಭದಲ್ಲಿ ಮಾತಿನ ಚಕಮಕಿ ನಡೆಯಿತು. ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಸೇರಿದಂತೆ ಹಲವರನ್ನು ಪೊಲೀಸರು ವಶಕ್ಕೆ ಪಡೆದರು.

ಜೆಡಿಎಸ್ ಕಾರ್ಯಕರ್ತರು ಪಕ್ಷದ ಕೇಂದ್ರ ಕಚೇರಿ ಜೆ.ಪಿ. ಭವನದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲು ಮುಂದಾಗಿದ್ದರು. ವಿಧಾನಪರಿಷತ್ತಿನ ಜೆಡಿಎಸ್ ಸದಸ್ಯ ಟಿ.ಎ. ಶರವಣ ಹಾಗೂ ಇತರ ಮುಖಂಡರನ್ನು ಕಚೇರಿ ಸಮೀಪದಲ್ಲೇ ಪೊಲೀಸರು ತಡೆದು ನಿಲ್ಲಿಸಿದರು. ಮೆರವಣಿಗೆಗೆ ಅವಕಾಶವಿಲ್ಲವೆಂದು ಹೇಳಿದ ಪೊಲೀಸರು, ಮುಂಜಾಗ್ರತಾ ಕ್ರಮವಾಗಿ ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು ಬಸ್‌ನಲ್ಲಿ ಕರೆದೊಯ್ದರು. ಕೆಲ ಗಂಟೆಗಳ ನಂತರ ಬಿಡುಗಡೆ ಮಾಡಿದರು.

ರಾಮನಗರ ಬಂದ್ ನೀರಸ

ರಾಮನಗರ: ತಮಿಳುನಾಡಿಗೆ ಕಾವೇರಿ ನೀರು ಬಿಡಬಾರದು ಎಂದು ಕರ್ನಾಟಕ ಜಲ ಸಂರಕ್ಷಣಾ ಸಮಿತಿ ಮಂಗಳವಾರ ಕರೆ ಕೊಟ್ಟಿದ್ದ ರಾಮನಗರ ಜಿಲ್ಲೆ ಬಂದ್ ಪ್ರತಿಭಟನೆಗಷ್ಟೇ ಸೀಮಿತವಾಯಿತು.

ರಾಜಕೀಯ ಪಕ್ಷಗಳು, 33ಕ್ಕೂ ಹೆಚ್ಚು ಸಂಘಟನೆಗಳು ಬೆಂಬಲ ನೀಡಿದ್ದರೂ ಬಂದ್‌ಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು. ದೈನಂದಿನ ಜನಜೀವನ ಎಂದಿನಂತೆ ಇತ್ತು. ಶಾಲಾ–ಕಾಲೇಜು, ಬ್ಯಾಂಕ್, ಸರ್ಕಾರಿ ಕಚೇರಿ ತೆರೆದಿದ್ದವು.

'ತಮಿಳುನಾಡಿನ ಬೇಡಿಕೆ ತಿರಸ್ಕಾರದಿಂದ ಸಂತಸ'

ಪ್ರಜಾವಾಣಿ ವಾರ್ತೆ


ಶಿವಕುಮಾರ್

ಬೆಂಗಳೂರು: ನಿತ್ಯ 12,500 ಕ್ಯೂಸೆಕ್ ನೀರು ಬಿಡುಗಡೆಗೆ ಕರ್ನಾಟಕಕ್ಕೆ ನಿರ್ದೇಶನ ನೀಡುವಂತೆ ಕೋರಿ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಕಾವೇರಿ ನೀರು ನಿಯಂತ್ರಣ ಸಮಿತಿ ತಿರಸ್ಕರಿಸಿರುವುದರಿಂದ ಸಂತೋಷವಾಗಿದೆ ಎಂದು ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕಾವೇರಿ ನೀರು ನಿಯಂತ್ರಣ ಸಮಿತಿ ಸಭೆಯ ತೀರ್ಮಾನದ ಕುರಿತು ಸುದ್ದಿಗಾರರಿಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ತಮಿಳುನಾಡಿನ ಬೇಡಿಕೆಯನ್ನು ಪರಿಗಣಿಸದ ಸಮಿತಿಯು ನಿತ್ಯ 3,000 ಕ್ಯೂಸೆಕ್ ನೀರು ಮಾತ್ರ ಬಿಡುಗಡೆಗೆ ಶಿಫಾರಸು ಮಾಡಿದೆ. ರಾಜ್ಯದ ಅಧಿಕಾರಿಗಳು ಕರ್ನಾಟಕದಲ್ಲಿನ ಬರ ಪರಿಸ್ಥಿತಿ ಕುರಿತು ಸಮರ್ಥವಾಗಿ ಮನವರಿಕೆ ಮಾಡಿಕೊಟ್ಟಿರುವುದರಿಂದ ಈ ತೀರ್ಮಾನ ಬಂದಿದೆ' ಎಂದರು.

ಕಾವೇರಿ ನೀರು ಹಂಚಿಕೆಯ ಸಂಕಷ್ಟ ಪರಿಹಾರ ಮೇಕೆದಾಟು ಯೋಜನೆ ಅನುಷ್ಠಾನದಿಂದ ಮಾತ್ರ ಸಾಧ್ಯ. ಅಣೆಕಟ್ಟೆ ನಿರ್ಮಿಸಿದರೆ 66 ಟಿಎಂಸಿ ಅಡಿ ನೀರು ಸಂಗ್ರಹಿಸಿಟ್ಟುಕೊಳ್ಳಬಹುದು. ಸಂಕಷ್ಟದ ಸಂದರ್ಭದಲ್ಲಿ ತಮಿಳುನಾಡಿಗೆ ಅದನ್ನು ಬಿಡುಗಡೆ ಮಾಡಬಹುದು. ಸುಪ್ರೀಂ ಕೋರ್ಟ್ ಕೂಡ ಯೋಜನೆ ಬಗ್ಗೆ ಸಕಾರಾತ್ಮಕವಾಗಿ ಮಾತನಾಡಿದೆ ಎಂದು ಹೇಳಿದರು.

'ಕನಕಪುರಕ್ಕೆ ನೀರು ಒದಗಿಸಲು ಮೇಕೆದಾಟು ಯೋಜನೆ ರೂಪಿಸಲಾಗಿದೆ ಎಂದು ಯಾರೋ ಹೇಳಿದ್ದರು. ವಾಸ್ತವದಲ್ಲಿ ಮೇಕೆದಾಟು ಇರುವುದು ತಮಿಳುನಾಡಿನ ಗಡಿಯಲ್ಲಿ. ಕಾವೇರಿ ನೀರು ಹಂಚಿಕೆಗೆ ಸಂಬಂಧಿಸಿದ ಎರಡೂ ಸಮಿತಿಗಳಿಗೆ ಯೋಜನೆ ಕುರಿತು ಮನವರಿಕೆ ಮಾಡಿಕೊಡುತ್ತೇವೆ. ಯೋಜನೆ ಅನುಷ್ಠಾನಕ್ಕೆ ಒಪ್ಪಿಗೆ ನೀಡುವಂತೆ ಕೇಂದ್ರ ಮೇಲೆ ಒತ್ತಡ ತರಲು ರಾಜ್ಯದ ಸಂಸದರಿಗೆ ಮನವಿ ಮಾಡುತ್ತೇನೆ' ಎಂದರು.

ಮತ್ತೆ ಬಂದ್ ಅಗತ್ಯವಿಲ್ಲ: ಕಾವೇರಿ ನೀರಿನ ವಿಚಾರದಲ್ಲಿ ರಾಜ್ಯದ ಜನರು ಶಾಂತಿಯುತವಾಗಿ ಪ್ರತಿಭಟನೆ ನಡೆಸಿದ್ದಾರೆ. ಮತ್ತೊಮ್ಮೆ ಬಂದ್ ಮಾಡುವ ಅಗತ್ಯವಿಲ್ಲ. ನ್ಯಾಯಾಲಯವೂ ಇದಕ್ಕೆ ಅವಕಾಶ ನೀಡುವುದಿಲ್ಲ. ಶುಕ್ರವಾರ ರಾಜ್ಯ ಬಂದ್ ನಡೆಸಲು ಅವಕಾಶವಿಲ್ಲ ಎಂದು ಪ್ರಶ್ನೆಯೊಂದಕ್ಕೆ ಶಿವಕುಮಾರ್ ಉತ್ತರಿಸಿದರು.

'ಕಾವೇರಿ ನೀರಿಗಾಗಿ ಹೋರಾಟ ನಡೆಸುವ ಸಂದರ್ಭದಲ್ಲೂ ಕೆಲವರು ರಾಜಕೀಯವಾಗಿ ಟೀಕೆ ಮಾಡಿದ್ದಾರೆ. ಟೀಕೆ ಮಾಡಬಾರದು ಎಂದು ವಿರೋಧ ಪಕ್ಷದವರಿಗೆ ಹೇಳಲು ಸಾಧ್ಯವಿಲ್ಲ. ಯಾರ ಬಾಯಿ ಮುಚ್ಚಿಸುವುದಕ್ಕೂ ಸಾಧ್ಯವಿಲ್ಲ. ಬೇಸರ ಮಾಡಿಕೊಳ್ಳುವುದೂ ಇಲ್ಲ' ಎಂದರು.

'ರಾಜ್ಯ ಸರ್ಕಾರವೇ ಸಂಕಷ್ಟ ಸೂತ್ರ ಸಿದ್ಧಪಡಿಸಲಿ'

ಪ್ರಜಾವಾಣಿ ವಾರ್ತೆ


ಬರಗೂರು ರಾಮಚಂದ್ರಪ್ಪ

ಬೆಂಗಳೂರು: ಕಾನೂನು ತಜ್ಞರು, ರೈತ ಸಂಘಟನೆಗಳ ಮುಖಂಡರು, ಸರ್ವಪಕ್ಷಗಳ ನಾಯಕರ ಸಲಹೆ ಪಡೆದು ರಾಜ್ಯ ಸರ್ಕಾರವೇ ಒಂದು ಸಂಕಷ್ಟ ಸೂತ್ರವನ್ನು ಸಿದ್ಧಪಡಿಸಿ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಸಲ್ಲಿಸಬೇಕು ಎಂದು ಬಂಡಾಯ ಸಾಹಿತ್ಯ ಸಂಘಟನೆ ಸಲಹೆ ನೀಡಿದೆ.


ಕಾವೇರಿ ಹೋರಾಟಕ್ಕೆ ಬಂಡಾಯ ಸಾಹಿತ್ಯ ಸಂಘಟನೆ ಬೆಂಬಲ ಸೂಚಿಸಿದೆ. ಇಂಥ ಬಿಕ್ಕಟ್ಟಿನ ಸಮಯದಲ್ಲಿ ಸಂಘಟನೆ ಜನರ ಪರವಾಗಿ ನಿಂತು ನೈತಿಕ ಬೆಂಬಲ ನೀಡುತ್ತದೆ. ಸಂಕಷ್ಟ ಸೂತ್ರ ರೂಪಿಸದ ಹೊರತು ಸಮಸ್ಯೆಗೆ ಪರಿಹಾರ ದೊರಕುವುದಿಲ್ಲ. ಹಾಗಾಗಿ, ಸಂಕಷ್ಟ ಸೂತ್ರ ರೂಪಿಸಲು ಪ್ರಾಧಿಕಾರ ಮುಂದಾಗಬೇಕು. ಇಲ್ಲವೇ ರಾಜ್ಯ ಸರ್ಕಾರವೇ ಆ ಕೆಲಸ ಮಾಡ ಬೇಕು ಎಂದು ಸಂಘಟನೆಯ ಮುಖಂಡ, ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದ್ದಾರೆ.

'ಕಾವೇರಿ ನೀರು ಕನ್ನಡಿಗರಿಗೆ ಲಭ್ಯವಾಗದಿದ್ದರೆ ರೈತರು ಸಂಕಷ್ಟಕ್ಕೆ ಒಳಗಾಗುತ್ತಾರೆ. ನಮಗೇ ನೀರು ಇಲ್ಲದಿರುವಾಗ ನೆರೆಯ ರಾಜ್ಯಕ್ಕೆ ನೀರು ಹರಿಸಬೇಕು ಎನ್ನುವುದು ನ್ಯಾಯ ಎನಿಸುವುದಿಲ್ಲ. ಆದರೆ, ಪ್ರಾಧಿಕಾರ, ನ್ಯಾಯಾಲಯಗಳ ಆದೇಶದಿಂದ ಕರ್ನಾಟಕ ಬಿಕ್ಕಟ್ಟು ಎದುರಿಸಬೇಕಾಗಿ ಬಂದಿದೆ' ಎಂದಿದ್ದಾರೆ.


ದೇವೇಗೌಡರ ಕಾಲದಲ್ಲಿ ಮತ್ತು ಬಿಜೆಪಿ ಆಡಳಿತದ ಅವಧಿಯಲ್ಲಿ ಇದ್ದದ್ದು ಇದೇ ಕಾನೂನು ಪರಿಣತರ ತಂಡ. ಸಮರ್ಥವಾಗಿ ವಾದ ಮಂಡಿಸಿದರೂ ನಮಗೆ ಈ ರೀತಿಯ ಆದೇಶ ಹೊರಬಿದ್ದಿದೆ
ಸಿದ್ದರಾಮಯ್ಯ, ಮುಖ್ಯಮಂತ್ರಿ


ಸರ್ಕಾರದ ನಿಲುವು ಬಂದ ಮೇಲೆ ನನ್ನ ಅಭಿಪ್ರಾಯ ಹೇಳುತ್ತೇನೆ. ಸರ್ಕಾರದ ತೀರ್ಮಾನಕ್ಕೆ ನಾನು ಮತ್ತು ಎಚ್‌.ಡಿ.ಕುಮಾರಸ್ವಾಮಿ ಸಹಕರಿಸಬೇಕಾಗುತ್ತದೆ
ಎಚ್‌.ಡಿ. ದೇವೇಗೌಡ
ರಾಜ್ಯಸಭಾ ಸದಸ್ಯ


ರಾಜ್ಯ ಸರ್ಕಾರದ ಬೇಜವಾಬ್ದಾರಿಯಿಂದಾಗಿ ಸಮಸ್ಯೆ ಉದ್ಭವವಾಗಿದೆ. ವಾಸ್ತವಾಂಶ ತಿಳಿಯಲು ತಮಿಳುನಾಡು, ಕರ್ನಾಟಕಕ್ಕೆ ತಂಡ ಕಳುಹಿಸುವಂತೆ ಕೇಂದ್ರ ಸರ್ಕಾರವನ್ನು ಕೋರಿದ್ದೇವೆ
ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ


ಕೋವಿಡ್ ಸಮಯದಲ್ಲಿ ಕಾಂಗ್ರೆಸ್ ಮೇಕೆದಾಟು ಪಾದಯಾತ್ರೆ ಮಾಡಿತ್ತು. ನಮ್ಮ ಸರ್ಕಾರ ಸಮಾವೇಶಕ್ಕೂ ಅವಕಾಶ ಕೊಟ್ಟಿತ್ತು. ಈ ಸರ್ಕಾರ ಹೋರಾಟಗಾರರನ್ನು ಸ್ವಾತಂತ್ರ್ಯ ಉದ್ಯಾನದವರೆಗೂ ಬಿಡಲಿಲ್ಲ. ಸರ್ಕಾರ ಪೊಲೀಸರ ಮೂಲಕ ದಬ್ಬಾಳಿಕೆ ನಡೆಸುತ್ತಿದೆ
ಬಸವರಾಜ ಬೊಮ್ಮಾಯಿ, ಶಾಸಕ


ರಾಜ್ಯದಲ್ಲಿರುವುದು ಕನ್ನಡಿಗರ ಸರ್ಕಾರವೇ ಅಥವಾ ಸ್ಟಾಲಿನ್ ಅವರ ಬಾಡಿಗೆ ಸರ್ಕಾರವೇ. ಮೇಕೆದಾಟು ಪಾದಯಾತ್ರೆ ಮಾಡಿದ್ದವರೇ ಇಂದು ಕಾವೇರಿ ನೀರಿಗಾಗಿ ಬೀದಿಗಿಳಿದು ಹೋರಾಟ ನಡೆಸುತ್ತಿದ್ದ ರೈತರು, ಹೋರಾಟಗಾರರನ್ನು ಬಂಧಿಸಿದ್ದಾರೆ
ಎಚ್‌.ಡಿ.ಕುಮಾರಸ್ವಾಮಿ, ಜೆಡಿಎಸ್ ನಾಯಕ

3 ಸಾವಿರ ಕ್ಯೂಸೆಕ್ ನೀರು ಬಿಡಲು ಸಮಿತಿ ಶಿಫಾರಸು

ಒಂದನೇ ಪುಟದಿಂದ...

ಪ್ರಾಧಿಕಾರವು ಕರ್ನಾಟಕದಿಂದ ತಮಿಳುನಾಡಿಗೆ ಬಿಡುಗಡೆಯ ಪ್ರಮಾಣದ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತದೆ. ಪ್ರಾಧಿಕಾರದ ಸಭೆ ಒಂದೆರಡು ದಿನಗಳಲ್ಲಿ ನಡೆಯುವ ಸಾಧ್ಯತೆ ಇದೆ.

ಸೆಪ್ಟೆಂಬರ್ 25ರ ವರೆಗೆ ಕರ್ನಾಟಕದ ನಾಲ್ಕು ಜಲಾಶಯಗಳಿಗೆ ಸಂಚಿತ ಒಳಹರಿವಿನ ಕೊರತೆಯು ಶೇ 53ರಷ್ಟು ಇದೆ. ರಾಜ್ಯದ 161 ತಾಲ್ಲೂಕುಗಳನ್ನು ತೀವ್ರ ಬರ ಪೀಡಿತ ಮತ್ತು 34 ತಾಲ್ಲೂಕುಗಳನ್ನು ಮಧ್ಯಮ ಬರ ಪೀಡಿತ ಎಂದು ಘೋಷಿಸಿದೆ. ಈ ಪೈಕಿ 32 ತೀವ್ರ ಬರ ಪೀಡಿತ ತಾಲ್ಲೂಕುಗಳು ಮತ್ತು 15 ಮಧ್ಯಮ ಬರ ಪೀಡಿತ ತಾಲ್ಲೂಕುಗಳು ಕಾವೇರಿ ಜಲಾನಯನ ಪ್ರದೇಶದಲ್ಲಿವೆ. ಈ ಅಂಶಗಳನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಕರ್ನಾಟಕದ ಅಧಿಕಾರಿಗಳು ಮನವಿ ಮಾಡಿದರು.

ಕರ್ನಾಟಕವು ತನ್ನ ಜಲಾಶಯಗಳಿಂದ ನೀರನ್ನು ಬಿಡುಗಡೆ ಮಾಡುವ ಸ್ಥಿತಿಯಲ್ಲಿಲ್ಲ ಎಂದು ಅವರು ಹೇಳಿದರು.

ಕರ್ನಾಟಕವು ನಿತ್ಯ 12,500 ಕ್ಯೂಸೆಕ್ ನೀರು ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ರಾಜ್ಯದ ಬೆಳೆಗಳು ಒಣಗಿ ಹೋಗಲಿವೆ ಎಂದು ತಮಿಳುನಾಡಿನ ಅಧಿಕಾರಿಗಳು ಹೇಳಿದರು. ಕರ್ನಾಟಕವೂ ಸಂಕಷ್ಟದ ಅನುಪಾತದ ಆಧಾರದ ಮೇಲೆ ನೀರಾವರಿ ಪೂರೈಕೆಯನ್ನು ಕಡಿಮೆ ಮಾಡಬೇಕು. ಕರ್ನಾಟಕವು ತಕ್ಷಣವೇ ಕೊರತೆಯ ಪ್ರಮಾಣವನ್ನು ಬಿಡುಗಡೆ ಮಾಡಬೇಕು ಮತ್ತು ಸಂಕಷ್ಟದ ಅನುಪಾತಕ್ಕೆ ಅನುಗುಣವಾಗಿ ಮತ್ತಷ್ಟು ನೀರು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

'ಕಾವೇರಿ ಕೊಳ್ಳದ ನಾಲ್ಕು ಜಲಾಶಯಗಳಿಂದ ದಿನದ ಸಹಜ ಹೊರಹರಿವಿನ ಪ್ರಮಾಣ 1,900–2,000 ಕ್ಯೂಸೆಕ್‌ನಷ್ಟು ಇದೆ. ಸಮಿತಿಯ ಶಿಫಾರಸಿನ ಪ್ರಕಾರ, ರಾಜ್ಯವು ಹೆಚ್ಚುವರಿಯಾಗಿ 1,000 ಕ್ಯೂಸೆಕ್‌ನಷ್ಟು ಹರಿಸಬೇಕಿದೆ. ಹಿಂದಿನ ಆದೇಶಗಳಿಗೆ ಹೋಲಿಸಿದರೆ ಈಗಿನ ಶಿಫಾರಸು ರಾಜ್ಯದ ಮಟ್ಟಿಗೆ ಸ್ವಲ್ಪ ಸಮಾಧಾನಕರ' ಎಂದು ಜಲಸಂಪನ್ಮೂಲ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಕಾವೇರಿ ನ್ಯಾಯಮಂಡಳಿಯ ಆದೇಶದ ಪ್ರಕಾರ, ರಾಜ್ಯವು ಮುಂಗಾರಿನ ನಾಲ್ಕು ತಿಂಗಳುಗಳಲ್ಲಿ ತಮಿಳುನಾಡಿಗೆ 110 ಟಿಎಂಸಿ ಅಡಿಗಳಷ್ಟು ನೀರು ಹರಿಸಬೇಕಿದೆ. ಈ ವರ್ಷ ರಾಜ್ಯ ಬಿಡುಗಡೆ ಮಾಡಿರುವ ನೀರಿನ ಪ್ರಮಾಣ 45 ಟಿಎಂಸಿ ಅಡಿಗಳಷ್ಟು' ಎಂದು ಅವರು ಹೇಳಿದರು.

ಬಂದ್: ಬೆಂಗಳೂರು ಭಾಗಶಃ ಸ್ತಬ್ಧ

ಒಂದನೇ ಪುಟದಿಂದ...

'ನಗರದ ಹಲವೆಡೆ ಪ್ರತಿಭಟನೆ ಹಾಗೂ ಮೆರವಣಿಗೆ ನಡೆಸಲು ಮುಂದಾಗಿದ್ದ 771 ಮಂದಿಯನ್ನು ವಶಕ್ಕೆ ಪಡೆದು, ಅವರೆಲ್ಲರನ್ನೂ ಸ್ವಾತಂತ್ರ್ಯ ಉದ್ಯಾನಕ್ಕೆ ಬಿಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಬಂದ್ ಹಿನ್ನೆಲೆಯಲ್ಲಿ ಬಹುತೇಕ ಜನರು ಮನೆಯಿಂದ ಹೊರಬರಲಿಲ್ಲ. ಇದರಿಂದಾಗಿ ಪ್ರಮುಖ ರಸ್ತೆಗಳು, ಸಾರ್ವಜನಿಕ ಸ್ಥಳಗಳು, ಬಸ್ ನಿಲ್ದಾಣಗಳು ಬಿಕೋ ಎನ್ನುತ್ತಿದ್ದವು. ಖಾಸಗಿ ವಾಹನಗಳೂ ಸಂಚಾರ ಆರಂಭಿಸಲಿಲ್ಲ. ಬಿಎಂಟಿಸಿ ಬಸ್‌ಗಳು, ಮೆಟ್ರೊ ರೈಲು ಯಥಾಪ್ರಕಾರ ಸಂಚರಿಸಿದರೂ ಪ್ರಯಾಣಿಕರ ಸಂಖ್ಯೆ ವಿರಳವಾಗಿತ್ತು.

ಚಿತ್ರಮಂದಿರಗಳಲ್ಲಿ ಪ್ರದರ್ಶನ ರದ್ದು: ನಗರದ ಹಲವು ಚಿತ್ರಮಂದಿರಗಳು ಹಾಗೂ ಮಲ್ಟಿಪ್ಲೆಕ್ಸ್‌ಗಳ ಮಾಲೀಕರು ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದ್ದರು. ಬೆಳಿಗ್ಗೆ ಹಾಗೂ ಮಧ್ಯಾಹ್ನದ ಪ್ರದರ್ಶನಗಳನ್ನು ರದ್ದುಪಡಿಸಲಾಗಿತ್ತು.

ಶಾಂತಿಯುತ ಬಂದ್: ಪ್ರತಿಭಟನೆ ಹಾಗೂ ಬಂದ್ ವಿಚಾರವಾಗಿ ಹೈಕೋರ್ಟ್ ನೀಡಿರುವ ಆದೇಶದನ್ವಯ ನಿಷೇಧಾಜ್ಞೆ ಜಾರಿ ಮಾಡಲಾಗಿತ್ತು. ಜಯನಗರದಲ್ಲಿ ಹೋಟೆಲ್ ಮೇಲೆ ಕಲ್ಲು ಎಸೆದಿರುವ ಘಟನೆ ಹೊರತುಪಡಿಸಿದರೆ, ಉಳಿದ ಕಡೆಗಳಲ್ಲಿ ಬಂದ್ ಶಾಂತಿಯುತವಾಗಿತ್ತು.

ಬಿಜೆಪಿ ಶಾಸಕ ವಶಕ್ಕೆ: ಪ್ರತಿಭಟನೆ

ಬಂದ್ ವೇಳೆ ಬೈಕ್ ರ್‍ಯಾಲಿ ನಡೆಸಲು ಮುಂದಾಗಿದ್ದ ಜಯನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಸಿ.ಕೆ. ರಾಮಮೂರ್ತಿ ಸೇರಿದಂತೆ ಹಲವರನ್ನು ವಶಕ್ಕೆ ಪಡೆದಿದ್ದ ಪೊಲೀಸರು, ಕೆಲ ಗಂಟೆಗಳ ಬಳಿಕ ಬಿಡುಗಡೆ ಮಾಡಿದರು.

ಮಂಗಳವಾರ ಬೆಳಿಗ್ಗೆ ಜಯನಗರದಲ್ಲಿ ಸೇರಿದ್ದ ರಾಮಮೂರ್ತಿ ಹಾಗೂ ಬೆಂಬಲಿಗರು, ಬೈಕ್ ರ್‍ಯಾಲಿ ನಡೆಸಲು ಮುಂದಾಗಿದ್ದರು. ಅದಕ್ಕೆ ಆಕ್ಷೇಪಿಸಿದ್ದ ಪೊಲೀಸರು, 'ಸ್ವಾತಂತ್ರ್ಯ ಉದ್ಯಾನ ಬಿಟ್ಟು ಬೇರೆ ಯಾವ ಸ್ಥಳದಲ್ಲೂ ಪ್ರತಿಭಟನೆಗೆ ಅವಕಾಶವಿಲ್ಲ. ದಯವಿಟ್ಟು ರ್‍ಯಾಲಿ ಕೈಬಿಡಿ' ಎಂದು ಕೋರಿದ್ದರು. ಅದಕ್ಕೆ ಶಾಸಕ ಒಪ್ಪಿರಲಿಲ್ಲ.

ಮುಂಜಾಗ್ರತಾ ಕ್ರಮವಾಗಿ ಶಾಸಕ ರಾಮಮೂರ್ತಿ ಹಾಗೂ ಇತರರನ್ನು ವಶಕ್ಕೆ ಪಡೆದಿದ್ದ ಪೊಲೀಸರು, ಠಾಣೆಗೆ ಕರೆತಂದಿದ್ದರು. ವಶಕ್ಕೆ ಪಡೆದಿದ್ದನ್ನು ಖಂಡಿಸಿದ್ದ ಬಿಜೆಪಿ ಕಾರ್ಯಕರ್ತರು, ಠಾಣೆ ಎದುರು ಸೇರಿ ಪ್ರತಿಭಟನೆ ನಡೆಸಿದರು. ಶಾಸಕ ಹಾಗೂ ಇತರರನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿದರು. ಸ್ಥಳಕ್ಕೆ ಬಂದ ಡಿಸಿಪಿ ರಾಹುಲ್‌ಕುಮಾರ್, ಪ್ರತಿಭಟನಕಾರರ ಮನವೊಲಿಸಿದರು.

ಜನರು ಸಂಕಷ್ಟದಲ್ಲಿದ್ದು, ಅವರಿಗಾಗಿ ಹೋರಾಟ ನಡೆಸುತ್ತಿದ್ದೇವೆ. ರಾಜ್ಯ ಸರ್ಕಾರವು ಪೊಲೀಸರ ಮೂಲಕ ಹೋರಾಟ ಹತ್ತಿಕ್ಕುವ ಕೆಲಸ ಮಾಡಿದೆ
ಕುರುಬೂರು ಶಾಂತಕುಮಾರ್, ಅಧ್ಯಕ್ಷ, ಕಬ್ಬು ಬೆಳೆಗಾರರ ಸಂಘ

₹ 250 ಕೋಟಿ ನಷ್ಟ?

ಬಂದ್‌ನಿಂದಾಗಿ ನಗರದ ವ್ಯಾಪಾರ–ವಹಿವಾಟು ಬಹುತೇಕ ಸ್ಥಗಿತಗೊಂಡಿತ್ತು. ಇದರಿಂದಾಗಿ ಜಿಎಸ್‌ಟಿ ವರಮಾನ ಸಂಗ್ರಹದಲ್ಲಿ ಸುಮಾರು ₹ 250 ಕೋಟಿ ನಷ್ಟವಾಗಿರುವುದಾಗಿ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಮಹಾ ಸಂಸ್ಥೆ (ಎಫ್‌ಕೆಸಿಸಿಐ) ಅಂದಾಜಿಸಿದೆ. ಬಂದ್ ಬಗ್ಗೆ ಪ್ರತಿಕ್ರಿಯಿಸಿರುವ ಅಧ್ಯಕ್ಷ ಬಿ.ವಿ. ಗೋಪಾಲ್ ರೆಡ್ಡಿ, ರಾಜ್ಯದಲ್ಲಿನ ಒಟ್ಟು ಜಿಎಸ್‌ಟಿ ಸಂಗ್ರಹದಲ್ಲಿ ಶೇ 60ರಷ್ಟು ಬೆಂಗಳೂರಿನಲ್ಲಿ ಸಂಗ್ರಹವಾಗುತ್ತದೆ. ಬಂದ್‌ನಿಂದಾಗಿ ವ್ಯಾಪಾರ ನಡೆಯದೇ ಇದ್ದುದರಿಂದ ಜಿಎಸ್‌ಟಿ ಸಂಗ್ರಹದ ಮೇಲೆ ಹೊಡೆತ ಬಿದ್ದಿದೆ' ಎಂದರು.

ಪಠ್ಯಪುಸ್ತಕ ಪರಿಷ್ಕರಣೆಗೆ ಐದು ಸಮಿತಿ

ಒಂದನೇ ಪುಟದಿಂದ...

ಪ್ರಥಮ ಭಾಷೆ, ದ್ವಿತೀಯ ಭಾಷೆ ಕನ್ನಡ ಹಾಗೂ 8-10ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯಲ್ಲಿ ತಲಾ 10 ಸದಸ್ಯರು, ತೃತೀಯ ಭಾಷೆ ಕನ್ನಡಕ್ಕೆ ನಾಲ್ವರು ಹಾಗೂ 6,7ನೇ ತರಗತಿಯ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯಲ್ಲಿ ಏಳು ಸದಸ್ಯರು ಇದ್ದಾರೆ.

ಮಂಜುನಾಥ ಹೆಗಡೆ ಯಾರು?

ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಗಳ ಸಂಯೋಜಕರಾಗಿ ನೇಮಕವಾಗಿರುವ ಮಂಜುನಾಥ ಜಿ. ಹೆಗಡೆ ಅವರು ಉತ್ತರ ಕನ್ನಡ ಜಿಲ್ಲೆ,ಕುಮಟಾ ತಾಲ್ಲೂಕಿನ ಚಿತ್ತರಗಿ ಗ್ರಾಮದವರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾಗಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿ ಒಟ್ಟು ಮೂರೂವರೆ ದಶಕ ಕೆಲಸ ಮಾಡಿದ್ದು, ಕಳೆದ ನವೆಂಬರ್‌ನಲ್ಲಿ ನಿವೃತ್ತರಾಗಿದ್ದಾರೆ. ಮೈಸೂರು, ಕುವೆಂಪು, ಕರ್ನಾಟಕ ವಿಶ್ವವಿದ್ಯಾಲಯ ಸೇರಿದಂತೆ ಹಲವು ವಿಶ್ವವಿದ್ಯಾಲಯಗಳಲ್ಲಿನ ವಿವಿಧ ಅಧ್ಯಯನ ಮಂಡಳಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

ಸಮಿತಿ	ಅಧ್ಯಕ್ಷ
ಪ್ರಥಮ ಭಾಷೆ ಕನ್ನಡ	ಅಂಜನಪ್ಪ, ಪ್ರಾಧ್ಯಾಪಕ, ತುಂಗಾ ಕಾಲೇಜು, ತೀರ್ಥಹಳ್ಳಿ
ದ್ವಿತೀಯ ಭಾಷೆ ಕನ್ನಡ	ಎಚ್‌.ಎಸ್‌.ಸತ್ಯನಾರಾಯಣ್, ಉಪನ್ಯಾಸಕ, ಸರ್ಕಾರಿ ಬಾಲಿಕ ಪಿಯು ಕಾಲೇಜು, ಬಸವನಹಳ್ಳಿ, ಚಿಕ್ಕಮಗಳೂರು
ತೃತೀಯ ಭಾಷೆ ಕನ್ನಡ	ಮಂಜಣ್ಣ, ಪ್ರಾಧ್ಯಾಪಕ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ
6,7ನೇ ತರಗತಿ ಸಮಾಜ ವಿಜ್ಞಾನ	ಎಂ.ಕಿರಣ್, ಸಹಾಯಕ ಪ್ರಾಧ್ಯಾಪಕ, ಕರ್ನಾಟಕ ಕೇಂದ್ರೀಯ ವಿವಿ ಕಲಬುರಗಿ
8-10ನೇ ತರಗತಿ ಸಮಾಜ ವಿಜ್ಞಾನ	ಅಶ್ವತ್ಥನಾರಾಯಣ, ನಿವೃತ್ತ ಪ್ರಾಧ್ಯಾಪಕ, ಬೆಂಗಳೂರು

ಅರ್ಜಿ ಹಾಕಿಲ್ಲ, ಸಾಗುವಳಿ ಚೀಟಿಯೂ ಇಲ್ಲ: ನೇರವಾಗಿ ಖಾಸಗಿ ವ್ಯಕ್ತಿಗಳ ಹೆಸರಿಗೆ ಖಾತೆ

ವಿದೇಶವಾಸಿಗೂ ಇಲ್ಲಿ ಸರ್ಕಾರಿ ಭೂಮಿ ಮಂಜೂರು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಜಿಲ್ಲೆಯಲ್ಲಿ ಅಕ್ರಮ ಭೂಕಬಳಿಕೆ ವಿರುದ್ಧ ನಡೆಯುತ್ತಿರುವ ತನಿಖೆ ಬಗೆದಷ್ಟು ಆಳಕ್ಕೆ ಇಳಿಯುತ್ತಿದೆ. ಆಸ್ಟ್ರೇಲಿಯಾ, ಅಮೆರಿಕ, ಮುಂಬೈ, ಮಂಗಳೂರು, ಬೆಂಗಳೂರಿನಲ್ಲಿ ಹತ್ತಾರು ವರ್ಷಗಳಿಂದ ನೆಲಸಿರುವ, ಅರ್ಜಿಯನ್ನೇ ಹಾಕದ ಒಂದೇ ಕುಟುಂಬದ ಏಳು ಜನರ ಹೆಸರಿಗೆ ನೇರವಾಗಿ ಸರ್ಕಾರಿ ಭೂಮಿ ಖಾತೆ ಮಾಡಿರುವ ಪ್ರಕರಣ ಬಹಿರಂಗವಾಗಿದೆ.

ಒಂದೇ ಪ್ರಕರಣದಲ್ಲಿ 32 ಎಕರೆಯಷ್ಟು ಅಕ್ರಮ ಮಂಜೂರಾತಿಯನ್ನು ಉಪವಿಭಾಗಾಧಿಕಾರಿ ರದ್ದು ಮಾಡಿದ್ದು, ಅಕ್ರಮವಾಗಿ ಮಂಜೂರು ಮಾಡಿದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

ನಮೂನೆ 50, 53 ಮತ್ತು 57 ಅಡಿಯಲ್ಲಿ ಅರ್ಜಿಗಳೇ ಸಲ್ಲಿಕೆಯಾಗಿಲ್ಲ, ಅಕ್ರಮ–ಸಕ್ರಮ ಸಮಿತಿ ನಡಾವಳಿಯಲ್ಲಿ ನಮೂದಾಗಿಲ್ಲ, ಸಾಗುವಳಿ ಚೀಟಿ ವಿತರಣೆಯಾಗಿಲ್ಲ, ಬಗರ್ ಹುಕುಂ ಸಮಿತಿ ಮುಂದೆ ಅರ್ಜಿ ಮಂಡನೆ ಆಗಿಲ್ಲ. ಆದರೆ, ನೇರವಾಗಿ ಖಾಸಗಿ ವ್ಯಕ್ತಿಗಳ ಹೆಸರಿಗೆ ಜಮೀನು ಖಾತೆಯಾಗಿತ್ತು.

ಮೂಡಿಗೆರೆ ತಾಲ್ಲೂಕಿನ ಬಾಳೂರು ಹೋಬಳಿ ಹಾದಿಓಣಿ ಗ್ರಾಮದ ಸರ್ವೆ ನಂಬರ್ 21ರಲ್ಲಿ ಇದ್ದ ಖಾಲಿ ಜಾಗ ಹುಬ್ರಾಟ್ ವಾಜ್ ನಾಯಕ್, ಅಂತೋನಿ ಜೆ.ಡಿ. ಪಿಂಟೊ, ಹೀರೊ ಎ.ಎಂ.ಎಲ್, ಜೋಸ್ ಫಿನ್ ಸುನೀತಿ ಕಾಮತ್, ಜೋಸ್ನಾ ಕಾಸರಗೋಡು, ಶೀಲಾ ಅಲ್ಬುಕ್ಯೂಕ್ ಮತ್ತು ಶೆರಿಲ್ಲಾ ಡಿಸೋಜಾ ಎಂಬುವರ ಹೆಸರಿಗೆ ಒಟ್ಟು 32 ಎಕರೆಯಷ್ಟು ಜಾಗ 2021ರಲ್ಲಿ ಮಂಜೂರಾಗಿತ್ತು.

'ಭೂಮಿ ಮಂಜೂರು ಮಾಡಲು ಕೆಲವು ನಿಯಮಗಳನ್ನು ಪಾಲಿಸಬೇಕು. ಸಾಗುವಳಿಯಲ್ಲಿರುವ ರೈತ ಅರ್ಜಿ ಸಲ್ಲಿಸಿದ್ದರೆ ಎಷ್ಟು ವರ್ಷಗಳಿಂದ ಹಿಡುವಳಿ ಮಾಡುತ್ತಿದ್ದಾರೆ, ಈ ಹಿಂದೆ ಅವರ ಅಥವಾ ಅವರ ಕುಟುಂಬದ ಹೆಸರಿಗೆ ಭೂಮಿ ಮಂಜೂರಾಗಿದೆಯೇ ಎಂಬೆಲ್ಲಾ ಮಾಹಿತಿಯನ್ನು ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕ ಪರಿಶೀಲಿಸಬೇಕು. ಅರ್ಜಿಯನ್ನು ಶಾಸಕರ ಅಧ್ಯಕ್ಷತೆಯ ಬಗರ್ ಹುಕುಂ ಸಮಿತಿ ಮುಂದೆ ತಹಶೀಲ್ದಾರ್ ಮಂಡಿಸಬೇಕು. ಒಪ್ಪಿಗೆ ನೀಡಿದ ಬಳಿಕ ನಿಗದಿತ ಶುಲ್ಕ ಪಡೆದು ಸಾಗುವಳಿ ಚೀಟಿ ವಿತರಿಸಬೇಕು. ಆದರೆ, ಈ ಪ್ರಕರಣದಲ್ಲಿ ಯಾವುದೇ ನಿಯಮ ಗಳನ್ನೂ ಅಂದಿನ ಅಧಿಕಾರಿಗಳು ಪಾಲಿಸಿಲ್ಲ. ಬೇರೆ ಯಾವುದೋ ಕಡತದಲ್ಲಿನ ಸಾಗುವಳಿ ಚೀಟಿ, ಕೆಲ ಪ್ರಕರಣದಲ್ಲಿ ಕಾಗದದ ಚೂರುಗಳನ್ನು ಭೂಮಿ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿ ನೇರವಾಗಿ ಖಾತೆ ಮಾಡಿಕೊಟ್ಟಿದ್ದಾರೆ' ಎಂದು ಈಗಿನ ತಹಶೀಲ್ದಾರ್ ವೈ.ತಿಪ್ಪೇಸ್ವಾಮಿ ಪೊಲೀಸರಿಗೆ ಭಾನುವಾರ ದೂರು ನೀಡಿದ್ದಾರೆ.

ಈಗ ದಾಖಲಾಗಿರುವ ಪ್ರಕರಣದ ವಿಶೇಷ ಎಂದರೆ ಅಷ್ಟೂ ಜಾಗದಲ್ಲಿ ಜೆರಾಲ್ಡ್ ಡಿಸೋಜಾ ಎಂಬುವರು ಕೃಷಿ ಮಾಡುತ್ತಿದ್ದಾರೆ. ಈ ಏಳು ಖಾತೆದಾರರೂ ಅವರ ಸಂಬಂಧಿಕರೇ ಆಗಿದ್ದಾರೆ. ಮೂವರು ಅಮೆರಿಕದಲ್ಲಿದ್ದರೆ, ಒಬ್ಬರು ಆಸ್ಟ್ರೇಲಿಯಾದಲ್ಲಿದ್ದಾರೆ. ಒಬ್ಬರು ಮುಂಬೈ, ಮತ್ತೊಬ್ಬರು ಬೆಂಗಳೂರು ಮತ್ತು ಇನ್ನೊಬ್ಬರು ಮಂಗಳೂರಿನಲ್ಲಿ ನೆಲೆಸಿದ್ದಾರೆ ಎನ್ನುವುದು ಮೂಲಗಳ ವಿವರಣೆ.

6 ಸಾವಿರ ಎಕರೆ ಅಕ್ರಮ ಮಂಜೂರು

ಇನ್ನೊಂದೆಡೆ ಕಡೂರು ಮತ್ತು ಮೂಡಿಗೆರೆ ತಾಲ್ಲೂಕಿನಲ್ಲಿ ನಡೆದಿರುವ ಅಕ್ರಮ ಭೂಮಂಜೂರಾತಿ ಬಗ್ಗೆ 15 ತಹಶೀಲ್ದಾರ್‌ಗಳ ವಿಶೇಷ ತಂಡ ನಡೆಸಿದ ತನಿಖೆ ಪೂರ್ಣಗೊಳಿಸಿದ್ದು, ಸರ್ಕಾರಕ್ಕೆ ವರದಿ ಕೂಡ ಸಲ್ಲಿಕೆಯಾಗಿದೆ. ಪ್ರಾಥಮಿಕ ಮಾಹಿತಿ ಪ್ರಕಾರ 6 ಸಾವಿರಕ್ಕೂ ಹೆಚ್ಚು ಎಕರೆ ಸರ್ಕಾರಿ ಭೂಮಿ ಅಕ್ರಮವಾಗಿ ಮಂಜೂರಾಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಇಬ್ಬರು ತಹಶೀಲ್ದಾರ್ ವಿರುದ್ಧ ಪ್ರಕರಣ

ಸರ್ಕಾರಿ ಜಾಗವನ್ನು ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವ ಆರೋಪದಲ್ಲಿ ಕಂದಾಯ ನಿರೀಕ್ಷಕ ಎನ್‌.ಎನ್‌.ಗಿರೀಶ್, ಗ್ರಾಮ ಲೆಕ್ಕಾಧಿಕಾರಿ ನೇತ್ರಾವತಿ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಸ್ಥಳ ನಿಯುಕ್ತಿಗೆ ಕಾದಿರುವ ತಹಶೀಲ್ದಾರ್ ಎಚ್‌.ಎಂ.ರಮೇಶ್ ಮತ್ತು ಹೊಸದುರ್ಗ ತಹಶೀಲ್ದಾರ್ ಪಾಲಯ್ಯ(ಈ ಹಿಂದೆ ಮೂಡಿಗೆರೆಯಲ್ಲಿ ಶಿರಸ್ತೆದಾರ್ ಆಗಿದ್ದರು) ವಿರುದ್ಧವೂ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

7 ಸಾವಿರ ಲ್ಯಾಪ್‌ಟಾಪ್‌ಗಳಿಗೆ 1 ಲಕ್ಷ ಅರ್ಜಿ!

ಒಂದನೇ ಪುಟದಿಂದ...

ಮಕ್ಕಳಲ್ಲಿ ತಾರತಮ್ಯ ಮಾಡಬೇಡಿ: 'ಮೆರಿಟ್ ಆಧಾರದ ಮೇಲೆ ಬೆರಳೆಣಿಕೆ ಮಕ್ಕಳಿಗೆ ಲ್ಯಾಪ್‌ಟಾಪ್ ನೀಡಿದರೆ ಕಟ್ಟಡ ಕಾರ್ಮಿಕರ ಸಾವಿರಾರು ಮಕ್ಕಳಿಗೆ ಅನ್ಯಾಯವಾಗುತ್ತದೆ. ನಮ್ಮ ಮಕ್ಕಳಲ್ಲಿ ತಾರತಮ್ಯ ಮಾಡಿ, ಕೀಳರಿಮೆ ಬೆಳೆಸಬೇಡಿ. ಮಾನವೀಯ ದೃಷ್ಟಿಯಿಂದ ಎಲ್ಲ ಮಕ್ಕಳಿಗೂ ಲ್ಯಾಪ್‌ಟಾಪ್ ವಿತರಿಸಬೇಕು' ಎಂದು ಸಂತ ಶಿಶುನಾಳ ಶರೀಫ ಕಟ್ಟಡ ಕಾರ್ಮಿಕರ ಸಂಘದ ಹಾವೇರಿ ಜಿಲ್ಲಾ ಘಟಕದ ಅಧ್ಯಕ್ಷ ಮಾನಪ್ಪ ಬಡಿಗೇರ ಒತ್ತಾಯಿಸಿದ್ದಾರೆ.

ಅರ್ಜಿಗಳ ಮಹಾಪೂರ: ಹಾವೇರಿ ಜಿಲ್ಲೆಗೆ 250 ಲ್ಯಾಪ್‌ಟಾಪ್ ಹಂಚಿಕೆಯಾಗಿದ್ದು, 7,300 ಅರ್ಜಿಗಳು ಸಲ್ಲಿಕೆಯಾಗಿವೆ. ಕೊಪ್ಪಳ ಜಿಲ್ಲೆಯಲ್ಲಿ 165 ಲ್ಯಾಪ್‌ಟಾಪ್‌ಗಳಿಗೆ 8,742 ಅರ್ಜಿಗಳು, ಕಲಬುರಗಿ ಜಿಲ್ಲೆಯಲ್ಲಿ 300 ಲ್ಯಾಪ್‌ಟಾಪ್‌ಗಳಿಗೆ 10,973 ಅರ್ಜಿಗಳು ಬಂದಿವೆ.

ಹೀಗೆ ಜಿಲ್ಲೆಗಳಿಗೆ ಕಡಿಮೆ ಸಂಖ್ಯೆಯಲ್ಲಿ ಲ್ಯಾಪ್‌ಟಾಪ್‌ಗಳು ಹಂಚಿಕೆಯಾಗಿದ್ದು, ಅರ್ಹ ಮಕ್ಕಳು ದೊಡ್ಡ ಸಂಖ್ಯೆಯಲ್ಲಿದ್ದಾರೆ.

'ನಮ್ಮ ಪೋಷಕರು ಲ್ಯಾಪ್‌ಟಾಪ್ ಕೊಡಿಸುವಷ್ಟು ಶಕ್ತರಲ್ಲ. ಸರ್ಕಾರ ಎಲ್ಲ ಕಾರ್ಮಿಕರ ಮಕ್ಕಳಿಗೂ ಲ್ಯಾಪ್‌ಟಾಪ್ ನೀಡಿ, ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ನೆರವಾಗಬೇಕು' ಎಂದು ಕಟ್ಟಡ ಕಾರ್ಮಿಕರ ಮಕ್ಕಳು ಕೋರಿದ್ದಾರೆ.

ಲ್ಯಾಪ್‌ಟಾಪ್ ಸೌಲಭ್ಯಕ್ಕೆ ಸಲ್ಲಿಕೆಯಾದ ಅರ್ಜಿಗಳ ವಿವರ

ಜಿಲ್ಲೆಗಳು	ಲ್ಯಾಪ್ ಟಾಪ್	ಅರ್ಜಿಗಳ ಸಂಖ್ಯೆ
ಬೆಳಗಾವಿ	277	5528
ಧಾರವಾಡ	225	4510
ವಿಜಯಪುರ	152	3974
ಉತ್ತರ ಕನ್ನಡ	196	3128
ಬಾಗಲಕೋಟೆ	160	2632
ಹಾವೇರಿ	250	7300
ಗದಗ	140	3653
ಕಲಬುರ್ಗಿ	300	10,973
ಬೀದರ್	200	9525
ಯಾದಗಿರಿ	145	4758
ರಾಯಚೂರು	90	1329
ಕೊಪ್ಪಳ	165	8742
ಬಳ್ಳಾರಿ	75	788
ವಿಜಯನಗರ	100	2437
ಚಿತ್ರದುರ್ಗ	150	3425
ಕೋಲಾರ	200	1914
ಚಿಕ್ಕಬಳ್ಳಾಪುರ	150	1503
ಮೈಸೂರು	450	6518
ಮಂಡ್ಯ	200	855
ಚಾಮರಾಜನಗರ	200	2612
ಉಡುಪಿ	162	2270
ಶಿವಮೊಗ್ಗ	378	4766
ಚಿಕ್ಕಮಗಳೂರು	280	963
ಹಾಸನ	250	3179
ದಕ್ಷಿಣ ಕನ್ನಡ	302	2917
ಕೊಡಗು	28	233
ತುಮಕೂರು	315	2500
ರಾಮನಗರ	206	1145

ಸಂಜ್ಞೆ ಮೂಲಕ ಕಲಾಪ ಅರ್ಥೈಸಿದ ಸಂವಹನಕಾರರು

ನವದೆಹಲಿ (ಪಿಟಿಐ): ಶ್ರವಣ ದೋಷವುಳ್ಳ ವ್ಯಕ್ತಿಗಳು ನ್ಯಾಯಾಲಯದ ಕಲಾಪಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಬೇಕು ಎಂಬ ಉದ್ದೇಶದಿಂದ ದೆಹಲಿ ಹೈಕೋರ್ಟ್ ಮಂಗಳವಾರ, ಸಂಕೇತ ಭಾಷೆಯ (ಸಂಜ್ಞೆ ಭಾಷೆ) ಮೂಲಕ ಸಂವಹನ ನಡೆಸುವವರ ನೆರವು ಪಡೆದುಕೊಂಡಿತು.

ಸಂಕೇತ ಭಾಷೆ ಮೂಲಕ ಸಂವಹನ ನಡೆಸುವ ಇಬ್ಬರು ವ್ಯಕ್ತಿಗಳು ನ್ಯಾಯಮೂರ್ತಿಯ ಸನಿಹದಲ್ಲಿ ನಿಂತು ಕಲಾಪವನ್ನು ಶ್ರವಣ ದೋಷವುಳ್ಳವರಿಗೆ ಸಂಕೇತ ಭಾಷೆಯಲ್ಲಿ ವಿವರಿಸಿದರು. ಹೈಕೋರ್ಟ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸಂವಹನಕಾರರ ನೆರವು ಪಡೆಯಲಾಗಿದೆ.

ವಾಕ್ ಮತ್ತು ಶ್ರವಣ ದೋಷವುಳ್ಳವರಿಗೂ ಚಿತ್ರಮಂದಿರ ಹಾಗೂ ಒಟಿಟಿ ವೇದಿಕೆಗಳಲ್ಲಿ ಮನರಂಜನೆ ಪಡೆಯಲು ಅವಕಾಶ ಕಲ್ಪಿಸಬೇಕು ಎಂದು ಕೋರಿ ವಾಕ್ ಮತ್ತು ಶ್ರವಣ ದೋಷವುಳ್ಳ ನಾಲ್ವರು ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ನ್ಯಾಯಮೂರ್ತಿ ಪ್ರತಿಭಾ ಎಂ. ಸಿಂಗ್ ಅವರಿದ್ದ ಏಕಸದಸ್ಯ ನ್ಯಾಯಪೀಠವು ಈ ಅರ್ಜಿಯ ವಿಚಾರಣೆ ನಡೆಸಿತು.

ನ್ಯಾಯಮೂರ್ತಿಗಳ ನೇಮಕ, ವರ್ಗಾವಣೆ ವಿಚಾರ: ಸರ್ಕಾರದ ನಿರ್ಲಕ್ಷ್ಯಕ್ಕೆ ಆಕ್ಷೇಪ

ನೇಮಕ ವಿಳಂಬಕ್ಕೆ ಕೋರ್ಟ್ ಕಳವಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯ ನ್ಯಾಯಮೂರ್ತಿ (ಸಿಜೆಐ) ನೇತೃತ್ವದ ಹಿರಿಯ ನ್ಯಾಯಮೂರ್ತಿಗಳ ಸಮಿತಿಯು (ಕೊಲಿಜಿಯಂ) ನ್ಯಾಯಮೂರ್ತಿಗಳ ನೇಮಕ ಹಾಗೂ ವರ್ಗಾವಣೆ ವಿಚಾರವಾಗಿ ಮಾಡುವ ಶಿಫಾರಸುಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ವಿಳಂಬ ಧೋರಣೆ ಅನುಸರಿಸುತ್ತಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಮತ್ತೆ ಕಳವಳ ವ್ಯಕ್ತಪಡಿಸಿದೆ.

ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಸಿದ್ಧಾರ್ಥ ಮೃದುಲ್ ಅವರನ್ನು ಮಣಿಪುರ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡುವುದು ಕೂಡ ಕೊಲಿಜಿಯಂ ಶಿಫಾರಸುಗಳಲ್ಲಿ ಒಂದು.

ಕೋರ್ಟ್ ವ್ಯಕ್ತಪಡಿಸಿರುವ ಕಳವಳದ ವಿಚಾರವಾಗಿ ಒಂದು ವಾರದಲ್ಲಿ ಪ್ರತಿಕ್ರಿಯೆ ಸಲ್ಲಿಸಲಾಗುವುದು ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ಮಾಡಿದ ಮನವಿಯನ್ನು ನ್ಯಾಯಮೂರ್ತಿಗಳಾದ ಸಂಜಯ್ ಕಿಷನ್ ಕೌಲ್ ಮತ್ತು ಸುಧಾಂಶು ಧುಲಿಯಾ ಅವರಿದ್ದ ನ್ಯಾಯಪೀಠ ಮಾನ್ಯ ಮಾಡಿದೆ.

'ಹಲವಷ್ಟು ಸಂಗತಿಗಳನ್ನು ಹೇಳಬೇಕು ಅಂದುಕೊಂಡಿದ್ದೆ. ಆದರೆ ಅಟಾರ್ನಿ ಜನರಲ್ ಅವರು ಒಂದು ವಾರದ ಕಾಲಾವಕಾಶ ಮಾತ್ರ ಕೇಳುತ್ತಿರುವ ಕಾರಣ, ನಾನು ಮಾತುಗಳನ್ನು ತಡೆಹಿಡಿಯುತ್ತಿದ್ದೇನೆ... ಆದರೆ ಹೆಚ್ಚು ಕಾಲ ಸುಮ್ಮನೆ ಕುಳಿತುಕೊಳ್ಳುವುದಿಲ್ಲ' ಎಂದು ನ್ಯಾಯಮೂರ್ತಿ ಕೌಲ್ ಅವರು ಹೇಳಿದ್ದಾರೆ. ಈ ಪ್ರಕರಣದ ವಿಚಾರಣೆಯನ್ನು ಪ್ರತಿ 10 ದಿನಕ್ಕೆ ಒಮ್ಮೆ ನಡೆಸುವುದಾಗಿ ತಿಳಿಸಿದ್ದಾರೆ.

ಬೆಂಗಳೂರು ವಕೀಲರ ಸಂಘ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಈ ನ್ಯಾಯಪೀಠ ನಡೆಸುತ್ತಿದೆ. ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿದ 70 ಹೆಸರುಗಳ ಶಿಫಾರಸುಗಳು 2022ರ ನವೆಂಬರ್‌ನಿಂದಲೂ ಬಾಕಿ ಉಳಿದಿವೆ ಎಂದು ನ್ಯಾಯಪೀಠ ಹೇಳಿದೆ.

ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಸಿದ್ಧಾರ್ಥ ಮೃದುಲ್ ಅವರನ್ನು ಮಣಿಪುರ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯನ್ನಾಗಿ ನೇಮಕ ಮಾಡಬೇಕು ಎಂದು ಕೊಲಿಜಿಯಂ ಜುಲೈನಲ್ಲಿ ಶಿಫಾರಸು ಮಾಡಿತ್ತು. ಆದರೆ ಇವರ ನೇಮಕ ಕುರಿತು ಕೇಂದ್ರ ಸರ್ಕಾರವು ಇದುವರೆಗೂ ಅಧಿಸೂಚನೆ ಹೊರಡಿಸಿಲ್ಲ. 'ಮುಖ್ಯ ನ್ಯಾಯಮೂರ್ತಿಯ ನೇಮಕವು ಬಹಳ ಸೂಕ್ಷ್ಮವಾದ ವಿಚಾರ' ಎಂದು ನ್ಯಾಯಪೀಠ ಹೇಳಿದೆ.

ಕೊಲಿಜಿಯಂ ಶಿಫಾರಸು: ಪ್ರಕರಣ ಏನು?

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಕೊಲಿಜಿಯಂನ ಶಿಫಾರಸುಗಳ ಅನುಷ್ಠಾನದ ವಿಚಾರವಾಗಿ 2021ರ ತೀರ್ಪಿನಲ್ಲಿ ನಿಗದಿಪಡಿಸಿರುವ ಸಮಯಮಿತಿಯನ್ನು ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯವು ಪಾಲಿಸುತ್ತಿಲ್ಲ ಎಂದು ದೂರಿರುವ ಬೆಂಗಳೂರು ವಕೀಲರ ಸಂಘವು, ಸಚಿವಾಲಯದ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಬೇಕು ಎಂದು ಕೋರಿ ಅರ್ಜಿ ಸಲ್ಲಿಸಿದೆ. ಈ ಅರ್ಜಿಯ ವಿಚಾರಣೆಯನ್ನು ನ್ಯಾಯಪೀಠ ನಡೆಸುತ್ತಿದೆ.

ಕೊಲಿಜಿಯಂ ತನ್ನ ಶಿಫಾರಸನ್ನು ಸರ್ವಾನುಮತದಿಂದ ಪುನರುಚ್ಚರಿಸಿದರೆ, ಕೇಂದ್ರ ಸರ್ಕಾರವು ಶಿಫಾರಸಿಗೆ ಅನುಗುಣವಾಗಿ ಮೂರು ಅಥವಾ ನಾಲ್ಕು ವಾರಗಳಲ್ಲಿ ನ್ಯಾಯಮೂರ್ತಿಗಳನ್ನು ನೇಮಕ ಮಾಡಬೇಕು ಎಂದು ಸುಪ್ರೀಂ ಕೋರ್ಟ್ 2021ರಲ್ಲಿ ಹೇಳಿತ್ತು.

ಈ ಪ್ರಕರಣದಲ್ಲಿ ಇನ್ನೊಂದು ಅರ್ಜಿಯನ್ನು ಸಲ್ಲಿಸಿರುವ ಸರ್ಕಾರೇತರ ಸಂಸ್ಥೆ (ಎನ್‌ಜಿಒ) ಕಾಮನ್ ಕಾಸ್ ಪರವಾಗಿ ವಾದ ಮಂಡಿಸಿದ ವಕೀಲ ಪ್ರಶಾಂತ್ ಭೂಷಣ್, 'ಕೊಲಿಜಿಯಂ ಹಲವು ಹೆಸರುಗಳನ್ನು ಒಂದೇ ಬಾರಿಗೆ ಶಿಫಾರಸು ಮಾಡಿದರೂ, ಸರ್ಕಾರವು ಆ ಹೆಸರುಗಳನ್ನು ಪ್ರತ್ಯೇಕಗೊಳಿಸಿ, ಕೆಲವು ಹೆಸರುಗಳನ್ನು ಮಾತ್ರ ನೇಮಕಾತಿಗೆ ಅಂತಿಮಗೊಳಿಸುತ್ತಿದೆ' ಎಂದು ದೂರಿದರು.

'ಹೀಗೆ ಮಾಡುವುದು ವಕೀಲರ ನೈತಿಕ ಸ್ಥೈರ್ಯದ ಮೇಲೆ ಪರಿಣಾಮ ಉಂಟುಮಾಡುತ್ತದೆ. ನನಗೆ ಬಂದಿರುವ ಮಾಹಿತಿ ಪ್ರಕಾರ, ನ್ಯಾಯಮೂರ್ತಿ ಆಗಲು ನೀಡಿದ್ದ ಸಮ್ಮತಿಯನ್ನು ಹಲವು ವಕೀಲರು ಹಿಂಪಡೆದಿದ್ದಾರೆ' ಎಂದು ಭೂಷಣ್ ತಿಳಿಸಿದರು. 'ಒಳ್ಳೆಯ ಅಭ್ಯರ್ಥಿಗಳು ನ್ಯಾಯಮೂರ್ತಿ ಆಗಲು ನೀಡಿದ್ದ ಸಮ್ಮತಿಯನ್ನು ಹಿಂಪಡೆಯುವುದು ಕಳವಳಕಾರಿ ಎಂಬುದನ್ನು ನಾನು ಒಪ್ಪುತ್ತೇನೆ' ಎಂದು ನ್ಯಾಯಮೂರ್ತಿ ಕೌಲ್ ಹೇಳಿದರು.

ಪ್ರಜಾವಾಣಿ@75 | DH DECCAN HERALD

ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಬೆಟ್ಟದೂರು ಆಸ್ಪತ್ರೆ,** ಚಂದ್ರಮೌಳೇಶ್ವರ ಚೌಕದ ಹತ್ತಿರ, ಗಂಜ್ ರಸ್ತೆ, ರಾಯಚೂರು	25,000
2	**ಹೇಮಲತಾ,** ನಂ.487, ಚಿರಂತನ, ತುರಹಳ್ಳಿ ಮುಖ್ಯರಸ್ತೆ, ಬೆಂಗಳೂರು	20,000
3	**ಫಕೀರಪ್ಪ ಹಳ್ಳಿಕೇರಿ,** 'ಶೋಧನ', ಟೀಚರ್ಸ್ ಕಾಲೊನಿ, ಎಂ.ಪಿ.ಪ್ರಕಾಶ ನಗರ, ಹೊಸಪೇಟೆ	10,001
4	**ಜಿ.ಶ್ರೀನಿವಾಸಮೂರ್ತಿ,** ನಂ.106, ಮೆಡೋಸ್, ಬೆಮೆಲ್ ಆಸ್ಪತ್ರೆ ರಸ್ತೆ, ಜಿ.ಎಂ.ಪಾಳ್ಯ, ಬೆಂಗಳೂರು	10,000
5	**ಲೋಕೇಶ್ ಕೆ.,** ನಂ.77,ಆವಲಹಳ್ಳಿ ಮುಖ್ಯರಸ್ತೆ, ರಾಜಸ್ಥಾನ ಫಾರ್ಮಾ ಎದುರು, ಆವಲಹಳ್ಳಿ, ಬೆಂಗಳೂರು	10,000
6	**ಆನಂದ ದೊಡ್ಡಮನಿ,** ಪರಶುರಾಂ ಅಪಾರ್ಟ್‌ಮೆಂಟ್, ಮಂಗಳೂರು	5,001
7	**ನಿಂಬಣ್ಣ ಸೋಡಾ,** ನೇಕಾರ ಕಾಲೊನಿ, ಹಳೇಟೌನ್, ಹಗರಿಬೊಮ್ಮನಹಳ್ಳಿ	5,001
8	**ಚನ್ನಕೇಶವ ಕೆ.ಎಂ.,** ರಾಮಯ್ಯ ಲೇಔಟ್, ಕಮ್ಮನಹಳ್ಳಿ, ಬೆಂಗಳೂರು	5,000
9	**ಡಾ.ಸಿ.ಎನ್.ರಾಮಚಂದ್ರನ್,** ಎ 7 803, ಎಲಿಟಾ ಪ್ರೊಮನೇಡ್, ಜೆ.ಪಿ.ನಗರ 7ನೇ ಹಂತ, ಬೆಂಗಳೂರು	5,000
10	**ಗೀತಾಬಾಯಿ ಆರ್.,** ನಂ.394, 7ನೇ ಕ್ರಾಸ್, 5ನೇ ಮೇನ್, ಎನ್‌ಜಿಇಎಫ್ ಲೇಔಟ್, ಮಲ್ಲತ್ತಹಳ್ಳಿ, ಬೆಂಗಳೂರು	5,000
11	**ಗಾಯತ್ರಿದೇವಿ ಕೆ.ಎನ್.,** ಎಫ್‌ಎ–694, 2ನೇ ಮಹಡಿ, ವಾಲ್‌ಚಂದ್ ಹೀರಾಚಂದ್ ಬ್ಲಾಕ್, ಸಿಟಿಎಸ್ ಹಾಲ್ (ಬಿಸಿ), ಹಳೇ ವಿಮಾನನಿಲ್ದಾಣ ರಸ್ತೆ, ಬೋರ್‌ವೆಲ್, ಬೆಂಗಳೂರು	2,001
12	**ಡಾ.ಶಶಿಧರ್ ಶಿರಹಟ್ಟಿ, ಶಾಂತವೀರ,** ಮೊಗಳ್ಳಿ, ಪ್ಲಾಟ್ ನಂ.11, ಮೋಟಗುಂಬಜ್ ಶಾಸ್ತ್ರಿನಗರ, ವಿಜಯಪುರ	2,001
13	**ಸುಜಾತ ಮಂಜುನಾಥ್,** 2ನೇ ಕ್ರಾಸ್, ಜೆ.ಸಿ.ಆರ್. ಎಕ್ಸ್‌ಟೆನ್ಷನ್, ಶ್ರೀಗುರು ಕೊಟ್ಟೂರೇಶ್ವರ ನಿಲಯ, ಚಿತ್ರದುರ್ಗ	2,000
14	**ಎಚ್.ವೈ. ಆಂದೇಲಿ,** ನಂ.16, 2ನೇ ಕ್ರಾಸ್, ಟೆಲಿಕಾಂ ಲೇಔಟ್, ವಿರೂಪಾಕ್ಷಪುರ, ಬೆಂಗಳೂರು	2,000
15	**ಬಿ.ಎನ್.ಉದಯಶಂಕರ, ಬಿ.ಎಂ.ಪರಿಮಳ,** ಜೆ.ಪಿ.ನಗರ 6ನೇ ಹಂತ, ಬೆಂಗಳೂರು	1,500
16	**ಶ್ರೀನಿವಾಸನ್ ಟಿ.,** 10/2, 4ನೇ ಕ್ರಾಸ್, 3ನೇ ಮೇನ್, ಪಾಪಯ್ಯ ಗಾರ್ಡನ್, ಬಿಎಸ್‌ಕೆ 3ನೇ ಹಂತ, ಬೆಂಗಳೂರು	1,100
17	**ಕಣ್ಮಣಿ,** ವಿಲ್ಲಾ 140, ಜೆಡ್ ಅರ್ಥ್, ಸುರಧೇನುಪುರ, ಬೆಂಗಳೂರು	1,005
18	**ಕುಸುಮ ಎಂ.ಎಸ್.,** ನಂ.104, ಪ್ರೊಮನೇಡ್ ಅಪಾರ್ಟ್‌ಮೆಂಟ್, ದಾಸರಹಳ್ಳಿ ಮುಖ್ಯರಸ್ತೆ, ಹೆಬ್ಬಾಳ ಪೋಸ್ಟ್, ಬೆಂಗಳೂರು	1,001
19	**ಶ್ರೀನಿವಾಸ ಜಿ.ಎ.,** ನಂ.251/ಎ, ಕೈಲಾಶ್, ಮೊದಲ ಮಹಡಿ, ಅಂಜನಾಪುರ, ಬಿಡಿಎ ಟೌನ್‌ಶಿಪ್, ಅಂಜನಾಪುರ 3ನೇ ಎ ಬ್ಲಾಕ್, ಬೆಂಗಳೂರು	1,001
20	**ಎ.ಕೆ.ಅಪಸಂಗಿ,** 2487, ಇ ಬ್ಲಾಕ್, 13ನೇ ಮೇನ್, 9ನೇ ಬಿ ಕ್ರಾಸ್, ಶಂಕರನಗರ, ಬೆಂಗಳೂರು	1,000
21	**ಮಹೇಶ್ ಎಸ್.ಕಲ್ಯಾಣಿ,** ರಾಮದುರ್ಗ, ಬೆಳಗಾವಿ	1,000
22	**ಈರಣ್ಣ ಎಲಿ,** ಎಲಿ ಚಾವೆಲ್, ಗುಪ್ತಾ ಹೈಸ್ಕೂಲ್ ಹತ್ತಿರ, ರಾಣೇಬೆನ್ನೂರು	1,000
23	**ಚಂದ್ರಶೇಖರ ಶೆಟ್ಟಿ ಸಿ.,** 73.2, ಜಿಎಫ್–3, ಲಕ್ಷ್ಮೀ ರೆಸಿಡೆನ್ಸಿ, 5ನೇ ಮೇನ್, 7ನೇ ಕ್ರಾಸ್, ದೇವಂತಾಚಾರ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು	1,000
24	**ಮಹೇಶ್ ಡಿ.** ಹೊರಕೇರಿ, ಎರಡನೇ ಹಂತ, ಶಿರೂರ್ ಪಾರ್ಕ್, ವಿದ್ಯಾನಗರ, ಹುಬ್ಬಳ್ಳಿ	1,000
25	**ರಾಘವೇಂದ್ರ,** ನಿ.34, 1ನೇ ಕ್ರಾಸ್, ರಮೇಶ್ ನಗರ, ಬೆಂಗಳೂರು	1,000
	ಇಂದಿನ ಮೊತ್ತ	1,19,612
	ಒಟ್ಟು ಮೊತ್ತ	2,78,942

* ಈಗಾಗಲೇ ಹಣ ನೀಡಿರುವ ದಾನಿಗಳು ತಮ್ಮ ಹೆಸರು, ವಿಳಾಸ, ಮೊತ್ತದ ವಿವರವನ್ನು dept.fnc@printersmysore.co.in ಇ–ಮೇಲ್‌ಗೆ ಕಳುಹಿಸಲು ವಿನಂತಿ.

ಮಧ್ಯಪ್ರದೇಶ ಚುನಾವಣೆ: ಪಕ್ಷದ ನಾಯಕತ್ವ ವಿಷಯ ಮುಕ್ತವಾಗಿರಿಸಿದ ಬಿಜೆಪಿ ವರಿಷ್ಠರು

ಪ್ರಮುಖರಿಗೆ ಮಣೆ, ಚೌಹಾಣ್‌ಗೆ ಸಂಕಷ್ಟ?

ನವದೆಹಲಿ (ಪಿಟಿಐ): ಮಧ್ಯಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಪ್ರಬಲ ಸ್ಪರ್ಧೆ ಎದುರಿಸುತ್ತಿರುವ ಬಿಜೆಪಿಯು ರಾಜ್ಯದಲ್ಲಿ ಪಕ್ಷದ ನಾಯಕತ್ವ ವಿಷಯವನ್ನು ಮುಕ್ತವಾಗಿರಿಸಿದೆ. ಪಕ್ಷಕ್ಕೆ ಬಲ ತುಂಬಲು ಅನೇಕ ಪ್ರಮುಖರನ್ನು ಕಣಕ್ಕಿಳಿಸಿದೆ. ಇವರಲ್ಲಿ ಹಲವರು ವಿಧಾನಸಭೆ ಚುನಾವಣೆಯಲ್ಲಿ ಎಂದಿಗೂ ಸ್ಪರ್ಧಿಸಿದವರಲ್ಲ.

ಈ ಬೆಳವಣಿಗೆಯಿಂದ ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರ ನಾಯಕತ್ವದ ಕುರಿತು ಪ್ರಶ್ನೆ ಏಳುವಂತಾಗಿದೆ.

39 ಸ್ಥಾನಗಳಿಗಾಗಿ ಪಕ್ಷದ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಸೋಮವಾರ ಪ್ರಕಟಿಸಿದ ಬಿಜೆಪಿ, ಮೂವರು ಕೇಂದ್ರ ಸಚಿವರು ಮತ್ತು ನಾಲ್ವರು ಸಂಸದರನ್ನು ಕಣಕ್ಕಿಳಿಸಿದೆ. ಕೆಲವು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಕೆಲವು ಸಂಸದರನ್ನು ಕಣಕ್ಕಿಳಿಸಲಿರುವ ಸುಳಿವನ್ನು ಬಿಜೆಪಿ ಈಗಾಗಲೇ ನೀಡಿತ್ತು. ಆದರೂ, ಈ ಪ್ರಮಾಣದಲ್ಲಿ ಸಂಸದರನ್ನು ಕಣಕ್ಕಿಳಿಸಿರುವುದು ಪಕ್ಷದೊಳಗಿನ ಅನೇಕರಿಗೆ ಅಚ್ಚರಿಮೂಡಿಸಿದೆ.

ಸಚಿವರಾದ ನರೇಂದ್ರ ಸಿಂಗ್ ತೋಮರ್ ಮತ್ತು ಫಗ್ಗಾನ್ ಸಿಂಗ್ ಕುಲಸ್ತೆ ಅವರು 2018ರಲ್ಲಿ ಕಾಂಗ್ರೆಸ್ ಪಾಲಾಗಿದ್ದ ಸ್ಥಾನಗಳಿಗೆ ಸ್ಪರ್ಧಿಸುತ್ತಿದ್ದರೆ, ನಾಲ್ವರು ಲೋಕಸಭಾ ಸಂಸದರಲ್ಲಿ ಮೂವರು ಕೂಡ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಭಾರಿಸಿದ್ದ ಕ್ಷೇತ್ರಗಳಿಂದಲೇ ಕಣಕ್ಕಿಳಿಯಲಿದ್ದಾರೆ.

ಬಿಜೆಪಿಯ ರಾಜ್ಯ ಘಟಕದ ಮಾಜಿ ಅಧ್ಯಕ್ಷ ತೋಮರ್ ಅವರನ್ನು ಮಧ್ಯಪ್ರದೇಶದಲ್ಲಿನ ಪಕ್ಷದ ಚುನಾವಣಾ ವ್ಯವಸ್ಥಾಪನಾ ಸಮಿತಿಯ ಸಂಚಾಲಕರಾಗಿ ಜುಲೈನಲ್ಲಿ ನೇಮಕ ಮಾಡಲಾಗಿತ್ತು. ತೋಮರ್ 2008ರವರೆಗೆ ಎರಡು ಸಲ ಶಾಸಕರಾಗಿದ್ದರು. 2009ರಿಂದ ಲೋಕಸಭಾ ಸದಸ್ಯರಾಗಿದ್ದಾರೆ.

ಕೇಂದ್ರ ಸಚಿವ ಪ್ರಹ್ಲಾದ್ ಸಿಂಗ್ ಪಟೇಲ್ ಲೋಕಸಭೆಗೆ ಐದು ಬಾರಿ ಚುನಾಯಿತರಾಗಿದ್ದಾರೆ ಆದರೆ ಎಂದಿಗೂ ಶಾಸಕರಾಗಿಲ್ಲ. ಕುಲಸ್ತೆ ಅವರು ಲೋಕಸಭೆಗೆ ಆರು ಸಲ, ರಾಜ್ಯಸಭೆಗೆ ಒಮ್ಮೆ ಆಯ್ಕೆಯಾಗಿದ್ದಾರೆ. ಇದಕ್ಕೂ ಮೊದಲು 1992ರಲ್ಲಿ ಇವರು ವಿಧಾನಸಭೆಗೆ ಸ್ಪರ್ಧಿಸಿ ಸೋತಿದ್ದರು.

ಲೋಕಸಭೆಗೆ ನಾಲ್ಕು ಬಾರಿ ಆಯ್ಕೆಯಾಗಿರುವ ಗಣೇಶ್ ಸಿಂಗ್ ಮತ್ತು ರಾಕೇಶ್ ಸಿಂಗ್ ಅವರು ಇದೇ ಮೊದಲ ಬಾರಿಗೆ ವಿಧಾನಸಭೆ ಚುನಾವಣೆ ಎದುರಿಸುತ್ತಿದ್ದಾರೆ. ರಾಕೇಶ್ ಸಿಂಗ್ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರೂ ಆಗಿದ್ದಾರೆ.

2008 ಮತ್ತು 2013ರಲ್ಲಿ ಬಿಜೆಪಿಯ ಭಾರಿ ಗೆಲುವಿಗೆ ಕಾರಣರಾಗಿದ್ದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಈಗ ಮೊದಲಿನಂತೆ ರಾಜಕೀಯ ಶಕ್ತಿಯಾಗಿ ಉಳಿದಿಲ್ಲ. ಹೀಗಾಗಿ, ಹಲವು ಪ್ರಮುಖರನ್ನು ಕಣಕ್ಕಿಳಿಸುವ ಮೂಲಕ ನಾಯಕತ್ವ ವಿಷಯವನ್ನು ಬಿಜೆಪಿಯು ಮುಕ್ತವಾಗಿರಿಸಲು ಬಯಸಿದೆ.

ಪಕ್ಷದ ನಾಯಕತ್ವವನ್ನು ಬಯಸುವ ಮೊದಲು, ಪಕ್ಷಕ್ಕೆ ಬಲ ತುಂಬುವ ನಿಟ್ಟಿನಲ್ಲಿ ಉತ್ತಮ ಪ್ರದರ್ಶನ ನೀಡುವಂತೆ ರಾಜ್ಯದ ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿರುವ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯವರ್ಗೀಯ ಸೇರಿ ಕೆಲವು ಹಿರಿಯ ನಾಯಕರಿಗೆ ಪಕ್ಷ ಸಂದೇಶ ರವಾನಿಸಿದೆ.

ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೊರತುಪಡಿಸಿ ರಾಜ್ಯದ ಸಂಸದರು ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವುದು ಬಣ ಕಾದಾಟವನ್ನು ತಗ್ಗಿಸುತ್ತದೆ ಎಂಬ ನಿರೀಕ್ಷೆ ಕೂಡಾ ಇದೆ. ರಾಜ್ಯ ಬಿಜೆಪಿ ಸಂಘಟನೆಯಲ್ಲಿ ಬಣ ಕಚ್ಚಾಟದ ಸಮಸ್ಯೆ ಇದೆ. ಇದರಿಂದ ಸಂಘಟಿತವಾಗಿ ಪಕ್ಷದ ಪರ ಪ್ರಚಾರ ನಡೆಸಲು ತೊಡಕಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಸಂಸದರು ಬೇರೆಬೇರೆ ಜಾತಿಗಳಿಗೆ ಸೇರಿದವರು. ತೋಮರ್ ಮತ್ತು ರಾಕೇಶ್ ಸಿಂಗ್ ಇಬ್ಬರೂ ಠಾಕೂರ್ ಸಮುದಾಯಕ್ಕೆ ಸೇರಿದವರು. ಪಟೇಲ್ ಅವರು ಲೋಧ್ ಸಮುದಾಯಕ್ಕೆ ಸೇರಿದರೆ, ಗಣೇಶ್ ಸಿಂಗ್ ಕುರ್ಮಿ ಸಮುದಾಯದವರು ಮತ್ತು ಇಬ್ಬರೂ ಒಬಿಸಿಯ ಪ್ರಮುಖ ನಾಯಕರು. ಕುಲಸ್ತೆ ಅವರು ಬುಡಕಟ್ಟು ಸಮುದಾಯಕ್ಕೆ ಸೇರಿದವರು. ಈ ಸಮೀಕರಣವೂ ವಿವಿಧ ಸಮುದಾಯಗಳಿಗೆ ಸಂದೇಶ ರವಾನಿಸಲು ಸಹಕಾರಿ ಎಂದು ನಾಯಕರು ಹೇಳಿದ್ದಾರೆ.



ಮಧ್ಯಪ್ರದೇಶದ ವಿದಿಶಾದ ಬೆಟ್ವಾ ನದಿ ತೀರದ ಗಣೇಶ ದೇವಾಲಯದಲ್ಲಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಮತ್ತು ಅವರ ಪತ್ನಿ ಸಾಧನಾ ಸಿಂಗ್ ಅವರು ಪ್ರಸಾದ ವಿತರಿಸಿದರು –ಪಿಟಿಐ ಚಿತ್ರ

'ಮೋದಿ ಪ್ರಮಾಣೀಕೃತ ಸುಳ್ಳುಗಾರ'



ಪವನ್ ಖೇರಾ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು 'ಪ್ರಮಾಣೀಕೃತ ಸುಳ್ಳುಗಾರ' ಎಂದು ಕಾಂಗ್ರೆಸ್ ಮಂಗಳವಾರ ಕಟುವಾಗಿ ಟೀಕಿಸಿದೆ.

ಮಹಿಳಾ ಮೀಸಲು ಮಸೂದೆಯನ್ನು ಕಾಂಗ್ರೆಸ್ ವಿರೋಧಿಸಿತು ಎಂಬ ಪ್ರಧಾನಿ ಆರೋಪಕ್ಕೆ ಪ್ರತಿಯಾಗಿ ಈ ಆರೋಪ ಮಾಡಿದೆ.

'ಮಧ್ಯಪ್ರದೇಶದಲ್ಲಿ ತಮ್ಮ 51 ನಿಮಿಷದ ಚುನಾವಣಾ ಪ್ರಚಾರ ಭಾಷಣದಲ್ಲಿ ಪ್ರಧಾನಿ, 44 ಬಾರಿ ಕಾಂಗ್ರೆಸ್ ಹೆಸರು ಉಲ್ಲೇಖಿಸಿದ್ದಾರೆ. ಆದರೆ, ಬಿಜೆಪಿ ಸರ್ಕಾರದ ಸಾಧನೆ ಬಗ್ಗೆ ಒಂದೂ ಪದ ಬಳಸಿಲ್ಲ. ಅದರರ್ಥ, 18 ವರ್ಷ ಆಡಳಿತ ನಡೆಸಿದ ಆ ಪಕ್ಷದ ಕೊಡುಗೆ ಶೂನ್ಯ' ಎಂದು ಟೀಕಿಸಿದೆ.

ಎನ್‌ಡಿಎ ಮೈತ್ರಿಕೂಟದಿಂದ ಎಐಡಿಎಂಕೆ ಪಕ್ಷ ಹೊರಬಂದಿರುವಂತೆ ಇನ್ನೂ ಹಲವು ಪಕ್ಷಗಳು ಹೊರಬರಲಿವೆ. ಈಗ ಎನ್‌ಡಿಎ ಮೈತ್ರಿಕೂಟದಲ್ಲಿರುವ ಹಲವು ಪಕ್ಷಗಳು ಕಾಂಗ್ರೆಸ್ ಜೊತೆಗೆ ಸಂಪರ್ಕದಲ್ಲಿವೆ ಎಂದು ಮಂಗಳವಾರ ಪ್ರತಿಪಾದಿಸಿದೆ.

ಸುದ್ದಿಗೋಷ್ಠಿಯಲ್ಲಿ ಪ್ರಧಾನಿ ಟೀಕೆಯನ್ನು ಉಲ್ಲೇಖಿಸಿದ ಪಕ್ಷದ ಮಾಧ್ಯಮ ವಿಭಾಗದ ಅಧ್ಯಕ್ಷ ಪವನ್ ಖೇರಾ,'ತಾನು ಪ್ರಮಾಣೀಕೃತ ಸುಳ್ಳುಗಾರ ಎಂದು ಪ್ರಧಾನಿ ಸ್ವತಃ ತೋರಿಸಿಕೊಂಡಿದ್ದಾರೆ. ಅವರು, ಬಾಯಿಬಿಟ್ಟರೆ ಕೇವಲ ಸುಳ್ಳುಗಳನ್ನಷ್ಟೇ ಹೇಳುತ್ತಾರೆ' ಎಂದು ವಾಗ್ದಾಳಿ ನಡೆಸಿದರು.

'1989ರಲ್ಲಿ ರಾಜೀವ್‌ಗಾಂಧಿ ನೇತೃತ್ವದ ಸರ್ಕಾರವಿದ್ದಾಗ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಸ್ಥಾನಗಳನ್ನು ಮೀಸಲಿರಿಸಲು ಮಸೂದೆ ಮಂಡಿಸಲಾಗಿತ್ತು. ಆಗ, ರಾಜ್ಯಸಭೆಯಲ್ಲಿ 4 ಮತಗಳ ಕೊರತೆ ಉಂಟಾಗಿತ್ತು. ಬಿಜೆಪಿ ಸದಸ್ಯರಾಗಿದ್ದ ಎ.ಬಿ.ವಾಜಪೇಯಿ, ಎಲ್.ಕೆ.ಅಡ್ವಾಣಿ, ರಾಮ ಜೇಠ್ಮಲಾನಿ, ಜಸ್ವಂತ್ ಸಿಂಗ್ ಅವರು ಮಸೂದೆಯನ್ನು ಬೆಂಬಲಿಸಿರಲಿಲ್ಲ' ಎಂದು ಖೇರಾ ಹೇಳಿದರು.

'ಭ್ರಷ್ಟಾಚಾರ, ಹಗರಣಗಳೇ ಕಾಂಗ್ರೆಸ್ ಸಾಧನೆ'

ನವದೆಹಲಿ (ಪಿಟಿಐ): ಛತ್ತೀಸಗಢದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿಯು 104 ಪುಟಗಳ ಆರೋಪಪಟ್ಟಿಯನ್ನು ಬಿಡುಗಡೆ ಮಾಡಿದೆ. ದೊಡ್ಡ ಪ್ರಮಾಣದ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಹಗರಣಗಳು ಸರ್ಕಾರದ ಕೊಡುಗೆಗಳು ಎಂದು ಟೀಕಿಸಿದೆ.

ವಿಧಾನಸಭೆಯ ಕಳೆದ ಚುನಾವಣೆಯಲ್ಲಿ ಪಕ್ಷ ನೀಡಿದ್ದ ಮತ್ತು ಅದರ ನಾಯಕ ರಾಹುಲ್ ಗಾಂಧಿ ಅವರು ವಿವಿಧ ವೇದಿಕೆಗಳಲ್ಲಿ ನೀಡಿದ್ದ 316 ಭರವಸೆಗಳನ್ನು ಈಡೇರಿಸಲು ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರಾ ಮಂಗಳವಾರ ಟೀಕಿಸಿದರು.

'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಮಾಫಿಯಾ ಮತ್ತು ಕ್ರಿಮಿನಲ್‌ಗಳಿಗೆ ಮುಕ್ತ ವಾತಾವರಣವಿದೆ. 5,900 ಅತ್ಯಾಚಾರ ಪ್ರಕರಣಗಳನ್ನು ಸರ್ಕಾರ ಕಡೆಗಣಿಸಿದೆ. ಇದು, ಛತ್ತೀಸಗಢದಲ್ಲಿರುವ ಕಾಂಗ್ರೆಸ್ ಪಕ್ಷದ ನಿಜವಾದ ಮುಖವಾಗಿದೆ' ಎಂದು ಟೀಕಿಸಿದರು.

ಭ್ರಷ್ಟಾಚಾರ ಮತ್ತು ಕಾಂಗ್ರೆಸ್ ಸಾಧನೆ ಉಲ್ಲೇಖಿಸಿದ ಅವರು, ರಾಜ್ಯದಲ್ಲಿ ಮದ್ಯಮಾರಾಟವನ್ನು ಶೇ 100ರಷ್ಟು ನಿಷೇಧಿಸಲಾಗುವುದು ಎಂದು ರಾಹುಲ್‌ಗಾಂಧಿ ಹೇಳಿದ್ದರು. ಆದರೆ, ಇಲ್ಲಿ ಅಂದಾಜು ₹ 2000 ಕೋಟಿ ಮೊತ್ತದ ಮದ್ಯದ ಹಗರಣ ನಡೆದಿದೆ ಎಂದು ಹೇಳಿದರು.

ವಹೀದಾಗೆ 'ಫಾಲ್ಕೆ' ಗೌರವ

ಒಂದನೇ ಪುಟದಿಂದ...

ಚಿತ್ರರಂಗದಲ್ಲಿ ಅವರದು ಐದು ದಶಕಗಳ ಸುದೀರ್ಘ ಪಯಣ. ಈ ಅವಧಿಯಲ್ಲಿ ವಿವಿಧ ಭಾಷೆಗಳಲ್ಲಿ 90ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. 2021ರಲ್ಲಿ ತೆರೆಕಂಡಿದ್ದ 'ಸ್ಕೇಟರ್ ಗರ್ಲ್' ಅವರು ಕಡೆಯದಾಗಿ ನಟಿಸಿದ ಚಿತ್ರ. 1971ರಲ್ಲಿ ತೆರೆಕಂಡಿದ್ದ 'ರೇಷ್ಮಾ ಅಂಡ್ ಶೇರಾ' ಚಿತ್ರದಲ್ಲಿನ ನಟನೆಗಾಗಿ ಅವರು ರಾಷ್ಟ್ರೀಯ ಪ್ರಶಸ್ತಿಗೆ ಪಾತ್ರರಾಗಿದ್ದರು. ಚಿತ್ರರಂಗದಲ್ಲಿನ ಅನನ್ಯ ಕೊಡುಗೆಗಾಗಿ ಅವರಿಗೆ ಕೇಂದ್ರ ಸರ್ಕಾರ 'ಪದ್ಮಶ್ರೀ' ಮತ್ತು 'ಪದ್ಮಭೂಷಣ' ಪ್ರಶಸ್ತಿ ನೀಡಿ ಗೌರವಿಸಿದೆ.

> **ದುಪ್ಪಟ್ಟು ಖುಷಿಯಾಗಿದೆ. ಈಗ ದೇವ್ ಆನಂದ್ ಅವರ ಜನ್ಮ ಶತಮಾನೋತ್ಸವ ವರ್ಷ. ಈ ಗೌರವ ಅವರಿಗೆ ಸಿಗಬೇಕಿತ್ತು. ಆದರೆ, ನನಗೆ ದೊರೆತಿದೆ**
>
> **ವಹೀದಾ ರೆಹಮಾನ್,** ನಟಿ

ಐ.ಟಿ. ನಿಯಮಕ್ಕೆ ತಿದ್ದುಪಡಿ: ಬಾಂಬೆ ಹೈಕೋರ್ಟ್ ಹೇಳಿಕೆ

ಪ್ರಾಧಿಕಾರಕ್ಕೆ ಅನಿರ್ಬಂಧಿತ ಅಧಿಕಾರ

ಮುಂಬೈ (ಪಿಟಿಐ): ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಳ್ಳುವ ಸುಳ್ಳು ಸುದ್ದಿಯನ್ನು ನಿಯಂತ್ರಿಸುವ ವಿಚಾರವಾಗಿ ಮಾಹಿತಿ ತಂತ್ರಜ್ಞಾನ (ಐ.ಟಿ) ನಿಯಮಗಳಿಗೆ ಈಚೆಗೆ ತಂದಿರುವ ತಿದ್ದುಪಡಿಯು ಸೂಕ್ತ ಮಾರ್ಗಸೂಚಿಗಳು ಇಲ್ಲದೆ ಇದ್ದರೆ, ಸರ್ಕಾರದ ಪ್ರಾಧಿಕಾರಕ್ಕೆ ಅನಿಯಂತ್ರಿತ ಅಧಿಕಾರ ನೀಡುತ್ತದೆ ಎಂದು ಬಾಂಬೆ ಹೈಕೋರ್ಟ್ ಮಂಗಳವಾರ ಹೇಳಿದೆ.

ಇದಕ್ಕೆ ಉತ್ತರಿಸಿದ ಕೇಂದ್ರ ಸರ್ಕಾರವು, ನಿಯಮಗಳನ್ನು ತಂದಿರುವ ಉದ್ದೇಶವು ಮುಕ್ತ ಅಭಿವ್ಯಕ್ತಿಯನ್ನು ಅಥವಾ ಸರ್ಕಾರವನ್ನು ಗುರಿಯಾಗಿಸಿಕೊಂಡ ಹಾಸ್ಯವನ್ನು ಹತ್ತಿಕ್ಕುವ ಉದ್ದೇಶ ಹೊಂದಿಲ್ಲ ಎಂದು ಹೇಳಿದೆ. ಯಾವುದೇ ವ್ಯಕ್ತಿ ಪ್ರಧಾನಿಯನ್ನು ಟೀಕಿಸುವ ಸ್ವಾತಂತ್ರ್ಯವನ್ನು ಈ ನಿಯಮಗಳು ಕಿತ್ತುಕೊಳ್ಳುವುದಿಲ್ಲ ಎಂದು ತಿಳಿಸಿದೆ.

ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ ಸೇರಿದಂತೆ ಹಲವರು ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಗೌತಮ್ ಪಟೇಲ್ ಮತ್ತು ನೀಲಾ ಗೋಖಲೆ ಅವರಿದ್ದ ವಿಭಾಗೀಯ ಪೀಠವು, 'ತಿದ್ದುಪಡಿ ತರಬೇಕಾದ ಅಗತ್ಯ ಏನಿತ್ತು, ಸುಳ್ಳು ಸುದ್ದಿ ಯಾವುದು, ನಿಜ ಸುದ್ದಿ ಯಾವುದು ಎಂಬುದನ್ನು ಪ್ರೆಸ್ ಇನ್ಫರ್ಮೇಷನ್ ಬ್ಯೂರೊ (ಪಿಐಬಿ) ಸಾಮಾಜಿಕ ಜಾಲತಾಣಗಳ ಮೂಲಕ ಮಾಡುತ್ತಿರುವಾಗ ಪ್ರತ್ಯೇಕವಾದ ಸತ್ಯಶೋಧನಾ ಘಟಕವನ್ನು (ಎಫ್‌ಸಿಯು) ರಚಿಸಲು ಕಾನೂನಿನಲ್ಲಿ ಇರುವ ಅವಕಾಶ ಯಾವುದು' ಎಂದು ಕೇಳಿತು.

ನಿಯಂತ್ರಣ ಇಲ್ಲದ ಹಾಗೂ ನಿಯಂತ್ರಿಸಲು ಸಾಧ್ಯವಿಲ್ಲದ ಮಾಧ್ಯಮವೊಂದರಲ್ಲಿ ಸಮತೋಲನ ತರುವ ಉದ್ದೇಶದಿಂದ ತಿದ್ದುಪಡಿಗಳನ್ನು ತರಲಾಗಿದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಿವರಿಸಿದರು.

'ಸತ್ಯ ಯಾವುದು ಎಂಬುದನ್ನು ತೀರ್ಮಾನಿಸುವ ವಿಚಾರದಲ್ಲಿ ಇಲ್ಲಿ ಸರ್ಕಾರವೇ ಎಲ್ಲ ನಿರ್ಣಯಗಳನ್ನೂ ಯಾವ ನಿರ್ಬಂಧವೂ ಇಲ್ಲದೆ ಕೈಗೊಳ್ಳುತ್ತದೆ. ಮೂಲಭೂತ ಪ್ರಶ್ನೆಯೆಂದರೆ, ಇಲ್ಲಿ ಸತ್ಯಶೋಧನೆ ಮಾಡುವವರು ಸರಿಯಾಗಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ಯಾರು ಗಮನಿಸುತ್ತಾರೆ? (ರಚನೆ ಆಗಬೇಕಿರುವ) ಎಫ್‌ಸಿಯು ವ್ಯವಸ್ಥೆಯನ್ನೇ ನಾವು ಅಂತಿಮ ತೀರ್ಪುಗಾರ ಎಂಬಂತೆ ಕಾಣಬೇಕಿದೆ' ಎಂದು ನ್ಯಾಯಮೂರ್ತಿ ಪಟೇಲ್ ಹೇಳಿದರು.

ಎಫ್‌ಸಿಯು ವ್ಯವಸ್ಥೆಯು ಸುಳ್ಳು ಸಂಗತಿಗಳನ್ನು ಮಾತ್ರ ಪರಿಶೀಲಿಸುತ್ತದೆಯೇ ವಿನಾ ಅಭಿಪ್ರಾಯ, ಟೀಕೆಗಳನ್ನು ಅದು ಪರಿಶೀಲಿಸಲು ಮುಂದಾಗುವುದಿಲ್ಲ ಎಂದು ಮೆಹ್ತಾ ಸ್ಪಷ್ಟಪಡಿಸಿದರು. ಇದಕ್ಕೆ ಪ್ರತಿಯಾಗಿ ನ್ಯಾಯಪೀಠವು, 'ಸರ್ಕಾರ ಹೇಳುವ ಸತ್ಯವೇ ಅಂತಿಮ ಸತ್ಯ ಎನ್ನಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿತು.

'ಸರ್ಕಾರವು ಜನರ ಬುದ್ಧಿಮತ್ತೆಯನ್ನು ಅನುಮಾನದಿಂದ ನೋಡುತ್ತಿಲ್ಲ. ಜನರು ತಮಗೆ ತೋಚಿದ್ದನ್ನು ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಳ್ಳಬಹುದು, ಸರ್ಕಾರವನ್ನು ಟೀಕಿಸಬಹುದು. ಆದರೆ ಸುಳ್ಳು ಸುದ್ದಿ, ತಪ್ಪುದಾರಿಗೆ ಎಳೆಯುವ ಮಾಹಿತಿಗೆ ಮಾತ್ರ ಅವಕಾಶ ನೀಡುವುದಿಲ್ಲ' ಎಂದು ಮೆಹ್ತಾ ತಿಳಿಸಿದರು.

ಸತ್ಯಶೋಧನಾ ಘಟಕವನ್ನು ಅಕ್ಟೋಬರ್ 3ರವರೆಗೆ ಆರಂಭಿಸುವುದಿಲ್ಲ ಎಂದು ಕೇಂದ್ರ ಹೇಳಿದೆ. ಸರ್ಕಾರಕ್ಕೆ ಸಂಬಂಧಿಸಿದಂತೆ ತಪ್ಪುದಾರಿಗೆ ಎಳೆಯುವ, ಸುಳ್ಳು ವಸ್ತು–ವಿಷಯಗಳನ್ನು ಗುರುತಿಸಲು ಎಫ್‌ಸಿಯು ಆರಂಭಿಸುವ ಅವಕಾಶವನ್ನು ತಿದ್ದುಪಡಿಯು ಒಳಗೊಂಡಿದೆ.

'ರಾಜಕೀಯ ಅನುಕೂಲ' ಮಧ್ಯ ತರಬೇಡಿ: ಜೈಶಂಕರ್


ವಿಶ್ವಸಂಸ್ಥೆ (ಪಿಟಿಐ): ಭಯೋತ್ಪಾದನೆ, ಉಗ್ರವಾದ ಮತ್ತು ಹಿಂಸೆಗೆ ನೀಡುವ ಪ್ರತಿಕ್ರಿಯೆ ಕುರಿತು ನಿರ್ಧರಿಸುವ ವೇಳೆ 'ರಾಜಕೀಯ ಅನುಕೂಲ'ವನ್ನು ಮಧ್ಯ ತರಬೇಡಿ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಿಗೆ ಮಂಗಳವಾರ ಹೇಳಿದರು.

ಖಾಲಿಸ್ತಾನಿ ಪ್ರತ್ಯೇಕತಾವಾದಿ ಹೋರಾಟಗಾರನ ಹತ್ಯೆಯ ಕಾರಣದಿಂದ ಉಂಟಾಗಿರುವ ಬಿಕ್ಕಟ್ಟಿನ ಹಿನ್ನಲೆಯಲ್ಲಿ ಕೆನಡಾವನ್ನು ಗುರಿಮಾಡಿ ಅವರು ಹೀಗೆ ಹೇಳಿದರು.

ವಿಶ್ವಸಂಸ್ಥೆಯ ಸಾಮಾನ್ಯಸಭೆಯ 78ನೇ ಅಧಿವೇಶನದಲ್ಲಿ ಅವರು ಮಾತನಾಡಿದರು. ಕೆಲ ದೇಶಗಳು ಕಾರ್ಯಸೂಚಿಯನ್ನು ನಿಗದಿಪಡಿಸಿವೆ ಮತ್ತು ಇತರ ದೇಶಗಳ ಅದನ್ನು ಅನುಸರಿಸಬೇಕು ಎಂದು ನಿರೀಕ್ಷಿಸುತ್ತವೆ ಎಂದರು.

ಪ್ರಾದೇಶಿಕ ಸಮಗ್ರತೆಗೆ ಮತ್ತು ಆಂತರಿಕ ವಿಚಾರದಲ್ಲಿ ಮೂಗುತೂರಿಸದೇ ಇರುವುದನ್ನು ಗೌರವಿಸುವುದು 'ಆಯ್ಕೆಯ ವಿಚಾರ' ಆಗಬಾರದು ಎಂದರು. ಹರದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಅಮೆರಿಕವು ಕೆನಡಾ ಜೊತೆ ಗುಪ್ತಚರ ಮಾಹಿತಿ ಹಂಚಿಕೊಂಡಿದೆ ಎನ್ನಲಾದ ವರದಿಗಳ ಹಿನ್ನೆಲೆಯಲ್ಲಿ ಹೀಗೆ ಹೇಳಿದರು.

'ಭಾರತದ ಕಡೆಯಿಂದ ನಮಸ್ತೆ'



ಎಸ್. ಜೈಶಂಕರ್

'ಭಾರತದ ಕಡೆಯಿಂದ ನಮಸ್ತೆ'– ಸಚಿವ ಎಸ್ ಜೈಶಂಕರ್ ಅವರು ವಿಶ್ವಸಂಸ್ಥೆಯ ಸಾಮಾನ್ಯಸಭೆಯನ್ನು ಎದುರುಗೊಂಡಿದ್ದು ಹೀಗೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಉನ್ನತ ಮಟ್ಟದ ಅಧಿವೇಶನದಲ್ಲಿ ಜೈಶಂಕರ್ ಅವರು ಮಂಗಳವಾರ ಎರಡೂ ಕೈಜೋಡಿಸಿ 'ಭಾರತದ ಕಡೆಯಿಂದ ನಮಸ್ತೆ' ಎಂದು ಹೇಳುವ ಮೂಲಕ ತಮ್ಮ 17 ನಿಮಿಷಗಳ ಭಾಷಣ ಆರಂಭಿಸಿದರು.

'ಆಧುನಿಕತೆಯನ್ನು ಅಪ್ಪಿಕೊಂಡ ನಾಗರಿಕ ಸಮಾಜ ವ್ಯವಸ್ಥೆಯಾಗಿ ನಾವು 'ಪರಂಪರೆ' ಮತ್ತು 'ತಂತ್ರಜ್ಞಾನ'ವನ್ನು ಸಮಾನ ದಿಟ್ಟತನದಿಂದ ನಿಮ್ಮೆದುರಿಟ್ಟಿದ್ದೇವೆ. ಈ ಸಮ್ಮಿಳಿತವೇ ಇಂದು ಇಂಡಿಯಾವನ್ನು ಅಂದರೆ, ಭಾರತವನ್ನು ವ್ಯಾಖ್ಯಾನಿಸುತ್ತಿದೆ' ಎಂದರು.

ದೇಶವನ್ನು ಇನ್ನುಮುಂದೆ ಇಂಡಿಯಾ ಎಂದು ಕರೆಯುವ ಬದಲು 'ಭಾರತ' ಎಂದು ಕರೆಯುವ ಕುರಿತು ಕೇಂದ್ರ ಸರ್ಕಾರ ಒಲವು ತೋರಿತ್ತು.

ಭಾರತ ಅಧ್ಯಕ್ಷತೆ ವಹಿಸಿಕೊಂಡಿದ್ದ ಜಿ20 ಶೃಂಗಸಭೆಯ ಹಲವು ಕಾರ್ಯಕ್ರಮಗಳ ಬ್ಯಾನರ್‌ಗಳಲ್ಲಿ ಇಂಡಿಯಾ ಬದಲಾಗಿ 'ಭಾರತ' ಎಂದೇ ನಮೂದಿಲಾಗಿತ್ತು. ಈ ನಂತರ, ಇದೇ ಮೊದಲ ಬಾರಿಗೆ ದೇಶದಿಂದ ಹೊರಗೆ ಇಂಡಿಯಾ ಬದಲಾಗಿ 'ಭಾರತ' ಪದ ಬಳಸಲಾಗಿದೆ.



ಪುಣ್ಯಸ್ನಾನ, ಪ್ರಾರ್ಥನೆ

ಗುಜರಾತ್‌ನ ಸೂರತ್‌ನಲ್ಲಿರುವ ಸ್ವಾಮಿನಾರಾಯಣ ಗುರುಕುಲದಲ್ಲಿ ಸಂತರು ಮಂಗಳವಾರ 'ಜಲ್ ಜಿಲಾನಿ ಏಕಾದಶಿ'ಯ ನಿಮಿತ್ತ ಪುಣ್ಯಸ್ನಾನ ಮಾಡಿ ಪ್ರಾರ್ಥನೆ ಸಲ್ಲಿಸಿದರು –ಪಿಟಿಐ ಚಿತ್ರ

ವಿದ್ಯಾರ್ಥಿಗಳ ಹತ್ಯೆ: ಇಂಫಾಲ್ ಉದ್ವಿಗ್ನ

ಒಂದನೇ ಪುಟದಿಂದ...

ಈ ಇಬ್ಬರು ವಿದ್ಯಾರ್ಥಿಗಳನ್ನು ಫಿಜಾಮ್ ಹೇಮಜಿತ್ (20) ಮತ್ತು ಹಿಜಾಮ್ ಲಿಂಥೋಯ್‌ಗಂಬಿ (17) ಎಂದು ಗುರುತಿಸಲಾಗಿದೆ.

ಒಂದು ಚಿತ್ರದಲ್ಲಿ ಈ ಇಬ್ಬರು ವಿದ್ಯಾರ್ಥಿಗಳು ಒಟ್ಟಾಗಿ ಕುಳಿತುಕೊಂಡಿದ್ದಾರೆ, ಅವರ ಹಿಂದೆ ಶಸ್ತ್ರಸಜ್ಜಿತ ಪುರುಷರು ಇದ್ದಾರೆ. ಎರಡನೆಯ ಚಿತ್ರದಲ್ಲಿ ಈ ಇಬ್ಬರು ವಿದ್ಯಾರ್ಥಿಗಳ ಶವ ಕಾಡಿನಲ್ಲಿ ಬಿದ್ದಿದೆ. ಎರಡನೆಯ ಚಿತ್ರದಲ್ಲಿ, ವಿದ್ಯಾರ್ಥಿ ಹೇಮಜಿತ್‌ನ ರುಂಡ ಇಲ್ಲ. ಇವರಿಬ್ಬರೂ ಇಂಫಾಲದ ನಿವಾಸಿಗಳಾಗಿದ್ದರು.

ಅಪಹರಣ ಹಾಗೂ ಹತ್ಯೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲಾಗಿದೆ ಎಂದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರ ಸಚಿವಾಲಯ ಸೋಮವಾರ ರಾತ್ರಿ ನೀಡಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

'ಈ ಇಬ್ಬರು ವಿದ್ಯಾರ್ಥಿಗಳ ನಾಪತ್ತೆ ಕುರಿತು ಹಾಗೂ ಅವರ ಹತ್ಯೆ ಮಾಡಿದವರ ಕುರಿತು ರಾಜ್ಯ ಪೊಲೀಸರು ಕೇಂದ್ರೀಯ ಭದ್ರತಾ ಸಂಸ್ಥೆಗಳ ಜೊತೆಯಾಗಿ ತನಿಖೆ ನಡೆಸುತ್ತಿದ್ದಾರೆ. ಹತ್ಯೆ ಮಾಡಿದವರನ್ನು ಬಂಧಿಸಲು ಭದ್ರತಾ ಪಡೆಗಳು ಕೂಡ ಶೋಧ ಕಾರ್ಯದಲ್ಲಿ ತೊಡಗಿವೆ' ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ವಿದ್ಯಾರ್ಥಿಗಳ ಅಪಹರಣ ಹಾಗೂ ಹತ್ಯೆಯಲ್ಲಿ ಭಾಗಿಯಾದ ಎಲ್ಲರ ವಿರುದ್ಧ ತ್ವರಿತವಾಗಿ, ಕಠಿಣ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಸರ್ಕಾರವು ಭರವಸೆ ನೀಡಿದೆ. ಮೇ ತಿಂಗಳ ಆರಂಭದಿಂದಲೂ ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರ ನಡೆಯುತ್ತಿದೆ. ಜನಾಂಗೀಯ ಹಿಂಸಾ ಚಾರ ಆರಂಭವಾದ ನಂತರ ಅಲ್ಲಿ 175ಕ್ಕೂ ಹೆಚ್ಚು ಜನ ಪ್ರಾಣ ಕಳೆದುಕೊಂಡಿದ್ದಾರೆ.

ಇಂಫಾಲ್‌ನಲ್ಲಿ ನಡೆದ ಪ್ರತಿಭಟನೆಯ ನಂತರ ಮಣಿಪುರದಲ್ಲಿ ಐದು ದಿನಗಳ ಕಾಲ ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸಲಾಗಿದ

ಕೇರಳ: ಹಲ್ಲೆ ಪ್ರಕರಣಕ್ಕೆ ಹೊಸ ತಿರುವು • ಪೊಲೀಸ್ ವಶಕ್ಕೆ ಸೈನಿಕ

ದಿಢೀರ್ ಖ್ಯಾತಿಗೆ ಕಟ್ಟುಕಥೆ ಹೆಣೆದ ಯೋಧ!

ಕೊಲ್ಲಂ (ಪಿಟಿಐ): ದಕ್ಷಿಣ ಕೇರಳ ಜಿಲ್ಲೆಯ ಕಡಕ್ಕಲ್‌ನಲ್ಲಿ ಯೋಧನ ಮೇಲೆ ನಡೆದಿದೆ ಎನ್ನಲಾದ ಹಲ್ಲೆ ಪ್ರಕರಣವು ಹೊಸ ತಿರುವು ಪಡೆದುಕೊಂಡಿದೆ. ದಿಢೀರ್ ಖ್ಯಾತಿ ಪಡೆಯುವ ಉಮೇದಿನಲ್ಲಿ ಯೋಧನೇ ಕೃತ್ಯ ಕುರಿತು ಕಟ್ಟುಕಥೆ ಹೆಣೆದಿರುವುದು ಪೊಲೀಸರ ತನಿಖೆಯಿಂದ ಬಹಿರಂಗಗೊಂಡಿದೆ.

ಘಟನೆ ಬಗ್ಗೆ ಸುಳ್ಳು ಹೇಳಿಕೆ ನೀಡಿದ ಆರೋಪದ ಮೇರೆಗೆ ಯೋಧ ಶೈನ್ ಕುಮಾರ್ ಹಾಗೂ ಆತನ ಸ್ನೇಹಿತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಭಾನುವಾರ ರಾತ್ರಿ ಮನೆಗೆ ಬೈಕ್‌ನಲ್ಲಿ ಮರಳುತ್ತಿದ್ದ ವೇಳೆ ರಬ್ಬರ್ ಪ್ಲಾಂಟೇಷನ್ ಬಳಿ ಆರು ಮಂದಿ ಅಪರಿಚಿತರ ಗುಂಪೊಂದು ನನ್ನನ್ನು ಥಳಿಸಿತು. ಬಳಿಕ ಬೆನ್ನಿನ ಮೇಲೆ ಹಸಿರು ಬಣ್ಣದಿಂದ 'ಪಿಎಫ್‌ಐ' (ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ) ಎಂದು ಬರೆಯಿತು ಎಂದು ಯೋಧ, ಪೊಲೀಸ್ ಠಾಣೆಗೆ ದೂರು ನೀಡಿದ್ದರು. ತನಿಖೆಯ ಬೆನ್ನು ಹತ್ತಿದ ಪೊಲೀಸರಿಗೆ ಯೋಧ ಹಾಗೂ ಆತನ ಸ್ನೇಹಿತ ಜೊತೆಗೂಡಿ ಸುಳ್ಳಿನ ಕಥೆ ಹೆಣೆದಿರುವುದು ಬಯಲಾಗಿದೆ.

ರಾಜಸ್ಥಾನದ ಜೈಸಲ್ಮೇರ್‌ನಲ್ಲಿರುವ ಭಾರತೀಯ ಸೇನೆಯ ಎಲೆಕ್ಟ್ರಾನಿಕ್ ಹಾಗೂ ಮೆಕ್ಯಾನಿಕಲ್ ಎಂಜಿನಿಯರ್ಸ್ (ಇಎಂಇ) ವಿಭಾಗದಲ್ಲಿ ಈ ಯೋಧ ಕಾರ್ಯನಿರ್ವಹಿಸುತ್ತಿದ್ದಾರೆ. ರಜೆಯ ಮೇಲೆ ಅವರು ಹುಟ್ಟೂರಿಗೆ ಬಂದಿದ್ದರು. ಯೋಧನ ದೂರಿನ ಮೇರೆಗೆ ಘಟನಾ ಸ್ಥಳಕ್ಕೆ ತೆರಳಿದ್ದ ಸೇನೆಯ ಗುಪ್ತಚರ ಅಧಿಕಾರಿಗಳು ತನಿಖೆ ಕೈಗೊಂಡಿದ್ದರು.

'ಪ್ರಕರಣಕ್ಕೆ ಸಂಬಂಧಿಸಿದಂತೆ ಯೋಧ ಹಾಗೂ ಆತನ ಸ್ನೇಹಿತನಿಂದ ಹೇಳಿಕೆ ದಾಖಲಿಸಿಕೊಳ್ಳಲಾಗುತ್ತಿದೆ. ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.




ನಡೆದಿದ್ದು ಏನು?

'ಯೋಧನಿಗೆ ತಾನು ದಿಢೀರ್ ಪ್ರಸಿದ್ಧನಾಗಬೇಕು ಎಂಬ ಹಂಬಲ ಇತ್ತು. ಅದಕ್ಕೆ ಅನುಗುಣವಾಗಿ ಈ ಸುಳ್ಳಿನ ಕಥೆ ಸೃಷ್ಟಿಸಿದ್ದಾರೆ. ಕೃತ್ಯಕ್ಕೆ ಬಳಸಿದ ಬಣ್ಣ, ಕುಂಚ ಹಾಗೂ ಯೋಧನ ಕೈಗಳನ್ನು ಕಟ್ಟಲು ಬಳಸಿದ್ದ ಟೇಪ್ ಅನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಶೈನ್ ಕುಮಾರ್ ಅವರೇ ಈ ಘಟನೆಯ ಹಿಂದಿನ ಸೂತ್ರಧಾರ. ತನ್ನ ಬೆನ್ನಿನ ಮೇಲೆ ಪಿಎಫ್‌ಐ ಎಂದು ಬರೆಯುವಂತೆ ಆತ ಹೇಳಿದರು. ಕುಡಿದ ಮತ್ತಿನಲ್ಲಿದ್ದ ನಾನು 'ಡಿಎಫ್‌ಐ' ಎಂದು ಬರೆದೆ. ಆದರೆ, ಅದನ್ನು 'ಪಿಎಫ್‌ಐ' ಎಂದು ತಿದ್ದುವಂತೆ ತಿಳಿಸಿದರು. ಕೊನೆಗೆ, ಆತ ಹೇಳಿದಂತೆಯೇ ಮಾಡಿದೆ. ನಂತರ ತನ್ನನ್ನು ಚೆನ್ನಾಗಿ ಥಳಿಸುವಂತೆ ಕೋರಿಕೊಂಡರು. ನಾನು ಮದ್ಯ ಸೇವಿಸಿದ್ದರಿಂದ ಅದು ಸಾಧ್ಯವಾಗಲಿಲ್ಲ' ಎಂದು ಮಾಧ್ಯಮದವರ ಮುಂದೆ ಯೋಧನ ಸ್ನೇಹಿತ ಹೇಳಿದ್ದಾರೆ.

'ನಂತರ ನೆಲದ ಮೇಲೆ ತನ್ನನ್ನು ಬೋರಲಾಗಿ ಮಲಗಿಸುವಂತೆ ಹೇಳಿದರು. ಆದರೆ, ನಶೆಯಲ್ಲಿದ್ದ ನನಗೆ ಅದು ಸಾಧ್ಯವಾಗಲಿಲ್ಲ. ಕೊನೆಗೆ, ಆತನ ಕೈಗಳನ್ನು ಕಟ್ಟಿಹಾಕಿ, ಬಾಯಿಗೆ ಟೇಪ್ ಸುತ್ತಿ ಅಲ್ಲಿಂದ ತೆರಳುವಂತೆ ಸೂಚನೆ ನೀಡಿದರು. ಆತ ಹೇಳಿದಂತೆಯೇ ನಾನು ಮಾಡಿದೆ' ಎಂದು ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು 78



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,674
ಇಂದಿನ ಅಂತ್ಯ	19,664
▼	10
ದಿನದ ಕನಿಷ್ಠ	19,637

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹535
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹537

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1740 (1770)
ಸೋಯಾ (ರಿಫೈನ್ಡ್)	₹870 (870)
ಸೂರ್ಯಕಾಂತಿ (ರಿಫೈನ್ಡ್)	₹870 (870)
ಪಾಮೋಲಿನ್	₹805 (810)

ವಿನಿಮಯ ದರ

$ ಡಾಲರ್	83.26
£ ಪೌಂಡ್	101.42
€ ಯುರೊ	88.22
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7500-8366
ತಿಪಟೂರು	₹7000-8000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹275-550
ದ್ವಿತಳಿ (ಬಿ.ವಿ)	₹342-600

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹125

ಪ್ರತಿ ಟನ್‌ಗೆ ₹70,550ಕ್ಕೆ ತಗ್ಗಿಸಲಿರುವ ಕೇಂದ್ರ: ಮೂಲಗಳ ಮಾಹಿತಿ

ಬಾಸ್ಮತಿ ಅಕ್ಕಿ: ರಫ್ತು ದರ ಇಳಿಕೆ ಸಂಭವ

ನವದೆಹಲಿ (ರಾಯಿಟರ್ಸ್): ಬಾಸ್ಮತಿ ಅಕ್ಕಿ ರಫ್ತು ಮಾಡಲು ನಿಗದಿಪಡಿಸಿರುವ ಕನಿಷ್ಠ ರಫ್ತು ದರವನ್ನು (ಎಂಇಪಿ) ಕೇಂದ್ರ ಸರ್ಕಾರವು ಇಳಿಕೆ ಮಾಡಲಿದೆ ಎಂದು ಮೂಲಗಳು ಹೇಳಿವೆ. ಪ್ರತಿ ಟನ್ ಬಾಸ್ಮತಿ ಅಕ್ಕಿ ಬೆಲೆಯನ್ನು ಈಗಿರುವ 1,200 ಡಾಲರ್ (₹99,600) ಬದಲಾಗಿ 850 ಡಾಲರ್‌ಗೆ (₹70,550) ಇಳಿಕೆ ಮಾಡಲಿದೆ ಎಂದು ತಿಳಿಸಿವೆ.

ಮುಖ್ಯಾಂಶಗಳು

- ಎಂಇಪಿ ಹೆಚ್ಚಳ: ಬಾಸ್ಮತಿ ಅಕ್ಕಿ ರಫ್ತು ಇಳಿಕೆ
- 40 ಲಕ್ಷ ಟನ್ ಬಾಸ್ಮತಿ ರಫ್ತು ಮಾಡುತ್ತಿರುವ ಭಾರತ

ಪ್ರೀಮಿಯಂ ಬಾಸ್ಮತಿ ಅಕ್ಕಿ ಬದಲಾಗಿ ಬಾಸ್ಮತಿ ಅಲ್ಲದ ಅಕ್ಕಿಯನ್ನು ಅಕ್ರಮವಾಗಿ ರಫ್ತು ಮಾಡುವ ಸಾಧ್ಯತೆಯನ್ನು ತಡೆಯಲು ಕೇಂದ್ರ ಸರ್ಕಾರವು ಪ್ರತಿ ಟನ್‌ಗೆ 1,200 ಡಾಲರ್‌ಗಿಂತಲೂ ಕಡಿಮೆ ಬೆಲೆಗೆ ಬಾಸ್ಮತಿ ಅಕ್ಕಿ ರಫ್ತು ಮಾಡಲು ಅವಕಾಶ ನೀಡದಿರಲು ಈ ಹಿಂದೆ ನಿರ್ಧರಿಸಿತ್ತು. ಇದರಿಂದಾಗಿ ವಿದೇಶಿ ಮಾರಾದಲ್ಲಿ ಭಾರಿ ಇಳಿಕೆ ಕಂಡುಬಂದಿದೆ ಎಂದು ಮಿಲ್‌ಗಳು ಮತ್ತು ವ್ಯಾಪಾರಿಗಳು ದೂರಿದ್ದಾರೆ. ಹೀಗಾಗಿ ಬೆಲೆ ತಗ್ಗಿಸುವ ನಿರ್ಧಾರಕ್ಕೆ ಸರ್ಕಾರ ಬರಲಿದೆ ಎಂದು ಮೂಲಗಳು ಮಾಹಿತಿ ನೀಡಿವೆ.



ರಫ್ತು ಇಳಿಕೆಯಿಂದ ಹಣ ಕಳೆದುಕೊಳ್ಳುತ್ತಿರುವ ರೈತರಿಗೆ ಇದರಿಂದ ನೆರವಾಗಲಿದೆ. ಜಾಗತಿಕ ಬಾಸ್ಮತಿ ಅಕ್ಕಿ ಮಾರುಕಟ್ಟೆಯಲ್ಲಿ ಭಾರತವು ತನ್ನ ಸ್ಥಾನವನ್ನು ಕಾಯ್ದುಕೊಳ್ಳಲು ಸಹ ಅನುಕೂಲ ಆಗಲಿದೆ ಎಂದು ಭಾರತೀಯ ಅಕ್ಕಿ ರಫ್ತುದಾರರ ಒಕ್ಕೂಟದ ಅಧ್ಯಕ್ಷ ಪ್ರೇಮ್ ಗರ್ಗ್ ಅಭಿಪ್ರಾಯಪಟ್ಟಿದ್ದಾರೆ. ಭಾರತವು 40 ಲಕ್ಷ ಟನ್‌ನಷ್ಟು ಬಾಸ್ಮತಿ ಅಕ್ಕಿಯನ್ನು ಇರಾಕ್, ಇರಾನ್, ಯೆಮೆನ್, ಸೌದಿ ಅರೇಬಿಯಾ, ಯುಎಇ ಮತ್ತು ಅಮೆರಿಕಕ್ಕೆ ರಫ್ತು ಮಾಡುತ್ತಿದೆ. ಎಂಇಪಿ ಪ್ರತಿ ಟನ್‌ಗೆ 1,200 ಡಾಲರ್ ಹೆಚ್ಚಾಯಿತು. ಹೀಗಾಗಿಯೇ ಮಿಲ್‌ಗಳು ಮತ್ತು ವ್ಯಾಪಾರಿಗಳು ಬಾಸ್ಮತಿ ಅಕ್ಕಿಯನ್ನು ರಫ್ತು ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಹರಿಯಾಣದ ರಫ್ತುದಾರ ವಿಜಯ್ ಸೇಥಿಯಾ ಹೇಳಿದ್ದಾರೆ.

‘ಟಾಟಾ ಕಾಫಿ’ ಮಾರುಕಟ್ಟೆ ವಿಸ್ತರಣೆಗೆ ಆದ್ಯತೆ: ಪುನಿತ್ ದಾಸ್

ಪ್ರಜಾವಾಣಿ ವಾರ್ತೆ

ಪೊಲ್ಲಿಬೆಟ್ಟ (ಕೊಡಗು): ವೈವಿಧ್ಯಮಯ ಬ್ರ್ಯಾಂಡೆಡ್ ಕಾಫಿ ಉತ್ಪನ್ನಗಳನ್ನು ಪರಿಚಯಿಸುವ ಮೂಲಕ ಟಾಟಾ ಕನ್ಸ್ಯೂಮರ್ ಪ್ರಾಡಕ್ಟ್‌ಗಳನ್ನು ದೇಶಿ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗೆ ವಿಸ್ತರಿಸಲಾಗುತ್ತಿದೆ ಎಂದು ಕಂಪನಿಯ ಭಾರತ ಮತ್ತು ದಕ್ಷಿಣ ಏಷ್ಯಾದ ಪ್ಯಾಕೇಜ್ಡ್ ಪಾನೀಯಗಳ ವಿಭಾಗದ ಅಧ್ಯಕ್ಷ ಪುನಿತ್ ದಾಸ್ ತಿಳಿಸಿದ್ದಾರೆ.

ಅಕ್ಟೋಬರ್ 1ರಂದು ಅಂತರರಾಷ್ಟ್ರೀಯ ಕಾಫಿ ದಿನ ಇದ್ದು, ಅದರ ಪೂರ್ವಭಾವಿಯಾಗಿ ಕೊಡಗಿನ ತೋಟದಲ್ಲಿ ಆಯೋಜಿಸಿದ್ದ ‘ಟಾಟಾ ಕಾಫಿ’ಯ ಯಶೋಗಾಥೆಯನ್ನು ಮೆಲುಕು ಹಾಕುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಉತ್ಪನ್ನಗಳಲ್ಲಿ ಶೇ 80ರಿಂದ 85ರಷ್ಟಿರುವ ಇನ್‌ಸ್ಟಂಟ್ ಕಾಫಿ ವಿಭಾಗದ ತ್ವರಿತ ಬೆಳವಣಿಗೆಯು ಮಾರುಕಟ್ಟೆ ವಿಸ್ತರಣೆಯಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದು ತಿಳಿಸಿದ್ದಾರೆ.


ಪುನಿತ್ ದಾಸ್

ದೇಶಿ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಂಪನಿಯು ಕಾರ್ಯಾಚರಣೆ ನಡಸುತ್ತಿದ್ದು, ವಾರ್ಷಿಕ ₹13,783 ಕೋಟಿ ಮೊತ್ತದ ವಹಿವಾಟು ನಡೆಸುತ್ತಿದೆ ಎಂದು ಅವರು ಹೇಳಿದ್ದಾರೆ.

‘ಒಂದು ಬ್ರ್ಯಾಂಡ್‌ನಿಂದ ಆರಂಭವಾದ ಪಯಣವು ವಿಭಿನ್ನ ಬಗೆಯ ಕಾಫಿ ಉತ್ಪನ್ನಗಳವರೆಗೆ ಸಾಗಿದ್ದು, ಗ್ರಾಹಕರ ಅಗತ್ಯಗಳನ್ನು ಪೂರೈಸುತ್ತಿದೆ. ಭಾರತದ 20 ಕೋಟಿಗೂ ಅಧಿಕ ಮನೆಗಳಿಗೆ ಕಂಪನಿಯ ಉತ್ಪನ್ನಗಳು ತಲುಪಿವೆ’ ಎಂದು ಪುನಿತ್ ದಾಸ್ ಅವರು ಮಾಹಿತಿ ನೀಡಿದ್ದಾರೆ.

ಪ್ರಶ್ನೋತ್ತರ


ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಆದಿನಾರಾಯಣ ಪಿ

- **ಪ್ರಶ್ನೆ: ನಾನು ಹಿರಿಯ ನಾಗರಿಕನಾಗಿದ್ದು, ಸರಕಾರಿ ಉದ್ಯೋಗದ ನಿವೃತ್ತಿಯ ನಂತರ ವಾರ್ಷಿಕವಾಗಿ ₹ 8.82 ಲಕ್ಷ ಪಿಂಚಣಿ ಹಾಗೂ ₹ 1.29 ಲಕ್ಷ ಬಡ್ಡಿ ಆದಾಯ ಪಡೆಯುತ್ತಿದ್ದೇನೆ. ಒಟ್ಟು ಆದಾಯ ₹ 10.11 ಲಕ್ಷ. ಬೇರೆ ಯಾವುದೇ ರೀತಿಯ ಆದಾಯವಿಲ್ಲ. ಪ್ರತಿ ವರ್ಷವೂ ಆದಾಯ ತೆರಿಗೆ ಮಾಹಿತಿ ಸಲ್ಲಿಸುತ್ತಿದ್ದೇನೆ. ಈಗ 2023-24 ನೇ ವರ್ಷಕ್ಕೆ ಸಂಬಂಧಿಸಿದಂತೆ ಹಳೆಯ ಅಥವಾ ಹೊಸ ತೆರಿಗೆ ಪದ್ಧತಿ ಯನ್ನು ಆಯ್ಕೆ ಮಾಡಬೇಕು. ಕೆಲವರು ಹಳೆಯ ಪದ್ಧತಿ ಹೇಳಿದರೆ ಇನ್ನು ಕೆಲವರು ಹೊಸ ಪದ್ಧತಿಯೇ ಸೂಕ್ತ ಎಂದು ಸಲಹೆ ನೀಡಿದ್ದಾರೆ. ಇಂತಹ ಸಂದರ್ಭದಲ್ಲಿ ಯಾವ ತೆರಿಗೆ ಆಯ್ಕೆ ಮಾಡಬೇಕು.**

ಉತ್ತರ: ಆರ್ಥಿಕ ವರ್ಷ 2023-24 (ತೆರಿಗೆ ವರ್ಷ 2024-25) ರಿಂದ ಅನ್ವಯಿಸುವಂತೆ, ಹೊಸ ತೆರಿಗೆ ಪದ್ಧತಿ ನಮ್ಮ ಸಹಜ ತೆರಿಗೆ ಪದ್ಧತಿಯಾಗಿರುತ್ತದೆ. ಒಂದು ವೇಳೆ ನಮಗೆ ಹಳೆಯ ತೆರಿಗೆ ಪದ್ಧತಿ ಹೆಚ್ಚು ಪ್ರಯೋಜನಕಾರಿ ಎಂದು ಕಂಡು ಬಂದರೆ ಅದನ್ನು ಅನುಸರಿಸಿ ತೆರಿಗೆ ರಿಯಾಯಿತಿ ಪಡೆದುಕೊಳ್ಳುವವರು ಅದನ್ನು ತಮ್ಮ ವೇತನ ಪಾವತಿದಾರರಿಗೆ ಮೊದಲೇ ಸೂಚಿಸಬೇಕಾಗಿರುತ್ತದೆ. ನಂತರ ಸೂಕ್ತ ಹೂಡಿಕೆ ದಾಖಲೆ ಇತ್ಯಾದಿಗಳನ್ನು ನೀಡಬೇಕಾಗುತ್ತದೆ. ನಿಮ್ಮ ಸನ್ನಿವೇಶದಲ್ಲಿ ನಿಮಗೆ ಸೆಕ್ಷನ್ 80ಸಿ ಅಡಿ ಹೂಡಿಕೆ ಇದ್ದಾಗಲೂ ಹೊಸ ತೆರಿಗೆ ಪದ್ಧತಿಯೇ ಹೆಚ್ಚು ಸೂಕ್ತವಾಗಬಹುದು.

ಶಿವರಾಂ ಎಸ್.ಎನ್. ಮತ್ತು ಪಾರ್ವತಿ
ವಿಜಯನಗರ, ಬೆಂಗಳೂರು

- **ಪ್ರಶ್ನೆ:ನಾವು 62 ರಿಂದ 70 ವರ್ಷದ ಹಿರಿಯ ನಾಗರಿಕರು. ನಮಗೆ ತೆರಿಗೆ ಉಳಿಸಲು ಆದಾಯ ತೆರಿಗೆಯ ವಿವಿಧ ಸೆಕ್ಷನ್‌ಗಳಡಿ ಲಭ್ಯವಿರುವ ತೆರಿಗೆ ರಿಯಾಯಿತಿಯ ಮಾಹಿತಿ ತಿಳಿಸಿ. ಅದೇ ರೀತಿ ಹೊಸ ತೆರಿಗೆ ಹಾಗೂ ಹಳೆ ತೆರಿಗೆ ಪದ್ಧತಿಯಡಿ ಇರುವ ಸ್ಲ್ಯಾಬ್ ವಿವರವನ್ನು ತಿಳಿಸಿ. ಇದರಿಂದ ಹಿರಿಯ ನಾಗರಿಕರಾದ ನಮಗೂ ಇತರರಿಗೂ ನೆರವಾಗುತ್ತದೆ. ಇದಲ್ಲದೆ, ಬಡ್ಡಿ ಆದಾಯಕ್ಕೆ ಏನೆಲ್ಲಾ ತೆರಿಗೆ ರಿಯಾಯಿತಿ ಇದೆ ಹಾಗು ಎಷ್ಟು ಎಫ್.ಡಿ ಮಾಡಿದರೆ ತೆರಿಗೆ ಉಳಿತಾಯವಾಗುತ್ತದೆ?**

ಉತ್ತರ: ಮೊದಲನೆಯದಾಗಿ ನೀವು ತಿಳಿದುಕೊಳ್ಳಬೇಕಾದ ವಿಚಾರವೆಂದರೆ, ನೀವು ಎಷ್ಟೇ ಉಳಿತಾಯ ಮಾಡಿದರೂ ನಿಮಗೆ ಸಿಗುವ ಯಾವುದೇ ತೆರಿಗೆ ರಿಯಾಯಿತಿ ನೀವು ಆರಿಸುವ ತೆರಿಗೆ ಪದ್ಧತಿಯ ಆಧಾರದ ಮೇಲೆ ನಿರ್ಧಾರವಾಗುತ್ತದೆ. ಹಳೆಯ ತೆರಿಗೆ ಪದ್ಧತಿಯ ಪ್ರಕಾರ, ನಿಮಗೆ ತೆರಿಗೆ ದರ ಅಧಿಕ. ಆದರೆ ನಿರ್ದಿಷ್ಟ ಹೂಡಿಕೆಯ ಮೇಲಣ ಮೊತ್ತಕ್ಕೆ ‘ಸೆಕ್ಷನ್ 80 ಸಿ’ ಪ್ರಕಾರ ತೆರಿಗೆ ರಿಯಾಯಿತಿ ಸಿಗುತ್ತದೆ. ಪ್ರಮುಖವಾದ ಕೆಲವು ವಿವರಗಳನ್ನು ಕೆಳಗೆ ನೀಡಲಾಗಿದೆ.

ಸೆಕ್ಷನ್ 80ಸಿ ಇದರಡಿ ನೀವು ಅಂಚೆ ಕಚೇರಿಯಲ್ಲಿ ಹಿರಿಯ ನಾಗರಿಕರಿಗೆ ಇರುವ ಠೇವಣಿಯಲ್ಲಿ ಹೂಡಿಕೆ ಮಾಡಬಹುದು. ಬ್ಯಾಂಕ್‌ಗಳಲ್ಲಿ 5 ವರ್ಷದ ನಿಖರು ಠೇವಣಿ ಮಾಡಬಹುದು. ಒಂದಷ್ಟು ಮೊತ್ತವನ್ನು ಮೂರು ವರ್ಷದ ಅವಧಿಯ ಇಕ್ವಿಟಿ ಲಿಂಕ್ಡ್ ಸೇವಿಂಗ್ಸ್ ಸ್ಕೀಮ್‌ನ ಮ್ಯೂಚುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬಹುದು. ಇವೆಲ್ಲ ಯೋಜನೆಗಳು ಹಳೆಯ ಪದ್ಧತಿ ಆಯ್ಕೆ ಮಾಡುವವರಿಗೆ ಆದಾಯ ತೆರಿಗೆಯನ್ನು ಉಳಿಸಲು ಸಹಾಯ ಮಾಡುತ್ತದೆ. ಒಟ್ಟಾರೆಯಾಗಿ ಇವೆಲ್ಲಾ ಹೂಡಿಕೆಗಳಡಿ ಆದಾಯ ತೆರಿಗೆ ಕಾಯ್ದೆಯ, ಸೆಕ್ಷನ್ 80ಸಿ ಅಡಿಯಲ್ಲಿ, ತೆರಿಗೆದಾರರು ₹ 1.5 ಲಕ್ಷದವರೆಗೆ ಹೂಡಿಕೆ ಮಾಡಲು ಮತ್ತು ಅದನ್ನು ತಮ್ಮ ತೆರಿಗೆಯ ಆದಾಯದಿಂದ ಕಡಿತ ಮಾಡಲು ಅನುಮತಿಸುತ್ತದೆ.

ಸೆಕ್ಷನ್ 80ಡಿ ಇದರಡಿ ಇನ್ಶುರೆನ್ಸ್ ಸೌಲಭ್ಯ ಇಲ್ಲದ ಸಂದರ್ಭಗಳಲ್ಲಿ ಮಾಡುವ ಖರ್ಚಿಗೂ ಕೂಡಾ ವಿನಾಯಿತಿ ಸಿಗುತ್ತದೆ. ಇದು ಸ್ವತಃ ವಾರ್ಷಿಕವಾಗಿ ಖರ್ಚು ಮಾಡುವ ₹50,000ದ ತನಕದ ಮೊತ್ತಕ್ಕೆ ವಿನಾಯಿತಿ ಪಡೆಯಬಹುದು ಅಥವಾ ನಿಮಗಾಗಿ ನಿಮ್ಮ ಮಕ್ಕಳು ಖರ್ಚುಮಾಡಿ ಅವರು ರಿಯಾಯಿತಿ ಪಡೆದುಕೊಳ್ಳಬಹುದು. ಇದಕ್ಕಾಗಿ ನಗದು ರಹಿತ ಪಾವತಿ ಮಾಡಿರಬೇಕು. ಈ ಒಟ್ಟಾರೆ ಮಿತಿಯೊಳಗೆ ₹ 5,000 ದ ಆರೋಗ್ಯ ತಪಾಸಣಾ ವೆಚ್ಚವನ್ನೂ ಕಡಿತವಾಗಿ ಪಡೆಯಲು ಅವಕಾಶವಿದೆ.

ಅದೇ ರೀತಿ ಬಡ್ಡಿ ಆದಾಯದ ಮೇಲೆ ‘ಸೆಕ್ಷನ್ 80ಟಿಟಿಬಿ’ ಪ್ರಕಾರ ಹಿರಿಯ ನಾಗರಿಕ ತೆರಿಗೆದಾರರಿಗೆ ₹ 50,000 ದ ತನಕದ ಬಡ್ಡಿ ಆದಾಯದ ಮೇಲೆ ವಿನಾಯಿತಿ ಇದೆ. ಇದಕ್ಕಿಂತಲೂ ಹೆಚ್ಚಿನ ಬಡ್ಡಿ ಇದ್ದರೆ ಹಾಗೂ ನಿಮ್ಮ ಒಟ್ಟಾರೆ ಆದಾಯ ವಿನಾಯಿತಿ ಮಿತಿಯೊಳಗಿದ್ದು ತೆರಿಗೆ ಬರುವಂತಿಲ್ಲದಿದ್ದರೆ , ಬ್ಯಾಂಕಿಗೆ ನೀವು ‘ಫಾರಂ 15 ಎಚ್’ ಕೊಟ್ಟು ₹ 50,000 ಕ್ಕೂ ಅಧಿಕ ಮೊತ್ತದ ಬಡ್ಡಿಯ ಮೇಲಾಗುವ ಅನಗತ್ಯ ತೆರಿಗೆ ಕಟಾವಣೆಯಾಗುವುದನ್ನು ತಡೆಯಬಹುದು.

ತೆರಿಗೆಗ ಒಳಪಡುವ ಆದಾಯದ ಮೇಲೆ ಹಿರಿಯ ನಾಗರಿಕರಿಗೆ ಅನ್ವಯಿಸುವ ಪ್ರಸ್ತುತ (ಆರ್ಥಿಕ ವರ್ಷ 2023-24) ತೆರಿಗೆ ದರಗಳು ಈ ರೀತಿ ಇವೆ.

ಹಳೆಯ ತೆರಿಗೆ ಪದ್ಧತಿ: ಅನ್ವಯಿಸುವ ತೆರಿಗೆ ದರಗಳೆಂದರೆ; ಆದಾಯ ಮಿತಿ 0 ಯಿಂದ ₹3 ಲಕ್ಷಕ್ಕೆ ಶೂನ್ಯ ತೆರಿಗೆ. ₹3 ಲಕ್ಷದಿಂದ ₹5 ಲಕ್ಷ - ಶೇ 5ರಷ್ಟು, ₹5 ಲಕ್ಷದಿಂದ ₹10 ಲಕ್ಷ - ಶೇ 20ರಷ್ಟು, ₹10 ಲಕ್ಷಕ್ಕೂ ಮೀರಿದ ಆದಾಯಕ್ಕೆ ಶೇ 30 ರ ತೆರಿಗೆ ದರ ಅನ್ವಯಿಸುತ್ತದೆ. ಸೆಕ್ಷನ್ 87ಎ ಅಡಿ ಈ ತೆರಿಗೆ ಪದ್ಧತಿ ಅನುಸರಿಸುವವರಿಗೆ ವಿಶೇಷ ರಿಬೇಟ್ ಇರುವುದರಿಂದ, ₹ 5 ಲಕ್ಷದೊಳಗೆ ತೆರಿಗೆ ಆದಾಯವಿದ್ದರೆ ಅಂತಹ ತೆರಿಗೆದಾರರಿಗೆ ಯಾವುದೇ ತೆರಿಗೆ ಬರುವುದಿಲ್ಲ. ಇದಕ್ಕೂ ಮೇಲ್ಪಟ್ಟ ಆದಾಯವಿದ್ದಲ್ಲಿ, ಈ ವಿನಾಯಿತಿ ಪರಿಗಣಿಸದೆ ಮೇಲಿನ ದರಗಳಂತೆ ತೆರಿಗೆ ಇರುತ್ತದೆ.

ಹೊಸ ತೆರಿಗೆ ಪದ್ಧತಿ : ಇದರಡಿ ಯಾವುದೇ ವಯೋಮಿತಿ ಪರಿಗಣಿಸದೆ ಎಲ್ಲರಿಗೂ ಒಂದೇ ರೀತಿಯ ತೆರಿಗೆ ದರ ಅನ್ವಯವಾಗುತ್ತದೆ. ಅನ್ವಯಿಸುವ ತೆರಿಗೆ ದರಗಳೆಂದರೆ; 1) ಆದಾಯ ಮಿತಿ 0 ಯಿಂದ ₹3 ಲಕ್ಷಕ್ಕೆ ಶೂನ್ಯ ತೆರಿಗೆ. ₹3 ಲಕ್ಷ ರಿಂದ ₹6 ಲಕ್ಷಕ್ಕೆ ಶೇ 5. ₹ 6 ಲಕ್ಷ ರಿಂದ ₹9 ಲಕ್ಷಕ್ಕೆ ಶೇ 10. ₹ 9 ಲಕ್ಷದಿಂದ ₹12 ಲಕ್ಷ - ಶೇ 15. ₹12 ಲಕ್ಷದಿಂದ ₹15 ಲಕ್ಷ - ಶೇ 20. ₹ 15 ಲಕ್ಷಕ್ಕೂ ಮೀರಿದ ಆದಾಯಕ್ಕೆ ಶೇ 30 ರ ತೆರಿಗೆ ದರ ಅನ್ವಯಿಸುತ್ತದೆ. ಸೆಕ್ಷನ್ 87ಎ ಇದರಡಿ, ಹೊಸ ತೆರಿಗೆ ಪದ್ಧತಿ ಅನುಸರಿಸುವವರಿಗೂ ವಿಶೇಷ ರಿಬೇಟ್ ಇರುವುದರಿಂದ, ₹ 7 ಲಕ್ಷದೊಳಗೆ ತೆರಿಗೆಗೊಳಪಡುವ ಆದಾಯವಿರುವ ವ್ಯಕ್ತಿಗಳಿಗೆ ಒಟ್ಟಾರೆ ತೆರಿಗೆ ಬರುವುದಿಲ್ಲ. ಇದಕ್ಕೂ ಮೇಲ್ಪಟ್ಟ ಆದಾಯವಿದ್ದಲ್ಲಿ, ಈ ವಿನಾಯಿತಿ ಪರಿಗಣಿಸದೆ ಮೇಲಿನ ದರಗಳಂತೆ ತೆರಿಗೆ ಅನ್ವಯವಾಗುತ್ತದೆ. ಹೊಸ ಆದಾಯ ತೆರಿಗೆ ಪದ್ಧತಿಯು ಕಡಿಮೆ ಹೂಡಿಕೆ ಮಾಡುವ ಜನರಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ.

ಯಾವುದೇ ಪದ್ಧತಿಯನ್ನು ಆಯ್ಕೆ ಮಾಡುವ ಮುನ್ನ ನಿಮ್ಮ ಒಟ್ಟು ಆದಾಯ ಹಾಗೂ ಹೂಡಿಕೆಯ ಮಾಹಿತಿಯೊಂದಿಗೆ ತೆರಿಗೆ ಸಲಹೆ ಪಡೆದುಕೊಳ್ಳಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್:businessdesk@prajavani.co.in

ಮುಂಬೈ ಧಾರಣೆ

ಶೇಂಗಾ

26-09-2023

ಜಾವಾ 70/80(ಹೊಸ)	12400-12500
ಜಾವಾ 80/90(ಹೊಸ)	11900-12000
ದಪ್ಪ ಮಧ್ಯಪ್ರದೇಶ(ಹೊಸ)	10800-10900
ದಪ್ಪ ಗುಜರಾತ್(ಹೊಸ)	11500-11600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1750 (1780)
ಒಂದು ವಾರದ ಡೆಲಿವರಿ	1745 (1775)
ಸೋಯಾ ಕಚ್ಚಾ	825 (830)
ಪಾಮ್ ವಾರದ ಡೆಲಿವರಿ	803(808)
ಸೂರ್ಯಕಾಂತಿ ಎಣ್ಣೆ ಕಚ್ಚಾ	790 (780)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,550 (58,850)
ಬೆಳ್ಳಿ ಕೆ.ಜಿ 71,450 (72,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

₹6.55 ಲಕ್ಷ ಕೋಟಿ ಸಾಲ ಪಡೆಯಲಿರುವ ಕೇಂದ್ರ ಸರ್ಕಾರ

ನವದೆಹಲಿ (ರಾಯಿಟರ್ಸ್/ಪಿಟಿಐ): 2023-24ರ ಅಕ್ಟೋಬರ್-ಮಾರ್ಚ್ ಅವಧಿಗೆ ಬಾಂಡ್ ನೀಡಿಕೆ ಮೂಲಕ ಮಾರುಕಟ್ಟೆಯಿಂದ ₹6.55 ಲಕ್ಷ ಕೋಟಿ ಸಾಲ ಪಡೆಯಲಾಗುವುದು ಎಂದು ಕೇಂದ್ರ ಸರ್ಕಾರವು ಮಂಗಳವಾರ ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಮಾರುಕಟ್ಟೆಯಿಂದ ₹15.43 ಲಕ್ಷ ಕೋಟಿ ಸಾಲ ಪಡೆಯುಲು ನಿರ್ಧರಿಸಿದೆ. ಇದರಲ್ಲಿ ಈಗಾಗಲೇ ₹8.88 ಲಕ್ಷ ಕೋಟಿ ಸಾಲ ಪಡೆಯಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		**ಪುತ್ತೂರು**		ಕೋಕ	30019-34499
ಕೋಕ	15000-25000	ಕೋಕ	11000-25000	ರಾಶಿ	43139-47099
ಹೊಸತು	28000-45000	ಹೊಸತು	34000-45000	ತಟ್ಟಿಬೆಟ್ಟೆ	37109-38039
ಹಳತು	46000-48000	**ಸಾಗರ**		**ಶಿರಸಿ**	
ಚಿತ್ರದುರ್ಗ		ಬಿಳಿಗೋಟು	22569-32399	ಬೆಟ್ಟೆ	39019-46000
ಅಪಿ	45119-45529	ಚಾಲಿ	37111-38239	ಬಿಳಿಗೋಟು	28999-36599
ಬೆಟ್ಟೆ	35249-35689	ಕೆಂಪುಗೋಟು	15669-15669	ಚಾಲಿ	37070-41588
ಕೆಂಪುಗೋಟು	29209-29610	ರಾಶಿ	41809-45509	ಕೆಂಪುಗೋಟು	24399-34909
ರಾಶಿ	44639-45069	ಸಿಪ್ಪೆಗೋಟು	11699-21299	ರಾಶಿ	45319-50299
ಕಾರ್ಕಳ		**ಶಿವಮೊಗ್ಗ**		**ಯಲ್ಲಾಪುರ**	
ಹೊಸತು	30000-45000	ಬೆಟ್ಟೆ	46100-53000	ಬಿಳಿಗೋಟು	24269-35680
ಹಳತು	40000-48500	ಗೊರಬಲು	18009-37009	ಚಾಲಿ	36299-41090
ಕುಂದಾಪುರ		ರಾಶಿ	39133-49129	ಕೋಕ	18212-29009
ಹಳೆಚಾಲಿ	35000-47000	ಸರಕು	51569-81400	ಕೆಂಪುಗೋಟು	24899-34176
ಹೊಸಚಾಲಿ	37000-41500	**ಸಿದ್ದಾಪುರ**		ರಾಶಿ	45000-52955
ಮಡಿಕೇರಿ		ಬಿಳಿಗೋಟು	32299-35520	ತಟ್ಟಿಬೆಟ್ಟೆ	38369-44299
ಕಚ್ಚಾ	43474-43474	ಚಾಲಿ	37888-40099		

ನವೋದ್ಯಮ: ಏಂಜಲ್ ಟ್ಯಾಕ್ಸ್‌ಗೆ ವಿದೇಶಿ ಹೂಡಿಕೆ

ನವದೆಹಲಿ (ಪಿಟಿಐ): ನೋಂದಾಯಿಸಿಕೊಳ್ಳದೇ ಇರುವ ನವೋದ್ಯಮಗಳು ವಿದೇಶಿ ಹೂಡಿಕೆದಾರರಿಂದ ಸಂಗ್ರಹಿಸುವ ಈಕ್ವಿಟಿ ಬಂಡವಾಳಕ್ಕೂ ತೆರಿಗೆ ಪಾವತಿಸಬೇಕಾಗುತ್ತದೆ. ಸೋಮವಾರದಿಂದ ಜಾರಿಗೆ ಬರುವಂತೆ ಏಂಜಲ್ ಟ್ಯಾಕ್ಸ್ ನಿಯಮದಲ್ಲಿ ಕೇಂದ್ರ ಸರ್ಕಾರವು ಈ ಬದಲಾವಣೆ ತಂದಿದೆ.

ನವೋದ್ಯಮಗಳು ಷೇರು ಮಾರಾಟ ಮಾಡುವ ಮೂಲಕ ವಿದೇಶಿ ಹೂಡಿಕೆದಾರರಿಂದ ಬಂಡವಾಳ ಸಂಗ್ರಹಿಸಿದಲ್ಲಿ, ಅದು ಅವುಗಳ ನ್ಯಾಯಸಮ್ಮತ ಮಾರುಕಟ್ಟೆ ಮೌಲ್ಯಕ್ಕಿಂತಲೂ ಹೆಚ್ಚಿಗೆ ಇದ್ದರೆ ವ್ಯತ್ಯಾಸದ ಮೊತ್ತಕ್ಕೆ ತೆರಿಗೆ ಕಟ್ಟಬೇಕಾಗುತ್ತದೆ. ಶೇ 30ರವರೆಗೆ ತೆರಿಗೆ ಪಾವತಿಸಬೇಕಾಗುತ್ತದೆ.

ವಿದೇಶಿ ಹೂಡಿಕೆದಾರರಿಂದ ಬಂಡವಾಳ ಸಂಗ್ರಹಿಸುವ ನವೋದ್ಯಮಗಳ ಮೇಲೆ ಇದು ಪರಿಣಾಮ ಬೀರುವ ನಿರೀಕ್ಷೆ ಇದೆ. ದೇಶಿ ಹೂಡಿಕೆದಾರರು ಈಗಾಗಲೇ ತೆರಿಗೆ ಪಾವತಿಸುತ್ತಿದ್ದಾರೆ. 2023-24ರ ಬಜೆಟ್‌ನಲ್ಲಿ ಏಂಜಲ್ ಟ್ಯಾಕ್ಸ್ ವ್ಯಾಪ್ತಿಯನ್ನು ವಿಸ್ತರಿಸಲಾಗಿದ್ದು, ವಿದೇಶಿ ಹೂಡಿಕೆದಾರರನ್ನೂ ಸೇರಿಸಲಾಗಿದೆ.

ಏನಿದು ಏಂಜಲ್ ಟ್ಯಾಕ್ಸ್: ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯಲ್ಲಿ (ಡಿಪಿಐಐಟಿ) ನೋಂದಾಯಿಸಿಕೊಳ್ಳದೇ ಇರುವ ಕಂಪನಿಗಳು ಷೇರುಗಳನ್ನು ಮಾರಾಟ ಮಾಡಿ ಸಂಗ್ರಹಿಸುವ ಬಂಡವಾಳಕ್ಕೆ ಕಟ್ಟುವ ತೆರಿಗೆ ಇದಾಗಿದೆ.

ಕೆನಡಾ ಸೇನಾಪಡೆ ಉಪ ಮುಖ್ಯಸ್ಥ ಹೇಳಿಕೆ

ಸೇನಾ ಬಾಂಧವ್ಯಕ್ಕೆ ಧಕ್ಕೆ ಇಲ್ಲ

ನವದೆಹಲಿ (ಪಿಟಿಐ): ಭಾರತ ಮತ್ತು ಕೆನಡಾ ನಡುವಣ ಇತ್ತೀಚಿನ ರಾಜತಾಂತ್ರಿಕ ಬಿಕ್ಕಟ್ಟು ಉಭಯ ದೇಶಗಳ ಮಧ್ಯೆ ಯಾವುದೇ ಪರಿಣಾಮ ಬೀರುವುದಿಲ್ಲ, ಸೇನಾ ಬಾಂಧವ್ಯಕ್ಕೂ ಧಕ್ಕೆ ಉಂಟು ಮಾಡುವುದಿಲ್ಲ ಎಂದು ಕೆನಡಾ ಸೇನಾಪಡೆ ಉಪ ಮುಖ್ಯಸ್ಥ ಮೇಜರ್ ಜನರಲ್ ಪೀಟರ್ ಸ್ಕಾಟ್ ಮಂಗಳವಾರ ಇಲ್ಲಿ ಹೇಳಿದರು.

ಖಾಲಿಸ್ತಾನಿ ಪ್ರತ್ಯೇಕತಾವಾದಿಯ ಹತ್ಯೆಯಲ್ಲಿ ಭಾರತದ ಕೈವಾಡವಿದೆ ಎಂದು ಟ್ರುಡೊ ಆರೋಪಿಸಿದ ಬಳಿಕ ಎರಡೂ ದೇಶಗಳ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ಏರ್ಪಟ್ಟಿದೆ.

ಇಂಡೊ- ಪೆಸಿಫಿಕ್ ಸೇನಾ ಮುಖ್ಯಸ್ಥರ ಸಮಾವೇಶದಲ್ಲಿ (ಇಪಿಎಸಿಸಿ) ಭಾಗವಹಿಸಿದ ಕೆನಡಾ ನಿಯೋಗದ ನೇತೃತ್ವವನ್ನು ಪೀಟರ್ ಸ್ಕಾಟ್ ವಹಿಸಿದ್ದಾರೆ. 30 ರಾಷ್ಟ್ರಗಳ ಸೇನಾ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದಾರೆ. ಭಾರತೀಯ ಸೇನಾಪಡೆ ಈ ಸಮಾವೇಶ ಏರ್ಪಡಿಸಿದ್ದು ಎರಡು ದಿನಗಳು ನಡೆಯಲಿದೆ.

‘ನಾವು ಭಾರತದೊಂದಿಗೆ ರಕ್ಷಣಾ ಸಹಕಾರವನ್ನು ಮುಂದುವರಿಸುತ್ತೇವೆ. ನನಗೆ ತಿಳಿದಿರುವಂತೆ, ಬಿಕ್ಕಟ್ಟು ಈ ಸಮಯದಲ್ಲಿ ಯಾವುದೇ ಪರಿಣಾಮ ಬೀರುವುದಿಲ್ಲ. ರಾಜಕೀಯ ಹಂತದಲ್ಲಿ ಈ ವಿಷಯ ಬಗೆಹರಿಯಬೇಕಿದೆ’ ಎಂದು ಸುದ್ದಿಸಂಸ್ಥೆಗೆ ತಿಳಿಸಿದರು.

‘ಸಮಾವೇಶದಲ್ಲಿ ಭಾಗವಹಿಸುವುದು ನಮಗೆ ಸಂತೋಷದ ವಿಷಯ. ವಿವಾದವು ಈವರೆಗೆ ಯಾವ ವಿಷಯದ ಮೇಲೂ ಕರಾಳ ಛಾಯೆಯನ್ನು ಬೀರಿಲ್ಲ’ ಎಂದು ಅವರು ಅಭಿಪ್ರಾಯಪಟ್ಟರು.

‘ಭಾರತದ ಸೇನಾಪಡೆ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರೊಂದಿಗೆ ನಾನು ಸೋಮವಾರ ರಾತ್ರಿ ಮಾತನಾಡಿದ್ದೇನೆ. ಇದು ರಾಜಕೀಯ ವಿಷಯ, ನಮ್ಮ ಬಾಂಧವ್ಯದಲ್ಲಿ ಯಾವುದೇ ಹಸ್ತಕ್ಷೇಪ ಇರುವುದಿಲ್ಲ ಎಂದು ಇಬ್ಬರೂ ಒಪ್ಪಿಕೊಂಡಿದ್ದೇವೆ’ ಎಂದರು.

ಟ್ರುಡೊ ಆರೋಪ ಮೊದಲೇ ತಿಳಿದಿರಲಿಲ್ಲ: ಡೇವಿಡ್ ಇಬೆ

ಟೊರಂಟೊ: ಭಾರತದ ವಿರುದ್ಧ ಕೆನಡಾ ಪ್ರಧಾನಿ ಮಾಡಿದ ಆರೋಪದ ಬಗ್ಗೆ ತಮಗೆ ಮೊದಲೇ ತಿಳಿದಿರಲಿಲ್ಲ. ಸಾರ್ವಜನಿಕವಾಗಿ ಪ್ರಕಟಗೊಳ್ಳುವುದಕ್ಕೆ ಒಂದು ಗಂಟೆ ಮುಂಚೆಯಷ್ಟೆ ಗೊತ್ತಾಯಿತು ಎಂದು ಬ್ರಿಟಿಷ್ ಕೊಲಂಬಿಯಾ ಪ್ರಾಂತ್ಯದ ಮುಖ್ಯಸ್ಥ ಡೇವಿಡ್ ಇಬೆ ಹೇಳಿದ್ದಾರೆ.

ಕೆನಡಾದ ಬ್ರಿಟಿಷ್ ಕೊಲಂಬಿಯಾ ಪ್ರಾಂತ್ಯದಲ್ಲಿ ಸಿಖ್ ಪ್ರತ್ಯೇಕತಾವಾದಿ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಗೀಡಾಗಿದ್ದ.

ವ್ಯಾಂಕೊವರ್, ಒಟ್ಟಾವ ಮತ್ತು ಟೊರಂಟೊದಲ್ಲಿ ಭಾರತದ ರಾಜತಾಂತ್ರಿಕ ಕಚೇರಿಗಳ ಮುಂದೆ ಖಾಲಿಸ್ತಾನದ ಕೆಲವು ಬೆಂಬಲಿಗರು ಸೋಮವಾರ ಪ್ರತಿಭಟನೆ ನಡೆಸಿದ್ದರು. ಇದೇ ದಿನ ಡೇವಿಡ್ ಅವರು ಪ್ರಧಾನಿ ಟ್ರುಡೊ ಅವರನ್ನು ಭೇಟಿಯಾಗಿದ್ದರು. ಈ ಸಂದರ್ಭದಲ್ಲಿ ಅವರು ಸಿಟಿವಿಗೆ ಹೇಳಿಕೆ ನೀಡಿದ್ದಾರೆ.

ಕೆನಡಾ ಸರ್ಕಾರವು ಭದ್ರತೆಗೆ ಸಂಬಂಧಿಸಿದ ಗುಪ್ತಚರ ಮಾಹಿತಿಯನ್ನು ಪ್ರಾಂತ್ಯಗಳ ಜತೆ ಹಂಚಿಕೊಳ್ಳಬೇಕೆಂದು ಬಯಸುವುದಾಗಿ ಹೇಳಿದ ಅವರು, ಇಂತಹ ನಿರ್ಧಾರಗಳ ಬಗ್ಗೆ ಆರಂಭಿಕ ಹಂತದಲ್ಲೇ ಪ್ರಾಂತ್ಯಗಳಿಗೆ ತಿಳಿಸುವುದು ಅಗತ್ಯ ಎಂದಿದ್ದಾರೆ.

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹11500
ಎಸಿ	₹6720
ಆರ್‌ಪಿ	₹9900
ಆರ್‌ಸಿ	₹5830

ಈಕ್ವೆಸ್ಟ್ರಿಯನ್: ಭಾರತ ತಂಡದ ಐತಿಹಾಸಿಕ ಸಾಧನೆ • ಆತಿಥೇಯ ಚೀನಾ ತಂಡಕ್ಕೆ ಬೆಳ್ಳಿ ಪದಕ

41 ವರ್ಷಗಳ ಬಳಿಕ ಚಿನ್ನ

ಹಾಂಗ್‌ಝೌ (ಪಿಟಿಐ): ಭಾರತದ ಈಕ್ವೆಸ್ಟ್ರಿಯನ್ ತಂಡ ಏಷ್ಯನ್ ಕ್ರೀಡಾಕೂಟದ ಡ್ರೆಸಾಜ್ ವಿಭಾಗದಲ್ಲಿ ಚಿನ್ನ ಗೆದ್ದು ಐತಿಹಾಸಿಕ ಸಾಧನೆ ಮಾಡಿತು.

ದಿವ್ಯಕೃತಿ ಸಿಂಗ್, ಹೃದಯ್ ವಿಪುಲ್, ಸುದೀಪ್ತಿ ಹಜೇಲಾ ಮತ್ತು ಅನುಷ್ ಅಗರವಾಲ್ ಅವರನ್ನೊಳಗೊಂಡ ತಂಡ ಮಂಗಳವಾರ ನಡೆದ ಸ್ಪರ್ಧೆಯಲ್ಲಿ ಒಟ್ಟು 209.205 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆಯಿತು.

204.882 ಪಾಯಿಂಟ್ಸ್‌ಗಳೊಂದಿಗೆ ಆತಿಥೇಯ ಚೀನಾ ಬೆಳ್ಳಿ ಗೆದ್ದುಕೊಂಡರೆ, 204.852 ಪಾಯಿಂಟ್ಸ್ ಗಳಿಸಿದ ಹಾಂಗ್‌ಕಾಂಗ್ ಮೂರನೇ ಸ್ಥಾನ ತನ್ನದಾಗಿಸಿಕೊಂಡಿತು.

ಏಷ್ಯನ್ ಗೇಮ್ಸ್ ಇತಿಹಾಸದಲ್ಲಿ ಡ್ರೆಸಾಜ್ ವಿಭಾಗದಲ್ಲಿ ಭಾರತ ಚಿನ್ನ ಜಯಿಸಿದ್ದು ಇದೇ ಮೊದಲು. ಈ ಹಿಂದೆ 1986ರ ಕೂಟದಲ್ಲಿ ಡ್ರೆಸಾಜ್‌ನಲ್ಲಿ ಕಂಚು ಲಭಿಸಿತ್ತು. ಈಕ್ವೆಸ್ಟ್ರಿಯನ್‌ನಲ್ಲಿ 1982ರ ನವದೆಹಲಿ ಕ್ರೀಡಾಕೂಟದಲ್ಲಿ ಭಾರತ ಕೊನೆಯದಾಗಿ ಚಿನ್ನ ಗೆದ್ದುಕೊಂಡಿತ್ತು.

ಆ ಕೂಟದಲ್ಲಿ ಈವೆಂಟಿಂಗ್ ಮತ್ತು ಟೆಂಟ್ ಪೆಗ್ಗಿಂಗ್‌ನಲ್ಲಿ ಮೂರು ಬಂಗಾರದ ಪದಕಗಳು ಬಂದಿದ್ದವು. ಇದೀಗ 41 ವರ್ಷಗಳ ಬಿಡುವಿನ ಬಳಿಕ ಚಿನ್ನ ಗೆಲ್ಲುವಲ್ಲಿ ಯಶಸ್ವಿಯಾಗಿದೆ.

ಭಾರತ ತಂಡವು ಟ್ರಯಲ್ಸ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾಗಲೇ ಪದಕದ ಭರವಸೆ ಮೂಡಿತ್ತು. ಏಷ್ಯಾಡ್‌ನಲ್ಲಿ ಈ ಹಿಂದೆ ಪದಕ ಗೆದ್ದ ತಂಡಗಳು ಗಳಿಸಿದ್ದಷ್ಟೇ ಸ್ಕೋರ್‌ಅನ್ನು ಟ್ರಯಲ್ಸ್‌ನಲ್ಲಿ ಕಲೆಹಾಕಿತ್ತು. ಆತ್ಮವಿಶ್ವಾಸದೊಂದಿಗೆ ಕಣಕ್ಕಿಳಿದ ಭಾರತದ ಸ್ಪರ್ಧಿಗಳು, ಪ್ರಬಲ ಚೀನಾ ಮತ್ತು ಹಾಂಗ್‌ಕಾಂಗ್ ತಂಡಗಳನ್ನು ಹಿಂದಿಕ್ಕಿದರು.

ಡ್ರೆಸಾಜ್ ಸ್ಪರ್ಧೆಯಲ್ಲಿ ವಿವಿಧ ಭಂಗಿಯ ನಡಿಗೆ, ಜಂಪಿಂಗ್ ಮತ್ತು ಓಟ ಒಳಗೊಂಡಂತೆ ಕುದುರೆ ನೀಡುವ ಪ್ರದರ್ಶನ ಮತ್ತು ಸವಾರನ ಕೌಶಲವನ್ನು ಆಧರಿಸಿ ಅಂಕಗಳನ್ನು ನೀಡಲಾಗುತ್ತದೆ. ತಂಡದ ನಾಲ್ವರು ಸ್ಪರ್ಧಿಗಳಲ್ಲಿ ಅತಿಹೆಚ್ಚು ಅಂಕಗಳನ್ನು ಪಡೆಯುವ ಮೂವರು ಸವಾರರ ಸ್ಕೋರ್‌ಗಳನ್ನು ಪರಿಗಣಿಸಿ ವಿಜೇತರನ್ನು ನಿರ್ಣಯಿಸಲಾಗುತ್ತದೆ.

ಚಿನ್ನ ಗೆದ್ದ ಭಾರತ ತಂಡದ ಸದಸ್ಯರಲ್ಲಿ 21 ವರ್ಷದ ಸುದೀಪ್ತಿ, ಅತ್ಯಂತ ಕಿರಿಯವರು. ಇಂದೋರ್‌ನ ಅವರು ಈಗ ಫ್ರಾನ್ಸ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ. 23 ವರ್ಷದ ದಿವ್ಯಕೃತಿ ಅವರು ಜೈಪುರದವರು. ಮುಂಬೈನ ವಿಪುಲ್ (25 ವರ್ಷ) ಲಂಡನ್ ವಿ.ವಿಯಿಂದ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಪದವಿ ಪಡೆದಿದ್ದಾರೆ.

ಕೋಲ್ಕತ್ತದ ಅನುಷ್ (23 ವರ್ಷ) ಈಗ ಜರ್ಮನಿಯಲ್ಲಿ ನೆಲೆಸಿದ್ದಾರೆ. ಅವರು 2022 ರಲ್ಲಿ ಡೆನ್ಮಾರ್ಕ್‌ನಲ್ಲಿ ನಡೆದಿದ್ದ ಈಕ್ವೆಸ್ಟ್ರಿಯನ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿರಲ್ಲದೆ, ಡ್ರೆಸಾಜ್ ವಿಭಾಗದಲ್ಲಿ ಸ್ಪರ್ಧಿಸಿದ ಭಾರತದ ಮೊದಲ ಪುರುಷ ಸ್ಪರ್ಧಿ ಎನಿಸಿಕೊಂಡಿದ್ದರು.

‘ಚಿನ್ನ ಗೆದ್ದಿರುವುದನ್ನು ನಂಬಲು ಆಗುತ್ತಿಲ್ಲ. ನಾವು ನಾಲ್ಕು ಮಂದಿಗೂ ಇದು ಸುಲಭದ ಪಯಣ ಆಗಿರಲಿಲ್ಲ. ಸಣ್ಣ ವಯಸ್ಸಿನಲ್ಲೇ ಯುರೋಪ್‌ನ ದೇಶಗಳಿಗೆ ತೆರಳಿ ತರಬೇತಿ ಪಡೆದಿದ್ದೇವೆ. ಕುಟುಂಬ ಸದಸ್ಯರಿಂದ ದೂರವುಳಿದು ಹಲವು ವರ್ಷ ಕಠಿಣ ಪರಿಶ್ರಮ ಪಟ್ಟಿದ್ದು, ಸಾಕಷ್ಟು ತ್ಯಾಗ ಮಾಡಿದ್ದೇವೆ’ ಎಂದು ಸುದೀಪ್ತಿ ಪ್ರತಿಕ್ರಿಯಿಸಿದ್ದಾರೆ.



ಈಕ್ವೆಸ್ಟ್ರಿಯನ್‌ನಲ್ಲಿ ಚಿನ್ನ ಗೆದ್ದ ಭಾರತ ತಂಡದ ಸದಸ್ಯ ವಿಪುಲ್ ಹೃದಯ್ –ಎಎಫ್‌ಪಿ ಚಿತ್ರ

ಪದಕ ಪಟ್ಟಿ (ಅಗ್ರ 10 ದೇಶ)

ರ‍್ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	53	29	13	95
2	ದಕ್ಷಿಣ ಕೊರಿಯಾ	14	16	19	49
3	ಜಪಾನ್	8	20	19	47
4	ಉಜ್ಬೇಕಿಸ್ತಾನ	5	6	11	22
5	ಹಾಂಗ್‌ಕಾಂಗ್	5	4	10	19
6	ಭಾರತ	3	4	7	14
7	ಇಂಡೊನೇಷ್ಯಾ	3	1	5	9
8	ಚೀನಾ ತೈಪೆ	2	3	3	8
9	ಥಾಯ್ಲೆಂಡ್	2	0	5	7
10	ಇರಾನ್	1	4	5	10

ವಾಲಿಬಾಲ್: ಪಾಕ್‌ಗೆ ಮಣಿದ ಭಾರತ

ಹಾಂಗ್‌ಝೌ (ಪಿಟಿಐ): ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ಎದುರು 0–3 ಸೆಟ್‌ಗಳಿಂದ ಸೋತ ಭಾರತ, ಏಷ್ಯನ್ ಗೇಮ್ಸ್ ವಾಲಿಬಾಲ್‌ನಲ್ಲಿ ಆರನೇ ಸ್ಥಾನ ಗಳಿಸಿತು. ಮಂಗಳವಾರ ನಡೆದ ಪಂದ್ಯದ ಮೂರೂ ಸೆಟ್‌ಗಳಲ್ಲಿ ಮೇಲುಗೈ ಸಾಧಿಸಿದ ಪಾಕ್ ತಂಡ ಒಂದು ಗಂಟೆ 14 ನಿಮಿಷಗಳಲ್ಲಿ 25–21, 25–20, 25–23 ರಿಂದ ಜಯಗಳಿಸಿತು.

ಭಾರತ ತಂಡ ವಾಲಿಬಾಲ್‌ನಲ್ಲಿ ಸಿಹಿ–ಕಹಿ ಎರಡನ್ನೂ ಉಂಡಿತು. ಲೀಗ್ ಹಂತದಲ್ಲಿ ಕಾಂಬೋಡಿಯಾ ಮೇಲೆ 3–0 ಯಿಂದ ಜಯಗಳಿಸಿದ್ದ ಭಾರತ ನಂತರ 2018ರ ಕ್ರೀಡೆಗಳ ಬೆಳ್ಳಿ ವಿಜೇತ ದಕ್ಷಿಣ ಕೊರಿಯಾವನ್ನು 3–2 ರಿಂದ ಸೋಲಿಸಿ ಗಮನ ಸೆಳೆದಿತ್ತು. ಅಗ್ರ 12ರ ಪಂದ್ಯದಲ್ಲಿ ಕಳೆದ ಕ್ರೀಡೆಗಳ ಕಂಚಿನ ಪದಕ ವಿಜೇತ ಚೀನಾ ತೈಪೆ ಮೇಲೆ ಜಯಗಳಿಸಿತ್ತು. ಆದರೆ ಅಗ್ರ ಆರು ತಂಡಗಳ ಸೆಣಸಾಟದಲ್ಲಿ ಜಪಾನ್‌ಗೆ ಸೋತು ಪದಕ ವಂಚಿತವಾಯಿತು. ಪಾಕ್ ವಿರುದ್ಧ ಸೋಲಿನಿಂದಾಗಿ ಆರನೇ ಸ್ಥಾನಕ್ಕೆ ಸರಿದಿದೆ. ಜಕಾರ್ತ (2018) ಕ್ರೀಡೆಗಳಲ್ಲಿ ಭಾರತ 12ನೇ ಸ್ಥಾನ ಪಡೆದಿತ್ತು. ಭಾರತ ಮಹಿಳಾ ತಂಡ ತನ್ನ ಅಭಿಯಾನವನ್ನು ಶನಿವಾರ ಉತ್ತರ ಕೊರಿಯಾ ವಿರುದ್ಧ ಆರಂಭಿಸಲಿದೆ.

ಪುರುಷರ ವಿಭಾಗದಲ್ಲಿ ಇಬಾದ್ ಅಲಿಗೆ ಕಂಚಿನ ಪದಕ

ನೇಹಾಗೆ ‘ಸೇಲಿಂಗ್ ಸಿಲ್ವರ್’



ವಿಂಡ್ ಸರ್ಫರ್ ಆರ್‌ಎಸ್:ಎಕ್ಸ್ ವಿಭಾಗದಲ್ಲಿ ಕಂಚು ಗೆದ್ದ ಇಬಾದ್ ಅಲಿ– ಪಿಟಿಐ ಚಿತ್ರ

ನಿಂಗ್ಬೊ, ಚೀನಾ (ಪಿಟಿಐ): ಭಾರತದ ಸೇಲಿಂಗ್ ಪಟು ನೇಹಾ ಠಾಕೂರ್ ಮಂಗಳವಾರ ಬೆಳ್ಳಿ ಪದಕ ಜಯಿಸಿದರೆ, ಇಬಾದ್ ಅಲಿ ಕಂಚು ತಮ್ಮದಾಗಿಸಿಕೊಂಡರು.

ನೇಹಾ ಅವರ ಸಾಧನೆ ಡಿಂಗಿ ಐಎಲ್‌ಸಿಎ-4 ಬಾಲಕಿಯರ ವಿಭಾಗದಲ್ಲಿ ಮೂಡಿಬಂತು. ಇಬಾದ್ ಅವರು ಪುರುಷರ ವಿಂಡ್‌ಸರ್ಫರ್ ಆರ್‌ಎಸ್:ಎಕ್ಸ್ ವಿಭಾಗದಲ್ಲಿ ಮೂರನೇ ಸ್ಥಾನ ಪಡೆದರು.

ಭೋಪಾಲದ ನ್ಯಾಷನಲ್ ಸೇಲಿಂಗ್ ಸ್ಕೂಲ್ ವಿದ್ಯಾರ್ಥಿನಿಯಾಗಿರುವ ನೇಹಾ ಅವರು 27 ಸ್ಕೋರ್‌ಗಳನ್ನು ಗಳಿಸಿ ಎರಡನೇ ಸ್ಥಾನ ಪಡೆದರು. ಥಾಯ್ಲೆಂಡಿನ ನೊಪೆಸಾರ್ನ್ ಕುಂಬೂಜಾನ್ (16 ಸ್ಕೋರ್) ಚಿನ್ನ ಗೆದ್ದರು. ಸಿಂಗಪುರ್ ಕಿಯಾರಾ ಮೇರಿ ಕಾರ್ಲೈಲ್ 28 ಸ್ಕೋರ್‌ನೊಂದಿಗೆ ಕಂಚು ಪಡೆದರು.

ನೇಹಾ ಭಾಗವಹಿಸಿದ್ದ ವಿಭಾಗದಲ್ಲಿ ಒಟ್ಟು 11 ರೇಸ್‌ಗಳಿದ್ದವು. ಅವೆಲ್ಲದರಿಂದ ಒಟ್ಟು 32 ಪಾಯಿಂಟ್‌ಗಳನ್ನು ಕಲೆಹಾಕಿದರು. ಐದನೇ ರೇಸ್‌ನಲ್ಲಿ ಅವರು ಕೇವಲ 5 ಅಂಕ ಗಳಿಸಿದ್ದರು. ಎಲ್ಲ ರೇಸ್‌ಗಳ ಪೈಕಿ ಅತ್ಯಂತ ಕನಿಷ್ಠ ಅಂಕ ಪಡೆದ ರೇಸ್‌ಗಳನ್ನು ಒಟ್ಟು ಪಾಯಿಂಟ್‌ಗಳಿಂದ ಕಳೆಯಲಾಗುತ್ತದೆ ಮತ್ತು ಸ್ಕೋರ್ ಘೋಷಿಸಲಾಗುತ್ತದೆ. ಅತಿಕಡಿಮೆ ನೆಟ್ ಸ್ಕೋರ್ ಪಡೆದವರನ್ನು ವಿಜಯಿ ಎಂದು ಘೋಷಿಸಲಾಗುತ್ತದೆ.

ನೇಹಾ ಅವರು ಒನ್ ಡಿಸೈನ್ ಡಿಂಘಿ ಕ್ಲಾಸ್ ಲೇಸರ್ ಸೀರಿಸ್ ಹಾಯಿದೋಣಿಯನ್ನು ರೇಸ್‌ಗೆ ಬಳಸಿದ್ದರು. ಐಎಲ್‌ಸಿಎ–4 ವಿಭಾಗದಲ್ಲಿ 17 ವರ್ಷಕ್ಕಿಂತ ಕೆಳಗಿನ ಬಾಲಕಿಯರಿಗೆ ಮಾತ್ರ ಸ್ಪರ್ಧಿಸಲು ಅವಕಾಶವಿದೆ. ನೇಹಾ ಕಳೆದ ವರ್ಷ ಅಬುಧಾಬಿಯಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು.

ಅಲಿ ಅವರ ಸ್ಪರ್ಧಿಸಿದ ವಿಂಡ್ ಸರ್ಫರ್ ಆರ್‌ಎಸ್:ಎಕ್ಸ್ ವಿಭಾಗದಲ್ಲಿ ಒಟ್ಟು 14 ರೇಸ್‌ಗಳಿದ್ದವು. ಅವರು 52 ಸ್ಕೋರ್‌ಗಳೊಂದಿಗೆ ಮೂರನೇ ಸ್ಥಾನ ಗಳಿಸಿದರು. ಕೊರಿಯಾದ ವೊನ್‌ವೂ ಚೊ ಮತ್ತು ಥಾಯ್ಲೆಂಡ್‌ನ ನತ್ತಪೊಂಗ್ ಫೊನೊಫರತ್ ಅವರು ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಜಯಿಸಿದರು.

ಭಾರತದ ಸ್ಪರ್ಧಿ ಒಟ್ಟು 59 ಪಾಯಿಂಟ್ಸ್ ಕಲೆಹಾಕಿದರು. ಎರಡು ಮತ್ತು ಮೂರನೇ ರೇಸ್ ಪೂರ್ಣಗೊಳಿಸಲು ವಿಫಲರಾದ್ದರಿಂದ ಒಟ್ಟು ಪಾಯಿಂಟ್ಸ್‌ನಿಂದ ಏಳು ಪಾಯಿಂಟ್ಸ್‌ಗಳನ್ನು ಕಳೆಯಲಾಯಿತು. ಬೆಳ್ಳಿ ಗೆದ್ದ ಸ್ಪರ್ಧಿ ಮತ್ತು ಇಬಾದ್ ಅವರ ನಡುವೆ 23 ಪಾಯಿಂಟ್ಸ್‌ಗಳ ಭಾರಿ ಅಂತರ ಕಂಡುಬಂತು.



ಕೋಚ್ ಜತೆ ನೇಹಾ ಠಾಕೂರ್ –ಪಿಟಿಐ ಚಿತ್ರ

ಟೆನಿಸ್: ರಾಮಕುಮಾರ್, ರುತುಜಾ ನಿರ್ಗಮನ

ಎಂಟರ ಘಟ್ಟಕ್ಕೆ ಸುಮಿತ್

ಹಾಂಗ್‌ಝೌ (ಪಿಟಿಐ): ಭಾರತದ ಸುಮಿತ್ ನಗಾಲ್ ಅವರು ಭರ್ಜರಿ ಸರ್ವ್‌ಗಳಿಗೆ ಹೆಸರಾದ ಬೀಬಿಟ್ ಝುಕಯೇವ್ ಅವರನ್ನು ಸೋಲಿಸಿ ಏಷ್ಯನ್ ಗೇಮ್ಸ್ ಟೆನಿಸ್ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ತಲುಪಿದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಅಂಕಿತಾ ರೈನಾ ಹೆಚ್ಚಿನ ಪ್ರಯಾಸವಿಲ್ಲದೇ ಆದಿತ್ಯಾ ಪಿ.ಕರುಣಾರತ್ನೆ ಅವರನ್ನು ಹಿಮ್ಮೆಟ್ಟಿಸಿ ಮಂಗಳವಾರ ಎಂಟರ ಘಟ್ಟ ತಲುಪಿದರು.

ತೀವ್ರ ಹೋರಾಟದ ಪಂದ್ಯದಲ್ಲಿ ಕಜಕಸ್ತಾನದ ಝುಕಯೇವ್ ಅವರು ಭರ್ಜರಿ ಸರ್ವ್‌ಗಳನ್ನೇನೊ ಮಾಡಿದರು. ಆದರೆ ಹೊಡೆತಗಳನ್ನು ಉತ್ತಮವಾಗಿ ನಿಯಂತ್ರಿಸಿದ ನಗಾಲ್ 7–6 (9), 6–4 ರಿಂದ ಪಂದ್ಯವನ್ನು ಗೆದ್ದರು. ಕೋರ್ಟ್‌ನಲ್ಲಿ ಚುರುಕಾದ ಓಡಾಟ ಮತ್ತು ಹೊಡೆತಗಳಲ್ಲಿ ಚಾಕಚಕ್ಯತೆ 26 ವರ್ಷದ ನಗಾಲ್ ಗೆಲುವಿಗೆ ಸಹಕಾರಿಯಾಯಿತು.

ಭಾರತದ ಅಗ್ರಮಾನ್ಯ ಆಟಗಾರ್ತಿ ಅಂಕಿತಾ ಮೂರನೇ ಸುತ್ತಿನಲ್ಲಿ 6–1, 6–2 ರಿಂದ ಹಾಂಗ್‌ಕಾಂಗ್‌ನ ಕರುಣಾರತ್ನೆ ಅವರನ್ನು ಸದೆಬಡಿದರು. ವಿಶ್ವ ರ‍್ಯಾಂಕಿಂಗ್ ಪಟ್ಟಿಯಲ್ಲಿ 198ನೇ ಸ್ಥಾನದಲ್ಲಿರುವ ಅಂಕಿತಾ ಅವರಿಗೆ ಜಪಾನ್‌ನ ಹಾರುಕಾ ಕಾಜಿ ಮುಂದಿನ ಎದುರಾಳಿ ಆಗಿದ್ದಾರೆ.

ಟೆನಿಸ್‌ನಲ್ಲಿ ಸೆಮಿಫೈನಲ್ ತಲುಪಿದವರಿಗೆ ಕಂಚಿನ ಪದಕ ನೀಡಲಾಗುತ್ತದೆ.

ಉಳಿದಂತೆ ರಾಮಕುಮಾರ್ ರಾಮನಾಥನ್ ಮತ್ತು ರುತುಜಾ ಭೋಸ್ಲೆ ಅವರು ಸಿಂಗಲ್ಸ್‌ನಲ್ಲಿ ಹೊರಬಿದ್ದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಫಿಲಿಪೀನ್ಸ್‌ನ ಅಲೆಕ್ಸಾಂಡ್ರಾ ಇಯಾಲಾ 7–6 (5), 6–2 ರಿಂದ ರುತುಜಾ ಅವರನ್ನು ಹಿಮ್ಮೆಟ್ಟಿಸಿದರು. ಹೋರಾಟ ಕಂಡ ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ಜಪಾನ್‌ನ ಯೊಸುಕೆ ವತಾನುಕಿ 7–5, 6–7 (3), 7–5 ರಿಂದ ರಾಮಕುಮಾರ್ ಅವರನ್ನು ಮಣಿಸಿದರು. ವತಾನುಕಿ 78ನೇ ಕ್ರಮಾಂಕ ಹೊಂದಿದ್ದಾರೆ.



ಸುಮಿತ್ ನಗಾಲ್ –ಪಿಟಿಐ ಚಿತ್ರ

ಮಹಿಳೆಯರ ಡಬಲ್ಸ್‌ನಲ್ಲಿ ರುತುಜಾ– ಕರ್ಮನ್ ಕೌರ್ ಥಂಡಿ ಜೋಡಿ, ಥಾಯ್ಲೆಂಡ್ ಆಟಗಾರ್ತಿಯರಿಗೆ ಮಣಿಯಿತು.

ಈಜು: ರಾಷ್ಟ್ರೀಯ ದಾಖಲೆ ಸ್ಥಾಪಿಸಿದ ಭಾರತಕ್ಕೆ 5ನೇ ಸ್ಥಾನ

ಹಾಂಗ್‌ಝೌ (ಎಎಫ್‌ಪಿ): ‘ಬ್ರೆಸ್ಟ್‌ಸ್ಟ್ರೋಕ್ ದೊರೆ’ ಎನಿಸಿರುವ ಕ್ವಿನ್ ಹೈಯಾಂಗ್ ಅವರ ಅತ್ಯುತ್ತಮ ಪ್ರದರ್ಶನದ ನೆರವಿನಿಂದ ಚೀನಾ ತಂಡ ಏಷ್ಯನ್ ಗೇಮ್ಸ್‌ನ ಈಜು ಸ್ಪರ್ಧೆಯ 4x100 ಮೀ. ಮೆಡ್ಲೆ ರಿಲೆಯಲ್ಲಿ ಏಷ್ಯನ್ ದಾಖಲೆಯೊಡನೆ ಚಿನ್ನ ಗೆದ್ದುಕೊಂಡಿತು. ಬೆಳಿಗ್ಗೆ ಹೀಟ್ಸ್‌ನಲ್ಲಿ ರಾಷ್ಟ್ರೀಯ ದಾಖಲೆ ಸ್ಥಾಪಿಸಿದ್ದ ಭಾರತ ತಂಡ ಮಂಗಳವಾರ ಸಂಜೆ ನಡೆದ ಈ ಸ್ಪರ್ಧೆಯ ಫೈನಲ್‌ನಲ್ಲಿ ಐದನೇ ಸ್ಥಾನಕ್ಕೆ ಸರಿಯಿತು.

ಕ್ವಿನ್, ಷು ಜಿಯಾವು, ವಾಂಗ್ ಚಾಂಗ್‌ಹಾವೊ ಮತ್ತು ಪಾನ್ ಝೂನ್ಲೆ ಅವರಿದ್ದ ತಂಡ 3ನಿ.27.1 ಸೆಕೆಂಡುಗಳಲ್ಲಿ ಸ್ಪರ್ಧೆ ಪೂರೈಸಿ ಈಜುಕೊಳದಲ್ಲಿ ಚೀನಾ ಪಾರಮ್ಯವನ್ನು ಮುಂದುವರಿಸಿತು. ದಕ್ಷಿಣ ಕೊರಿಯಾ (3:32.05) ಮತ್ತು ಜಪಾನ್ (3:32.52) ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದ್ದು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದವು.

ಚೀನಾ ತೈಪೆ 3ನಿ.38.35 ಸೆ. ತೆಗೆದುಕೊಂಡರೆ, ಭಾರತ ತಂಡ (ಶ್ರೀಹರಿ ನಟರಾಜ್, ಲಿಖಿತ್ ಸೆಲ್ವರಾಜ್, ಸಜನ್ ಪ್ರಕಾಶ್ ಮತ್ತು ತನಿಶ್ ಜಾರ್ಜ್) 3ನಿ.40.20 ಸೆ.ಗಳಲ್ಲಿ ಗುರಿಮುಟ್ಟಿತು.

ಬೆಳಿಗ್ಗೆ ಒಂದನೇ ಹೀಟ್ಸ್‌ನಲ್ಲಿ ಭಾರತ ತಂಡ 3 ನಿ. 40.84 ಸೆ.ಗಳಲ್ಲಿ ಗುರಿತಲುಪಿ ರಾಷ್ಟ್ರೀಯ ದಾಖಲೆ ಸ್ಥಾಪಿಸಿತ್ತು. ಆ ಹಾದಿಯಲ್ಲಿ ಒಟ್ಟಾರೆ ನಾಲ್ಕನೇ ಉತ್ತಮ ಟೈಮಿಂಗ್‌ನೊಡನೆ ಫೈನಲ್‌ಗೆ ಅರ್ಹತೆ ಪಡೆದಿತ್ತು.

ಈ ಹಿಂದಿನ ದಾಖಲೆ (ನಟರಾಜ್, ಸಂದೀಪ್ ಸೆಜ್ವಾಲ್, ಸಜನ್ ಪ್ರಕಾಶ್, ಆ್ಯರನ್ ಡಿಸೋಜ ತಂಡದಿಂದ 3:44.94) 2018ರ ಕ್ರೀಡೆಗಳಲ್ಲಿ ಮೂಡಿಬಂದಿತ್ತು.

ಭಾರತದ ಪಲಕ್ ಜೋಶಿ ಮತ್ತು ಶಿವಾಂಗಿ ಶರ್ಮಾ ತಮ್ಮ ಸ್ಪರ್ಧೆಗಳಲ್ಲಿ ಫೈನಲ್‌ಗೇರಲು ವಿಫಲರಾದರು.

ಪಲಕ್, ಮಹಿಳೆಯರ 200 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ (ಕಾಲ: 2:25.81) 19 ಮಂದಿ ಪೈಕಿ 14ನೇ ಸ್ಥಾನ ಪಡೆದರೆ, ಶಿವಾಂಗಿ 100 ಮೀ. ಫ್ರೀಸ್ಟೈಲ್‌ನಲ್ಲಿ 58.31 ಸೆ.ಗಳಲ್ಲಿ ಗುರಿತಲುಪಿ 17ನೇ ಸ್ಥಾನ ಗಳಿಸಿದರು.



ಜಿಮ್ನಾಸ್ಟಿಕ್ಸ್ ಹ್ಯಾಂಗ್‌ಝೌ ಏಷ್ಯನ್ ಕ್ರೀಡಾಕೂಟದ ಪುರುಷರ ಜಿಮ್ನಾಸ್ಟಿಕ್ಸ್‌ನ ಆಲ್ ರೌಂಡ್ ಸ್ಪರ್ಧೆಯಲ್ಲಿ ಉತ್ತರ ಕೊರಿಯಾದ ರಿ ವಿಚೋಲ್ ಅವರ ಪ್ರದರ್ಶನ –ಎಎಫ್‌ಪಿ ಚಿತ್ರ

ಫೆನ್ಸಿಂಗ್: ಭವಾನಿ ದೇವಿ ಪರಾಭವ

ಹಾಂಗ್‌ಝೌ (ಪಿಟಿಐ): ಫೆನ್ಸಿಂಗ್ ಸ್ಪರ್ಧೆಯಲ್ಲಿ ಭಾರತದ ಭವಾನಿ ದೇವಿ ಅವರ ಯಶಸ್ಸಿನ ಓಟಕ್ಕೆ ಕ್ವಾರ್ಟರ್ ಫೈನಲ್‌ನಲ್ಲಿ ತೆರೆಬಿತ್ತು.

ಮಂಗಳವಾರ ನಡೆದ ಮಹಿಳೆಯರ ಸೇಬರ್ ವಿಭಾಗದ ಹಣಾಹಣಿಯಲ್ಲಿ ಭವಾನಿ 7–15 ರಿಂದ ಆತಿಥೇಯ ಚೀನಾದ ಯಕಿ ಶಾವೊ ಎದುರು ಪರಾಭವಗೊಂಡರು.

ಮೊದಲ ಅವಧಿಯಲ್ಲಿ ಭಾರತದ ಫೆನ್ಸರ್ ಮೂರು ‘ಟಚ್’ಗಳನ್ನು ಸಾಧಿಸಿದರೆ, ಚೀನಾದ ಎದುರಾಳಿ ಎಂಟು ‘ಟಚ್’ಗಳ ಮೂಲಕ 8–3 ರಲ್ಲಿ ಮೇಲುಗೈ ಪಡೆದರು. ಎರಡನೇ ಅವಧಿಯಲ್ಲಿ ಏಳು ಟಚ್‌ಗಳನ್ನು ಮಾಡಿದ ಶಾವೊ ಸೆಮಿಫೈನಲ್‌ಗೆ ಮುನ್ನಡೆದರು.

ಸೇಬರ್ ವಿಭಾಗದ ನಾಕೌಟ್ ಹಂತದ ಪೈಪೋಟಿಯಲ್ಲಿ ಮೊದಲು 15 ಟಚ್‌ಗಳನ್ನು ಮಾಡುವವರನ್ನು ವಿಜೇತರು ಎಂದು ಘೋಷಿಸಲಾಗುತ್ತದೆ. 30 ವರ್ಷದ ಭವಾನಿ ಲೀಗ್ ಹಂತದಲ್ಲಿ ಐವರನ್ನು ಮಣಿಸಿದ್ದರಲ್ಲದೆ, ಪ್ರಿ ಕ್ವಾರ್ಟರ್‌ನಲ್ಲಿ 15–9 ರಿಂದ ತೊನ್‌ಖಾವ್ ಫೊಕೆವ್ ವಿರುದ್ಧ ಗೆದ್ದಿದ್ದರು.

ಪುರುಷರ ಹಾಕಿ: ಗೋಲು ಮಳೆಯಲ್ಲಿ ಮುಳುಗಿದ ಸಿಂಗಪುರ ತಂಡ

ಭಾರತಕ್ಕೆ ಮತ್ತೊಂದು ಸುಲಭ ಜಯ

ಹಾಂಗ್‌ಝೌ (ಪಿಟಿಐ): ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಮನದೀಪ್ ಸಿಂಗ್ ಅವರ ಹ್ಯಾಟ್ರಿಕ್ ಸಾಧನೆಗಳಿಂದ ಭಾರತ ತಂಡವು ಏಷ್ಯನ್ ಕ್ರೀಡಾಕೂಟದ ಪುರುಷರ ಹಾಕಿ ಪಂದ್ಯದಲ್ಲಿ ಸಿಂಗಪುರದ ವಿರುದ್ಧ ಗೋಲುಗಳ ಮಳೆ ಸುರಿಸಿತು. ಹರ್ಮನ್‌ಪ್ರೀತ್ ಸಿಂಗ್ ಬಳಗವು 16–1ರಿಂದ ಸಿಂಗಪುರ ವಿರುದ್ಧ ಗೆದ್ದಿತು.

ಗುಂಪಿನಲ್ಲಿ ಇದು ಭಾರತಕ್ಕೆ ಸತತ ಎರಡನೇ ಜಯ. ಹರ್ಮನ್‌ಪ್ರೀತ್ (24ನೇ ನಿಮಿಷ, 39ನಿ, 40ನಿ, 42ನಿ), ಮನದೀಪ್ (12ನಿ, 30ನಿ, 51ನಿ), ಅಭಿಷೇಕ್ (51ನೇ ನಿ, 52ನಿ), ವರುಣಕುಮಾರ್ (55ನಿ,, 56ನಿ), ಲಲಿತ್ ಕುಮಾರ್ ಉಪಾಧ್ಯಾಯ (16ನಿ), ಗುರ್ಜಂತ್ ಸಿಂಗ್ (22ನಿ), ವಿವೇಕ್ ಸಾಗರ್ ಪ್ರಸಾದ್ (23ನೇ ನಿ), ಮನ್‌ಪ್ರೀತ್ ಸಿಂಗ್ (37ನಿ) ಮತ್ತು ಶಂಶೇರ್ ಸಿಂಗ್ (38ನಿ) ಗೋಲು ಗಳಿಸಿದರು. ಸಿಂಗಪುರದ ಪರವಾಗಿ ಝಾಕಿ ಝುಲ್ಕರ್ನೈನ್ 53ನೇ ನಿಮಿಷದಲ್ಲಿ ಏಕೈಕ ಗೋಲು ಗಳಿಸಿದರು.

ಪಂದ್ಯದ ಆರಂಭದಿಂದಲೂ ಪಾರಮ್ಯ ಮೆರೆದ ಭಾರತ ತಂಡವು 12ನೇ ನಿಮಿಷದಲ್ಲಿ ಗೋಲಿನ ಖಾತೆ ತೆರೆಯಿತು. ಆರನೇ ನಿಮಿಷವೇ ಗೋಲು ಗಳಿಕೆಯ ಅವಕಾಶ ಕೈತಪ್ಪಿತ್ತು. ಸಿಂಗಪುರ ಗೋಲ್‌ಕೀಪರ್ ಸಂದರನ್ ಗುಗಾನ್ ಅವರು ಸುಖಜೀತ್ ಸಿಂಗ್ ಹೊಡೆದ ಚೆಂಡನ್ನು ತಡೆದರು. ಆದರೆ ನಂತರದಲ್ಲಿ ಭಾರತದ ಆಟಗಾರರ ದಾಳಿಯನ್ನು ಹಿಮ್ಮೆಟ್ಟಿಸಲು ಅವರಿಗೆ ಸಾಧ್ಯವಾಗಲಿಲ್ಲ. ಆದರೂ ಈ ಪಂದ್ಯದಲ್ಲಿ ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ಹೆಚ್ಚು ಗೋಲು ಗಳಿಸಲಿಲ್ಲ. 22 ಪೆನಾಲ್ಟಿ ಅವಕಾಶಗಳಲ್ಲಿ ಗೋಲುಗಳಾಗಿ ಪರಿವರ್ತಿತ ಗೊಂಡಿದ್ದು ಎಂಟು ಮಾತ್ರ!

ಅದರಲ್ಲಿ ವರುಣ್ ಅವರು ಸತತ ಎರಡು ಪೆನಾಲ್ಟಿ ಕಾರ್ನರ್‌ಗಳಲ್ಲಿ ಗೋಲು ದಾಖಲಿಸಿದರು.

ಗುಂಪಿನ ಮೊದಲ ಪಂದ್ಯದಲ್ಲಿ ಭಾರತವು 16–0 ಗೋಲುಗಳಿಂದ ಉಜ್ಬೇಕಿಸ್ತಾನ ವಿರುದ್ಧ ಗೆದ್ದಿತ್ತು. ಹರ್ಮನ್ ಬಳಗವು ಗುರುವಾರ ತನ್ನ ಮೂರನೇ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಜಪಾನ್ ತಂಡವನ್ನು ಎದುರಿಸಲಿದೆ. ಆ ಪಂದ್ಯದಲ್ಲಿ ಭಾರತದ ಸಾಮರ್ಥ್ಯಕ್ಕೆ ನಿಜವಾದ ಸವಾಲು ಎದುರಾಗಲಿದೆ. ಅದರಲ್ಲೂ ಪೆನಾಲ್ಟಿ ಕಾರ್ನರ್‌ಗಳಲ್ಲಿ ಗೋಲು ಗಳಿಕೆಯ ಅವಕಾಶಗಳನ್ನು ಬಳಸಿಕೊಳ್ಳುವ ಕೌಶಲಕ್ಕೆ ಹೆಚ್ಚು ಒತ್ತು ನೀಡಬೇಕಾದ ಸವಾಲು ಇದೆ.

ತಪ್ಪಿದ ಕಂಚಿನ ಪದಕ: ಭಾರತದ ತುಲಿಕಾ ಮಾನ್ ಅವರು ಮಹಿಳೆಯರ +78 ಕೆ.ಜಿ. ವಿಭಾಗದಲ್ಲಿ ಮಂಗಳವಾರ ಕಂಚಿನ ಪದಕಕ್ಕೆ ನಡೆದ ಸೆಣಸಾಟದಲ್ಲಿ ಮಂಗೋಲಿಯಾದ ಅಮರೈಖಾನ್ ಅದಿಯಸುರೆನ್ ಅವರಿಗೆ ಮಣಿದರು.

2022ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಬೆಳ್ಳಿಯ ಪದಕ ಗೆದ್ದಿದ್ದ 25 ವರ್ಷದ ತುಲಿಕಾ 0–10 ರಿಂದ ಸೋತರು. 78 ಕೆ.ಜಿ. ವಿಭಾಗದಲ್ಲಿ ಭಾರತದ ಇಂದುಬಾಲಾ ದೇವಿ ಮೈಬಂ ಸೋತರೆ, ಪುರುಷರ 100 ಕೆ.ಜಿ. ವಿಭಾಗದಲ್ಲಿಅವತಾರ್ ಸಿಂಗ್ ಗಾಯಗೊಂಡು ಕ್ವಾರ್ಟರ್‌ಫೈನಲ್ ಮತ್ತು ರಿಪಚೇಜ್ ಪಂದ್ಯ ಬಿಟ್ಟುಕೊಟ್ಟರು.



ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತ ಹಾಕಿ ತಂಡದ ಆಟಗಾರರು– ಪಿಟಿಐ ಚಿತ್ರ

ಗೆಲುವಿನ ಅಭಿಯಾನ: ಮಹಿಳಾ ಪಡೆ ಸಜ್ಜು

ಹಾಂಗ್‌ಝೌ (ಪಿಟಿಐ): ಅಗ್ರ ಶ್ರೇಯಾಂಕದ ಭಾರತ ಮಹಿಳೆಯರ ಹಾಕಿ ತಂಡವು ಏಷ್ಯನ್ ಕ್ರೀಡಾಕೂಟದಲ್ಲಿ ಬುಧವಾರ ಸಿಂಗಪುರ ವಿರುದ್ಧ ಗೆಲುವಿನ ಅಭಿಯಾನ ಆರಂಭಿಸಲು ಸನ್ನದ್ಧವಾಗಿದೆ.

ಸವಿತಾ ಪೂನಿಯಾ ನೇತೃತ್ವದ ಭಾರತ ತಂಡವು ‘ಎ’ ಗುಂಪಿನಲ್ಲಿದೆ. ಸಿಂಗಪುರ, ಮಲೇಷ್ಯಾ, ಹಾಂಗ್‌ಕಾಂಗ್ ಮತ್ತು ಕೊರಿಯಾ ಈ ಗುಂಪಿನಲ್ಲಿರುವ ಇತರ ತಂಡಗಳು. ‘ಬಿ’ ಗುಂಪಿನಲ್ಲಿ ಚೀನಾ, ಜಪಾನ್, ಇಂಡೊನೇಷ್ಯಾ, ಕಜಕಿಸ್ತಾನ ಮತ್ತು ಥಾಯ್ಲೆಂಡ್ ತಂಡಗಳಿವೆ.

ವಿಶ್ವದಲ್ಲಿ ಏಳನೇ ರ‍್ಯಾಂಕ್ ಹೊಂದಿರುವ ಭಾರತವು ಸೆ.29ರಂದು ಮಲೇಷ್ಯಾ, ಅ.1ರಂದು ಕೊರಿಯಾ ಮತ್ತು ಅ.3ರಂದು ಹಾಂಗ್‌ಕಾಂಗ್ ವಿರುದ್ಧ ಸೆಣಸಲಿದೆ. ಗುಂಪು ಹಂತದಲ್ಲಿ ಅಗ್ರಸ್ಥಾನ ಪಡೆಯುವ ಎರಡು ತಂಡಗಳು ಸೆಮಿಫೈನಲ್ ಪ್ರವೇಶಿಸಲಿವೆ.

ಕಳೆದ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿರುವ ಭಾರತ ಮಹಿಳಾ ತಂಡವು ಇಲ್ಲಿ ಮುಖ್ಯ ಕೋಚ್ ಯಾನೆಕ್ ಶೋಪ್‌ಮನ್ ಅವರ ಮಾರ್ಗದರ್ಶನದಲ್ಲಿ ಚಿನ್ನ ಗೆದ್ದು, ಪ್ಯಾರಿಸ್ ಒಲಂಪಿಕ್ಸ್‌ಗೆ ನೇರ ಪ್ರವೇಶ ಪಡೆಯುವ ಹುಮ್ಮಸ್ಸಿನಲ್ಲಿದೆ.

ಕ್ರೀಡಾಕೂಟದಲ್ಲಿ ಇಂದು

ಈಕ್ವೆಸ್ಟ್ರಿಯನ್: ಡ್ರೆಸ್ಸೇಜ್ ವಿಭಾಗ; ಸೆಮಿಫೈನಲ್; ಬೆಳಿಗ್ಗೆ 5.30 (ನೀನಾ ವೆಂಕಟೇಶ್, ಅನನ್ಯಾ ನಾಯಕ್)
ವುಶು: ಪುರುಷರ ಫೈನಲ್: ಬೆಳಿಗ್ಗೆ 6.30 (ರೋಹಿತ್ ಯಾದವ್)
ಸ್ಕ್ವಾಷ್: ಮಹಿಳೆಯರ ಆರಂಭಿಕ ಸುತ್ತು; ಬೆಳಿಗ್ಗೆ 7.30 (ತನ್ವಿ ಖನ್ನಾ), ಪುರುಷರ ಆರಂಭಿಕ ಸುತ್ತು; ಬೆಳಿಗ್ಗೆ 10
ಮಹಿಳೆಯರ ಈಜು: ಮೊದಲ ಸುತ್ತು; ಫೈನಲ್; ಬೆಳಿಗ್ಗೆ 7.30 (ಮಾನಾ ಪಟೇಲ್, ಎ.ಕೆ.ಲಿನೇಶಾ)
ಪುರುಷರ ಈಜು: 200 ಮೀ. ಫ್ರೀಸ್ಟೈಲ್; ಬೆಳಿಗ್ಗೆ 7.30 (ಶ್ರೀಹರಿ ನಟರಾಜ್, ತನಿಷ್ ಜಾರ್ಜ್ ಮ್ಯಾಥ್ಯೂ)
ಟೇಬಲ್ ಟೆನಿಸ್: ಮೊದಲ ಮತ್ತು 2ನೇ ಸುತ್ತು; ಬೆಳಿಗ್ಗೆ 7.30
ಟೆನಿಸ್: ಸಿಂಗಲ್ಸ್ ಸ್ಪರ್ಧೆ; ಬೆಳಿಗ್ಗೆ 10.30 (ಸುಮಿತ್ ನಗಾಲ್)
ಮಹಿಳಾ ಹಾಕಿ: ಭಾರತ–ಸಿಂಗಪುರ; ಬೆಳಿಗ್ಗೆ 10.30
ಮಹಿಳೆಯರ ಬ್ಯಾಸ್ಕೆಟ್‌ಬಾಲ್: ಭಾರತ– ಚೀನಾ; ಬೆಳಿಗ್ಗೆ 11.30. ಪುರುಷರ ತಂಡ; ಭಾರತ–ಮಕಾವ್; ಸಂಜೆ 5.30
ಜಿಮ್ನಾಸ್ಟಿಕ್ಸ್: ಫೈನಲ್; ಮಧ್ಯಾಹ್ನ 12.30 (ಪ್ರಣತಿ ನಾಯಕ್)
ಬಾಕ್ಸಿಂಗ್: ಪುರುಷರ ವಿಭಾಗ; 2ನೇ ಸುತ್ತು; ಬೆಳಿಗ್ಗೆ 11.30
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್, ಬೆಳಿಗ್ಗೆ 5.30ರಿಂದ

ವುಶು: ಸೂರ್ಯ, ಸೂರಜ್‌ಗೆ ಸೋಲು

ಹಾಂಗ್‌ಝೌ (ಪಿಟಿಐ): ಭಾರತದ ವುಶು ಸ್ಪರ್ಧಿಗಳಾದ ಸೂರ್ಯ ಭಾನು ಪ್ರತಾಪ್ ಮತ್ತು ಸೂರಜ್ ಯಾದವ್ ಅವರು ಕ್ರಮವಾಗಿ ಪುರುಷರ 60 ಹಾಗೂ 70 ಕೆ.ಜಿ. ವಿಭಾಗಗಳ ಕ್ವಾರ್ಟರ್ ಫೈನಲ್‌ನಲ್ಲಿ ಸೋತರು.

2018ರ ಗೇಮ್ಸ್‌ನಲ್ಲಿ ಕಂಚು ಗೆದ್ದಿದ್ದ ಸೂರ್ಯ, 0–2 ರಿಂದ ಕೊರಿಯಾದ ಕಿಮ್ ಮಿನ್‌ಸೂ ಎದುರು ಪರಾಭವಗೊಂಡರು. ಪ್ರಿ ಕ್ವಾರ್ಟರ್‌ನಲ್ಲಿ ಅವರು 2–1 ರಿಂದ ಉಜ್ಬೆಕಿಸ್ತಾನದ ಖಯದ್ರೋವ್ ಇಸ್ಲೊಮ್‌ಬೆಕ್ ಅವರನ್ನು ಮಣಿಸಿದ್ದರು.

ಸೂರಜ್ ಅವರು ಎಂಟರಘಟ್ಟದಲ್ಲಿ 2–3 ರಿಂದ ಅಫ್ಘಾನಿಸ್ತಾನದ ಖಾಲಿದ್ ಹೊತಕ್ ಎದುರು ಸೋತರು.



ಇಂಡೊನೇಷ್ಯಾದ ಅಸ್ರಿ ಉದಿನ್ ಅವರನ್ನು ಮಣಿಸಿದ ಸಚಿನ್ (ಬಲ) –ಪಿಟಿಐ ಚಿತ್ರ

ಬಾಕ್ಸಿಂಗ್: ನರೇಂದರ್, ಸಚಿನ್ ಮುನ್ನಡೆ

ಹಾಂಗ್‌ಝೌ (ಪಿಟಿಐ): ಭಾರತದ ನರೇಂದರ್ ಬೆರ್ವಾಲ್ (+92 ಕೆ.ಜಿ) ಮತ್ತು ಸಚಿನ್ ಸಿವಾಚ್ (57 ಕೆ.ಜಿ) ಅವರು ಮಂಗಳವಾರ ಏಷ್ಯನ್ ಕ್ರೀಡಾಕೂಟದ ಬಾಕ್ಸಿಂಗ್‌ನಲ್ಲಿ ಕ್ರಮವಾಗಿ ಕ್ವಾರ್ಟರ್‌ಫೈನಲ್ ಮತ್ತು ಪ್ರೀಕ್ವಾರ್ಟರ್‌ಫೈನಲ್ ತಲುಪಿದರು.

23 ವರ್ಷದ ಸಚಿನ್ 5–0 ಯಿಂದ ಇಂಡೊನೇಷ್ಯಾದ ಅಸ್ರಿ ಉದಿನ್ ಅವರನ್ನು ಸೋಲಿಸಿ 16ರ ಸುತ್ತು ತಲುಪಿದರು. ನರೇಂದರ್ ಅವರು ಮೊದಲ ಸುತ್ತಿನಲ್ಲಿ ನಾಕೌಟ್ ಆಧಾರದ ಮೇಲೆ ಕಿರ್ಗಿಸ್ತಾನದ ಇಲ್ಕೊರೊ ಯುಲು ಉಮಟ್‌ಬೆಕ್ ಅವರನ್ನು ಸೋಲಿಸಿದರು. ಅವರ ಮುಂದಿನ ಎದುರಾಳಿ ಇರಾನ್‌ನ ರಮೀಜನ್‌ಪುರ್ ದೆಲಾವರ್.

ಎದುರಾಳಿಯ ಸತತ ಆಕ್ರಮಣವನ್ನು ಚುರುಕಿನ ಫುಟ್‌ವರ್ಕ್ ಮೂಲಕ ಸುಲಭವಾಗಿ ನಿಭಾಯಿಸಿದ ಸಚಿನ್ ಆರಂಭದಿಂದಲೇ ಮೇಲುಗೈ ಸಾಧಿಸಿದರು. 16ರ ಸುತ್ತಿನಲ್ಲಿ ಕುವೈತ್‌ನ ತುರ್ಕಿ ಅಬುಕುತಲಿಬ್ ಅವರನ್ನು ಎದುರಿಸಲಿದ್ದಾರೆ.

ಕ್ರಿಕೆಟ್: ತಂಡಕ್ಕೆ ಮರಳಿದ ವಿರಾಟ್, ರೋಹಿತ್ ● ಶುಭಮನ್ ಗಿಲ್‌ಗೆ ವಿಶ್ರಾಂತಿ

ಕ್ಲೀನ್‌ಸ್ವೀಪ್ ಮೇಲೆ ಭಾರತ ಕಣ್ಣು

ರಾಜ್‌ಕೋಟ್ (ಪಿಟಿಐ/ಎಎಫ್‌ಪಿ): ವಿಶ್ವಕಪ್ ಟೂರ್ನಿಗೂ ಮುನ್ನ ತನ್ನ ಪಾಲಿನ ಕೊನೆಯ ಏಕದಿನ ಪಂದ್ಯ ಆಡಲು ಭಾರತ ತಂಡ ಸಿದ್ಧವಾಗಿದೆ. ಪ್ರವಾಸಿ ಆಸ್ಟ್ರೇಲಿಯಾ ಎದುರು ಬುಧವಾರ ಕಣಕ್ಕಿಳಿಯಲಿದೆ. ಮೊದಲೆರಡು ಪಂದ್ಯಗಳಲ್ಲಿ ಜಯಿಸಿರುವ ಭಾರತ ಇದೀಗ ಆಸ್ಟ್ರೇಲಿಯಾದ ಎದುರು ಚಾರಿತ್ರಿಕ 3–0 ಸರಣಿ ಜಯ ಸಾಧಿಸುವ ತವಕದಲ್ಲಿದೆ.

ಎರಡೂ ಪಂದ್ಯಗಳಲ್ಲಿ ಭಾರತ ತಂಡವನ್ನು ಕನ್ನಡಿಗ ಕೆ.ಎಲ್. ರಾಹುಲ್ ಮುನ್ನಡೆಸಿದ್ದರು. ಆಗ ವಿಶ್ರಾಂತಿ ಪಡೆದಿದ್ದ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಸ್ಪಿನ್ನರ್ ಕುಲದೀಪ್ ಯಾದವ್ ಅವರು ತಂಡಕ್ಕೆ ಮರಳಿದ್ದಾರೆ.

ಆದರೆ ವೈಯಕ್ತಿಕ ಕಾರಣ ಮತ್ತು ವೈರಾಣು ಜ್ವರದಿಂದಾಗಿ ಕೆಲವು ಆಟಗಾರರು ಈ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ. '13 ಆಟಗಾರರು ಮಾತ್ರ ಆಯ್ಕೆಗೆ ಲಭ್ಯರಿದ್ದಾರೆ' ಎಂದು ರೋಹಿತ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವೇಗದ ಬೌಲರ್‌ಗಳಾದ ಮೊಹಮ್ಮದ್ ಶಮಿ, ಶಾರ್ದೂಲ್ ಠಾಕೂರ್ ಹಾಗೂ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ವೈಯಕ್ತಿಕ ಕಾರಣಗಳಿಂದ ಮನೆಗೆ ಮರಳಿದ್ದಾರೆ. ಗಿಲ್ ಅವರಿಗೆ ವಿಶ್ರಾಂತಿ ನೀಡಲಾಗಿದ್ದು, ಗಾಯದಿಂದ ಚೇತರಿಸಿಕೊಳ್ಳದ ಅಕ್ಷರ್ ಪಟೇಲ್ ಅವರೂ ಬುಧವಾರ ಆಡುತ್ತಿಲ್ಲ.

ಎರಡೂ ಪಂದ್ಯಗಳಲ್ಲಿ ಆಡಿದ್ದ ಋತುರಾಜ್ ಗಾಯಕವಾಡ್ ಅವರು ಏಷ್ಯನ್ ಕ್ರೀಡಾಕೂಟದಲ್ಲಿ ಆಡಲು ಚೀನಾಕ್ಕೆ ತೆರಳುವರು.

ರೋಹಿತ್ ಮತ್ತು ಕೊಹ್ಲಿ ಮರಳಿರುವ ಕಾರಣ ಬ್ಯಾಟಿಂಗ್ ವಿಭಾಗದ ಬಲ ಹೆಚ್ಚಿದೆ. ಕಳೆದ ಪಂದ್ಯದಲ್ಲಿ ಶತಕ ಗಳಿಸಿದ್ದ ಶ್ರೇಯಸ್ ಅಯ್ಯರ್ ಉತ್ತಮ ಫಾರ್ಮ್ ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ. ಕೆ.ಎಲ್. ರಾಹುಲ್, ಸೂರ್ಯಕುಮಾರ್ ಯಾದವ್ ಅವರೂ ಅಬ್ಬರಿಸಿದ್ದರು.


ಭಾರತ ತಂಡದ ಇಶಾನ್ ಕಿಶನ್, ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ಮೊಹಮ್ಮದ್ ಶಮಿ ಅವರ ಅನುಪಸ್ಥಿತಿಯಲ್ಲಿ ಜಸ್‌ಪ್ರೀತ್ ಬೂಮ್ರಾ ಬೌಲಿಂಗ್ ವಿಭಾಗವನ್ನು ಮುನ್ನಡೆಸುವುದು ಖಚಿತ. ಕುಲದೀಪ್ ಯಾದವ್ ಅವರಿಗಾಗಿ ಅಶ್ವಿನ್ ಅಥವಾ ರವೀಂದ್ರ ಜಡೇಜ ಅವರಲ್ಲೊಬ್ಬರು ವಿಶ್ರಾಂತಿ ಪಡೆಯಬಹುದು.

ವಿಶ್ವಕಪ್ ಟೂರ್ನಿಯಲ್ಲಿ ಅ. 8ರಂದು ಭಾರತವು ಆಸ್ಟ್ರೇಲಿಯಾ ಎದುರು ಆಡುವುದರ ಮೂಲಕ ಅಭಿಯಾನ ಆರಂಭಿಸಲಿದೆ. ಈ ಪಂದ್ಯದಲ್ಲಿ ಆಡಲಿರುವ ಅಂತಿಮ ತಂಡವನ್ನು ನಿರ್ಧರಿಸಲು ನಾಯಕ ರೋಹಿತ್ ಮತ್ತು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ರಾಜ್‌ಕೋಟ್ ಪಂದ್ಯ ಕೊನೆಯ ಅವಕಾಶವಾಗಲಿದೆ.

ದಕ್ಷಿಣ ಆಫ್ರಿಕಾದಲ್ಲಿ ಸೋತ ನಂತರ ಭಾರತಕ್ಕೆ ಬಂದ ಪ್ಯಾಟ್ ಕಮಿನ್ಸ್ ಬಳಗವು ಸತತ ನಿರಾಶೆ ಅನುಭವಿಸಿದೆ. ವಿಶ್ವಕಪ್ ಟೂರ್ನಿಗೆ ಸಾಗುವ ಮುನ್ನ ಸಮಾಧಾನಕರ ಜಯ ಸಾಧಿಸಿ, ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳುವ ನಿರೀಕ್ಷೆಯಲ್ಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನೆಮಾ

ಮುಖ್ಯಾಂಶಗಳು
- ಸರಣಿಯ ಮೊದಲೆರಡು ಪಂದ್ಯಗಳಲ್ಲಿ ಗೆದ್ದಿರುವ ಭಾರತ
- ಉತ್ತಮ ಲಯದಲ್ಲಿರುವ ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್
- ಸಮಾಧಾನಕರ ಗೆಲುವಿನ ನಿರೀಕ್ಷೆಯಲ್ಲಿ ಆಸ್ಟ್ರೇಲಿಯಾ

ಮಿಚೆಲ್ ಸ್ಟಾರ್ಕ್, ಮ್ಯಾಕ್ಸ್‌ವೆಲ್ ಅಭ್ಯಾಸ

ವಿಶ್ವಕಪ್ ಟೂರ್ನಿಗೆ ಮುನ್ನ ಫಿಟ್‌ನೆಸ್ ಮರಳಿ ಪಡೆಯುವ ಪ್ರಯತ್ನದಲ್ಲಿರುವ ಆಸ್ಟ್ರೇಲಿಯಾ ತಂಡದ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಮತ್ತು ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಸಹ ಆಟಗಾರರ ಜತೆ ಮಂಗಳವಾರ ಅಭ್ಯಾಸ ನಡೆಸಿದರು. ಆದರೆ ಇಬ್ಬರೂ ಬುಧವಾರ ಕಣಕ್ಕಿಳಿಯುವುದು ಖಾತರಿಯಿಲ್ಲ.

'ಬುಧವಾರ ಆಡಬೇಕೆಂಬುದು ನಮ್ಮ ಬಯಕೆ. ಆದರೆ ಎಲ್ಲವೂ ಫಿಟ್‌ನೆಸ್‌ಅನ್ನು ಅವಲಂಬಿಸಿದೆ. ವಿಶ್ವಕಪ್ ಟೂರ್ನಿಯ ವೇಳೆಗೆ ಪೂರ್ಣ ಪ್ರಮಾಣದಲ್ಲಿ ದೈಹಿಕ ಸಾಮರ್ಥ್ಯ ಮರಳಿ ಪಡೆಯುವುದು ನಮ್ಮ ಗುರಿ' ಎಂದು ಸ್ಟಾರ್ಕ್ ತಿಳಿಸಿದರು.

ಯುವ ಅಥ್ಲೀಟ್‌ಗಳ ಹೊಳಪು

ರಾಜ್ಯ ಜೂನಿಯರ್, ಯೂತ್ ಅಥ್ಲೆಟಿಕ್ಸ್ ಕೂಟ ಇಂದಿನಿಂದ

● ವಿಕ್ರಂ ಕಾಂತಿಕೆರೆ


ಮಂಗಳೂರಿನ ಮಂಗಳಾ ಕ್ರೀಡಾಂಗಣದಲ್ಲಿ ಮಂಗಳವಾರ ಅಭ್ಯಾಸ ನಡೆಸಿದ ಅಥ್ಲೀಟ್‌ಗಳು –ಪ್ರಜಾವಾಣಿ ಚಿತ್ರ /ಫಕ್ರುದ್ದೀನ್ ಎಚ್

ಮಂಗಳೂರು: ಕಡಲ ತಡಿಯ ಮಂಗಳೂರು ನಗರ 39 ವರ್ಷಗಳ ನಂತರ ರಾಜ್ಯಮಟ್ಟದ ಅಥ್ಲೆಟಿಕ್ ಕೂಟಕ್ಕೆ ಆತಿಥ್ಯ ವಹಿಸಲು ಸಜ್ಜಾಗಿದೆ. ನವ ಮತ್ತು ಯುವ ಕ್ರೀಡಾಪಟುಗಳು ಪದಕದ ಹೊಳಪಿನಲ್ಲಿ ಸಂಭ್ರಮಿಸುವ ಉತ್ಸಾಹದಲ್ಲಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆಯ ಸಹಯೋಗದಲ್ಲಿ ರಾಜ್ಯ ಅಥ್ಲೆಟಿಕ್ ಸಂಸ್ಥೆ (ಕೆಎಎ) ಆಯೋಜಿಸಿರುವ ರಾಜ್ಯ ಜೂನಿಯರ್ ಮತ್ತು ಯೂತ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಬುಧವಾರ ಮಂಗಳ ಕ್ರೀಡಾಂಗಣದಲ್ಲಿ ಆರಂಭವಾಗಲಿದ್ದು, ಇದೇ 30ರ ವರೆಗೆ ನಡೆಯಲಿದೆ.

ಬಹುಶಿಸ್ತೀಯ ಕ್ರೀಡಾಪಟು ಲೋಕನಾಥ ಬೋಳಾರ್ ಸ್ಮರಣೆಯಲ್ಲಿ ಮೊಗವೀರ ವ್ಯವಸ್ಥಾಪನಾ ಮಂಡಳಿ ಮತ್ತು ಮಂಗಳೂರು ಯಾಂತ್ರಿಕ ಮೀನುಗಾರರ ಪ್ರಾಥಮಿಕ ಸಹಕಾರ ಸಂಘ ಚಾಂಪಿಯನ್‌ಷಿಪ್‌ನ ಪ್ರಾಯೋಜಕತ್ವ ವಹಿಸಿಕೊಂಡಿವೆ.

ಯೂತ್ ವಿಭಾಗದಲ್ಲಿ ತುರುಸಿನ ಪೈಪೋಟಿ ನಿರೀಕ್ಷೆ: ದಕ್ಷಿಣ ವಲಯ, ರಾಷ್ಟ್ರೀಯ ಜೂನಿಯರ್ ಮತ್ತು 23 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಆಯ್ಕೆ ಪ್ರಕ್ರಿಯೆಯೂ ಮಂಗಳೂರು ಕೂಟದಲ್ಲಿ ನಡೆಯಲಿದೆ. ಉಡುಪಿ ಜಿಲ್ಲೆಯ ಅಭಿನ್ ದೇವಾಡಿಗ (100 ಮೀ), ಧ್ರುವ ಬಲ್ಲಾಳ್ (400 ಮೀ), ಕೀರ್ತನಾ ಎಸ್ (200 ಮೀ) ದಕ್ಷಿಣ ಕನ್ನಡ ಜಿಲ್ಲೆಯ ಮಹಾಂತೇಶ್ ಮತ್ತು ತೀರ್ಥೇಶ್ ಶೆಟ್ಟಿ (400 ಮೀ), 200 ಮೀಟರ್ಸ್ ಓಟದಲ್ಲಿ ಈ ಬಾರಿ ರಾಜ್ಯ ದಾಖಲೆ ಮುರಿದಿರುವ ಹಾವೇರಿಯ ಶಶಿಕಾಂತ್ ವಿ.ಎ ಸ್ಪರ್ಧಾ ಕಣದಲ್ಲಿ ಇದ್ದಾರೆ. ಮಹಿಳೆಯರ 100 ಮತ್ತು 200 ಮೀಟರ್ಸ್ ಓಟದಲ್ಲಿ ಬೆಂಗಳೂರಿನ ಪ್ರಿಯಾ ಮೋಹನ್, ಹೈಜಂಪ್‌ನಲ್ಲಿ ಬೆಂಗಳೂರಿನ ಪಾವನಾ ನಾಗರಾಜ್, ದಕ್ಷಿಣ ಕನ್ನಡದ ಸುಪ್ರೀತಾ, 100 ಮತ್ತು 200 ಮೀಟರ್ಸ್ ಓಟದಲ್ಲಿ ಬೆಂಗಳೂರಿನ ಉನ್ನತಿ ಅಯ್ಯಪ್ಪ ಸ್ಪರ್ಧಿಸುತ್ತಿದ್ದಾರೆ.

ರಿಲೆ ರೋಮಾಂಚನ ಇಲ್ಲ: ಈ ಬಾರಿ ಚಾಂಪಿಯನ್‌ಷಿಪ್‌ನ ಯಾವ ವಿಭಾಗದಲ್ಲೂ ರಿಲೆ ಸ್ಪರ್ಧೆ ಇಲ್ಲ. 'ರಾಷ್ಟ್ರೀಯ ಕೂಟಕ್ಕೆ ರಿಲೆ ತಂಡವನ್ನು ಪ್ರತ್ಯೇಕವಾಗಿ ಆಯ್ಕೆ ಮಾಡಲಾಗುವುದು' ಎಂದು ಕೆಎಎ ಗೌರವ ಕಾರ್ಯದರ್ಶಿ ಎ.ರಾಜವೇಲು 'ಪ್ರಜಾವಾಣಿ'ಗೆ ತಿಳಿಸಿದರು.

ಅಂಕಿ ಅಂಶಗಳು

1,610 ಐದೂ ವಿಭಾಗಗಳಲ್ಲಿ ಪಾಲ್ಗೊಳ್ಳುವ ಒಟ್ಟು ಅಥ್ಲೀಟ್ಸ್	**231** ಅತಿ ಹೆಚ್ಚು, ಬೆಂಗಳೂರು ನಗರ ಜಿಲ್ಲೆಯ ಅಥ್ಲೀಟ್ಸ್	**3** ಅತಿ ಕಡಿಮೆ, ಬೀದರ್ ಜಿಲ್ಲೆಯಿಂದ ಪಾಲ್ಗೊಳ್ಳುವವರು
161 ಆತಿಥೇಯ ದಕ್ಷಿಣ ಕನ್ನಡ ಜಿಲ್ಲೆಯಿಂದ ಪಾಲ್ಗೊಳ್ಳುವವರು	**30** ಕೂಟದಲ್ಲಿ ಪಾಲ್ಗೊಳ್ಳುವ ಒಟ್ಟು ಜಿಲ್ಲೆಗಳು	(ಮಾಹಿತಿ: ಕೆಎಎ)



ಅಥ್ಲೆಟಿಕ್ಸ್‌ನಲ್ಲಿ ಈಗ ಬದಲಾವಣೆಯ ಕಾಲ. ಅಥ್ಲೆಟಿಕ್ಸ್‌ಗೆ ಹೆಸರು ಗಳಿಸಿರುವ ಮಂಗಳೂರಿನಲ್ಲಿ ಕೂಟ ನಡೆಯುತ್ತಿರುವುದು ಖುಷಿ ತಂದಿದೆ.
ವಿಲಾಸ ನೀಲಗುಂದ, ಕೋಚ್

ಚೆಸ್: ಅಗ್ರಸ್ಥಾನದಲ್ಲಿ ಚೀನಾ ಆಟಗಾರ ವೀ ಯಿ

ಜಂಟಿ ಎರಡನೇ ಸ್ಥಾನದಲ್ಲಿ ವಿದಿತ್

ಹಾಂಗ್‌ಝೌ (ಪಿಟಿಐ): ಮೂರನೇ ಶ್ರೇಯಾಂಕದ ವಿದಿತ್ ಗುಜರಾತಿ ಅವರು ಮಂಗಳವಾರ ದಿನದ ಕೊನೆಯ (ಏಳನೇ ಸುತ್ತಿನ) ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಚೀನಾ ಆಟಗಾರ ವೀ ಯಿ ಅವರಿಗೆ ಸೋತರೂ, ಏಷ್ಯನ್ ಗೇಮ್ಸ್ ಚೆಸ್ ವೈಯಕ್ತಿಕ ವಿಭಾಗದಲ್ಲಿ ಜಂಟಿ 2ನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಬುಧವಾರ ಕೊನೆಯ ಎರಡು ಸುತ್ತುಗಳನ್ನು ಆಡಲಾಗುವುದು.

ಭಾರತದ ಜಿಎಂ ವಿದಿತ್ ಮತ್ತು ಉಜ್ಬೇಕಿಸ್ತಾನದ ಜಿಎಂ ನಾಡಿರ್ಬೆಕ್ ಅಬ್ದುಸತ್ತಾರೊವ್ ತಲಾ ಐದು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಅಗ್ರಸ್ಥಾನ ಕಾಪಾಡಿಕೊಂಡಿರುವ ವಿ ಯಿ ಐದೂವರೆ ಪಾಯಿಂಟ್ಸ್ ಕಲೆಹಾಕಿದ್ದಾರೆ.

ಕಣದಲ್ಲಿರುವ ಭಾರತದ ಇನ್ನೊಬ್ಬ ಆಟಗಾರ ಅರ್ಜುನ್ ಇರಿಗೇಶಿ, ಇಂಡೊನೇಷ್ಯಾದ ನೊವೇಂದ್ರ ಪ್ರಿಸ್ಮೊರೊ ಅವರನ್ನು ಮಣಿಸಿದರು. ಅವರು 4.5 ಪಾಯಿಂಟ್ಸ್ ಹೊಂದಿದ್ದು, ಮೂವರು ಆಟಗಾರರ ಜೊತೆ ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ.


ವಿದಿತ್ ಗುಜರಾತಿ

19th Asian Games Hangzhou 2022

ಇದಕ್ಕೆ ಮೊದಲು ವಿದಿತ್, ಇರಾನ್‌ನ ಪರ್ಹಾಮ್ ಮೊಘಸುಡ್ಲೊ ಅವರನ್ನು ಐದನೇ ಸುತ್ತಿನಲ್ಲಿ ಸೋಲಿಸಿದರೆ, ಆರನೇ ಸುತ್ತಿನಲ್ಲಿ ಉಜ್ಬೇಕ್ ತಾರೆ ನಾಡಿರ್ಬೆಕ್ ಅಬ್ದುಸತ್ತಾರೋವ್ ಮೇಲೆ ಜಯಗಳಿಸಿದರು. ಈ ಗೆಲುವುಗಳ ನಂತರ ಅಗ್ರಸ್ಥಾನಕ್ಕೇರಿದರೂ, ಅಂತಿಮ ಸುತ್ತಿನಲ್ಲಿ ಚೀನಾ ಆಟಗಾರನಿಗೆ ಸೋತಿದ್ದರಿಂದ ಎರಡನೇ ಸ್ಥಾನಕ್ಕೆ ಸರಿದರು.

ಮೂರನೇ ಸ್ಥಾನದಲ್ಲಿ ಹಂಪಿ, ಹಾರಿಕಾ: ಭಾರತದ ಆಟಗಾರ್ತಿಯರಾದ ಕೋನೇರು ಹಂಪಿ ಮತ್ತು ದ್ರೋಣವಲ್ಲಿ ಹಾರಿಕಾ ಅವರು ಐದನೇ ಸುತ್ತಿನ ಪಂದ್ಯಗಳಲ್ಲಿ ಜಯ ಗಳಿಸಿದರೂ, ಆರು ಮತ್ತು ಏಳನೇ ಸುತ್ತಿನಲ್ಲಿ ಎದುರಾಳಿಗಳ ಜೊತೆ ಡ್ರಾ ಮಾಡಿಕೊಳ್ಳಬೇಕಾಯಿತು. ಇಬ್ಬರೂ ಈಗ 4.5 ಪಾಯಿಂಟ್ಸ್ ಸಂಗ್ರಹಿಸಿ ನಾಲ್ಕನೇ ಸ್ಥಾನ ಹಂಚಿಕೊಂಡಿದ್ದಾರೆ. ಚೀನಾದ ಝು ಜಿನೆರ್ ಆರು ಪಾಯಿಂಟ್ಸ್ ಹೊಂದಿದ್ದು ಅಗ್ರಸ್ಥಾನದಲ್ಲಿದ್ದಾರೆ.

ಶೂಟಿಂಗ್: ಅಲ್ಪದರಲ್ಲೇ ತಪ್ಪಿದ ಕಂಚು

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಶೂಟಿಂಗ್‌ನಲ್ಲಿ ಮೊದಲ ಎರಡು ದಿನ ಪದಕ ಗೆದ್ದಿದ್ದ ಭಾರತದ ಶೂಟರ್‌ಗಳು ಮಂಗಳವಾರ ನಿರಾಸೆ ಅನುಭವಿಸಿದರು.

10 ಮೀ. ಮಿಕ್ಸೆಡ್ ಏರ್ ರೈಫಲ್ ವಿಭಾಗದಲ್ಲಿ ಸ್ಪರ್ಧಿಸಿದ ದಿವ್ಯಾನ್ಶ್ ಪನ್ವಾರ್ ಮತ್ತು ರಮಿತಾ ಜಿಂದಾಲ್ ಅವರು ಕಂಚಿನ ಪದಕದೆಡೆಗೆ ಗುರಿ ಹಿಡಿಯುವ ಅವಕಾಶವನ್ನು ಅಲ್ಪದರಲ್ಲೇ ಕಳೆದುಕೊಂಡರು.

ಮೂರನೇ ಸ್ಥಾನಕ್ಕಾಗಿ ನಡೆದ ಪೈಪೋಟಿಯಲ್ಲಿ ಭಾರತದ ಜೋಡಿ ದಕ್ಷಿಣ ಕೊರಿಯಾದ ಶೂಟರ್‌ಗಳ ಕೈಯಲ್ಲಿ ಪರಾಭವಗೊಂಡಿತು. ಪಾರ್ಕ್ ಹಾಜುನ್– ಲೀ ಯುನ್‌ಸಿಯೊ ಜೋಡಿ 20–18 ರಿಂದ ಗೆದ್ದಿತು.

20 ವರ್ಷದ ದಿವ್ಯಾನ್ಶ್ ಮತ್ತು 19 ವರ್ಷದ ರಮಿತಾ ಅವರು ಈ ಸ್ಪರ್ಧೆಯಲ್ಲಿ ಪದಕ ಗೆಲ್ಲುವ ನೆಚ್ಚಿನ ಶೂಟರ್‌ಗಳು ಎನಿಸಿದ್ದರು. ಆದರೆ ಅರ್ಹತಾ ಸುತ್ತಿನಲ್ಲಿ ನಿಖರ ಪ್ರದರ್ಶನ ನೀಡುವಲ್ಲಿ ಎಡವಿ ಆರನೇ ಹಾಗೂ ಕೊನೆಯ ಸ್ಥಾನ ಪಡೆದು ಫೈನಲ್ ಪ್ರವೇಶಿಸಿದರು.

ಅರ್ಹತಾ ಹಂತದಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆದ ತಂಡಗಳು ಚಿನ್ನದ ಪದಕಕ್ಕಾಗಿ ಪೈಪೋಟಿ ನಡೆಸುತ್ತವೆ. ಎರಡು ಕಂಚಿನ ಪದಕಗಳಿಗೆ ಇತರ ನಾಲ್ಕು ತಂಡಗಳು ಹಣಾಹಣಿ ನಡೆಸುತ್ತವೆ. ಇನ್ನೊಂದು ಕಂಚಿನ ಪದಕವನ್ನು ಕಜಕಸ್ತಾನ ಗೆದ್ದುಕೊಂಡಿತು.

ಸ್ಕ್ವಾಷ್: ಭಾರತ ತಂಡ ಶುಭಾರಂಭ

ಹಾಂಗ್‌ಝೌ (ಪಿಟಿಐ): ಭಾರತ ಪುರುಷ ಮತ್ತು ಮಹಿಳಾ ಸ್ಕ್ವಾಷ್ ತಂಡಗಳು ಸುಲಭ ಗೆಲುವಿನ ಮೂಲಕ ಏಷ್ಯನ್ ಗೇಮ್ಸ್‌ನಲ್ಲಿ ಶುಭಾರಂಭ ಮಾಡಿದವು.

ಮಹಿಳಾ ತಂಡದವರು 3–0 ಯಿಂದ ಪಾಕಿಸ್ತಾನ ತಂಡವನ್ನು ಮಣಿಸಿದರೆ, ಪುರುಷರು ಸಿಂಗಪುರ ಮತ್ತು ಕತಾರ್ ತಂಡಗಳ ವಿರುದ್ಧ ಇದೇ ಅಂತರದಿಂದ ಜಯ ಸಾಧಿಸಿದರು. ಮಹಿಳೆಯರ ವಿಭಾಗದ ಪಂದ್ಯದ ಮೊದಲ ಸಿಂಗಲ್ಸ್‌ನಲ್ಲಿ 15 ವರ್ಷದ ಅನಾಹತ್ 11-6, 11-6, 11-3 ರಿಂದ ಪಾಕಿಸ್ತಾನದ ಸಾದಿಯಾ ಗುಲ್ ಅವರನ್ನು ಮಣಿಸಿ ಭಾರತಕ್ಕೆ ಮುನ್ನಡೆ ತಂದಿತ್ತರು.

ಅನುಭವಿ ಆಟಗಾರ್ತಿ ಜೋಶ್ನಾ ಚಿಣ್ಣಪ್ಪ 11-2, 11-5, 11-7 ರಿಂದ ನೂರ್ ಉಲ್ ಹುದಾ ಸಾದಿಕ್ ವಿರುದ್ದ; ತನ್ವಿ ಖನ್ನಾ 11-3, 11-6, 11-2 ರಿಂದ ನೂರ್ ಉಲ್ ಐನ್ ಇಜಾಜ್ ವಿರುದ್ಧ ಗೆದ್ದರು.

ಪುರುಷರ ವಿಭಾಗದಲ್ಲಿ ಸಿಂಗಪುರ ವಿರುದ್ಧದ ಪಂದ್ಯದಲ್ಲಿ ಹರೀಂದರ್ ಪಾಲ್ ಸಂಧು, ಸೌರವ್ ಘೋಷಾಲ್ ಮತ್ತು ಅಭಯ್ ಸಿಂಗ್ ಅವರು ತಮ್ಮ ಎದುರಾಳಿಗಳನ್ನು ಮಣಿಸಿದರು. ಸೌರವ್ ಮತ್ತು ಅಭಯ್ ನೇರ ಗೇಮ್‌ಗಳಿಂದ ಗೆದ್ದರೆ, ಹರೀಂದರ್ ಒಂದು ಗೇಮ್‌ಅನ್ನು ಎದುರಾಳಿಗೆ ಬಿಟ್ಟುಕೊಟ್ಟರು.

ಐಎಸ್‌ಎಲ್: ಬಿಎಫ್‌ಸಿ–ಬಾಗನ್ ಪೈಪೋಟಿ ಇಂದು

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ ಟೂರ್ನಿಯ ಮೊದಲ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ಎಫ್‌ಸಿ ಎದುರು ಸೋತಿರುವ ಬೆಂಗಳೂರು ಎಫ್‌ಸಿ ತಂಡವು, ಬುಧವಾರ ಕೋಲ್ಕತ್ತದಲ್ಲಿ ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ ವಿರುದ್ಧ ಪೈಪೋಟಿ ನಡೆಸಲಿದೆ.

ಗುರುಪ್ರೀತ್ ಸಿಂಗ್ ನಾಯಕತ್ವದ ಬಿಎಫ್‌ಸಿ ತಂಡವು 1–2ರಿಂದ ಬ್ಲಾಸ್ಟರ್ಸ್ ವಿರುದ್ಧ ಮುಗ್ಗರಿಸಿತ್ತು. ಆದರೆ, ಎರಡನೇ ಪಂದ್ಯದಲ್ಲಿ ಉತ್ತಮ ಆಟ ಪ್ರದರ್ಶಿಸುವ ವಿಶ್ವಾಸದಲ್ಲಿದೆ.

2023ರ ಆವೃತ್ತಿಯ ಡುರಾಂಡ್ ಕಪ್ ಚಾಂಪಿಯನ್ ಆಗಿರುವ ಮೋಹನ್ ಬಾಗನ್ ತಂಡವು, ಐಎಸ್‌ಎಲ್ ಟೂರ್ನಿಯ ಮೊದಲ ಪಂದ್ಯದಲ್ಲಿ 3–1ರಿಂದ ಪಂಜಾಬ್ ತಂಡವನ್ನು ಮಣಿಸಿ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದೆ.

ಬಿಎಫ್‌ಸಿ ತಂಡದ ಪ್ರಮುಖ ಆಟಗಾರ ಸುನಿಲ್ ಚೆಟ್ರಿ ಅವರು ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ಫುಟ್‌ಬಾಲ್ ತಂಡವನ್ನು ಮುನ್ನಡೆಸುತ್ತಿದ್ದಾರೆ. ಅವರ ಅನುಪಸ್ಥಿತಿಯಲ್ಲಿ ಬಿಎಫ್‌ಸಿ ತಂಡ ಕಣಕ್ಕೆ ಇಳಿದಿದೆ.

ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್

ಭಾರತ ತಂಡ ಶುಭಾರಂಭ

ನವದೆಹಲಿ: ಭಾರತದ ಯುವ ಬ್ಯಾಡ್ಮಿಂಟನ್ ಆಟಗಾರರು ಅಮೆರಿಕದಲ್ಲಿ ಸೋಮವಾರ ಆರಂಭಗೊಂಡ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮೊದಲ ಪಂದ್ಯದಲ್ಲಿ 5–0 ಯಿಂದ ಕುಕ್ ಐಲ್ಯಾಂಡ್ಸ್ ತಂಡದ ವಿರುದ್ಧ ಸುಲಭ ಗೆಲುವು ಸಾಧಿಸಿದರು.

ಮಿಕ್ಸೆಡ್ ಡಬಲ್ಸ್‌ನಲ್ಲಿ ಸಾತ್ವಿಕ್ ರೆಡ್ಡಿ ಕಾನಪುರಂ ಮತ್ತು ವೈಷ್ಣವಿ ಖಡ್ಕೇಕರ್ ಜೋಡಿಯು 21-6, 21-8 ರಿಂದ ಕೈಯಿನ್ ಮಟಾಯೊ ಮತ್ತು ತೆರೆಪಿ ಅಕಾವಿ ಅವರನ್ನು ಮಣಿಸಿ ಭಾರತಕ್ಕೆ ಗೆಲುವಿನ ಆರಂಭ ಒದಗಿಸಿತು.

ಆಯುಷ್ ಶೆಟ್ಟಿ ಮತ್ತು ತಾರಾ ಶಾ ಅವರು ತಮ್ಮ ಸಿಂಗಲ್ಸ್ ಪಂದ್ಯಗಳಲ್ಲಿ ಉತ್ತಮ ಆಟದೊಂದಿಗೆ ಭಾರತದ ಮುನ್ನಡೆಯನ್ನು ಹೆಚ್ಚಿಸಿದರು.

ಬಾಲಕರ ಸಿಂಗಲ್ಸ್‌ನಲ್ಲಿ ಆಯುಷ್ 21-6, 21-3 ರಿಂದ ಡೇನಿಯಲ್ ಅಕಾವಿ ವಿರುದ್ಧ ಗೆಲುವು ಸಾಧಿಸಿದರೆ, ಬಾಲಕಿಯರ ಸಿಂಗಲ್ಸ್‌ನಲ್ಲಿ ತಾರಾ 21-3, 21-6 ರಿಂದ ಟೆ ಪಾ ಓ ಟೆ ರಂಗಿ ತುಪಾ ಅವರನ್ನು ಮಣಿಸಿದರು.

ಬಾಲಕರ ಡಬಲ್ಸ್‌ನಲ್ಲಿ ನಿಕೋಲಸ್ ಮತ್ತು ತುಷಾರ್ ಜೋಡಿ 21-9, 21-5 ರಿಂದ ಇಮ್ಯಾನುಯೆಲ್ ಮಟಾಯೊ ಮತ್ತು ಕೈಯಿನ್ ಮಟಾಯೊ ಅವರನ್ನು ಸೋಲಿಸಿದರೆ, ಬಾಲಕಿಯರ ಡಬಲ್ಸ್‌ನಲ್ಲಿ ರಾಧಿಕಾ ಶರ್ಮಾ ಮತ್ತು ತನ್ವಿ ಶರ್ಮಾ ಜೋಡಿಯು ಸಾಂಘಿಕ ಆಟ ಪ್ರದರ್ಶಿಸಿ 21-4, 21-7 ರಿಂದ ಟೆರಿಯಾಪಿ ಅಕಾವಿ ಮತ್ತು ವೈಟಿಯಾ ಕ್ರೊಕೊಂಬೆ ಅಮಾ ಅವರನ್ನು ಹಿಮ್ಮೆಟ್ಟಿಸಿತು.

ಭಾರತ ತಂಡವು ಮುಂದಿನ ಪಂದ್ಯದಲ್ಲಿ ಬ್ರೆಜಿಲ್ ತಂಡವನ್ನು ಎದುರಿಸಲಿದೆ.


ರಾಧಿಕಾ ಶರ್ಮಾ, ತನ್ವಿ ಶರ್ಮಾ

ಟೆನಿಸ್ ಹಾಲ್ ಆಫ್ ಫೇಮ್‌ಗೆ ಪೇಸ್ ನಾಮನಿರ್ದೇಶನ



ನವದೆಹಲಿ (ಪಿಟಿಐ): ಭಾರತದ ಟೆನಿಸ್ ದಿಗ್ಗಜ ಲಿಯಾಂಡರ್ ಪೇಸ್ ಅವರು ಇಂಟರ್‌ನ್ಯಾಷನಲ್ ಟೆನಿಸ್ ಹಾಲ್ ಆಫ್ ಫೇಮ್‌ಗೆ ಆಟಗಾರರ ವಿಭಾಗದಲ್ಲಿ ನಾಮನಿರ್ದೇಶನಗೊಂಡ ಏಷ್ಯದ ಮೊದಲಿಗ ಎನಿಸಿದರು.

50 ವರ್ಷದ ಪೇಸ್ ಅವರು 2024ನೇ ಸಾಲಿಗೆ ಈ ವಿಭಾಗದಲ್ಲಿ ಮಂಗಳವಾರ ನಾಮನಿರ್ದೇಶಿತ ಆರು ಮಂದಿಯಲ್ಲಿ ಒಬ್ಬರಾಗಿದ್ದಾರೆ. ಅವರು ಕಾರಾ ಬ್ಲ್ಯಾಕ್, ಅನಾ ಇವಾನೊವಿಕ್, ಕಾರ್ಲೋಸ್ ಮೋಯಾ, ಡೇನಿಯಲ್ ನೆಸ್ಟರ್ ಮತ್ತು ಫ್ಲಾವಿಯಾ ಪೆನೆಟ್ರಾ ಜೊತೆ ಪೈಪೋಟಿ ನಡೆಸಲಿದ್ದಾರೆ.

ಆಸ್ಟ್ರೇಲಿಯಾ ಓಪನ್ ಮತ್ತು ಫ್ರೆಂಚ್ ಓಪನ್ ಟೂರ್ನಿಗಳಲ್ಲಿ ಮಹಿಳಾ ಸಿಂಗಲ್ಸ್ ಚಾಂಪಿಯನ್ ಆಗಿದ್ದ ಚೀನಾದ ಲೀ ನಾ ಅವರು 2019 ರಲ್ಲಿ ಹಾಲ್ ಆಫ್ ಫೇಮ್‌ಗೆ ನಾಮನಿರ್ದೇಶನಗೊಂಡ ಏಷ್ಯದ ಮೊದಲ ಆಟಗಾರ್ತಿ ಎನಿಸಿದ್ದರು.

ಬಾಂಗ್ಲಾ ತಂಡದಿಂದ ತಮೀಮ್‌ಗೆ ಕೊಕ್

ಢಾಕಾ (ಎಎಫ್‌ಪಿ): ಬಾಂಗ್ಲಾದೇಶ, ಭಾರತದಲ್ಲಿ ಅ. 5ರಂದು ಆರಂಭವಾಗುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಮಂಗಳವಾರ 15 ಆಟಗಾರರ ತಂಡವನ್ನು ಅಂತಿಮಗೊಳಿಸಿದ್ದು, ಮಾಜಿ ನಾಯಕ ತಮೀಮ್ ಇಕ್ಬಾಲ್ ಅವರನ್ನು ಗಾಯದ ಕಾರಣ ನೀಡಿ ಕೈಬಿಟ್ಟಿದೆ.

ತಂಡವು ಬುಧವಾರ ಗುವಾಹಟಿಗೆ ಪಯಣಿಸಲಿದ್ದು, ಅಲ್ಲಿ ಶ್ರೀಲಂಕಾ ವಿರುದ್ಧ ಸೆ. 29ರಂದು ಮತ್ತು ಇಂಗ್ಲೆಂಡ್ ವಿರುದ್ಧ ಅ. 2ರಂದು ಅಭ್ಯಾಸ ಪಂದ್ಯಗಳನ್ನು ಆಡಲಿದೆ.

ತಂಡ ಇಂತಿದೆ: ಶಕೀಬ್ ಅಲ್ ಹಸನ್ (ನಾಯಕ), ಲಿಟನ್ ದಾಸ್, ತಂಜಿದ್ ಹಸನ್ ತಮೀಮ್, ನಜ್ಮುಲ್ ಹಸನ್ ಶಾಂಟೊ (ಉಪ ನಾಯಕ), ತೌಹಿದ್ ಹೃದಯ್, ಮುಷ್ಫಿಕುರ್ ರಹೀಮ್, ಮಹಮದುಲ್ಲಾ ರಿಯಾದ್, ಮೆಹಿದಿ ಹಸನ್ ಮಿರಾಜ್, ನಸುಮ್ ಅಹ್ಮದ್, ಮಹೆದಿ ಹಸನ್, ತಸ್ಕಿನ್ ಅಹ್ಮದ್, ಮುಸ್ತಫಿಝುರ್ ರಹಮಾನ್, ಹಸನ್ ಮಹಮುದ್, ಶರಿಫುಲ್ ಇಸ್ಲಾಂ, ತಾಂಜಿಮ್ ಹಸನ್ ಸಕಿಬ್